ಶನಿವಾರ, ಜೂನ್ 5, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 156 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಕೋವಿಡ್‌ನಿಂದಾಗಿ ವಿದೇಶಗಳಲ್ಲಿ ಇರುವವರು ತಮ್ಮ ಸಂಗಾತಿಯನ್ನು ಭೇಟಿ ಮಾಡಲು ಸಾಧ್ಯವಾಗುತ್ತಿಲ್ಲ. ಆದರೆ ಇದೇ ಕಾರಣಕ್ಕೆ ಸಂಬಂಧ ಹಳಸದಂತೆ ನೋಡಿಕೊಳ್ಳುವುದು ಮುಖ್ಯ.



ವಿಶ್ವ ಪರಿಸರ ದಿನ — ಕುರುಹು ಇಲ್ಲದೇ ನಶಿಸಿದ್ದ 'ಕ್ಯಾದಿಗೆಕಟ್ಟೆ'ಗೆ ಮರುಜೀವ 11
ಅಧಿಕಾರಿಗಳ ಮುಂದುವರಿದ ಜಟಾಪಟ 6
ಡೆಲ್ಟಾ ತಳಿ: ಫೈಝರ್ ಲಸಿಕೆ ಪರಿಣಾಮ ಕಡಿಮೆ 12

ಸೆನ್ಸೆಕ್ಸ್	ನಿಫ್ಟಿ	₹/$
52,100	15,670	72.99

ಎಸ್ಸೆಸ್ಸೆಲ್ಸಿ ಪರೀಕ್ಷೆಯನ್ನು ಆರು ದಿನಗಳ ಬದಲಿಗೆ ಎರಡು ದಿನ ನಡೆಸಲು ನಿರ್ಧಾರ

ದ್ವಿತೀಯ ಪಿಯು ಪರೀಕ್ಷೆ ರದ್ದು

ಪ್ರಜಾವಾಣಿ ವಾರ್ತೆ

ಎಸ್‌.ಸುರೇಶ್ ಕುಮಾರ್

ಬೆಂಗಳೂರು: ಕೋವಿಡ್ ಕಾರಣದಿಂದ ರಾಜ್ಯದಲ್ಲಿ ಈ ಬಾರಿ ದ್ವಿತೀಯ ಪಿಯುಸಿ ಪರೀಕ್ಷೆ ನಡೆಸದಿರಲು ಶಿಕ್ಷಣ ಇಲಾಖೆ ತೀರ್ಮಾನಿಸಿದೆ. ಅಲ್ಲದೆ, ಎಸ್ಸೆಸ್ಸೆಲ್ಸಿ ಪರೀಕ್ಷೆಯನ್ನು ಆರು ದಿನಗಳ ಬದಲಿಗೆ ಸರಳೀಕರಿಸಿದ ವಿಧಾನದಲ್ಲಿ ಎರಡು ದಿನ ನಡೆಸಲು ನಿರ್ಧರಿಸಿದೆ.

ಆದರೆ, ಸರ್ಕಾರದ ಈ ನಿರ್ಧಾರಕ್ಕೆ ಪೋಷಕರು, ಶಾಲಾ–ಕಾಲೇಜು ಆಡಳಿತ ಮಂಡಳಿಗಳು, ಶಿಕ್ಷಣ ತಜ್ಞರು ವಿಭಿನ್ನ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ವಿದ್ಯಾರ್ಥಿಗಳ ಭವಿಷ್ಯಕ್ಕೆ ತೊಂದರೆಯಾಗಬಾರದು, ಅವರ ಆರೋಗ್ಯಕ್ಕೂ ಸಮಸ್ಯೆಯಾಗಬಾರದು ಎಂಬ ಉದ್ದೇಶದಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಸುವ ನಿರ್ಧಾರ ಕೈಗೊಳ್ಳಲಾಗಿದೆ' ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಫಲಿತಾಂಶವನ್ನು ಅವರು ಪ್ರಥಮ ಪಿಯುಸಿಯಲ್ಲಿ ಗಳಿಸಿದ ಅಂಕಗಳ ಆಧಾರದಲ್ಲಿ ಗ್ರೇಡ್ ನೀಡಿ ಪ್ರಕಟಗೊಳಿಸಲು ತೀರ್ಮಾನಿಸಲಾಗಿದೆ. ಜೂನ್ ಅಂತ್ಯಕ್ಕೆ ಫಲಿತಾಂಶ ಪ್ರಕಟವಾಗುವ ಸಾಧ್ಯತೆ ಇದೆ.

8ನೇ ಪುಟ ನೋಡಿ

ಹೇಗಿರಲಿದೆ ಎಸ್ಸೆಸ್ಸೆಲ್ಸಿ ಪರೀಕ್ಷೆ ?

- ಆರು ದಿನದ ಬದಲು ಎರಡೇ ದಿನ ಪರೀಕ್ಷೆ
- ವಿಜ್ಞಾನ, ಗಣಿತ, ಸಮಾಜವಿಜ್ಞಾನದ ಒಂದು ಪತ್ರಿಕೆ
- ಪ್ರಥಮ, ದ್ವಿತೀಯ, ತೃತೀಯ ಭಾಷೆಯ ಒಂದು ಪತ್ರಿಕೆ
- ಪ್ರತಿ ವಿಷಯಕ್ಕೆ 40 ಪ್ರಶ್ನೆಗಳು, ಒಂದು ಪತ್ರಿಕೆಗೆ 120 ಅಂಕ
- ಬೆಳಿಗ್ಗೆ 10.30ರಿಂದ 1.30ರವರೆಗೆ– 3 ತಾಸಿನ ಪರೀಕ್ಷೆ
- ಒಎಂಆರ್ ಶೀಟ್ ಮಾದರಿಯ ಉತ್ತರ ಪತ್ರಿಕೆ
- ಪರೀಕ್ಷೆಯಲ್ಲಿ ಗಳಿಸುವ ಅಂಕಗಳ ಆಧಾರದ ಮೇಲೆ ಎ,ಬಿ ಮತ್ತು ಸಿ ಗ್ರೇಡ್
- ಪರೀಕ್ಷೆಗೆ ಹಾಜರಾಗುವ ಎಲ್ಲ ವಿದ್ಯಾರ್ಥಿಗಳಿಗೆ ಕನಿಷ್ಠ ಅಂಕ ನೀಡಿ ಉತ್ತೀರ್ಣ
- ಕೋವಿಡ್‌ನಿಂದ ಪರೀಕ್ಷೆಗೆ ಗೈರಾದವರಿಗೆ ಮಾತ್ರ ಪೂರಕ ಪರೀಕ್ಷೆ

ಜುಲೈ 1ರಿಂದ ನೂತನ ಶೈಕ್ಷಣಿಕ ವರ್ಷ

ನೂತನ ಶೈಕ್ಷಣಿಕ ವರ್ಷವು (2021–22) ಜುಲೈ 1ರಿಂದ ಆರಂಭವಾಗಲಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಹೇಳಿದೆ.

ರಾಜ್ಯದ ಸರ್ಕಾರಿ, ಅನುದಾನಿತ, ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಪ್ರವೇಶ ಪ್ರಕ್ರಿಯೆಯನ್ನು ಜೂನ್ 15ರಿಂದ ಆರಂಭಿಸಿ, ಆಗಸ್ಟ್ 31ರೊಳಗೆ ಮುಕ್ತಾಯಗೊಳಿಸಲು ಸೂಚಿಸಲಾಗಿದೆ.ಭೌತಿಕ ತರಗತಿಗಳನ್ನು ನಡೆಸಲು ಸಾಧ್ಯವಾಗದಿದ್ದಲ್ಲಿ, ಜುಲೈ 1ರಿಂದ ಆನ್‌ಲೈನ್ ತರಗತಿ ನಡೆಸಲು ನಿರ್ದೇಶನ ನೀಡಲಾಗಿದೆ. ಅಲ್ಲದೆ, ದೂರದರ್ಶನ, ಸಂವೇದ, ಬಾನುಲಿ ಕಾರ್ಯಕ್ರಮಗಳ ಮೂಲಕವೂ ವಿದ್ಯಾರ್ಥಿಗಳ ಶಿಕ್ಷಣ ನಡೆಯುವಂತೆ ನೋಡಿಕೊಳ್ಳಬೇಕು ಎಂದೂ ಇಲಾಖೆ ಹೇಳಿದೆ.

8ನೇ ಪುಟ ನೋಡಿ

ಸೋಂಕು ಕಡಿಮೆಯಾಗದಿದ್ದರೆ ಎಸ್ಸೆಸ್ಸೆಲ್ಸಿ ಪರೀಕ್ಷೆಯೂ ರದ್ದು: ಸಿಎಂ

ಬೆಳಗಾವಿ: 'ಕೋವಿಡ್ ಪ್ರಮಾಣ ಕಡಿಮೆಯಾಗಿ ಎಲ್ಲವೂ ಸಾಮಾನ್ಯ ಸ್ಥಿತಿಗೆ ಮರಳಿದರೆ ಮಾತ್ರ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆ ನಡೆಸಲಾಗುವುದು. ಇಲ್ಲದಿದ್ದಲ್ಲಿ ಅದನ್ನೂ ರದ್ದುಪಡಿಸಲಾಗುವುದು' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಶುಕ್ರವಾರ ತಿಳಿಸಿದರು.

'ಪರಿಸ್ಥಿತಿ ನೋಡಿಕೊಂಡು ಎಸ್ಸೆಸ್ಸೆಲ್ಸಿ ಪರೀಕ್ಷೆ ಬಗ್ಗೆ ನಿರ್ಧರಿಸಲಾಗುವುದು. ಈ ವಿಷಯದಲ್ಲಿ ಗೊಂದಲವಿಲ್ಲ' ಎಂದರು.

ಮತಿಹೀನ ನಿರ್ಧಾರ: ಕುಮಾರಸ್ವಾಮಿ

ಬೆಂಗಳೂರು: ರಾಜ್ಯದಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಗಳನ್ನು ರದ್ದುಪಡಿಸಿರುವ ಸಂದರ್ಭದಲ್ಲೇ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಲು ಮುಂದಾಗಿರುವುದು ಮತಿಹೀನ ನಿರ್ಧಾರ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಕುಮಾರಸ್ವಾಮಿ ಟೀಕಿಸಿದ್ದಾರೆ. 5

ನಾಡಿಗೆ ಅಡಿ ಇಟ್ಟ ಮುಂಗಾರು

ಭಾರಿ ಮಳೆ ಸಾಧ್ಯತೆ • 22 ಜಿಲ್ಲೆಗಳಲ್ಲಿ ಅಲರ್ಟ್ ಘೋಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಕ್ಕೆ ನೈರುತ್ಯ ಮುಂಗಾರು ಪ್ರವೇಶಿಸಿರುವುದರಿಂದ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಎರಡು ದಿನ ಧಾರಾಕಾರ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

'ಮುಂಗಾರು ಜೂನ್ 5ರ ನಂತರ ರಾಜ್ಯ ಪ್ರವೇಶಿಸುವುದಾಗಿ ನಿರೀಕ್ಷಿಸಲಾಗಿತ್ತು. ಮುಂಗಾರು ಮಾರುತಗಳು ಒಂದು ದಿನ ಮುನ್ನವೇ ರಾಜ್ಯವನ್ನು ಪ್ರವೇಶಿಸಿವೆ. ಇದರಿಂದ ರಾಜ್ಯದ ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಬಹುತೇಕ ಜಿಲ್ಲೆಗಳಲ್ಲಿ ಶುಕ್ರವಾರ (ಜೂ.4) ಧಾರಾಕಾರ ಮಳೆಯಾಗಿದೆ' ಎಂದು ಹವಾಮಾನ ಇಲಾಖೆ ನಿರ್ದೇಶಕ ಸಿ.ಎಸ್.ಪಾಟೀಲ ತಿಳಿಸಿದರು.

'ಕರಾವಳಿ ಹಾಗೂ ದಕ್ಷಿಣ ಒಳನಾಡು ಪ್ರವೇಶಿಸಿರುವ ಮುಂಗಾರು, ಉತ್ತರ ಒಳನಾಡಿಗೆ ಶನಿವಾರ ಪ್ರವೇಶಿಸಲಿದೆ. ಕರಾವಳಿಯ ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಶನಿವಾರ 'ರೆಡ್ ಅಲರ್ಟ್' ಘೋಷಿಸಲಾಗಿದೆ' ಎಂದರು.

'ಬಾಗಲಕೋಟೆ, ಬೆಳಗಾವಿ, ಬೀದರ್, ಧಾರವಾಡ, ಗದಗ, ಹಾವೇರಿ, ಕಲಬುರ್ಗಿ, ವಿಜಯಪುರ, ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ, ತುಮಕೂರು ಜಿಲ್ಲೆಗಳಲ್ಲಿ ಜೂನ್ 5 ಮತ್ತು 6ರಂದು ಭಾರಿ ಮಳೆಯಾಗುವ ಮುನ್ಸೂಚನೆ ಇರುವುದರಿಂದ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ' ಎಂದು ಅವರು ತಿಳಿಸಿದರು.

'ಕರಾವಳಿಯಲ್ಲಿ ಮಳೆ ತೀವ್ರಗೊಳ್ಳುವ ಸೂಚನೆ ಇರುವುದರಿಂದ ಮೀನುಗಾರರಿಗೆ ಸಮುದ್ರಕ್ಕೆ ಇಳಿಯದಂತೆ ಸೂಚನೆ ನೀಡಲಾಗಿದೆ. ರಾಜ್ಯದಲ್ಲಿ ಜೂನ್ 6ರ ಬಳಿಕ ಮಳೆ ತಾತ್ಕಾಲಿಕವಾಗಿ ಬಿಡುವು ಪಡೆಯಲಿದೆ. ಈ ವರ್ಷ ವಾಡಿಕೆಗಿಂತ ಹೆಚ್ಚಿನ ಮಳೆ ನಿರೀಕ್ಷಿಸಲಾಗಿದೆ' ಎಂದೂ ಮಾಹಿತಿ ನೀಡಿದರು.

ಶಿಲ್ಪಾ– ರೋಹಿಣಿ ಸಂಧಾನಕ್ಕೆ ಯತ್ನ

ಗೋಪ್ಯ ಸಭೆ ನಡೆಸಿದ ಮುಖ್ಯ ಕಾರ್ಯದರ್ಶಿ

ಪ್ರಜಾವಾಣಿ ವಾರ್ತೆ

ಮೈಸೂರು: ಮೈಸೂರು ಮಹಾನಗರ ಪಾಲಿಕೆ ಆಯುಕ್ತರಾದ ಶಿಲ್ಪಾ ನಾಗ್ ಹಾಗೂ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ನಡುವಿನ ಜಟಾಪಟಿಗೆ ತೆರೆ ಎಳೆಯಲಿಕ್ಕಾಗಿಯೇ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಶುಕ್ರವಾರ ನಗರದಲ್ಲೇ ಗೋಪ್ಯ ಸಭೆ ನಡೆಸಿದರು ಎಂಬುದು ಗೊತ್ತಾಗಿದೆ.

ಮುಖ್ಯ ಕಾರ್ಯದರ್ಶಿಯೇ ಸಂಧಾನಕ್ಕೆ ಯತ್ನಿಸಿದರೂ, ಇಬ್ಬರು ಐಎಎಸ್ ಅಧಿಕಾರಿಗಳ ನಡುವಿನ ಜಗಳ ಶಮನಗೊಳ್ಳುವ ಯಾವೊಂದು ಲಕ್ಷಣ ಗೋಚರಿಸಿಲ್ಲ. ಸಭೆ ಆರಂಭಕ್ಕೂ ಮುನ್ನವೇ ಇಬ್ಬರೂ ಪ್ರತ್ಯೇಕವಾಗಿ ಆರೋಪ–ಪ್ರತ್ಯಾರೋಪ ಮಾಡಿದರು. ಸಭೆಯ ನಂತರವೂ ಇದು ಮುಂದುವರಿಯಿತು. ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ದೂರಿಗೆ, ಶಿಲ್ಪಾ ನಾಗ್ ಪತ್ರಿಕಾ ಪ್ರಕಟಣೆ ಮೂಲಕ ಪ್ರತ್ಯುತ್ತರ ನೀಡಿದರು. ಗುರುವಾರವೇ ನಗರಾಭಿವೃದ್ಧಿ ಇಲಾಖೆಯ ಮುಖ್ಯ ಕಾರ್ಯದರ್ಶಿಗೆ ರವಾನಿಸಿರುವ ಪತ್ರವೊಂದನ್ನು ಬಿಡುಗಡೆ ಮಾಡಿದರು.

25 ನಿಮಿಷ ಸಭೆ: 'ಕೋವಿಡ್‌ಗೆ ಸಂಬಂಧಿಸಿದಂತೆ ಮಧ್ಯಾಹ್ನ 2 ಗಂಟೆಯಿಂದ ಸಂಜೆ 4 ರವರೆಗೆ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಪಾಲಿಕೆ ಆಯುಕ್ತರಾದ ಶಿಲ್ಪಾ ನಾಗ್ ಗೈರಾಗಿದ್ದರು. ಸಭೆಗೆ ಬರುವಂತೆ ಸೂಚಿಸಿದ ಬಳಿಕ 3.30ಕ್ಕೆ ಹಾಜರಾದರು. ಅರ್ಧ ಗಂಟೆಯ ಬಳಿಕ ಪಿ.ರವಿಕುಮಾರ್, ಪ್ರಾದೇಶಿಕ ಆಯುಕ್ತ ಜಿ.ಸಿ.ಪ್ರಕಾಶ್, ಶಿಲ್ಪಾ ನಾಗ್ ಮೂವರೇ 25 ನಿಮಿಷ ಗೋಪ್ಯ ಸಭೆ' ನಡೆಸಿದರು ಎಂದು ಜಿಲ್ಲಾಡಳಿತದ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

6ನೇ ಪುಟ ನೋಡಿ

ರಾಜ್ಯದಲ್ಲಿ ₹ 100ರತ್ತ ಪೆಟ್ರೋಲ್ ಬೆಲೆ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಶುಕ್ರವಾರ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಿಸಿವೆ. ಇದರಿಂದಾಗಿ ಬಳ್ಳಾರಿಯಲ್ಲಿ ಲೀಟರ್ ಪೆಟ್ರೋಲ್ ಬೆಲೆ ₹ 99.58ಕ್ಕೆ ತಲುಪಿದೆ.

ಶುಕ್ರವಾರದ ಬೆಲೆ ಹೆಚ್ಚಳದ ನಂತರ ಆಂಧ್ರಪ್ರದೇಶದ ಬಹುತೇಕ ಎಲ್ಲ ಜಿಲ್ಲೆಗಳಲ್ಲಿ, ತೆಲಂಗಾಣದ ಕೆಲವೆಡೆ ಮತ್ತು ಲೇಹ್‌ನಲ್ಲಿ ಲೀಟರ್ ಪೆಟ್ರೋಲ್ ದರವು ₹ 100ರ ಗಡಿಯನ್ನು ದಾಟಿದೆ ಎಂದು ಪಿಟಿಐ ಸುದ್ದಿಸಂಸ್ಥೆ ವರದಿ ಮಾಡಿದೆ.

ಲೀಟರ್ ಪೆಟ್ರೋಲ್ ಬೆಲೆಯನ್ನು 27 ಪೈಸೆ ಹೆಚ್ಚಿಸಲಾಗಿದೆ. ಡೀಸೆಲ್ ಬೆಲೆಯಲ್ಲಿ 28 ಪೈಸೆ ಏರಿಕೆ ಆಗಿದೆ. ಒಂದು ತಿಂಗಳ ಅವಧಿಯಲ್ಲಿ 18 ಬಾರಿ ತೈಲ ಬೆಲೆ ಹೆಚ್ಚಿಸಲಾಗಿದೆ. ಶುಕ್ರವಾರದ ಏರಿಕೆಯ ನಂತರ ಬೆಂಗಳೂರಿನಲ್ಲಿ ಪೆಟ್ರೋಲ್ ಬೆಲೆ ₹ 97.92ಕ್ಕೆ, ಡೀಸೆಲ್ ಬೆಲೆ ₹ 90.81ಕ್ಕೆ ತಲುಪಿದೆ.

ರಾಜ್ಯ ಕೋವಿಡ್ ಅಂಕಿ–ಅಂಶ

26,69,514	ಒಟ್ಟು ಸೋಂಕಿತರು (26,53,446 ನಿನ್ನೆಯ ವಿವರ)
2,80,186	ಸಕ್ರಿಯ ಪ್ರಕರಣಗಳು
23,58,412	ಗುಣಮುಖರಾದವರು
30,895	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	16,068
ಗುಣಮುಖ	22,316
ಸಾವು	364

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಸುರಕ್ಷತಾ ನಿಯಮ ಅನುಸರಿಸದೇ ಕಾಮಗಾರಿ: ಗುತ್ತಿಗೆದಾರನ ಬಂಧನ

ಮ್ಯಾನ್‌ಹೋಲ್‌ನಲ್ಲಿ ಮೂವರ ಸಾವು

ಪ್ರಜಾವಾಣಿ ವಾರ್ತೆ

ರಾಮನಗರ: ನಗರದ ಐಜೂರಿನ ಮಲ್ಲೇಶ್ವರ ಬಡಾವಣೆಯಲ್ಲಿರುವ ನೇತಾಜಿ ಪಾಪ್ಯುಲರ್ ಶಾಲೆ ಎದುರು ಶುಕ್ರವಾರ ಬೆಳಿಗ್ಗೆ ನಿರ್ಮಾಣ ಹಂತದಲ್ಲಿದ್ದ ಒಳಚರಂಡಿ ಮ್ಯಾನ್‌ಹೋಲ್‌ಗೆ ಇಳಿದು ಮೂವರು ಕಾರ್ಮಿಕರು ಮೃತಪಟ್ಟಿದ್ದಾರೆ.

ಬೆಂಗಳೂರಿನ ಕಮಲಾನಗರದ ನಿವಾಸಿಗಳಾದ ರಾಜೇಶ್ (40), ಮಂಜುನಾಥ್ (29), ಮಂಜುನಾಥ್ (32) ಮೃತಪಟ್ಟವರು.

ನಗರದ 30ನೇ ವಾರ್ಡ್‌ನಲ್ಲಿ ಒಳಚರಂಡಿ ನಿರ್ಮಾಣ ಕಾಮಗಾರಿ ಮುಕ್ತಾಯ ಹಂತದಲ್ಲಿದೆ. ಬೆಳಿಗ್ಗೆ 11ರ ಸುಮಾರಿಗೆ ಹೊಸ ಚರಂಡಿಗೆ ಹಾಕಲಾಗಿದ್ದ ಮರಳಿನ ಚೀಲ ಹಾಗೂ ಇಟ್ಟಿಗೆಯ ಬ್ಲಾಕ್ ತೆಗೆಯಲು ಈ ಕಾರ್ಮಿಕರು ಮ್ಯಾನ್‌ಹೋಲ್ ಮೂಲಕ 20 ಅಡಿ ಆಳಕ್ಕೆ ಇಳಿದಿದ್ದರು.

8ನೇ ಪುಟ ನೋಡಿ

> **ಮ್ಯಾನ್‌ಹೋಲ್‌ನಲ್ಲಿ ಮೂವರು ಕಾರ್ಮಿಕರು ಸಿಲುಕಿ ಮೃತಪಟ್ಟಿರುವುದು ದುರದೃಷ್ಟಕರ. ಈ ಬಗ್ಗೆ ರಾಮನಗರ ಜಿಲ್ಲಾಧಿಕಾರಿ ಕೂಲಂಕಷ ವಿಚಾರಣೆ ನಡೆಸಲಿದ್ದಾರೆ**
> **ಡಾ. ಸಿ.ಎನ್. ಅಶ್ವತ್ಥನಾರಾಯಣ**, ರಾಮನಗರ ಜಿಲ್ಲಾ ಉಸ್ತುವಾರಿ ಸಚಿವ

> **ಬೆಳಿಗ್ಗೆ 10 ಗಂಟೆಗೆ ಕೆಲಸಕ್ಕೆ ಬಂದಿದ್ದೆವು. ಯುಜಿಡಿ ಒಳಗೆ ಇಳಿಯುವಾಗ ಒಬ್ಬರು ಆಯ ತಪ್ಪಿ ಅರ್ಧದಲ್ಲೇ ಬಿದ್ದರು. ಅವರ ರಕ್ಷಣೆ ಮಾಡಲು ಹೋಗಿ ಉಳಿದ ಇಬ್ಬರೂ ಬಿದ್ದರು**
> **ರಾಮಚಂದ್ರ**, ಮೃತ ಮಂಜುನಾಥ್ ತಂದೆ

ಡಿ.ಸಿ. ನೇತೃತ್ವದಲ್ಲಿ ತನಿಖೆ

ಘಟನೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ಜಿಲ್ಲಾಧಿಕಾರಿ ನೇತೃತ್ವದಲ್ಲಿ ತನಿಖೆ ನಡೆಸಿ ವರದಿ ಸಲ್ಲಿಸಲು ಸೂಚಿಸಿದೆ. ಮತ್ತೊಂದೆಡೆ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಸಹ ಜಿಲ್ಲಾಡಳಿತದಿಂದ ವರದಿ ಕೇಳಿದೆ.

ಇಂದಿನ ಪಾಡ್‌ಕಾಸ್ಟ್ ವಿಶೇಷ

ವಚನವಾಣಿ

ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ

Prajavani.net/podcast

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಆಮ್ಲಜನಕ ಸಾಂದ್ರಕ ಲಾಭಕ್ಕೆ ಶೇ 70ರ ಮಿತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಆಮ್ಲಜನಕ ಸಾಂದ್ರಕಗಳ ಬೆಲೆಯು ವಿಪರೀತ ಏರಿಕೆಯಾಗುವುದನ್ನು ತಡೆಯಲು ಕೇಂದ್ರ ಸರ್ಕಾರ ಅವುಗಳ ಮೇಲಿನ ಗರಿಷ್ಠ ಲಾಭಾಂಶವನ್ನು ಶೇ 70ಕ್ಕೆ ನಿಗದಿಪಡಿಸಿ ಆದೇಶ ಹೊರಡಿಸಿದೆ.

'ಇವುಗಳ ಬೆಲೆಯಲ್ಲಿ ಗರಿಷ್ಠ ಲಾಭಾಂಶದ ಪ್ರಮಾಣವನ್ನು ವಿತರಕರ ಮಟ್ಟದಲ್ಲಿ ಶೇ 70ಕ್ಕೆ ನಿಗದಿ ಮಾಡಲಾಗಿದೆ. ಕೋವಿಡ್ ಎರಡನೆಯ ಅಲೆಯ ಕಾರಣದಿಂದ ಆಮ್ಲಜನಕ ಸಿಲಿಂಡರ್‌ಗಳಿಗೆ ಬೇಡಿಕೆ ಹೆಚ್ಚಿದ ಪರಿಣಾಮ, ಸಾಂದ್ರಕಗಳ ಬೆಲೆಯೂ ವಿಪರೀತವಾಗಿ ಏರಿಕೆಯಾಗಿದೆ. ಆದ್ದರಿಂದ ಸರ್ಕಾರವು ಮಧ್ಯಪ್ರವೇಶ ಮಾಡಲು ತೀರ್ಮಾನಿಸಿದೆ' ಎಂದು ರಾಸಾಯನಿಕ ಮತ್ತು ರಸಗೊಬ್ಬರ ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

'ಸಚಿವಾಲಯವು ಸಂಗ್ರಹಿಸಿರುವ ಮಾಹಿತಿ ಪ್ರಕಾರ, ಸದ್ಯ ವಿತರಕರ ಮಟ್ಟದಲ್ಲಿ ಆಮ್ಲಜನಕ ಸಾಂದ್ರಕಗಳ ಲಾಭಾಂಶದ ಪ್ರಮಾಣವು ಶೇ 198ರಷ್ಟಿದೆ. ಇದನ್ನು ನಿಯಂತ್ರಿಸಲು ಔಷಧ (ಬೆಲೆ ನಿಯಂತ್ರಣ) ಆದೇಶ 2013ರ ಪ್ಯಾರ 19ರಲ್ಲಿ ನೀಡಲಾಗಿರುವ ಅಧಿಕಾರವನ್ನು ಬಳಸಿಕೊಂಡು ರಾಷ್ಟ್ರೀಯ ಔಷಧ ಬೆಲೆ ಪ್ರಾಧಿಕಾರವು (ಎನ್‌ಪಿಪಿಎ) ಸಾಂದ್ರಕಗಳ ಗರಿಷ್ಠ ಲಾಭಾಂಶವನ್ನು ಶೇ 70ಕ್ಕೆ ಮಿತಿಗೊಳಿಸಿ ಆದೇಶ ನೀಡಿದೆ' ಎಂದು ತಿಳಿಸಲಾಗಿದೆ.

ಈ ಆದೇಶದ ಆಧಾರದಲ್ಲಿ ಮೂರು ದಿನದೊಳಗೆ ಸಾಂದ್ರಕಗಳ ಗರಿಷ್ಠ ಮಾರಾಟ ಬೆಲೆಯನ್ನು ತಿಳಿಸುವಂತೆ ತಯಾರಕರು ಹಾಗೂ ಆಮದುದಾರರಿಗೆ ಎನ್‌ಪಿಪಿಎ ಸೂಚನೆ ನೀಡಿದೆ. ಸಾಂದ್ರಕಗಳ ಪರಿಷ್ಕೃತ ಗರಿಷ್ಠ ಮಾರಾಟ ಬೆಲೆಯನ್ನು ಒಂದು ವಾರದೊಳಗೆ ಪ್ರಕಟಿಸಲಾಗುವುದು. ಈಗ ಜಾರಿ ಮಾಡಿದ ಆದೇಶವು 2021ರ ನವೆಂಬರ್ 30ರವರೆಗೆ ಜಾರಿಯಲ್ಲಿರುತ್ತದೆ ಎಂದು ತಿಳಿಸಲಾಗಿದೆ.

ಹೋಟೆಲ್, ಪ್ರವಾಸೋದ್ಯಮ: ಸುಲಭ ಸಾಲ

ಮುಂಬೈ (ಪಿಟಿಐ): ಕೋವಿಡ್‌ನಿಂದ ತೀವ್ರ ಹಾನಿಗೆ ಒಳಗಾಗಿರುವ ಉದ್ಯಮದ ಕೆಲವು ವಲಯಗಳಿಗೆ ಸಾಲ ನೀಡಲು ನೆರವಾಗಲು ಆರ್‌ಬಿಐ, ₹ 15 ಸಾವಿರ ಕೋಟಿ ಮೌಲ್ಯದ ವಿಶೇಷ ಯೋಜನೆ ರೂಪಿಸಲು ನಿರ್ಧರಿಸಿದೆ.

'ಎರಡನೆಯ ಅಲೆಯ ದುಷ್ಪರಿಣಾಮ ತಗ್ಗಿಸಲು 2022ರ ಮಾರ್ಚ್ 31ರವರೆಗೆ ಕೆಲವು ವಲಯಗಳಿಗೆ ಸಾಲ ಒದಗಿಸಲು ವಿಶೇಷ ವ್ಯವಸ್ಥೆ ಮಾಡಲಾಗುತ್ತದೆ. ಇದರ ಅಡಿ ಗರಿಷ್ಠ ಮೂರು ವರ್ಷಗಳ ಅವಧಿಗೆ ಸಾಲ ಪಡೆಯಬಹುದು' ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಶುಕ್ರವಾರ ತಿಳಿಸಿದರು.

ಯೋಜನೆಯ ಅಡಿಯಲ್ಲಿ ಹೋಟೆಲ್ ಮತ್ತು ರೆಸ್ಟೊರೆಂಟ್, ಪ್ರವಾಸೋದ್ಯಮ ವಲಯ, ಖಾಸಗಿ ಬಸ್ ಸೇವೆ ಒದಗಿಸುವವರು, ಕಾರು ರಿಪೇರಿ ಸೇವೆ ಒದಗಿಸುವವರು, ಕಾರುಗಳನ್ನು ಬಾಡಿಗೆ ಆಧಾರದಲ್ಲಿ ನೀಡುವವರು, ಸ್ಪಾ ಕ್ಲಿನಿಕ್, ಬ್ಯೂಟಿ ಪಾರ್ಲರ್ ಹಾಗೂ ಸಲೂನ್‌ಗಳಿಗೆ ಬ್ಯಾಂಕ್‌ಗಳು ಸಾಲ ಒದಗಿಸಲು ಅವಕಾಶ ಇದೆ.

ಗಡಿ ಜಿಲ್ಲೆಯಲ್ಲಿ ಆರೋಗ್ಯ ವ್ಯವಸ್ಥೆಗೆ ಪಾರ್ಶ್ವವಾಯು

ಬಹುತೇಕ ಹಳ್ಳಿಗಳಿಗೆ ಆರೋಗ್ಯ ಸೇವೆ 'ದೂರ'

• ಎಂ. ಮಹೇಶ

ಬೆಳಗಾವಿ: ಅಂದಾಜು 53 ಲಕ್ಷ ಜನಸಂಖ್ಯೆ ಹೊಂದಿರುವ, ಬಯಲುಸೀಮೆ ಮತ್ತು ಪಶ್ಚಿಮಘಟ್ಟದ ಸೆರಗು ಹಾಗೂ ಎರಡು ರಾಜ್ಯಗಳ ಗಡಿಯನ್ನು ಹಂಚಿಕೊಂಡಿರುವ ಜಿಲ್ಲೆಯಲ್ಲಿ ಗ್ರಾಮೀಣ ಆರೋಗ್ಯ ವ್ಯವಸ್ಥೆಯು ಪಾರ್ಶ್ವವಾಯು ಪೀಡಿತವಾಗಿದೆ. ಬಹುತೇಕ ಹಳ್ಳಿಗಳಿಗೆ ಆರೋಗ್ಯ ಸೇವೆ ಇನ್ನೂ 'ದೂರ'ವಾಗಿಯೇ ಉಳಿದಿದೆ.

15 ತಾಲ್ಲೂಕುಗಳಿರುವ ಜಿಲ್ಲೆಗೆ 139 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸಾಲುತ್ತಿಲ್ಲ. ಆಸ್ಪತ್ರೆಗಳು ಒಂದಲ್ಲ ಒಂದು ಕೊರತೆಯಿಂದ ಬಳಲುತ್ತಿವೆ. ಸಿಬ್ಬಂದಿ ಇಲ್ಲ. ಕೆಲವೆಡೆ ವೈದ್ಯರೇ ಇಲ್ಲ. ಕೆಲವರು ಕೋವಿಡ್ ಪೀಡಿತರಾಗಿದ್ದಾರೆ. ಒಬ್ಬೊಬ್ಬರಿಗೆ 2-3 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪ್ರಭಾರ ನೀಡಲಾಗಿದೆ. ಇರುವ ಸಿಬ್ಬಂದಿಯೇ ಒತ್ತಡದ ನಡುವೆ ಸೇನಾನಿಗಳಂತೆ ದುಡಿಯುತ್ತಿದ್ದಾರೆ.

ಆಸ್ಪತ್ರೆ ಇರುವ ಊರು ಬಿಟ್ಟರೆ ವ್ಯಾಪ್ತಿಯ ಇತರ ಗ್ರಾಮದವರು ಬಂದು ಹೋಗಬೇಕಾದರೆ ಸರಾಸರಿ 20ರಿಂದ 30 ಕಿ.ಮೀ. ದೂರ ಕ್ರಮಿಸಬೇಕು. ಲಾಕ್‌ಡೌನ್ ಸಮಯದಲ್ಲಿ ಸಾರಿಗೆಗೆ ಪರದಾಟ. 'ಸಂಜೀವಿನಿ'ಯಂತೆ ಇರಬೇಕಿದ್ದ ಬಹುತೇಕ ಕೇಂದ್ರಗಳು ಭಾಗಶಃ ಸೋತಿವೆ. ಹೀಗಾಗಿ ಸಾಂಕ್ರಾಮಿಕದ ಈ ಸಮಯದಲ್ಲೂ ಆ ಭಾಗದ ಜನರ ಪರದಾಟ ತಪ್ಪಿಲ್ಲ.

ಹೆಸರಿಗಷ್ಟೆ 24x7 ಸೇವೆ: 'ಪ್ರಜಾವಾಣಿ' ಹಲವು ಪ್ರಾಥಮಿಕ ಕೇಂದ್ರಗಳು ಮತ್ತು ಹತ್ತಾರು ಹಳ್ಳಿಗಳಿಗೆ ಭೇಟಿ ನೀಡಿದಾಗ ಕಂಡ ಸ್ಥಿತಿ ಸರ್ಕಾರ ಹೇಳುವುದಕ್ಕೆ ತದ್ವಿರುದ್ಧವಾಗಿರುವುದು ಕಂಡುಬಂದಿತು.

ಹುಕ್ಕೇರಿ ತಾಲ್ಲೂಕಿನ ಇಸ್ಲಾಂಪುರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ತಲುಪಿದಾಗ ಬೆಳಿಗ್ಗೆ 10 ಗಂಟೆಯಾಗಿತ್ತು. 24x7 ಆಸ್ಪತ್ರೆಯಾದ ಇಲ್ಲಿ ಎಲ್ಲ ಸಮಯದಲ್ಲೂ ಚಿಕಿತ್ಸೆ ಸಿಗಬಹುದೆಂದು ಹಲವರು ಬಂದಿದ್ದರು. ಸ್ಟ್ರೆಚರ್‌ನಲ್ಲಿ ಮಲಗಿದ್ದ ವೃದ್ಧೆಯೊಬ್ಬರು ನರಳಾಡುತ್ತಿದ್ದರು. ಗಂಟೆ ಕಳೆದರೂ ವೈದ್ಯರ ಸುಳಿವಿರಲಿಲ್ಲ. ಅಂದು ಕೆಲಸಕ್ಕೆ ವರದಿ ಮಾಡಿಕೊಳ್ಳಲು ಬಂದಿದ್ದ ಯುವ ವೈದ್ಯ, 'ಇಂದಷ್ಟೇ ಬಂದಿದ್ದೇನೆ' ಎಂದರು.

ಆಸ್ಪತ್ರೆ ಎದುರಿನ ಶಾಲೆ ಆವರಣದಲ್ಲಿ ಮಕ್ಕಳು, ಯುವಕರು ಮಾಸ್ಕ್ ಹಾಕಿಕೊಂಡು ಕ್ರಿಕೆಟ್ ಆಡುತ್ತಿದ್ದರು. ಅಂಗಡಿಗಳ ಬಳಿ, ವೃತ್ತಗಳಲ್ಲಿ ಯುವಕರು ಗುಂಪಾಗಿ ಚರ್ಚಿಸುತ್ತಿದ್ದರು. ಬಹುತೇಕರು ಮಾಸ್ಕ್ ಹಾಕಿರಲಿಲ್ಲ.

13ನೇ ಪುಟ ನೋಡಿ
ವಿಶೇಷ ಪುಟ 13

ಗ್ರಾಮಾರೋಗ್ಯ
ಆಗಲಿ ಇನ್ನಷ್ಟು ಯೋಗ್ಯ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಬೆಳಗಾವಿ ತಾಲ್ಲೂಕಿನ ಹೊನಗಾ ಪ್ರಾಥಮಿಕ ಆರೋಗ್ಯ ಕೇಂದ್ರ ಬಂದ್ ಆಗಿದೆ
ಪ್ರಜಾವಾಣಿ ಚಿತ್ರ/ ಏಕನಾಥ ಅಗಸಿಮನಿ

ಹೊನಗಾ: ಕೇಂದ್ರವೇ ಬಂದ್!

ಬೆಳಗಾವಿ ತಾಲ್ಲೂಕಿನ ಹೊನಗಾ ಪ್ರಾಥಮಿಕ ಆರೋಗ್ಯ ಕೇಂದ್ರ ಸಂಜೆ 4ಕ್ಕೇ ಬಂದ್ ಆಗಿತ್ತು. ಮಹಿಳೆಯೊಬ್ಬರು ಕೇಂದ್ರದ ಆವರಣದಲ್ಲಿ ಹುಲ್ಲು ಮೇಯಿಸಲು ಎಮ್ಮೆಗಳನ್ನು ಬಿಟ್ಟಿದ್ದರು. 'ತಿಂಗಳಿಂದಲೂ ಕೇಂದ್ರ ಬಂದ್ ಇದೆ. ಇದರಿಂದ ಪ್ರಯೋಜನ ಆಗುತ್ತಿಲ್ಲ' ಎಂದು ಸ್ಥಳೀಯರು ತಿಳಿಸಿದರು.

ಎ.ರವಿ ನೇಮಕ ವಿವಾದ: ವಿಶ್ವನಾಥ್, ಸಚಿವ ಅಶೋಕ ಪ್ರತಿವಾದಿಗಳು

ಬೆಂಗಳೂರು: ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ (ಬಿಐಎಪಿಎ) ಅಧ್ಯಕ್ಷ ಎ.ರವಿ ನೇಮಕ ಪ್ರಶ್ನಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಿಸಿ ಕಂದಾಯ ಸಚಿವ ಆರ್. ಅಶೋಕ ಮತ್ತು ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್ ಅವರನ್ನು ಪ್ರತಿವಾದಿಗಳನ್ನಾಗಿ ಮಾಡಲು ಹೈಕೋರ್ಟ್ ಅನುಮತಿ ನೀಡಿದೆ.

ನೇಮಕ ಸಂಬಂಧ ಕಡತ ಪರಿಶೀಲಿಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್.ಓಕಾ ನೇತೃತ್ವದ ವಿಭಾಗೀಯ ಪೀಠ, ರವಿ ನೇಮಕ ಕೋರಿ ಮುಖ್ಯಮಂತ್ರಿಗೆ ಈ ಇಬ್ಬರೂ ಶಿಫಾರಸು ಪತ್ರ ಬರೆದಿರುವುದನ್ನು ಗಮನಿಸಿತು.

'ಯಾವುದೇ ಪ್ರಕ್ರಿಯೆಗಳನ್ನು ನಡೆಸದೆ ಈ ಪತ್ರಗಳನ್ನಷ್ಟೇ ಆಧರಿಸಿ ರವಿ ಅವರ ಹೆಸರನ್ನು ಮುಖ್ಯಮಂತ್ರಿ ಅನುಮೋದಿಸಿದ್ದಾರೆ. ಈ ಹುದ್ದೆ ನಿರ್ವಹಿಸಲು ಯಾವುದೇ ಅರ್ಹತೆಗಳು ರವಿ ಅವರಿಗೆ ಇಲ್ಲ. ಇವರು ಆರ್. ಅಶೋಕ ಅವರ ಹತ್ತಿರದ ಸಂಬಂಧಿ. ರಾಜಕೀಯ ಕಾರಣಕಷ್ಟೇ ಅವರನ್ನು ನೇಮಿಸಲಾಗಿದೆ' ಎಂದು ಅರ್ಜಿದಾರ ಟಿ.ನರಸಿಂಹಮೂರ್ತಿ ಆರೋಪಿಸಿದ್ದಾರೆ.

ನೇಮಕಗೊಂಡ ವ್ಯಕ್ತಿಗಿಂತ, ನೇಮಕ ಮಾಡಲು ರಾಜ್ಯ ಸರ್ಕಾರ ಅನುಸರಿಸಿದ ಪ್ರಕ್ರಿಯೆ ಪ್ರಶ್ನಾರ್ಹವಾಗಿದೆ ಎಂದು ಮೌಖಿಕವಾಗಿ ಹೇಳಿದ ಪೀಠ ಜುಲೈ 13ಕ್ಕೆ ವಿಚಾರಣೆ ಮುಂದೂಡಿತು.

ಯಲಚೇನಹಳ್ಳಿ ಫಯಾಜ್‌ಬಾದ್ ರಸ್ತೆಯಲ್ಲಿ ಶುಕ್ರವಾರ ನೀರು ಹೊಳೆಯಂತೆ ಹರಿದು ಮನೆಗಳಿಗೆ ನುಗ್ಗಿತು

ಹೊಂಗಸಂದ್ರದ ಕೆಲ ಬಡಾವಣೆಗಳ ರಸ್ತೆಗಳಲ್ಲಿ ನೀರು ನಿಂತಿದ್ದರಿಂದ ಜನರ ಸಂಚಾರಕ್ಕೆ ತೊಂದರೆ ಆಯಿತು.

ಅಬ್ಬರಿಸಿದ ಮಳೆ • ಕೆಲ ಪ್ರದೇಶಗಳು ಜಲಾವೃತ • ದೂರು ನೀಡಿದರೂ ಸಿಗದ ಶಾಶ್ವತ ಪರಿಹಾರ

ಹೊಳೆಯಾದ ರಸ್ತೆ: ಮನೆಗಳಿಗೆ ನುಗ್ಗಿದ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಕ್ಕೆ ಶುಕ್ರವಾರ ಮುಂಗಾರು ಪ್ರವೇಶಿಸಿದ್ದು, ನಗರದಲ್ಲಿ ಮಳೆ ಅಬ್ಬರಿಸಿ ಸುರಿಯಿತು. ಗುರುವಾರ ರಾತ್ರಿ ಹಾಗೂ ಶುಕ್ರವಾರ ಸುರಿದ ಮಳೆಯು ನಗರದ ಕೆಲ ಪ್ರದೇಶಗಳನ್ನು ಜಲಾವೃತ ಮಾಡಿತು. ಕೆಲ ರಸ್ತೆಗಳಲ್ಲಿ ನೀರು ಹೊಳೆಯಂತೆ ಹರಿಯಿತು. 70ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿತು.

ಕೆಲದಿನಗಳಿಂದ ನಗರದಲ್ಲಿ ಮೋಡ ಕವಿದ ವಾತಾವರಣವಿದ್ದು, ಪ್ರದೇಶದಿಂದ ಪ್ರದೇಶಕ್ಕೆ ಬಿಡುವು ಕೊಡುತ್ತಲೇ ಮಳೆ ಜೋರಾಗಿ ಸುರಿಯುತ್ತಿದೆ. ಶುಕ್ರವಾರ ಮಧ್ಯಾಹ್ನ ಹಾಗೂ ಸಂಜೆಯಿಂದ ರಾತ್ರಿವರೆಗೂ ಬಹುತೇಕ ಪ್ರದೇಶಗಳಲ್ಲಿ ಮಳೆ ಇತ್ತು.

ಬನಶಂಕರಿ, ಜೆ.ಪಿ.ನಗರ, ಪುಟ್ಟೇನಹಳ್ಳಿ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಶುಕ್ರವಾರ ಮಧ್ಯಾಹ್ನ ಧಾರಾಕಾರ ಮಳೆ ಆಯಿತು. ಇದರಿಂದಾಗಿ ಯಲಚೇನಹಳ್ಳಿ ವಾರ್ಡ್ ವ್ಯಾಪ್ತಿಯ ಕನಕನಗರ, ಫಯಾಜ್‌ಬಾದ್, ಕುಮಾರಸ್ವಾಮಿ ಲೇಔಟ್ ಕೆಲ ಪ್ರದೇಶಗಳ ರಸ್ತೆಯಲ್ಲಿ 6 ಅಡಿಯಷ್ಟು ನೀರು ಹೊಳೆಯಂತೆ ಹರಿಯಿತು.



ಯಲಚೇನಹಳ್ಳಿ ಫಯಾಜ್‌ಬಾದ್ ರಸ್ತೆಯಲ್ಲಿ ಶುಕ್ರವಾರ ನೀರು ಹೊಳೆಯಂತೆ ಹರಿದು ಮನೆಗಳಿಗೆ ನುಗ್ಗಿತು

ಪ್ರತಿಯೊಂದು ರಸ್ತೆಯ ಅಕ್ಕ-ಪಕ್ಕದಲ್ಲಿದ್ದ 70ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿತು. ಮಧ್ಯಾಹ್ನವೇ ಮನೆಯೊಳಗೆ ನುಗ್ಗಿದ ನೀರು ಕಂಡ ನಿವಾಸಿಗಳು, ಮನೆಯ ಚಾವಣಿಗೆ ಹೋಗಿ ರಕ್ಷಣೆ ಪಡೆದುಕೊಂಡರು.

ಫಯಾಜ್‌ಬಾದ್‌ನ ರಸ್ತೆಯೊಂದರಲ್ಲಿ ರಭಸವಾಗಿ ಹರಿದ ನೀರು, ಮನೆಯೊಳಗೆ ನುಗ್ಗಿತು. ಬಹುತೇಕ ಮನೆಯಲ್ಲಿದ್ದ ಎಲೆಕ್ಟ್ರಿಕ್ ವಸ್ತುಗಳು, ಪೀಠೋಪಕರಣ ಹಾಗೂ ಬಟ್ಟೆಗಳು ನೀರಿನೊಂದಿಗೆ ತೇಲಿ ಹೋದವು. ರಸ್ತೆಯಲ್ಲಿ ನಿಲ್ಲಿಸಿದ್ದ ಬೈಕ್, ಆಟೊ ಹಾಗೂ ಕಾರುಗಳು ಸಹ ನೀರಿನಲ್ಲಿ ಮುಳುಗಿದವು.

'ರಸ್ತೆ ಹಾಗೂ ಮನೆಗೆ ನುಗ್ಗಿ ಹರಿಯುವ ನೀರು ನೋಡಿ ಭಯವಾಗುತ್ತದೆ. ಇದು ಒಂದು ದಿನದ ಸಮಸ್ಯೆಯಲ್ಲ. ಪ್ರತಿ ಬಾರಿ ಮಳೆ ಬಂದಾಗಲೂ ಇದೇ ಸಮಸ್ಯೆ ಇದೆ. ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ದೂರು ನೀಡಿದರೂ ಶಾಶ್ವತ ಪರಿಹಾರ ಸಿಕ್ಕಿಲ್ಲ' ಎಂದು ಸ್ಥಳೀಯರು ದೂರಿದರು.

'ಮಳೆಗಾಲ ಆರಂಭದ ದಿನದಲ್ಲೇ ನೀರು ಮನೆಗೆ ನುಗ್ಗಿದೆ. ಮುಂದಿನ ದಿನಗಳು ನಮಗೆ ಕಷ್ಟದ ದಿನಗಳು. ಮಕ್ಕಳು, ವೃದ್ಧರನ್ನು ಕಟ್ಟಿಕೊಂಡು ಹೇಗೆ ಮನೆಯಲ್ಲಿ ಇರುವುದು ಎಂಬುದೇ ಚಿಂತೆಯಾಗಿದೆ' ಎಂದರು.

ಕೆರೆ ಅತಿಕ್ರಮಣದಿಂದ ಸಮಸ್ಯೆ: 'ಎರಡು ದೊಡ್ಡ ಕೆರೆಗಳನ್ನು ಅತಿಕ್ರಮಣ ಮಾಡಿಕೊಂಡು ಹಲವರು ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಬಹುತೇಕ ರಸ್ತೆಗಳಲ್ಲಿ ಕಾಲುವೆಗಳೂ ಚಿಕ್ಕದಾಗಿವೆ. ಇದರಿಂದಾಗಿಯೇ ಪ್ರತಿಬಾರಿ ನೀರು ಮನೆಗಳಿಗೆ ನುಗ್ಗುತ್ತಿದೆ' ಎಂದು ಬಿಬಿಎಂಪಿಯ ಅಧಿಕಾರಿಯೊಬ್ಬರು ಹೇಳಿದರು.

'ಕೆಲವರು ಜಾಗ ತಮ್ಮದೆಂದು ವಾದಿಸಲು ತಾತ್ಕಾಲಿಕವಾಗಿ ಶೆಡ್ ಹಾಕಿಕೊಂಡಿದ್ದಾರೆ. ಕೆಲವರು ದೊಡ್ಡ ಕಟ್ಟಡಗಳನ್ನೂ ನಿರ್ಮಿಸಿಕೊಂಡಿದ್ದಾರೆ. ಮಳೆ ಬಂದಾಗ ಶೆಡ್‌ಗಳಿಗೆ ಅಪಾರ ಪ್ರಮಾಣ ನೀರು ನುಗ್ಗುತ್ತಿದೆ. ಇದಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಕಾಲುವೆ ಹಾಗೂ ರಸ್ತೆ ಕಾಮಗಾರಿ ಮಾಡಬೇಕು. ಅದಕ್ಕೆ ಕೆಲ ಸ್ಥಳೀಯರೇ ವಿರೋಧ ವ್ಯಕ್ತಪಡಿಸುತ್ತಿದ್ದಾರೆ' ಎಂದೂ ತಿಳಿಸಿದರು.

'ಬನಶಂಕರಿ, ಜೆ.ಪಿ.ನಗರದಲ್ಲಾದ ಮಳೆ ನೀರು ಇದೇ ಪ್ರದೇಶದ ಮೂಲಕ ಹರಿದು ಹೋಗಲು ದಾರಿ ಮಾಡಬೇಕು. ಇದಕ್ಕಾಗಿ ಕೆರೆ ಅತಿಕ್ರಮಣ ತೆರವುಗೊಳಿಸಬೇಕು. ಪ್ರತಿ ಬಾರಿ ಸಭೆಯಲ್ಲೂ ಅತಿಕ್ರಮಣ ತೆರವು ಬಗ್ಗೆ ಚರ್ಚೆಯಾಗಿ, ಕೆಲಸ ಅರ್ಧಕ್ಕೆ ನಿಲ್ಲುತ್ತದೆ' ಎಂದರು.

ಮೂರು ಕಡೆ ಉರುಳಿಬಿದ್ದ ಮರಗಳು

ಮಳೆ ವೇಳೆಯೇ ಗಾಳಿಯೂ ಜೋರಾಗಿತ್ತು. ಜೆ.ಪಿ.ನಗರದ ಮೂರು ಕಡೆಗಳಲ್ಲಿ ಮರಗಳು ಉರುಳಿಬಿದ್ದಿದ್ದವು. ಇದರಿಂದಾಗಿ ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಗಿತ್ತು. ಸಹಾಯವಾಣಿಗೆ ದೂರು ಬರುತ್ತಿದ್ದಂತೆ ಬಿಬಿಎಂಪಿ ಸಿಬ್ಬಂದಿ, ಸ್ಥಳಕ್ಕೆ ಹೋಗಿ ಸ್ಥಳೀಯರ ನೆರವಿನಿಂದ ಮರ ತೆರವುಗೊಳಿಸಿದರು.

ರಾಜಾಜಿನಗರ, ಬಸವೇಶ್ವರನಗರ, ವಿಜಯನಗರ, ಮಹಾಲಕ್ಷ್ಮಿ ಲೇಔಟ್, ಯಶವಂತಪುರ, ಆರ್.ಟಿ.ನಗರ, ಹೆಬ್ಬಾಳ, ನಾಗಾವರ, ಹೆಣ್ಣೂರು, ಬಾಣಸವಾಡಿ, ಕೋರಮಂಗಲ, ಮಡಿವಾಳ, ವಿಲ್ಸನ್ ಗಾರ್ಡನ್, ಶಾಂತಿನಗರ, ಮೆಜೆಸ್ಟಿಕ್, ಗಾಂಧಿನಗರ, ಚಾಮರಾಜಪೇಟೆ, ದೀಪಾಂಜಲಿನಗರ, ಕೆಂಗೇರಿ, ರಾಜರಾಜೇಶ್ವರಿನಗರ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಜೋರು ಮಳೆ ಆಯಿತು.

ರಾಜ್ಯಪಾಲರ ಮೂಲಕ ರಾಷ್ಟ್ರಪತಿಗೆ ಮನವಿ ರವಾನಿಸಿದ ಕೆಪಿಸಿಸಿ

ದಿನಕ್ಕೆ ಕೋಟಿ ಲಸಿಕೆ ವಿತರಣೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರು ತಿಂಗಳೊಳಗೆ ದೇಶದ ಎಲ್ಲರಿಗೂ ಕೋವಿಡ್ ಲಸಿಕೆ ನೀಡುವ ದೃಷ್ಟಿಯಿಂದ ನಿತ್ಯವೂ ಒಂದು ಕೋಟಿ ಲಸಿಕೆಯನ್ನು ಉಚಿತವಾಗಿ ವಿತರಿಸಲು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಒತ್ತಾಯಿಸಿ ಪ್ರದೇಶ ಕಾಂಗ್ರೆಸ್ ಸಮಿತಿ ರಾಷ್ಟ್ರಪತಿ ರಮಾನಾಥ ಕೋವಿಂದ್ ಅವರಿಗೆ ರಾಜ್ಯಪಾಲರ ಮೂಲಕ ಮನವಿ ಸಲ್ಲಿಸಿದೆ.

ರಾಜಭವನದಲ್ಲಿ ರಾಜ್ಯಪಾಲ ವಜುಭಾಯಿ ವಾಲಾ ಅವರನ್ನು ಶುಕ್ರವಾರ ಭೇಟಿಮಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನೇತೃತ್ವದ ನಿಯೋಗ, ಪ್ರತಿ ದಿನದ ಉಚಿತ ಲಸಿಕೆ ವಿತರಣೆಯ ಗುರಿಯನ್ನು 16 ಲಕ್ಷದಿಂದ 1 ಕೋಟಿಗೆ ಹೆಚ್ಚಿಸಬೇಕೆಂಬ ಮನವಿ ಸಲ್ಲಿಸಿತು.

'ಕೇಂದ್ರ ಸರ್ಕಾರ ಒದಗಿಸಿರುವ ಮಾಹಿತಿ ಪ್ರಕಾರ, ಮೇ 31ರವರೆಗೆ 21.31 ಕೋಟಿ ಡೋಸ್ ಲಸಿಕೆ ನೀಡಲಾಗಿದೆ. ಈ ಪೈಕಿ 4.45 ಕೋಟಿ ಜನರಿಗೆ ಮಾತ್ರ ಎರಡು ಡೋಸ್ ನೀಡಲಾಗಿದೆ. ದೇಶದ ಜನಸಂಖ್ಯೆಯ ಶೇಕಡ 3.17ರಷ್ಟು ಜನರಿಗೆ ಮಾತ್ರ ಎರಡು ಡೋಸ್ ನೀಡಲಾಗಿದೆ. ಇದೇ ವೇಗದಲ್ಲಿ ಲಸಿಕೆ ವಿತರಿಸಿದರೆ ಮೂರು ವರ್ಷಗಳಾದರೂ ಪೂರ್ಣಗೊಳ್ಳುವುದಿಲ್ಲ' ಎಂದು ಮನವಿ ಹೇಳಿದೆ

ದೇಶದಲ್ಲಿ 140 ಕೋಟಿ ಜನರಿದ್ದಾರೆ. ಆದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೇವಲ 39 ಕೋಟಿ ಡೋಸ್ ಲಸಿಕೆಗೆ ಬೇಡಿಕೆ ಸಲ್ಲಿಸಿವೆ. ಇದೇ ಸಮಯದಲ್ಲಿ ಕೇಂದ್ರ ಸರ್ಕಾರ 6.63 ಕೋಟಿ ಡೋಸ್ ಲಸಿಕೆಯನ್ನು ರಫ್ತು ಮಾಡಿದೆ. ಇದು ದೇಶದ ಜನರಿಗೆ ಸೇವೆ ಮಾಡಬೇಕಾದ ಸರ್ಕಾರ ಎಸಗಿದ ಮಹಾನ್ ಲೋಪ ಎಂದು ಕೆಪಿಸಿಸಿ ದೂರಿದೆ.

ಕೇಂದ್ರ ಸರ್ಕಾರಕ್ಕೆ ಪ್ರತಿ ಡೋಸ್‌ಗೆ ₹ 150 ಮತ್ತು ರಾಜ್ಯ ಸರ್ಕಾರಕ್ಕೆ ₹ 300ರ ದರದಲ್ಲಿ ಲಸಿಕೆ ಒದಗಿಸುವ ಉತ್ಪಾದಕರು, ಖಾಸಗಿ ಆಸ್ಪತ್ರೆಗಳ ಮೂಲಕ ₹ 600 ರಿಂದ ₹ 1,500ರವರೆಗೂ ಮಾರಾಟ ಮಾಡುತ್ತಿವೆ. ಬಡವರು ಲಸಿಕೆ ಪಡೆಯಲಾಗದ ಸ್ಥಿತಿ ನಿರ್ಮಾಣವಾಗಿದೆ. ಇದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಲಾಭಕೋರತನಕ್ಕೆ ಸಾಕ್ಷಿ ಎಂದು ಟೀಕಿಸಿದೆ.

ಕೆಪಿಸಿಸಿ ಕಾರ್ಯಾಧ್ಯಕ್ಷರಾದ ರಾಮಲಿಂಗಾ ರೆಡ್ಡಿ, ಈಶ್ವರ ಖಂಡ್ರೆ, ಸಲೀಂ ಅಹ್ಮದ್, ಶಾಸಕರಾದ ಆರ್.ವಿ. ದೇಶಪಾಂಡೆ ಮತ್ತು ಎಚ್.ಕೆ. ಪಾಟೀಲ ನಿಯೋಗದಲ್ಲಿದ್ದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಮುಖಂಡರ ನಿಯೋಗ ರಾಜ್ಯಪಾಲ ವಜುಭಾಯಿ ವಾಲಾ ಅವರನ್ನು ಶುಕ್ರವಾರ ಭೇಟಿಮಾಡಿ ಮನವಿ ಸಲ್ಲಿಸಿತು.

ಹಣ ಇಲ್ಲದವರಿಗೆ ಲಸಿಕೆ ಇಲ್ಲವೇ?

ಬೆಂಗಳೂರು: 'ಹಣ ಇಲ್ಲದ ಬಡವರಿಗೆ ರಾಜ್ಯದಲ್ಲಿ ಕೋವಿಡ್ ಲಸಿಕೆ ಇಲ್ಲವೆ? ಅವರಿಗೆ ಆರೋಗ್ಯದ ರಕ್ಷಣೆ ಇಲ್ಲವೆ' ಎಂದು ಕಾಂಗ್ರೆಸ್ ಶಾಸಕರಾದ ಕೃಷ್ಣ ಬೈರೇಗೌಡ ಮತ್ತು ರಿಜ್ವಾನ್ ಅರ್ಷದ್ ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ಪ್ರಶ್ನಿಸಿದ್ದಾರೆ.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಂವಿಧಾನದ ಪ್ರಕಾರ ಜೀವಿಸುವ ಹಕ್ಕು ಎಲ್ಲ ಭಾರತೀಯರಿಗೂ ಇದೆ. ಕೋವಿಡ್‌ನಿಂದ ರಕ್ಷಣೆ ಪಡೆಯಲು ಲಸಿಕೆ ಹಾಕಿಸಿಕೊಳ್ಳುವುದೊಂದೇ ಪರಿಹಾರ ಎಂದು ವಿಜ್ಞಾನಿಗಳು, ವೈದ್ಯರು ಖಚಿತಪಡಿಸಿದ್ದಾರೆ. ಇಂತಹ ಸಂದರ್ಭದಲ್ಲಿ ಪ್ರಾಣ ರಕ್ಷಣೆಯ ಸಾಧನವಾಗಿರುವ ಕೋವಿಡ್ ಲಸಿಕೆಯನ್ನು ಹಣ ಕೊಟ್ಟವರಿಗೆ ಮಾತ್ರ ವಿತರಿಸುವುದು ಸರಿಯೆ' ಎಂದರು ಪ್ರಶ್ನಿಸಿದರು. ಹಣ ಇಲ್ಲದವರಿಗೆ ಲಸಿಕೆ ಇಲ್ಲ ಎಂದಾದರೆ ಸಂವಿಧಾನದಲ್ಲಿನ ಭರವಸೆಗೆ ಅರ್ಥ ಇದೆಯೆ? ಬಡವನಿಗೆ ಪ್ರಾಣ ಉಳಿಸಿಕೊಳ್ಳುವ ಅವಕಾಶ ಇದೆಯ? ಬಡ ಕುಟುಂಬಗಳ ಜನರು ಸಾವಿರಾರು ರೂಪಾಯಿ ಹಣ ನೀಡಿ ಲಸಿಕೆ ಖರೀದಿಸಲು ಸಾಧ್ಯವೆ ಎಂದು ಕೃಷ್ಣ ಬೈರೇಗೌಡ ಕೇಳಿದರು.

ಕೈ ಚಾಚುವ ಸ್ಥಿತಿ: 'ಸರ್ಕಾರಿ ಆಸ್ಪತ್ರೆಗಳಲ್ಲಿ ಲಸಿಕೆ ಇಲ್ಲ. ಆದರೆ, ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆ ಮಾರಾಟಕ್ಕೆ ಲಭ್ಯವಿದೆ. ಜನರು ಕೋವಿಡ್ ಲಸಿಕೆಗೆ ಬೇಡಿಕೆ ಇಡುವುದನ್ನು ತಪ್ಪಿಸಲು ಬಿಜೆಪಿ ಕಾರ್ಯಕರ್ತರು ಸಾಮಾಜಿಕ ಮಾಧ್ಯಮಗಳ ಮೂಲಕ ಲಸಿಕೆ ಕುರಿತು ಅಪಪ್ರಚಾರ ನಡೆಸುತ್ತಿದ್ದಾರೆ' ಎಂದು ರಿಜ್ವಾನ್ ಅರ್ಷದ್ ಟೀಕಿಸಿದರು.

ಸಪ್ತಗಿರಿ ಆಸ್ಪತ್ರೆಯ ವೈದ್ಯರು ಕೋವಿಡ್‌ನಿಂದ ಗುಣಮುಖರಾದವರಿಂದ ಸಸಿ ನೆಡಿಸುವ ಮೂಲಕ ಶುಕ್ರವಾರ ಪರಿಸರ ಜಾಗೃತಿ ಮೂಡಿಸಿದರು.



ಕೋವಿಡ್: ದೃಢ ಪ್ರಮಾಣ ಇಳಿಕೆ

ಬೆಂಗಳೂರು: ರಾಜ್ಯದಲ್ಲಿ 24 ಗಂಟೆಗಳ ಅವಧಿಯಲ್ಲಿ 16,068 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಇದರಿಂದಾಗಿ ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 26.69 ಲಕ್ಷ ದಾಟಿದೆ.

ಕಳೆದ ತಿಂಗಳ ಕೆಲ ದಿನಗಳು ಶೇ 30ರ ಗಡಿಯ ಆಸುಪಾಸಿಗೆ ಏರಿಕೆ ಕಂಡಿದ್ದ ಸೋಂಕು ದೃಢ ಪ್ರಮಾಣ, ಈಗ ಶೇ 10.66ಕ್ಕೆ ಇಳಿಕೆಯಾಗಿದೆ. ಈ ತಿಂಗಳು ನಾಲ್ಕು ದಿನಗಳಲ್ಲಿ 65,083 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ರಾಜ್ಯದಲ್ಲಿ ಕೊರೊನಾ ಸೋಂಕಿತರಲ್ಲಿ 364 ಮಂದಿ ಸಾವಿಗೀಡಾಗಿರುವುದು ಶುಕ್ರವಾರ ಖಚಿತಪಟ್ಟಿದೆ. ಮರಣ ಪ್ರಮಾಣ ದರ ಶೇ 2.26ರಷ್ಟು ವರದಿಯಾಗಿದೆ. ಈವರೆಗೆ ಕೋವಿಡ್‌ಗೆ ಮೃತಪಟ್ಟವರ ಒಟ್ಟು ಸಂಖ್ಯೆ 30,895ಕ್ಕೆ ಏರಿಕೆಯಾಗಿದೆ.

ಕೋವಿಡ್ ಪರೀಕ್ಷೆಗಳ ಸಂಖ್ಯೆ ಮತ್ತೆ ಏರುಗತಿ ಪಡೆದುಕೊಂಡಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆ ಕಂಡಿದ್ದು, ಸದ್ಯ 2.80 ಲಕ್ಷ ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಸೋಂಕಿತರಲ್ಲಿ 22,316 ಮಂದಿಗೆ ಕಾಯಿಲೆ ವಾಸಿಯಾಗಿದೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 23.58 ಲಕ್ಷ ದಾಟಿದೆ.



ಮಲಬಾರ್‌ನಿಂದ ಲಸಿಕೆ

ಬೆಂಗಳೂರು: ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಸಂಸ್ಥೆಯು ಕೋವಿಡ್ ನಿಯಂತ್ರಣಕ್ಕಾಗಿ ಒಂದು ಲಕ್ಷ ಲಸಿಕೆಗಳನ್ನು ಉಚಿತವಾಗಿ ನೀಡಲು ಮುಂದಾಗಿದೆ.

ಮಲಬಾರ್ ಸಮೂಹದ ಅಧ್ಯಕ್ಷ ಎ.ಪಿ. ಅಹ್ಮದ್, 'ದತ್ತಿ ಸಂಸ್ಥೆಗಳು ಹಾಗೂ ಸಂಘ ಸಂಸ್ಥೆಗಳ ಮೂಲಕ ದೀರ್ಘಕಾಲಿಕ ಅನಾರೋಗ್ಯ ಸಮಸ್ಯೆ ಎದುರಿಸುತ್ತಿರುವ ವೃದ್ಧರು ಹಾಗೂ ಲಸಿಕೆ ಅಗತ್ಯವಿರುವವರಿಗೆ, ಅಭಿಯಾನದಡಿ ಲಸಿಕೆ ನೀಡಲಿದ್ದೇವೆ. ಈ ಅಭಿಯಾನಕ್ಕಾಗಿ ₹8 ಕೋಟಿ ಮೀಸಲಿಡಲಾಗಿದೆ' ಎಂದು ಹೇಳಿದರು.

ಎನ್‌ಹೆಚ್‌ಪಿಸಿ ಲಿಮಿಟೆಡ್
(ಭಾರತ ಸರ್ಕಾರದ ಉದ್ದಿಮೆ)
ಸಿಐಎನ್: L40101HR1975GOI032564
ನೊಂ. ಕಚೇರಿ: ಎನ್‌ಹೆಚ್‌ಪಿಸಿ ಕಚೇರಿ ಸಂಕೀರ್ಣ, ಸೆಕ್ಟರ್–33, ಫರೀದಾಬಾದ್–121003 (ಹರ್‍ಯಾಣ)
ಪ್ರಕಟಣೆ
ಎನ್‌ಹೆಚ್‌ಪಿಸಿ ಲಿಮಿಟೆಡ್ ಇವರ ಮಾಲಿಕತ್ವದಲ್ಲಿರುವ, ಎನ್‌ಹೆಚ್‌ಪಿಸಿ ಲಿಮಿಟೆಡ್, ಹೆಚ್‌ಎಂಟಿ ಫ್ಯಾಕ್ಟರಿ–11, ಮುಖ್ಯರಸ್ತೆ, ಪ್ಲಾಟ್ ನಂ.–20, ಮೈಕಾಲಚೆನ್ನೆಹಳ್ಳಿ ಗ್ರಾಮ, ಜಾಲಹಳ್ಳಿ, ಬೆಂಗಳೂರು–560013 (ಕರ್ನಾಟಕ) ವಿಳಾಸದಲ್ಲಿರುವ ಪಿಐಡಿ/ಖಾತಾ/ಸರ್ವೆ ನಂ. 1–77–11 ಹೊಂದಿರುವ ಸುಮಾರು 3.0 ಎಕರೆ (1,30,680 ಚ.ಅ.) ವಿಸ್ತೀರ್ಣವುಳ್ಳ ಜಮೀನನ್ನು ಸಂಪೂರ್ಣವಾಗಿ ವಿಲೇವಾರಿ ಮಾಡಲು ಉದ್ದೇಶಿಸಿಸಲಾಗಿದೆ.
ಇದಕ್ಕೆ ಸಂಬಂಧಿಸಿದಂತೆ, ಹೆಚ್ಚಿನ ಮಾಹಿತಿ ಪಡೆಯಬಯಸಲು ಆಸಕ್ತಿಯುಳ್ಳ ಕಕ್ಷಿದಾರರು (ಖರೀದಾರರು) ಕೆಳಕಂಡ ಅಧಿಕಾರಿಗಳನ್ನು ಸಂಪರ್ಕಿಸಬಹುದು.
ಶ್ರೀ ಶರದ್ ಭೂಷನ್, ಡಿಜಿಎಂ (ಹೆಚ್‌ಆರ್), ಮೊಬೈಲ್ ನಂ.: 8755709935 ಅಥವಾ ಶ್ರೀ ರೂಪೇಶ್ ಕುಮಾರ್, ಎಸ್‌ಎಂ (ಹೆಚ್‌ಆರ್), ಮೊಬೈಲ್ ನಂ.: 9800047998, ಎನ್‌ಹೆಚ್‌ಪಿಸಿ ಲಿಮಿಟೆಡ್, ಎಸ್ಟೇಟ್ ಮ್ಯಾನೇಜ್‌ಮೆಂಟ್ ಸರ್ವೀಸಸ್ ಡಿವಿಜನ್, ಸೆಕ್ಟರ್–33, ಫರೀದಾಬಾದ್–121003 (ಹರ್‍ಯಾಣ), ಇಮೇಲ್: emsconhpc@nhpc.nic.in
Davp 34128/11/0002/2122

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಜಂಟಿ ಆಯುಕ್ತರು (ಕಂದಾಯ)ರವರ ಕಛೇರಿ, ನಗರ ಪಾಲಿಕೆ ಕಛೇರಿಗಳು, ಬೆಂಗಳೂರು.
ಸಂಖ್ಯೆ:ಜಆ(ಕಂ)/ಎನ್.ಎ./30/2020–21 ದಿನಾಂಕ:03.06.2021
ಪ್ರಕಟಣೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ 93, ವಸಂತನಗರ ವಾರ್ಡ್‌ನ ಕುಮಾರಪಾರ್ಕ್ ಪಶ್ಚಿಮ ಸ್ಯಾಂಕಿ ರಸ್ತೆಯಿಂದ ವಿ. ಎಸ್ ರಾಜು ರಸ್ತೆ ಮಾರ್ಗವಾಗಿ ಹಾದುಹೋಗಿ ಆರ್.ವಿ. ಲೇಔಟ್‌ನ ಕೊನೆಯಲ್ಲಿರುವ ಹೋಟೆಲ್ ಟ್ಯೂಲಿಪ್–ಇನ್ ವರೆಗಿನ ರಸ್ತೆಗೆ ಬಹುಭಾಷಾ ಸಜ್ಜನ ಸಾಹಿತಿ "ದಿ॥ಪ್ರೊ॥ ಅಬ್ದುಲ್ ಮಜೀದ್ ಖಾನ್ ರಸ್ತೆ" ಎಂದು ನಾಮಕರಣ ಮಾಡುವುದೆಂದು ದಿನಾಂಕ 19.05.2021ರಂದು ನಡೆದ ಬೃ.ಬೆಂ.ಮ.ಪಾ. ಸಭೆಯ ವಿಷಯದ ಸಂಖ್ಯೆ : 54/2021–22ರಲ್ಲಿ ತೀರ್ಮಾನಿಸಲಾಗಿದೆ. ಆದುದರಿಂದ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನಾಮಕರಣ ಮಾಡುವ ಬಗ್ಗೆ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಸಾರ್ವಜನಿಕರು ಈ ಪತ್ರಿಕಾ ಪ್ರಕಟಣೆ ಹೊರಡಿಸಲಾದ ದಿನಾಂಕದಿಂದ 30 ದಿನಗಳ ಒಳಗಾಗಿ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ನರಸಿಂಹರಾಜ ಚೌಕ, ಬೆಂಗಳೂರು – 02 ರವರಿಗೆ ಸಲ್ಲಿಸಲು ತಿಳಿಸಲಾಗಿದೆ.
ಸಹಿ/– ಜಂಟಿ ಆಯುಕ್ತರು (ಕಂದಾಯ)
"ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ"
ಕೋವಿಡ್‌-19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

REAL ESTATE SELLING
Sites
Devanahalli
SITE for sale 30x40 PC realty layout Devanahalli to Doddaballapur 5KM from Devanahalli Contact: 6360086393

BUILDERS ESSENTIAL
Water Proofing Materials
LEAKAGE... LEAKAGE... Old/New-Building, Sump, Bathroom, Wallcrack, Skylight, Terrace Waterproofing done by New-Technology-9880916988

JOB OPPORTUNITIES
Cook
COOK WANTED. South Indian veg and non vegetarian male cook for company MD residence. At Basaveshwaranagar Bangalore. Contact: 9845343184

WEEKEND CORNER
FUSION MONT™ Svasthya VITAMIN - Enriched Functional Water
Inviting Area Dealers & Experienced Sales Representatives for Retail & Corporate Sales. Contact: 9845013347

Multiple Vacancy
MSF WANTED SECURITY PERSON FOR REPUTED MNC COMPANY
SECURITY SUPERVISOR Rs. 16500/-
SECURITY GUARD / LADY GUARD - Rs. 14000/-
COMPUTER SPECIALIST - Rs. 21000/- (NEED GRAUDUATE)
Duty 8 hrs 26 Days with Weekly off. Attractive Salary, PF, ESI, Accommodation, Bus Services, Intime Salary and other benefits.
Contact Office: MODERN V R SECURITY FORCE INDIA PVT LTD. Mylanahalli (Near Airport). Mobile: 9113932721/ 7760095242 / 8884542811

Part-Time Jobs
PANDEMIC SITUATION lost job. will provide work from home earn Rs. 35K- 40K Call: 7019215243/ 9886641282

Teachers/ Professors
WANTED Computer & Subject Teachers for India Literacy Project (NGO)
Qual: B.Sc – B.Ed, B.E, MCA and M.Sc working knowledge of Computers, MS Office.
Location: Raichur, Gulbarga, Bidar, Yadgir, Koppal, Bellary & Vijayanagara
No.of Posts: 24
Send your resume/ CV to jobs@ilpnet.org

PUBLIC NOTICE
PUBLIC NOTICE
We are inviting tenders for the best Security Services / House Keeping / Landscaping / Electrical / Lift / STP Maintenance to our Provident Welworthcity Apartment, Marasandra Doddaballapura Main Road.
Interested agencies can send their quotations to below mail id before 12.06.2021 accounts@welworthcity.in

DH Classifieds
BOOK YOUR AD FOR SUNDAY & GET 50% OFF ON WEEKDAYS
For Lineage & Single/ Multi Column Classifieds Display ads
For more information contact: 9880856233 /9845114560 9886213331

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಜೈವಿಕ ತಂತ್ರಜ್ಞಾನ ಇಲಾಖೆ
ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ, ಭಾರತ ಸರ್ಕಾರ
सत्यमेव जयते
ಭಾರತದ ಪದವಿ ಪೂರ್ವ ವಿದ್ಯಾಲಯಗಳ ಸ್ಟಾರ್ ಕಾಲೇಜ್ ಸಬಲೀಕರಣ ಅಂಶಗಳು ಯೋಜನೆ ಅಡಿಯಲ್ಲಿ ಪ್ರಸ್ತಾವನೆಗಳಿಗೆ ಕರೆ.
ಜೈವಿಕ ತಂತ್ರಜ್ಞಾನ ಇಲಾಖೆ ಇವರು, ಪದವಿ ಪೂರ್ವ ವಿಜ್ಞಾನ ಶಿಕ್ಷಣದಲ್ಲಿನ ಅತ್ಯುತ್ತಮ ಬ್ರಾಂಡ್ ಮತ್ತು ಪೋಷಣೆಗಾಗಿ **'ಸ್ಟಾರ್ ಕಾಲೇಜ್' ಯೋಜನೆ** ಅಡಿಯಲ್ಲಿ ಪದವಿ ಪೂರ್ವ ಶಿಕ್ಷಣ (ಪಪೂ) ನೀಡುತ್ತಿರುವ ಎಲ್ಲಾ ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ವಿದ್ಯಾಲಯಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಕಾರ್ಯಕ್ರಮವು ವಿದ್ಯಾರ್ಥಿಗಳಿಗೆ ವಿಶೇಷ ಗಮನ ಕೇಂದ್ರಿತ ಪ್ರಾಯೋಗಿಕ ತರಬೇತಿ ನೀಡುವ ಮೂಲಕ, ಪದವಿ ಪೂರ್ವ ಹಂತದ ವಿಜ್ಞಾನ ಶಿಕ್ಷಣವನ್ನು ಸುಧಾರಿಸುವ ಒಂದು ಗಮನಾರ್ಹ ಕಾರ್ಯಕ್ರಮವಾಗಿದೆ. ಸದರಿ ಚಾಲನೆಯು (ಎ) ಶಿಕ್ಷಕರ ಪ್ರಾಥಮಿಕ ವಿಜ್ಞಾನ ಮತ್ತು ವಿಶೇಷ ತಂತ್ರಗಳ ಜ್ಞಾನ ಹಾಗೂ ತಿಳುವಳಿಕೆಯನ್ನು ಸುಧಾರಿಸಿಕೊಳ್ಳಲು (ಬಿ) ವಿದ್ಯಾರ್ಥಿಗಳಿಗೆ ಅನುಕೂಲವಾಗುವ ವಿಶೇಷ ಸೌಕರ್ಯಗಳನ್ನು ಬಳಸಿಕೊಳ್ಳಲು (ಸಿ) ವಿದ್ಯಾರ್ಥಿಗಳಿಗೆ ಅಗತ್ಯವಾದ ಬಳಕೆ ಪದಾರ್ಥಗಳು, ರಿಏಜೆಂಟ್‌ಗಳನ್ನು ಹಾಗೂ ರಸಾಯನಿಕಗಳನ್ನು ಬಳಸಿಕೊಳ್ಳಲು, (ಡಿ) ತುರ್ತು ಆಲೋಚನಾ ಪರಿಕಲ್ಪನೆಯನ್ನು ಖಚಿತಪಡಿಸಬಲ್ಲ ವಿನ್ಯಾಸ ಹಾಗೂ ಪ್ರಯೋಗಗಳಿಗೆ ಸಾಕಷ್ಟು ಅನುಭವಿಗಳನ್ನು ನಿಯೋಜಿಸಿಕೊಳ್ಳಲು, (ಇ) ಮತ್ತು ಇ–ಜರ್ನಲ್ಸ್ ಸೇರಿದಂತೆ ಪುಸ್ತಕಗಳು ಮತ್ತು ನಿಯತಕಾಲಿಕೆಗಳ ಲಭ್ಯತೆಗೆ ಸಾಕಷ್ಟು ಬೆಂಬಲ ನೀಡುತ್ತದೆ.
ಯೋಜನೆಯ ಕುರಿತಾದ ವಿವರಗಳಿಗಾಗಿ, ಸಂಬಂಧಿತ ಮಾರ್ಗಸೂಚಿಗಳಿಗಾಗಿ ಮತ್ತು ನಮೂನೆಗಾಗಿ ದಯವಿಟ್ಟು ಡಿಬಿಟಿ ವೆಬ್‌ಸೈಟ್‌ಗೆ ಭೇಟಿ ಕೊಡಿ: www.dbtindia.gov.in ಮತ್ತು ಆನ್‌ಲೈನ್ ಅರ್ಜಿ ಸಲ್ಲಿಕೆಗಾಗಿ ಸಂದರ್ಶಿಸಿ: https://www.dbtepromis.nic.in
ಸಂಪೂರ್ಣ ಭರ್ತಿ ಮಾಡಿ ಸಹಿ ಮತ್ತು ಮುದ್ರೆ ಹಾಕಿರುವ ಪ್ರಸ್ತಾವಣೆಯನ್ನು ಇಪ್ರೊಎಂಐಎಸ್ ಮೂಲಕ ದಯವಿಟ್ಟು ಇಲ್ಲಿಗೆ ರವಾನಿಸಿ:
ಡಾ. ಗರಿಮಾ ಗುಪ್ತಾ, ವಿಜ್ಞಾನಿ 'ಇ', (ಇಮೇಲ್: garima.g@nic.in) ಸ್ಟಾರ್ ಕಾಲೇಜ್ ಸ್ಕೀಮ್, ಹೆಚ್‌ಆರ್‌ಡಿ ವಿಭಾಗ, ಜೈವಿಕ ತಂತ್ರಜ್ಞಾನ ಇಲಾಖೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ, ಬ್ಲಾಕ್–3, 5ನೇ ಮಹಡಿ, ಸಿಜಿಓ ಕಾಂಪ್ಲೆಕ್ಸ್, ಲೋಧಿ ರಸ್ತೆ, ನವದೆಹಲಿ–110003
davp36301/11/0006/2122
ಪ್ರಸ್ತಾವನೆಗಳನ್ನು ಸಲ್ಲಿಸುವ ಅಂತಿಮ ದಿನಾಂಕವನ್ನು 15ನೇ ಜೂನ್, 2021 ರವರೆಗೆ ವಿಸ್ತರಿಸಲಾಗಿದೆ.
ದೂರ ಪ್ರದೇಶದ ಮತ್ತು ಮಹತ್ವಾಕಾಂಕ್ಷಿ ಜಿಲ್ಲೆಗಳಿಂದ ಪ್ರಸ್ತಾವನೆಗಳನ್ನು ಸ್ವೀಕರಿಸುವ ಅಂತಿಮ ದಿನಾಂಕವನ್ನು 30ನೇ ಜೂನ್, 2021 ರವರೆಗೆ ವಿಸ್ತರಿಸಲಾಗಿದೆ.

ಮಗು ಸಾವು: ಸಂಘಟನೆಗಳ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: 'ಮಹಿಳೆಗೆ ಸೂಕ್ತ ಸಮಯಕ್ಕೆ ಚಿಕಿತ್ಸೆ ದೊರಕದೆ ಮಗು ಮೃತಪಟ್ಟಿದೆ. ತಾಯಿ ತುಮಕೂರಿನ ಖಾಸಗಿ ಆಸ್ಪತ್ರೆಯಲ್ಲಿ ಸಾವು ಬದುಕಿನ ನಡುವೆ ಹೋರಾಡುತ್ತಿದ್ದಾರೆ. ಇದಕ್ಕೆ ದಾಬಸ್ ಪೇಟೆ ವೈದ್ಯರ ನಿರ್ಲಕ್ಷವೇ ಕಾರಣ' ಎಂದು ವಿವಿಧ ಸಂಘಟನೆಗಳ ಕಾರ್ಯಕರ್ತರು ಆಸ್ಪತ್ರೆ ಮುಂದೆ ಶುಕ್ರವಾರ ಪ್ರತಿಭಟನೆ ನಡೆಸಿದರು.

ಅನ್ಯಾಯಕ್ಕೆ ಒಳಗಾದ ಕುಟುಂಬಕ್ಕೆ ಪರಿಹಾರ ನೀಡಬೇಕು ಮತ್ತು ನಿರ್ಲಕ್ಷ್ಯ ವಹಿಸಿದವರ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಳ್ಳಬೇಕು ಎಂದು ಸ್ಥಳದಲ್ಲಿದ್ದ ಪ್ರತಿಭಟನಕಾರರು ಆಗ್ರಹಿಸಿದರು.

ಒಡಿಶಾದ ಕೂಲಿ ಕಾರ್ಮಿಕರಾದ ಸುಜಾ (22) ಅವರ ಮಗು ಹೊಟ್ಟೆಯಲ್ಲೇ ಮೃತಪಟ್ಟಿದ್ದು, ಶಸ್ತ್ರ ಚಿಕಿತ್ಸೆಯ ಮೂಲಕ ಮಗುವನ್ನು ಹೊರ ತೆಗೆಯಲಾಗಿದ್ದು, ತಾಯಿ ಪ್ರಜ್ಞಾಹೀನ ಸ್ಥಿತಿಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸ್ಥಳಕ್ಕೆ ಭೇಟಿ: ಪ್ರತಿಭಟನಾ ಸ್ಥಳಕ್ಕೆ ಶಾಸಕ ಡಾ.ಶ್ರೀನಿವಾಸಮೂರ್ತಿ, ಜಿಲ್ಲಾ ಆರೋಗ್ಯಾಧಿಕಾರಿ ತಿಪ್ಪೇಸ್ವಾಮಿ, ತಾಲ್ಲೂಕು ವೈದ್ಯಾಧಿಕಾರಿ ಹರೀಶ್ ಭೇಟಿ ನೀಡಿ ಪರಿಶೀಲಿಸಿದರು.

ಕ್ರಮಕ್ಕೆ ಭರವಸೆ: ಘಟನೆಯಲ್ಲಿ ನಿರ್ಲಕ್ಷ್ಯ ವಹಿಸಿದವರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಶಾಸಕರು ಭರವಸೆ ನೀಡಿದರು.

ಹೊತ್ತಿ ಉರಿದ ಕಾರು: ಮೂವರ ಸಾವು

ಪ್ರಜಾವಾಣಿ ವಾರ್ತೆ

ಹಲಗೂರು (ಮಂಡ್ಯ): ಮಳವಳ್ಳಿ ತಾಲ್ಲೂಕಿನ ಹಲಗೂರು ಬಳಿ ಶುಕ್ರವಾರ ನಸುಕಿನಲ್ಲಿ ಹಳ್ಳಕ್ಕೆ ಉರುಳಿ ಬಿದ್ದ ಕಾರಿನಲ್ಲಿ ಬೆಂಕಿ ಕಾಣಿಸಿಕೊಂಡು, ಅದರಲ್ಲಿ ಪ್ರಯಾಣಿಸುತ್ತಿದ್ದ ತಂದೆ ಹಾಗೂ ಇಬ್ಬರು ಮಕ್ಕಳು ಸಜೀವವಾಗಿ ದಹನಗೊಂಡಿದ್ದಾರೆ. ಇಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಷೇಕ್ ಫೈಸಲ್ (44), ಇವರ ಮಗಳು ಸುಹಾನಾ (12), ಮಗ ಷೇಕ್ ಐಹಿಲ್ (6) ಮೃತಪಟ್ಟವರು. ಷೇಕ್ ಫೈಸಲ್ ಪತ್ನಿ ಮೆಹಕ್ (33), ಮತ್ತೊಬ್ಬ ಪುತ್ರಿ ಮಹೈರಾ (11) ತೀವ್ರವಾಗಿ ಗಾಯಗೊಂಡಿದ್ದು, ಚಿಕಿತ್ಸೆಗಾಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಈ ಕುಟುಂಬದ ಸದಸ್ಯರು ಬೆಂಗಳೂರಿನ ಕೆ.ಜಿ.ಹಳ್ಳಿ ನಿವಾಸಿಗಳಾಗಿದ್ದು, ಕೊಳ್ಳೇಗಾಲದ ಬಳಿ ಇರುವ ಸ್ನೇಹಿತರ ಫಾರಂ ಹೌಸ್‌ಗೆ ತೆರಳಿದ್ದರು. ಅಲ್ಲಿಂದ ಬೆಂಗಳೂರಿಗೆ ಹಿಂದಿರುಗುವಾಗ ಈ ಅವಘಡ ನಡೆದಿದೆ. ಷೇಕ್ ಫೈಸಲ್ ಬೆಂಗಳೂರಿನಲ್ಲಿ ಸಿವಿಲ್ ಗುತ್ತಿಗೆದಾರರಾಗಿದ್ದು, ಅವರೇ ಕಾರು ಚಲಾಯಿಸುತ್ತಿದ್ದರು. ಹಲಗೂರು ಪಟ್ಟಣದ ಪೆಟ್ರೋಲ್ ಬಂಕ್ ಬಳಿ ಚಾಲಕನ ನಿಯಂತ್ರಣ ತಪ್ಪಿದ ಕಾರು. ರಸ್ತೆ ಪಕ್ಕದ ಕಲ್ಲಿಗೆ ಡಿಕ್ಕಿ ಹೊಡೆದು ಹಳ್ಳಕ್ಕೆ ಉರುಳಿದೆ. ಹಳ್ಳಕ್ಕೆ ಬಿದ್ದ ತಕ್ಷಣ ಬೆಂಕಿ ಹೊತ್ತಿಕೊಂಡಿದೆ. ಮೂವರು ಸಜೀವ ದಹನವಾಗಿದ್ದು, ಸ್ಥಳೀಯರು ಇಬ್ಬರ ಪ್ರಾಣ ರಕ್ಷಿಸಿದ್ದಾರೆ.

रजिस्ट्री सं. डी.एल. 33004/99 REGD. NO. D. L.-33004/99

भारत का राजपत्र
The Gazette of India

सी.जी.-डी.एल.-अ.-10052021-226941
CG-DL-E-10052021-226941

असाधारण
EXTRAORDINARY

भाग II-खण्ड 3-उप-खण्ड (ii)
PART II—Section 3—Sub-section (ii)

प्राधिकार से प्रकाशित
PUBLISHED BY AUTHORITY

सं. 1688] नई दिल्ली, सोमवार, मई 10, 2021/वैशाख 20, 1943
No. 1688] NEW DELHI, MONDAY, MAY 10, 2021/VAISAKHA 20, 1943

ಸಾರ್ವಜನಿಕ ಪ್ರಕಟಣೆ

ಭಾರತ ರಾಷ್ಟ್ರೀಯ ಹೆದ್ದಾರಿ ಕಾಯ್ದೆ, 1956 ಪರಿಚ್ಛೇದ 3(ಡಿ)(1) ಮತ್ತು (2) (48/1956) (ಇದನ್ನು ಇಲ್ಲಿ ಇನ್ನು ಮುಂದೆ ಸದರಿ ಕಾಯ್ದೆ ಎಂದು ಪ್ರಸ್ತಾಪಿಸಲಾಗುವುದು) ಅನ್ವಯ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಅಧಿಸೂಚನೆ ಸಂಖ್ಯೆ ಎಸ್.ಓ. 1815(ಇ) ದಿನಾಂಕ: 10.05.2021 ಅನುಸಾರ, ಕರ್ನಾಟಕ ರಾಜ್ಯದಲ್ಲಿನ ತುಮಕೂರು ಜಿಲ್ಲೆಯಲ್ಲಿ ಕಿ.ಮೀ. 6.000 ರಿಂದ ಕಿ.ಮೀ. 45.500 (ತುಮಕೂರು–ಶಿವಮೊಗ್ಗ ವಿಭಾಗ)ದವರೆಗಿನ ಜಮೀನಿನಲ್ಲಿ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 206ರ ನಿರ್ಮಾಣ (ಅಗಲೀಕರಣ / ಚತುಷ್ಪಥ ಇತ್ಯಾದಿ), ನಿರ್ವಹಣೆ, ವ್ಯವಸ್ಥಾಪನೆ ಮತ್ತು ಕಾರ್ಯಾಚರಣೆ ಉದ್ದೇಶಕ್ಕಾಗಿ ಈ ಕೆಳಗೆ ತಿಳಿಸಿರುವ ಷೆಡ್ಯೂಲ್‌ನಲ್ಲಿ ಸೂಚಿಸಿರುವ ಜಮೀನುಗಳನ್ನು ಸ್ವಾಧೀನ ಪಡಿಸಿಕೊಂಡಿದೆ.

ಮುಂದುವರಿದಂತೆ, ಸದರಿ ಕಾಯ್ದೆಯ ಪರಿಚ್ಛೇದ 3ಡಿ (1)ರ, ಉಪ–ಕಲಂ (2)ರ ಅನುಸಾರ ಕೇಂದ್ರ ಸರ್ಕಾರವು ಈ ಮೂಲಕ ಘೋಷಿಸುವುದೇನೆಂದರೆ ಅಧಿಕೃತ ಗೆಜೆಟ್‌ನಲ್ಲಿ ಅಧಿಸೂಚನೆ ಪ್ರಕಟವಾದ ದಿನದಿಂದ ಸದರಿ ಷೆಡ್ಯೂಲ್‌ನಲ್ಲಿ ತಿಳಿಸಿರುವ ಜಮೀನು ಯಾವುದೇ ಋಣಭಾರವಿಲ್ಲದೆ ಕೇಂದ್ರ ಸರ್ಕಾರದ ಸಂಪೂರ್ಣ ಸುಪರ್ದಿಗೆ ಒಳಪಟ್ಟಿರುತ್ತದೆ. ಆದ ಕಾರಣ ರಾಷ್ಟ್ರೀಯ ಹೆದ್ದಾರಿಗಳ ಕಾಯ್ದೆ 1956 ರ ಪರಿಚ್ಛೇದ 3(ಜಿ)(1)(2)(3) ಮತ್ತು (4) ರ (48/1956) ಉಪಬಂಧಗಳು ಮತ್ತು ತಿದ್ದುಪಡಿ ಕಾಯ್ದೆ 1997 ರ ಅನ್ವಯ ಭೂ ಮಾಲೀಕರು ಮತ್ತು ಇತರೆ ಆಸಕ್ತಿಯುಳ್ಳ ವ್ಯಕ್ತಿಗಳಿಗೆ ಈ ಮೂಲಕ ತಿಳಿಸುವುದೇನೆಂದರೆ ಮೇಲೆ ತಿಳಿಸಿದ ಉದ್ದೇಶಕ್ಕೆ ಯಾರ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆಯೋ ಅಂತಹ ಜಮೀನು ಮಾಲೀಕರು ಮತ್ತು ಹಿತಾಸಕ್ತಿಯುಳ್ಳವರು ಕೇಂದ್ರ ಸರ್ಕಾರಕ್ಕೆ ಸ್ವಾಧಿನಪಡಿಸಿಕೊಂಡಿರುವ ಅವರ ಜಮೀನಿಗೆ ಪರಿಹಾರಧನ ನಿರ್ಧರಿಸಿ ಪಾವತಿ ಮಾಡುವ ಸಲುವಾಗಿ ಸಂಬಂಧಪಟ್ಟ ದಾಖಲೆ ಪತ್ರಗಳ ಪ್ರತಿಗಳನ್ನು ಜೊತೆಗೆ ಅಂದರೆ (1) ಮಾರಾಟ/ವಿಭಾಗ/ಇತರೆ ಹಕ್ಕುಪತ್ರಗಳು, (2) ತಹಲ್‌ವರೆಗಿನ ಆರ್.ಟಿ.ಸಿ.ಗಳು/ಪಂಚಾಯತ್ ಖಾತಾ ಉದ್ಧೃತ ಮತ್ತು ಪಂಚಾಯತ್ ಪರವಾನಗಿ ಮತ್ತು ಅನುಮೋದಿತ ನಕ್ಷೆ (3) ಮ್ಯೂಟೇಶನ್ (4) ಕಂದಾಯ ಪಾವತಿ ರಶೀದಿಗಳು (5) 13 ವರ್ಷಗಳ ಇಸಿ (6) ಭೂ ಮಂಜೂರಾತಿ ಆದೇಶಗಳು (7) ಬೇರೆ ಉದ್ದೇಶಕ್ಕಾಗಿ ಭೂ ಪರಿವರ್ತನೆಯ ಅದೇಶಗಳು ಮತ್ತು ಅನುಮೋದಿತ ನಕ್ಷೆ (8) ಸಾಗುವಳಿ ಚೀಟಿಯ ಪ್ರತಿ (9) ಆಕಾರ್‌ಬಂದ್ ಪ್ರತಿ (10) ಭೂಮಾಲೀಕರು ಪ.ಜಾ/ಪ.ಪಂ ಇತ್ಯಾದಿಗೆ ಸೇರಿದವರು ಎಂಬುದಕ್ಕೆ ತಹಸೀಲ್ದಾರರಿಂದ ಪಡೆದ ಜಾತಿ ಪ್ರಮಾಣ ಪತ್ರ ಇತ್ಯಾದಿಯೊಡನೆ ಖುದ್ದಾಗಿ ಅಥವಾ ತಮ್ಮ ವಕೀಲರ ಮುಖೇನ ಈ ಕೆಳಗೆ ತಿಳಿಸಿರುವ ಸ್ಥಳ ಮತ್ತು ದಿನಾಂಕಗಳಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ, ತುಮಕೂರು–ಹೊನ್ನವಾರ ವಿಭಾಗ, ರಾ.ಹೆ.–206, ತುಮಕೂರು, ಸಪ್ತಗಿರಿ ಬಡಾವಣೆ, 60 ಅಡ್ಡಿ ರಸ್ತೆ, 5 ನೇ ಕ್ರಾಸ್, ಬೆಟ್ಟ ಶ್ರೀ ಕಾಂಪ್ಲೆಕ್ಸ್, ಅಮೆಜಾನ್ ಆಫೀಸ್ ಮೇಲೆ 1 ನೇ ಮಹಡಿ, ತುಮಕೂರು 572102.

ಭೂಮಾಲೀಕರು / ಹಿತಾಸಕ್ತಿಯುಳ್ಳವರು ಅವರ ಬೇಡಿಕೆಗಳನ್ನು ಸಲ್ಲಿಸುವ ಸ್ಥಳ ಮತ್ತು ವಿಚಾರಣೆ ಸ್ಥಳ	ವಿಚಾರಣೆ ದಿನಾಂಕ ಮತ್ತು ಸಮಯ	ತಾಲ್ಲೂಕು ಮತ್ತು ಗ್ರಾಮಗಳ ಹೆಸರು
ವಿಶೇಷ ಭೂಸ್ವಾಧೀನಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರ, ತುಮಕೂರು–ಶಿವಮೊಗ್ಗ ಯೋಜನೆ, ರಾಷ್ಟ್ರೀಯ ಹೆದ್ದಾರಿ–206, ಬೆಟ್ಟಶ್ರೀ ಕಾಂಪ್ಲೇಕ್ಸ್, ತುಮಕೂರು, 1ನೇ ಮಹಡಿ, ಅಮೇಜಾನ್ ಆಫೀಸ್ ಮೇಲೆ, 5ನೇ ಕ್ರಾಸ್, 60 ಅಡಿ ರಸ್ತೆ, ಸಪ್ತಗಿರಿ ಬಡಾವಣೆ, ತುಮಕೂರು–572102	21–06–2021 ಬೆಳಗ್ಗೆ 11.00 ಗಂಟೆಯಿಂದ ರಿಂದ ಸಂಜೆ 04.00 ಗಂಟೆಯವರೆಗೆ	**ತಾಲ್ಲೂಕು: ಗುಬ್ಬಿ** ಗ್ರಾಮ: 1. ಬಾಬಿಗಾನಹಳ್ಳಿ, 2. ದೊಡ್ಡಗುಣಿ, 3. ಹರಿವೇಸಂದ್ರ, 4. ಕಳ್ಳಿಪಾಳ್ಯ, 5. ಕುಂದರನಹಳ್ಳಿ, 6. ಮೂಕನಹಳ್ಳಿ ಪಟ್ಟಣ ಅಮಾನಿಕರೆ, 7. ಮೂದಿಗೆರೆ, 8. ಎನ್.ಮತ್ತಿಘಟ್ಟ, 9. ನಿಟ್ಟೂರು, 10. ನಿಟ್ಟೂರು ಅಮಾನಿಕರೆ, 11. ರಾಯಾವರ, 12. ಯಲ್ಲಪುರ **ತಾಲ್ಲೂಕು: ತುಮಕೂರು** ಗ್ರಾಮ: 1. ಕೋಟ್ನಹಳ್ಳಿ, 2. ಪೆರಮನಹಳ್ಳಿ

ಸಹಿ/– ನಟರಾಜ.ಜಿ.ಆರ್. ಕೆ.ಎ.ಎಸ್.,
ವಿಶೇಷ ಭೂಸ್ವಾಧೀನಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರ, ತುಮಕೂರು–ಶಿವಮೊಗ್ಗ ಯೋಜನೆ,
ರಾಷ್ಟ್ರೀಯ ಹೆದ್ದಾರಿ–206, ಬೆಟ್ಟಶ್ರೀ ಕಾಂಪ್ಲೇಕ್ಸ್, ತುಮಕೂರು, 1ನೇ ಮಹಡಿ,
ಅಮೇಜಾನ್ ಆಫೀಸ್ ಮೇಲೆ, 5ನೇ ಕ್ರಾಸ್, 60 ಅಡಿ ರಸ್ತೆ, ಸಪ್ತಗಿರಿ ಬಡಾವಣೆ, ತುಮಕೂರು–572102

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ
ಅಧಿಸೂಚನೆ
ನವದೆಹಲಿ, 10ನೇ ಮೇ 2021

ಎಸ್.ಓ. 1815(ಇ).– ಭಾರತ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯವು ಅನುಸೂಚಿಯಲ್ಲಿನ ವಿಸ್ತರಿಸಿರುವ ಜಮೀನುಗಳನ್ನು ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆಯಲ್ಲಿರುವ ರಾಷ್ಟ್ರೀಯ ಹೆದ್ದಾರಿ ನಂ 206 ರಲ್ಲಿ ಕಿ.ಮೀ. 6.000 ರಿಂದ ಕಿ.ಮೀ. 45.500 ರವರೆಗೆ (ತುಮಕೂರು – ಶಿವಮೊಗ್ಗ ವಿಭಾಗ) ಕಟ್ಟಡ ನಿರ್ಮಾಣ, (ಅಗಲೀಕರಣ, ನಾಲ್ಕು–ಪಥ ಇತ್ಯಾದಿ), ಸಂರಕ್ಷಣೆ, ಕಾರ್ಯನಿರ್ವಹಣೆ ಮತ್ತು ಕಾರ್ಯಪ್ರಕ್ರಿಯೆ ಮಾಡುವ ಸಲುವಾಗಿ ಭೂಸ್ವಾಧೀನಪಡಿಸಿಕೊಳ್ಳುವುದು ಅವಶ್ಯವಾಗಿರುತ್ತದೆಂದು ಇಚ್ಚಿಸಿ ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956 ರ 48) ರ ಕಲಂ 3ಎ (1)ರ ಪ್ರಕಾರ (ಇನ್ನು ಮುಂದೆ ಮೇಲೆ ಉಲೇಖಿಸಲ್ಪಟ್ಟ ಕಾಯಿದೆ) ವಿಶೇಷ ಗೆಜೆಟ್ ಭಾಗ 2, ಸೆಕ್ಷನ್ 3 ಮತ್ತು ಸಬ್ ಸೆಕ್ಷನ್ (ಖ) ರಂತೆ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ ಎಸ್.ಓ. 49 (ಇ) ದಿನಾಂಕ: 05ನೇ ಜನವರಿ 2021 ಮೂಲಕ ಘೋಷಿಸಲಾಗಿತ್ತು.

ಈ ಕಾಯಿದೆ ಸೆಕ್ಷನ್ 3(ಎ)ರ ಸಬ್ ಸೆಕ್ಷನ್ 3ರಂತೆ ಅಧಿಸೂಚನೆಯನ್ನು ಪ್ರಜಾವಾಣಿ (ಕನ್ನಡ) ಮತ್ತು ದಿ ಹಿಂದೂ (ಇಂಗ್ಲಿಷ್) ದಿನಪತ್ರಿಕೆಗಳಲ್ಲಿ ದಿನಾಂಕ: 19ನೇ ಫೆಬ್ರವರಿ 2021 ರಂದು ಪ್ರಕಟಿಸಲಾಗಿರುತ್ತದೆ.

ಈ ಪ್ರಕಾರ ತಕರಾರುಗಳು ಸ್ವೀಕೃತವಾಗಿದ್ದು ಅ ತಕರಾರುಗಳನ್ನು ಸಕ್ಷಮ ಪ್ರಾಧಿಕಾರಿವರು ಪರಿಗಣಿಸಿ ವಿಚಾರಣೆ ನಂತರ ಅರ್ಜಿಗಳನ್ನು ತಿರಸ್ಕರಿಸಿ ಅದೇಶ ಮಾಡಲಾಗಿರುತ್ತದೆ. ಆದ್ದರಿಂದ ಈಗ ಕೇಂದ್ರ ಸರ್ಕಾರವು ಸಕ್ಷಮ ಪ್ರಾಧಿಕಾರಿಗಳ ವರದಿಯನ್ನು ಆಧರಿಸಿ ಸಬ್–ಸೆಕ್ಷನ್ 3ಡಿ (1) ರಲ್ಲಿರುವ ಅಧಿಕಾರವನ್ನು ಚಲಾಯಿಸಿ ಅಧಿಸೂಚನೆಯಲ್ಲಿ ಹೇಳಲಾದ ಉದ್ದೇಶಕ್ಕೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದು ಈ ಮೂಲಕ ಘೋಷಿಸಿದೆ.

ಇನ್ನೂ ಮುಂದೆ ಇದೇ ಕಾಯ್ದೆ ಸೆಕ್ಷನ್ 3ಡಿ (2) ರಂತೆ ಈ ಅಧಿಸೂಚನೆಯು ಗೆಜೆಟ್‌ನಲ್ಲಿ ಪ್ರಕಟಣೆಯಾದ ದಿನಾಂಕದಿಂದ ಅನ್ವಯವಾಗುವಂತೆ ಭೂಸ್ವಾಧೀನಕ್ಕೆ ಒಳಪಟ್ಟಿರುವ ಜಮೀನುಗಳು ಎಲ್ಲಾ ಋಣಭಾರಗಳಿಂದ ಮುಕ್ತವಾಗಿ ಕೇಂದ್ರ ಸರ್ಕಾರದಲ್ಲಿ ವಿಹಿತವಾಗಿದ್ದು, ಕೇಂದ್ರ ಸರ್ಕಾರದ ಸ್ವಾಧೀನಕ್ಕೆ ಒಳಪಟ್ಟಿರುತ್ತದೆ ಎಂದು ಘೋಷಿಸಲಾಗಿದೆ.

ಅನುಸೂಚಿ

ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆಯಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ 206 (ತುಮಕೂರು – ಶಿವಮೊಗ್ಗ ವಿಭಾಗ) ರಲ್ಲಿ ಕಿ.ಮೀ. 6.000 ರಿಂದ ಕಿ.ಮೀ. 45.500 ರವರೆಗೆ ರೂಪಿತಗಳ ಸಹಿತ ಅಥವಾ ರೂಪಿತಗಳ ರಹಿತ ಭೂಸ್ವಾಧೀನಗೊಳಿಸಿರುವ ಜಮೀನುಗಳ ಸಂಕ್ಷಿಪ್ತ ವಿವರಣೆ

ರಾಜ್ಯ: ಕರ್ನಾಟಕ — ಜಿಲ್ಲೆ: ತುಮಕೂರು

ಕ್ರಮ ಸಂಖ್ಯೆ	ಸರ್ವೇ ನಂ	ಭೂಮಿಯ ಸ್ವರೂಪ	ಭೂಮಿಯ ತರಹೆ	ವಿಸ್ತೀರ್ಣ (ಚ.ಮೀ ಗಳಲ್ಲಿ)	ಆಸಕ್ತಿಯುಳ್ಳ ವ್ಯಕ್ತಿಯ ಹೆಸರು / ಜಮೀನಿನ ಖಾತೆದಾರರ ಹೆಸರು
1	2	3	4	5	6
ತಾಲ್ಲೂಕು: ಗುಬ್ಬಿ					
ಗ್ರಾಮ: ಬಾಬಿಗಾನಹಳ್ಳಿ					
1	2	ಖಾಸಗಿ	ಖುಷ್ಕಿ	380	ಎನ್.ವಿ ಸದಾಶಿವ ರಾವ್ ಬಿನ್ ವೆಂಕಟ ರಾವ್, ಎನ್.ವಿ.ನಾಗರಾಜು ಬಿನ್ ವೆಂಕಟ ರಾವ್, ಕೆ.ಎಸ್.ರಾಜಲಕ್ಷ್ಮಿ ಬಿನ್ ವೆಂಕಟ ರಾವ್, ಎನ್.ವಿ.ವಾಸುದೇವ ರಾವ್ ಬಿನ್ ವೆಂಕಟ ರಾವ್, ಎಸ್.ವಿ.ರಾಘವೇಂದ್ರ ಬಿನ್ ವೆಂಕಟ ರಾವ್, ಎನ್.ಕೆ. ದಯಾನಂದ, ಬಿನ್ ಲೇಟ್ ಕೆಂಪಣ್ಣ, ಕಾವೇರಿ ನೀರಾವರಿ ನಿಗಮ ಅವರಿಂದ ಭೂಸ್ವಾಧೀನ ಶಶಿಕಲಾ ಬಿನ್ ಲೇಟ್ ಎನ್.ಕೆ.ಶಿವರಾಮಯ್ಯ, ಸಿದ್ದೇಶ್ ಎನ್.ಕೆ. ಬಿನ್ ಲೇಟ್ ಎನ್.ಕೆ.ಶಿವರಾಮಯ್ಯ, ಅಂಜನೇನಯ ಸ್ವಾಮಿ ದೇವಾಲಯ
2	3	ಖಾಸಗಿ	ತರಿ	710	ಗೌರಮ್ಮ ಕೋಂ ಸೋಮೇಶ್ವರಯ್ಯ, ಕಾವೇರಿ ನೀರಾವರಿ ನಿಗಮ ಅವರಿಂದ ಭೂಸ್ವಾಧೀನ
3	4/1	ಖಾಸಗಿ	ತರಿ	280	ಎನ್.ಎಚ್ ತಿಮ್ಮಪ್ಪ ಬಿನ್ ಹುಚ್ಚಪ್ಪ
4	4/2	ಖಾಸಗಿ	ತರಿ	327	ಎನ್.ಎಸ್ ವಹೀಲೇಶ್ವರ ಬಿನ್‌ಸದಾಶಿವಯ್ಯ
5	4/3	ಖಾಸಗಿ	ತರಿ	445	ಎನ್.ಸಿ ಸಿದ್ದಗಂಗಮ್ಮ ಕೋಂ ನಂಜಪ್ಪ
6	5/1A	ಖಾಸಗಿ	ತರಿ	985	ಎನ್.ಎಚ್. ರಂಗಸ್ವಾಮಯ್ಯ ಬಿನ್ ಹುಚ್ಚ ರಂಗಯ್ಯ, .ಹೆಚ್ ರಾಮಚಂದ್ರ ಯ್ಯ ಹುಚ್ಚ ರಂಗಯ್ಯ, ಎನ್.ಎಚ್ ಕೃಷ್ಣಯ್ಯ ಬಿನ್ ಹುಚ್ಚ ರಂಗಯ್ಯ, ರಂಗಸ್ವಾಮಯ್ಯ ಬಿನ್ ಶಿವಣ್ಣ, ಎಸ್.ನಟರಾಜು ಬಿನ್ ನರಸಿಂಹಯ್ಯ, ರಂಗಸ್ವಾಮಯ್ಯ ಬಿನ್ ಲೇಟ್ ಶಿವಣ್ಣ.
7	5/3A	ಖಾಸಗಿ	ತರಿ	280	ಗಂಗಮ್ಮ ಕೋಂ ಲೇಟ್ ಬಸವಣ್ಣ
8	5/3B	ಖಾಸಗಿ	ತರಿ	171	ಎನ್.ಆರ್.ಕೃಷ್ಣ ಮೂರ್ತಿ ಬಿನ್ ರಂಗಯ್ಯ, ಆರ್. ಜಯಾನಂದನ್ಬಿನ್ ರಂಗಯ್ಯ, ಕಾವೇರಿ ನೀರಾವರಿ ನಿಗಮ ಸ್ವಾಧೀನಪಡಿಸಿಕೊಂಡ ಭೂಮಿ
9	5/4	ಖಾಸಗಿ	ತರಿ	428	ಓಂಕರ್ ಮೂರ್ತಿ ಬಿನ್ ಲೇಟ್ ರುದ್ರಯ್ಯ, ಗಂಗಮ್ಮ ಕೋಂ ಲೇಟ್ ಬಸವಣ್ಣ
10	5/5	ಖಾಸಗಿ	ತರಿ	39	ಭೀಮಣ್ಣ ಬಿನ್ ಹನುಮಂತಯ್ಯ, ನರಸಿಂಹಮೂರ್ತಿ ಬಿನ್ ಹನುಮಂತಯ್ಯ.
11	5/6	ಖಾಸಗಿ	ತರಿ	444	ಜಯಮ್ಮ ಕೋಂ ಲೇಟ್ ಚಿಕಣ್ಣ
12	5/7	ಖಾಸಗಿ	ತರಿ	813	ನಂಜಪ್ಪ ಬಿನ್ ಶಿವಣ್ಣ
ಗ್ರಾಮ: ದೊಡ್ಡಗುಣಿ					
13	149/1B2A	ಖಾಸಗಿ	ಖುಷ್ಕಿ	1518	ಲಕ್ಷ್ಮಮ್ಮ ಕೋಂ ಲೇಟ್ ಎಚ್.ರಂಗಪ್ಪ
14	149/1A	ಖಾಸಗಿ	ಖುಷ್ಕಿ	809	ಡಿ.ಎಸ್.ಕಿಲಾಸಂ ಬಿನ್ ಸದಾಶಿವಯ್ಯ, ಡಿ.ಎಸ್.ರುದ್ರಪ್ಪ ಬಿನ್ ಸದಾಶಿವಯ್ಯ, ಡಿ.ಎಸ್. ಕರಿಬಸವಯ್ಯ ಬಿನ್ ಸದಾಶಿವಯ್ಯ, ಡಿ.ಎಸ್.ಕುಮಾರಸ್ವಾಮಿ ಬಿನ್ ಸದಾಶಿವಯ್ಯ, ಡಿ.ಎಸ್.ಹೊನ್ನರಂಗಪ್ಪ ಬಿನ್ ಷಡಕ್ಷರಯ್ಯ ಸಿದ್ದರಾಮಯ್ಯ ಬಿನ್ ಸದಾಶಿವಯ್ಯ
15	149/2B	ಖಾಸಗಿ	ಖುಷ್ಕಿ	607	ಲಕ್ಷ್ಮೀನಾರಾಯಣ ಬಿನ್ ವೆಂಕಟರಾಮಯ್ಯ
16	151/5	ಖಾಸಗಿ	ಖುಷ್ಕಿ	1012	ನಾಗರಾಜಯ್ಯ ಬಿನ್ ಶಿವಣ್ಣ, ಸಿದ್ದರಾಮಯ್ಯ, ಶಿವಣ್ಣ, ಸಿದ್ದರಾಮಣ್ಣ ಬಿನ್ ಸಿದ್ದಪ್ಪ
17	19	ಖಾಸಗಿ	ಪ್ಲಾಂಟೇಷನ್	202	ಸಿದ್ದಮ್ಮ ಕೋಂ ಸಿದ್ದಲಿಂಗಪ್ಪ, ಡಿ.ವಿ.ದಕ್ಷಿಣಾಮೂರ್ತಿ ಬಿನ್ ವೀರಥಯ್ಯ, ಡಿ.ವಿ.ಚಂದ್ರಶೇಖರಯ್ಯ ಬಿನ್ ಲೇಟ್ ವೀರ್ಥಯ್ಯ
18	20	ಖಾಸಗಿ	ಪ್ಲಾಂಟೇಷನ್	177	ಮರುಳ ಸಿದ್ದಪ್ಪ ಬಿನ್ ಎಸ್.ಸಿದ್ಧಲಿಂಗಪ್ಪ
19	21	ಖಾಸಗಿ	ತರಿ	101	ಡಿ.ಎಸ್.ಜಗದೀಶ್ ಬಿನ್ ಲೇಟ್ ಡಿ.ಸಿ. ಶಂಭು ರುದ್ರಯ್ಯ, ಡಿ.ಎಸ್.ರಾಜ್‌ಕುಮಾರ್ ಬಿನ್ ಲೇಟ್ ಡಿಸಿ ಶಂಭು ರುದ್ರಯ್ಯ,
20	26	ಖಾಸಗಿ	ಭಾಗಯ್ತು	2023	ಡಿಸಿ ಶಂಭು ರುದ್ರಯ್ಯ ಬಿನ್ ಲೇಟ್ ಚಿಕ್ಕ ರುದ್ರಪ್ಪ, ಡಿ.ಎಸ್.ಜಗದೀಶ್ ಬಿನ್ ಲೇಟ್ ಡಿ.ಸಿ ಶಂಭು ರುದ್ರಯ್ಯ, ಆರ್.ಕುಮಾರ್ ಬಿನ್ ಲೇಟ್ ಡಿ.ಸಿ ಶಂಭು ರುದ್ರಯ್ಯ, ಡಿ.ಸಿ ಚನ್ನಬಸಪ್ಪ ಬಿನ್ ಲೇಟ್ ಸಂಗಪ್ಪ, ಶಿವಮ್ಮ ಕೋಂ ಲೇಟ್ ಜಿ. ಕರಿಬಸವಯ್ಯ ಜಯದೇವಯ್ಯ ಬಿನ್ ಮಲ್ಲಪ್ಪ, ಕರಿಬಸಮ್ಮ ಕೋಂ ಲೇಟ್ ಮಹಾದೇವಯ್ಯ.
ಗ್ರಾಮ: ಹರಿವೇಸಂದ್ರ					
21	65/1	ಖಾಸಗಿ	ಖುಷ್ಕಿ	1500	ಈಶ್ವರಯ್ಯ ಬಿನ್ ಬಸವೇಗೌಡ
22	65/2	ಖಾಸಗಿ	ಖುಷ್ಕಿ	404	ಶಿವಮ್ಮ ಕೋಂ ಲೇಟ್ ಸಿದ್ದ ನಂಜಪ್ಪ
23	73/1	ಖಾಸಗಿ	ಖುಷ್ಕಿ	202	ಈಶ್ವರಯ್ಯ ಬಿನ್ ಬಸವೇಗೌಡ
ಗ್ರಾಮ: ಕಳ್ಳಿಪಾಳ್ಯ					
24	22/1	ಖಾಸಗಿ	ಎನ್.ಎ.ಕೆ.	150	ಬಿ.ಎಚ್. ಚಂದ್ರಶೇಖರ್ ಬಿನ್ ಬಿ.ಎಸ್.ರಂಗನಾಥ್
25	22/3	ಖಾಸಗಿ	ಎನ್.ಎ.ಕೆ.	100	ಟಿ.ಜಿ.ಚಂದ್ರಶೇಖರ್ ಬಿನ್ ಟಿ.ಎಸ್.ಜಗನ್ನಾಥ್
ಗ್ರಾಮ: ಕುಂದರನಹಳ್ಳಿ					
26	16	ಸರ್ಕಾರಿ (ಖಾಸಗಿ)	ಖರಾಬು / ಖುಷ್ಕಿ	3333	ಸರ್ಕಾರಿ, ಕೆ.ಎನ್. ರಾಮಲಿಂಗಯ್ಯ ಬಿನ್ ಕೆ.ಎಸ್.ನಂಜುಡಯ್ಯ ಕೆ.ಎಸ್.ಹಾರುಸ್ವಾಮಿ ಬಿನ್ ಸಿದ್ದರಾಮಯ್ಯ, ಮಹಾದೇವಯ್ಯ ಬಿನ್ ರಾಮೇಗೌಡ, ಚನ್ನಬಸವಯ್ಯ ಬಿನ್ ತೀರ್ಥಯ್ಯ, ತಿಮ್ಮರಾಜು ಬಿನ್ ಲೇಟ್ ದಾಸಪ್ಪ, ದಾಸಪ್ಪ ಬಿನ್ ಲೇಟ್ ಸಣ್ಣತಿಮ್ಮಯ್ಯ, 75*193 ಚದುರ ಅಡಿ ಜಾಗ ಸರ್ಕಾರದ ಪ್ರಕಾರ ಟಿ ಸಿ ಎಲ್
ಗ್ರಾಮ: ಮೂಕನಹಳ್ಳಿ ಪಟ್ಟಣ ಅಮಾನಿಕರೆ					
27	30/1	ಖಾಸಗಿ	ತರಿ	3041	ಎಂ.ಡಿ ರಮೇಶ್ ಬಿನ್ ಎಂ.ಬಿ ದಕ್ಷಿಣಾಮೂರ್ತಿ
28	30/10	ಖಾಸಗಿ	ತರಿ	646	ಹನುಮಂತಯ್ಯ ಬಿನ್ ಮಹಿಮಣ್ಣ. ಉರುಫ್ ಕರಿಯಣ್ಣ
29	30/2	ಖಾಸಗಿ	ತರಿ	2433	ಎಂ.ಡಿ ರಮೇಶ್ ಬಿನ್ ದಕ್ಷಿಣಮೂರ್ತಿ
30	30/3	ಖಾಸಗಿ	ತರಿ	2299	ಎಂ.ಡಿ ರಮೇಶ್ ಬಿನ್ ದಕ್ಷಿಣಮೂರ್ತಿ
31	30/4	ಖಾಸಗಿ	ತರಿ	151.3	ಎನ್.ಎಚ್ ಗೋವಿಂದಯ್ಯ ಬಿನ್ ಹನುಮಂತಯ್ಯ
32	30/5	ಖಾಸಗಿ	ತರಿ	1547	ವೆಂಕಟಮ್ಮ ಕೋಂ ಬೇವಿನ ಗುಡ್ಡಯ್ಯ
33	30/6	ಖಾಸಗಿ	ತರಿ	823	ಸಿದ್ದಯ್ಯ ಬಿನ್ ಮಹಿಮಣ್ಣ. ಉರುಫ್ ಕರಿಯಣ್ಣ
34	30/7	ಖಾಸಗಿ	ಎನ್.ಎ.ಕೆ.	1526	ಎಸ್.ಎಚ್ ಗೋವಿಂದಯ್ಯ ಬಿನ್ ಹನುಮಂತಯ್ಯ
35	30/8	ಖಾಸಗಿ	ತರಿ	645	ಗರುಡಪ್ಪ ಬಿನ್ ಕೃಷ್ಣಪ್ಪ
36	30/9	ಖಾಸಗಿ	ತರಿ	696	ಕೆಂಪಯ್ಯ ಬಿನ್ ಮಹಿಮಣ್ಣ. ಉರುಫ್ ಕರಿಯಣ್ಣ
37	66/1	ಖಾಸಗಿ	ತರಿ	1031	ರಾಮೇಗೌಡ ಡಿ.ಕೆ. ಬಿನ್ ದ್ಯಾವಣ್ಣ, ಶಿವಕುಮಾರ್ ಡಿ.ಕೆ. ಬಿನ್ ದ್ಯಾವಣ್ಣ, ದೇವರಾಜು ಡಿ.ಕೆ. ಬಿನ್ ದ್ಯಾವಣ್ಣ,
38	66/2	ಖಾಸಗಿ	ತರಿ	777	ಪುಟ್ಟ ನರಸಮ್ಮ ಕೋಂ ದ್ಯಾವಣ್ಣ
39	66/3	ಖಾಸಗಿ	ತರಿ	742	ನಂಜುಂಡಯ್ಯ ಬಿನ್ ಈಶ್ವರಪ್ಪ
40	66/4	ಖಾಸಗಿ	ತರಿ	620	ಗಂಗಣ್ಣ ಬಿನ್ ಈಶ್ವರಪ್ಪ
41	67/1, 2,3,4	ಖಾಸಗಿ	ತರಿ	799	ಎಂ.ಡಿ ಕುಮಾರ್ ಬಿನ್ ಲೇಟ್ ಡಿ.ಯು ಮಂಜಯ್ಯ, ಎಂ ಗಂಗಾಧರ್ ಬಿನ್ ಲೇಟ್ ಡಿ.ಯು ಮಂಜಯ್ಯ, ಎಂ ಸರೋಜಾ ಬಿನ್ ಲೇಟ್ ಡಿ.ಯು ಮಂಜಯ್ಯ,
ಗ್ರಾಮ: ಮುದಿಗೆರೆ					
42	31/1A3	ಖಾಸಗಿ	ಎನ್.ಎ.ಕೆ.	550	ಎಂ.ಬಿ. ಶಂಕರಪ್ಪ ಬಿನ್ ಬಸವರಾಜು
43	32/2	ಖಾಸಗಿ	ತರಿ	564	ಸರ್ಕಾರಿ ಗುಂಡು ತೋಪು
44	73/2	ಖಾಸಗಿ	ಖುಷ್ಕಿ	1012	ಗುಬ್ಬಣ್ಣ ಬಿನ್ ಹುಚ್ಚಪ್ಪ, ಶ್ರೀರಂಗಯ್ಯ ಬಿನ್ ದೊಡ್ಡರಂಗಯ್ಯ, ರಂಗಸ್ವಾಮಯ್ಯ ಬಿನ್ ದೊಡ್ಡರಂಗಯ್ಯ, ಜಯಮ್ಮ ಕೋಂ ಚನ್ನೇಗೌಡ, ಲಕ್ಷ್ಮಮ್ಮ, ಹೇಮವತಿ ಕಾಲುವೆ
45	85/1, 2,3,4	ಖಾಸಗಿ	ಖುಷ್ಕಿ	151.7	ರಾಮಣ್ಣ ಬಿನ್ ರಂಗಯ್ಯ, ಶಾಂತಕುಮಾರ್ ಬಿನ್ ಗುಡ್ಡಯ್ಯ, ಗಂಗಾಧರಯ್ಯ ಬಿನ್ ಗುಡ್ಡಯ್ಯ, ಚಿಕ್ಕರಂಗಣ್ಣ ಬಿನ್ ಗುಡ್ಡಯ್ಯ, ಪಾಂಡುರಂಗಯ್ಯ ಬಿನ್ ರಂಗಪ್ಪ, ನಡಕೇರೆಯ್ಯ ಬಿನ್ ಚಿಕ್ಕರಂಗಯ್ಯ, ಎಸ್.ಜಿ. ಗಂಗಾಧರಯ್ಯ ಬಿನ್ ಎಸ್.ಸಿ ಗುಡ್ಡಯ್ಯ
46	ಗ್ರಾಮತಾಣ	ಸರ್ಕಾರಿ (ಖರಾಬು)	ಖರಾಬು	1407	ರಾಜಣ್ಣ ಬಿನ್ ಸಿದ್ದಲಿಂಗಪ್ಪ, ಗಂಗಾಧರಯ್ಯ ಬಿನ್ ಬಸವರಾಜಪ್ಪ (ಗ್ರಾಮತಾಣ)
ಗ್ರಾಮ: ಎನ್.ಮತ್ತಿಘಟ್ಟ					
47	134/6	ಖಾಸಗಿ	ಖುಷ್ಕಿ	643	ಬಸವರಜು ಬಿನ್ ಸಿದ್ದರಾಮಣ್ಣ, ಗಂಗಾಧರಯ್ಯ ಬಿನ್ ಸಿದ್ದರಾಮಣ್ಣ, ಶಿವಕುಮಾರ್ ಬಿನ್ ಸಿದ್ದರಾಮಣ್ಣ
48	134/8	ಖಾಸಗಿ	ಖುಷ್ಕಿ	707	ಪಾರ್ವತಮ್ಮ ಕೋಂಬಸಪ್ಪ, ಸ್ವರ್ಣಮ್ಮ ಕೋಂ ರಾಮಣ್ಣ
49	143/1	ಖಾಸಗಿ	ಖುಷ್ಕಿ	1375	ಪಾರ್ವತಮ್ಮ ಕೋಂ ಬಸಪ್ಪ, ಸ್ವರ್ಣಮ್ಮ ಕೋಂ ರಾಮಣ್ಣ
50	143/2A	ಖಾಸಗಿ	ಖುಷ್ಕಿ	157	ಪಾರ್ವತಮ್ಮ ಕೋಂ ಷಡಕ್ಷರಯ್ಯ
51	143/2B	ಖಾಸಗಿ	ಖುಷ್ಕಿ	490	ಎಂ.ವಿ.ಬಸವರಾಜು ಬಿನ್ ವಜ್ರಪ್ಪ, ಚಿದಾನಂದ ಬಿನ್ ವಜ್ರಪ್ಪ, ಎಂ.ಎನ್.ಮಹಾದೇವಯ್ಯ ಬಿನ್ ವಜ್ರಪ್ಪ
52	144	ಖಾಸಗಿ	ಖುಷ್ಕಿ	75	ಪಿ.ಎಸ್.ಬಸವರಾಜು ಬಿನೆ ಪಾತ್ರೆ ಶಿವಪ್ಪ
ಗ್ರಾಮ: ನಿಟ್ಟೂರು					
53	58	ಸರ್ಕಾರಿ	ಖರಾಬು	860	ಗೋಮಳ, ಸಾರ್ವಜನಿಕ ರಸ್ತೆಗಾಗಿ ಸ್ವಾಧೀನಪಡಿಸಿಕೊಂಡಿದ್ದಾರೆ, ರಾಮಚಂದ್ರಯ್ಯ ಬಿನ್ ಚಿಕ್ಕ ಬೊಮ್ಮಯ್ಯ, ಎನ್.ಎಚ್. ಗಂಗರಾಮ ಬಿನ್ ಹುಚ್ಚರಂಗಯ್ಯ ಹಶಾಮ್ ಸಬ್ ಬಿನ್ ಬಸೀರ್ ಸಬ್, ಎನ್.ಕೆ. ಪ್ರಕಾಶ ಬಿನ್ ಎನ್.ಆರ್. ಕೆಂಪಣ್ಣ, ಜಿ. ಶಿವಾನಂದ್, ಕಾರ್ಯನಿರ್ವಾಹಕ ಎಂಜಿನಿಯರ್ ಕರ್ನಾಟಕ ವಿದ್ಯುತ್ ಲಿಮಿಟೆಡ್, ತುಮಕೂರು, ಎನ್.ಕೆ. ಪ್ರಕಾಶ್ ಬಿನ್ ಎನ್. ಆರ್ ಕೆಂಪಣ್ಣ, ಮೂರ್ತಿ ಬಿನ್ ಭೀಮೋಜಿರಾವ್, ಕುಮಾರ್ ಬಿನ್ ಸಂಜೀವಯ್ಯ, ಹೆಚ್.ಸಿ.ಶಾರದಮ್ಮ ಕೋಂ ಎನ್.ಎಸ್. ವಿಜಯಕುಮಾರ್, ರಂಗಸ್ವಾಮಯ್ಯ ಬಿನ್ ರಂಗಯ್ಯ, ಎನ್. ರಾಧಮ್ಮ ಕೋಂ ಲೇಟ್ ಬಸವರಾಜು, ನರಸಿಂಹಮೂರ್ತಿ ಬಿನ್ ಹನುಮಂತಯ್ಯ ಕರ್ನಾಟಕ ಎಲೆಕ್ಟ್ರಿಸಿಟಿ ಎನರ್ಜಿ ವಿಭಾಗ. ಎನ್. ಕೆ.ಪ್ರಕಾಶ್ ಬಿನ್ ಲೇಟ್ ಕೆಂಪಣ್ಣ, ಎನ್.ಬಿ. ನಂಜಪ್ಪ ಬಿನ್ ಬಸಪ್ಪ, ಲೇಟ್ ಪ್ರಭಾವತಿ ಕೋಂ ಲೇಟ್ ಉಮೇಶ್
54	71/1	ಖಾಸಗಿ	ಖುಷ್ಕಿ	312	ಕಲ್ಲಯ್ಯ ಬಿನ್ ಹುಬ್ಬಣ್ಣ, ಎನ್.ಟಿ.ನಂಜುಂಡಸ್ವಾಮಿ ಬಿನ್ ಲೇಟ್ ಎನ್.ಬಿ. ತಿಮ್ಮಯ್ಯ, ಎನ್.ಟಿ. ಸರೋಜಮ್ಮ ಬಿನ್ ಲೇಟ್ ಎನ್.ಬಿ. ತಿಮ್ಮಯ್ಯ, ಎನ್.ಟಿ. ಸ್ವರ್ಣಮ್ಮ ಬಿನ್ ಲೇಟ್ ಎನ್.ಬಿ. ತಿಮ್ಮಯ್ಯ, ಎನ್.ಟಿ. ವಸಂತಕುಮಾರಿ ಬಿನ್ ಲೇಟ್ ಎನ್.ಬಿ ತಿಮ್ಮಯ್ಯ, ಎಲ್.ಟಿ.ಲೀಲಾ ಬಿನ್ ಲೇಟ್ ಎನ್.ಬಿ. ತಿಮ್ಮಯ್ಯ, ಎನ್.ಟಿ. ನಳಿನಾ ಬಿನ್ ಎನ್.ಬಿ ತಿಮ್ಮಯ್ಯ, ಎನ್.ಟಿ.ಉಮಾಶಂಕರ್ ಬಿನ್ ಲೇಟ್ ಎನ್.ಬಿ. ತಿಮ್ಮಯ್ಯ, ಎನ್.ಟಿ. ಭಕ್ತ ಪ್ರಕಾಶ್ ಬಿನ್ ಲೇಟ್ ಎನ್.ಬಿ. ತಿಮ್ಮಯ್ಯ, ಎ. ವಜ್ರಯ್ಯ ಬಿನ್ ಲೇಟ್ ಅಬ್ಬಣ್ಣ, ಚನ್ನಬಸವಯ್ಯ ಬಿನ್ ಲೇಟ್ ಅಬ್ಬಣ್ಣ, ಎನ್.ಎಚ್. ಅಬ್ಬಣ್ಣ, ಗುರುಮೂರ್ತಿ ಬಿನ್ ಲೇಟ್ ರುದ್ರಯ್ಯ, ಗಂಗಮ್ಮ ಕೋಂ ದೊಡ್ಡಹುಚ್ಚಯ್ಯ, ಹನುಮಕ್ಕ ಕೋಂ ಸಣ್ಣ ಹುಚ್ಚಯ್ಯ
55	74/1	ಖಾಸಗಿ	ಖುಷ್ಕಿ	1416	ಮಹಾಲಿಂಗಪ್ಪ ಬಿನ್ ನಂಜಪ್ಪ, ಎನ್.ಎಂ.ಬಸವರಾಜಯ್ಯ ಬಿನ್ ಮಹಾಲಿಂಗಪ್ಪ
56	79/3	ಖಾಸಗಿ	ಖುಷ್ಕಿ	1517	ಸಣ್ಣ ನಂಜಯ್ಯ ಬಿನ್ ಜವರಪ್ಪ, ಎನ್.ಆರ್.ಮಂಜುನಾಥ್ ಬಿನ್ ಜೆ ರಾಮಣ್ಣ, ಕಾವೇರಿ ನೀರಾವರಿ ನಿಗಮ ಸ್ವಾಧೀನಕ್ಕೊಳಪಟ್ಟಿದೆ, ಸೌಭಾಗ್ಯಮ್ಮ ಕೋಂ ಲೇಟ್ ಎನ್.ಶಾಂತರಾಜ್
ಗ್ರಾಮ: ನಿಟ್ಟೂರು ಅಮಾನಿಕರೆ					
57	122/5	ಖಾಸಗಿ	ತರಿ	450	ಮಂಜುನಾಥ ಸ್ವಾಮಿ ಎಸ್ ಎಲ್ ಬಿನ್ ಲೇಟ್ ಲಿಂಗದೇವರಯ್ಯ
58	122/6	ಖಾಸಗಿ	ತರಿ	450	ಮಂಜುನಾಥ ಸ್ವಾಮಿ ಎಸ್ ಎಲ್ ಬಿನ್ ಲೇಟ್ ಲಿಂಗದೇವರಯ್ಯ
59	243/1	ಖಾಸಗಿ	ತರಿ	233	ರಮೇಶ್ ಬಿನ್ ಶಿವನಂಜಪ್ಪ, ಎ.ಎಸ್.ಶಶಿಧರ್ ಬಿನ್ ಶಿವಣ್ಣ, ಎಂ.ಗಂಗಾಧರ ಬಿನ್ ಲೇಟ್ ಎಂ.ಮಹದೇವಯ್ಯ, ಸಿದ್ದಪ್ಪ ಬಿನ್ ಮುದ್ದಪ್ಪ, ಎಚ್.ಡಿ. ರೇಖಾ ಕೋಂ ಎಂ. ಗಂಗಾಧರ್, ಎಂ.ಎಸ್.ಶಶಿಧರ್ ಬಿನ್ ಶಿವಣ್ಣ
60	243/3	ಖಾಸಗಿ	ತರಿ	142	ಎಮ್.ಆರ್. ಬಸರಾಜು ಬಿನ್ ರುದ್ರಯ್ಯ, ಹೆಚ್. ವೀರಭದ್ರಯ್ಯ ಬಿನ್ ಹುಚ್ಚ ವೀರಯ್ಯ, ರಾಮಯ್ಯ ಬಿನ್ ಹುಚ್ಚ ವೀರಯ್ಯ, ಈರಯ್ಯ ಬಿನ್ ಹುಚ್ಚ ವೀರಯ್ಯ
61	244/1	ಖಾಸಗಿ	ತರಿ	410	ವಜ್ರಪ್ಪ ಬಿನ್ ಚಿಕ್ಕಬಸ್ಸಪ್ಪ
62	244/3	ಖಾಸಗಿ	ತರಿ/ಪ್ಲಾಂಟೇಷನ್	58	ವಜ್ರಪ್ಪ ಬಿನ್ ಚಿಕ್ಕಬಸಪ್ಪ, ಬಸಪ್ಪ ಬಿನ್ ಚಿಕ್ಕಬಸಪ್ಪ
63	244/5	ಖಾಸಗಿ	ತರಿ/ಪ್ಲಾಂಟೇಷನ್	381	ವಜ್ರಪ್ಪ ಬಿನ್ ಚಿಕ್ಕಬಸ್ಸಪ್ಪ
ಗ್ರಾಮ: ರಾಯಾವರ					
64	14/1	ಖಾಸಗಿ	ಖುಷ್ಕಿ	505	ಎಸ್. ರುಪಶ್ರೀ ಕೋಂ ಜಿ.ಎನ್.ಪ್ರಭಾಕರ್
65	16	ಖಾಸಗಿ	ಖುಷ್ಕಿ	303	ಜುಂಜಮ್ಮ ಕೋಂ ಈರಲಕಯ್ಯ, ಶಿವಕುಮಾರ್ ಬಿನ್ ಲಕ್ಕಯ್ಯ ಉರುಫ್ ತಮ್ಮಯ್ಯ, ಶ್ರೀಧರ್ ಬಿನ್ ಲಕ್ಕಯ್ಯ ಉರುಫ್ ತಮ್ಮಯ್ಯ, ಸಣ್ಣ ಈರಯ್ಯ ಬಿನ್ ಚಿಕ್ಕಣ್ಣ, ರಾಜು ಪಿ ಡಿ / ಲೇಟ್ ದೊಡ್ಡೇರಯ್ಯ, ವಿಜಯ. ಸಿ ಕೋಂ ಕೃಷ್ಣ ಪ್ರಸಾದ್ ಎಚ್.ಸಿ
66	22/1	ಖಾಸಗಿ	ಖುಷ್ಕಿ	1012	ಜುಂಜಮ್ಮ ಕೋಂ ಈರಲಕಯ್ಯ, ಸಣ್ಣಈರಯ್ಯ ಬಿನ್ ಚಿಕ್ಕಣ್ಣ, ಶಿವಕುಮಾರ್ ಬಿನ್ ಲಕ್ಕಯ್ಯ, ಶ್ರೀಧರ್ ಬಿನ್ ಲಕ್ಕಯ್ಯ
67	22/2	ಖಾಸಗಿ	ಖುಷ್ಕಿ	648	ನಂದೀಶ್ ಬಿನ್ ಹಲ್ಲಿಗಯ್ಯ
68	24/10	ಖಾಸಗಿ	ಖುಷ್ಕಿ	156	ಈರಮ್ಮ ಕೋಂ ಮಹಾಲಿಂಗಯ್ಯ
69	24/4	ಖಾಸಗಿ	ಖುಷ್ಕಿ	1113	ಚಿಕ್ಕಮ್ಮ ಕೋಂ ಈರಲಕ್ಕಯ್ಯ
70	24/5	ಖಾಸಗಿ	ಖುಷ್ಕಿ	249	ಈರಯ್ಯ ಬಿನ್ ದೊಡ್ಡಯ್ಯ, ಚಿಕ್ಕಮ್ಮ ಕೋಂ ಈರಲಕ್ಕಯ್ಯ
ಗ್ರಾಮ: ಯಲ್ಲಪುರ					
71	36	ಖಾಸಗಿ	ಖುಷ್ಕಿ	1517	ಶಿವರುದ್ರಮ್ಮ ಬಿನ್ ವೀರಪ್ಪ, ಹನುಮಂತಯ್ಯ ಬಿನ್ ಹುಚ್ಚಯ್ಯ, ಸರ್ಕಾರಿ ಭೂಮಿ
72	37	ಖಾಸಗಿ	ಖುಷ್ಕಿ	1517	ತಿಮ್ಮಾ ಬೋವಿ ಬಿನ್ ಸಣ್ಣ ಬೋವಿ, ರಂಗಯ್ಯ ಬಿನ್ ದೊಡ್ಡರಂಗಯ್ಯ, ರಾಮಯ್ಯ ಬಿನ್ ನರಸಿಂಹಯ್ಯ
ತಾಲ್ಲೂಕು: ತುಮಕೂರು					
ಗ್ರಾಮ: ಕೋಟ್ನಹಳ್ಳಿ					
1	22/2	ಖಾಸಗಿ	ಎನ್.ಎ.ಕೆ.	202	ಸಿದ್ದಯ್ಯ ಬಿನ್ ನಂಜಯ್ಯ
2	23/1	ಖಾಸಗಿ	ಎನ್.ಎ.ಕೆ.	225	ತಿಮ್ಮಯ್ಯ, ನಂಜಪ್ಪ, ತಿಮ್ಮಯ್ಯ ಬಿನ್ ಚನ್ನಪ, ಸಿ ರಂಗಯ್ಯ ಬಿನ್ ಚನ್ನಪ್ಪ, ಬಸವರಾಜು, ಟಿ.ವಿ. ವೆಂಕಟ ನಾರಾಯಣ ಶಾಸ್ತ್ರಿ, ಕೆ.ಸಿ.ಪ್ರಕಾಶ್ ಬಿನ್ ಚಿಕ್ಕ ರಂಗಯ್ಯ,
ಗ್ರಾಮ: ಪೆರಮನಹಳ್ಳಿ					
3	47 /1	ಖಾಸಗಿ	ಖುಷ್ಕಿ	253	ಟಿ .ಎಸ್ ಚಿದಾನಂದಪ್ಪ ಬಿನ್ ಒ.ಟಿ .ಎಸ್ ಶ್ರೀಕಾಂತಪ್ಪ (ಎನ್.ಎ.ಕೆ.)
	ಒಟ್ಟು			56277	

[ಎಫ್. ಸಂಖ್ಯೆ ಎನ್‌ಹೆಚ್‌ಎಐ/4ಲೇನ್ ತುಮಕೂರು–ಶಿವಮೊಗ್ಗ/ಎಲ್‌ಎ/ಕರ್ನಾಟಕ/ಪ್ರಕಟಣೆ/3ಎ/ಪಿಐಯು–ಶಿವಮೊಗ್ಗ(ತುಮಕೂರು)ಎನ್‌ಹೆಚ್–206/3ಡಿ]
ರಾಜೇಶ್ ಗುಪ್ತ, ನಿರ್ದೇಶಕ

ಆ್ಯಸಿಡ್ ಬೆದರಿಕೆ; ಪತಿ ವಿರುದ್ಧ ಐಪಿಎಸ್ ಅಧಿಕಾರಿ ದೂರು

ಬೆಂಗಳೂರು: 'ತಮ್ಮ ವಿರುದ್ಧ ನೀಡಿರುವ ದೂರು ಹಿಂಪಡೆಯುವಂತೆ ಪೀಡಿಸುತ್ತಿರುವ ಪತಿ ನಿತಿನ್ ಸುಭಾಷ್, 'ನನ್ನ ಮೇಲೆ ಆ್ಯಸಿಡ್ ಹಾಕುವುದಾಗಿ ಬೆದರಿಕೆ ಹಾಕಿದ್ದಾರೆ' ಎಂದು ಆರೋಪಿಸಿ ಐಪಿಎಸ್ ಅಧಿಕಾರಿ ವರ್ತಿಕಾ ಕಟಿಯಾರ್ ನಗರದ ವಿಧಾನಸೌಧ ಠಾಣೆಗೆ ದೂರು ನೀಡಿದ್ದಾರೆ.

'ಅಧಿಕಾರ ಹಾಗೂ ಪ್ರಭಾವ ಬಳಸಿಕೊಂಡು ನನ್ನ ಮಗುವನ್ನು ನೋಡಲು ಪತ್ನಿ ವರ್ತಿಕಾ ಅವಕಾಶ ನೀಡುತ್ತಿಲ್ಲ' ಎಂದು ಆರೋಪಿಸಿ ಐಎಫ್‌ಎಸ್ (ವಿದೇಶಾಂಗ ಸೇವೆ) ಅಧಿಕಾರಿಯೂ ಆಗಿರುವ ನಿತಿನ್ ಸುಭಾಷ್, ರಾಷ್ಟ್ರೀಯ ಮಕ್ಕಳ ಹಕ್ಕು ರಕ್ಷಣಾ ಆಯೋಗಕ್ಕೆ ಇತ್ತೀಚೆಗಷ್ಟೇ ದೂರು ನೀಡಿದ್ದಾರೆ. ಅದರನ್ವಯ ಸೂಕ್ತ ಕ್ರಮ ಕೈಗೊಳ್ಳುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಅವರಿಗೆ ಆಯೋಗ ಸೂಚಿಸಿದೆ.

ಇದರ ಬೆನ್ನಲ್ಲೇ ವರ್ತಿಕಾ ಅವರು ಪತಿ ವಿರುದ್ಧ ಪೊಲೀಸರಿಗೆ ಮತ್ತೊಂದು ದೂರು ನೀಡಿದ್ದಾರೆ. ಈ ಹಿಂದೆ, ವರದಕ್ಷಿಣೆ ಕಿರುಕುಳ ಹಾಗೂ ಬೆದರಿಕೆ ಆರೋಪದಡಿ ಪತಿ ವಿರುದ್ಧ ಕಬ್ಬನ್ ಪಾರ್ಕ್ ಠಾಣೆಗೆ ದೂರು ನೀಡಿದ್ದರು. ಆ ಪ್ರಕರಣವನ್ನು ದೆಹಲಿ ಪೊಲೀಸರಿಗೆ ವರ್ಗಾಯಿಸಲಾಗಿತ್ತು.

ಕಚೇರಿಗೆ ನುಗ್ಗಿ ಬೆದರಿಕೆ: 'ದೂರು ನೀಡಿದರೂ ಕಿರುಕುಳ ಮುಂದುವರಿಸಿರುವ ಪತಿ ನಿತಿನ್, ಆ್ಯಸಿಡ್ ಹಾಕುವುದಾಗಿ ವಾಟ್ಸ್‌ಆ್ಯಪ್ ಮೂಲಕ ಮೇ 28ರಂದು ಬೆದರಿಕೆ ಹಾಕಿದ್ದಾರೆ' ಎಂದೂ ವರ್ತಿಕಾ ದೂರಿನಲ್ಲಿ ತಿಳಿಸಿದ್ದಾರೆ.

'ನಗರದಲ್ಲಿ ಲಾಕ್‌ಡೌನ್ ಜಾರಿಯಲ್ಲಿದ್ದರೂ ನಿಯಮಗಳನ್ನು ಉಲ್ಲಂಘಿಸಿ ಪತಿ ನನ್ನ ಕಚೇರಿಗೆ ಬಂದು ಬೆದರಿಸಿದ್ದಾರೆ. ಅಂದು ರಾತ್ರಿ ನನ್ನ ಪೋಷಕರಿಗೆ ಕರೆ ಮಾಡಿ ಮನೆ ವಿಳಾಸ ನೀಡುವಂತೆ ಒತ್ತಾಯಿಸಿದ್ದಾರೆ. ನನ್ನ ಮೇಲೆ ದೈಹಿಕ ಹಲ್ಲೆ ನಡೆಸಲು ಅವರು ಸಂಚು ರೂಪಿಸಿದ್ದಾರೆ' ಎಂದೂ ವರ್ತಿಕಾ ಆರೋಪಿಸಿದ್ದಾರೆ.

ವಿಧಾನಸೌಧ ಪೊಲೀಸರು, 'ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ತಿಳಿಸಿದರು.

'ಜಯಾ ಶವ ಅನಾಥವಾಗಿರಲಿಲ್ಲ'

ಪ್ರಜಾವಾಣಿ ವಾರ್ತೆ

ಬಿ.ಜಯಾ

ಬೆಂಗಳೂರು: ಪೋಷಕ ನಟಿ ಬಿ.ಜಯಾ ಅವರ ಶವ ಅನಾಥವಾಗಿ ಪಾದಚಾರಿ ಮಾರ್ಗದಲ್ಲಿದೆ ಎನ್ನುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಶುಕ್ರವಾರ ವೈರಲ್ ಆಗಿದ್ದು, ಇದು ಕಿಡಿಗೇಡಿಗಳ ಕೃತ್ಯ ಎಂದು ಜಯಾ ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಅನಾರೋಗ್ಯದಿಂದ ಬಳಲುತ್ತಿದ್ದ ಜಯಾ ಅವರು ಗುರುವಾರ ಮೃತಪಟ್ಟರು.

'ಪಾರ್ಥಿವ ಶರೀರದ ಹತ್ತಿರ ನಾವು ಇರದ ಸಮಯದಲ್ಲೇ ಕಿಡಿಗೇಡಿಗಳು ಈ ರೀತಿ ವಿಡಿಯೊ ಮಾಡಿದ್ದಾರೆ. ಪೂಜೆ ಬಳಿಕ ನಾವು ಸ್ಮಶಾನದಿಂದ ಹೊರಟು ಬಂದಿದ್ದೆವು. ನನ್ನ ಮಗಳು, ಅಳಿಯ ಅಲ್ಲಿಯೇ ಇದ್ದು ಎಲ್ಲವನ್ನೂ ನೋಡಿಕೊಳ್ಳುತ್ತಿದ್ದರು. ಸ್ಮಶಾನದಲ್ಲಿ ಕಾರ್ಯಕ್ರಮವೊಂದು ನಡೆಯುತ್ತಿದ್ದ ಕಾರಣ, ವಾಹನ ದಟ್ಟಣೆ ಇತ್ತು. ಹೊರಗಡೆ ಪಾದಚಾರಿ ಮಾರ್ಗದ ಆಚೀಚೆ ಕಸವೇ ತುಂಬಿತ್ತು. ಜಾಗ ಇದ್ದಲ್ಲಿ ಪಾರ್ಥಿವ ಶರೀರ ಇಟ್ಟಿದ್ದೆವು' ಎಂದು ಜಯಾ ಅವರ ತಮ್ಮ, ನಿರ್ದೇಶಕ ಮಲ್ಲೇಶ್ 'ಪ್ರಜಾವಾಣಿ'ಗೆ ತಿಳಿಸಿದರು.

'ಶುಕ್ರವಾರ ಬೆಳಗ್ಗೆ 9.30ರ ಸುಮಾರಿಗೆ ಕರುಣಾಶ್ರಯದಿಂದ ಜಯಾ ಅವರ ಪಾರ್ಥಿವ ಶರೀರವನ್ನು ತೆಗೆದುಕೊಂಡೆವು. ಚಿತ್ರರಂಗದವರಾಗಲಿ ಅಥವಾ ಸಂಬಂಧಿಕರಾಗಲಿ ಕೇಳಿದಾಗ ಯಾರೂ ಬರಬೇಡಿ ಎಂದೇ ಹೇಳಿದ್ದೆವು. ನಮಗೂ ತೊಂದರೆ, ನಿಮಗೂ ತೊಂದರೆ ಎಂದಿದ್ದೆವು. ಹೀಗಾಗಿ ಸ್ಮಶಾನದ ಬಳಿ ಜನ ಹೆಚ್ಚು ಇರಲಿಲ್ಲ. ನಮಗೆ ಚಾಮರಾಜಪೇಟೆ ಸ್ಮಶಾನದಲ್ಲಿ 11.30ರಿಂದ 12ಗಂಟೆ ಯವರೆಗೆ ಸಮಯ ನೀಡಲಾಗಿತ್ತು. ಹೀಗಾಗಿ 11 ಗಂಟೆಯ ಸುಮಾರಿಗೆ ಶವವನ್ನು ತೆಗೆದುಕೊಂಡು ಹೋಗಿ ದ್ದೆವು' ಎಂದು ಮಲ್ಲೇಶ್ ಅವರ ಮಗಳು ರಾಜೇಶ್ವರಿ ಮಾಹಿತಿ ನೀಡಿದರು.

'ಪೋಷಕರ ಕಳೆದುಕೊಂಡವರಿಗೆ ಎಸ್ಸೆಸ್ಸೆಲ್ಸಿ ತನಕ ಉಚಿತ ಶಿಕ್ಷಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರಕೂಟ ಶಾಲೆಯು ಕೋವಿಡ್‌ನಿಂದಾಗಿ ಪಾಲಕರನ್ನು ಕಳೆದುಕೊಂಡಿರುವ ವಿದ್ಯಾರ್ಥಿಗಳಿಗೆ ಎಸ್ಸೆಸ್ಸೆಲ್ಸಿವರೆಗೂ ಶಿಕ್ಷಣವನ್ನು ಉಚಿತವಾಗಿ ನೀಡಲು ತೀರ್ಮಾನಿಸಿದೆ.

'ಸಾಮಾಜಿಕ ಹೊಣೆಗಾರಿಕೆ ಮತ್ತು ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವ ಆಶಯದೊಂದಿಗೆ ನಾವು ಈ ಕಾರ್ಯಕ್ಕೆ ಮುಂದಾಗಿದ್ದೇವೆ. ನಾವು ಕೈಗೊಂಡಿರುವ ಸಮಾಜಮುಖಿಯಾದ ಈ ಕೆಲಸವು ಇತರರಿಗೂ ಪ್ರೇರಣೆಯಾಗಲಿ. ಕೋವಿಡ್ ಸಂದಿಗ್ಧ ಕಾಲದಲ್ಲಿ ಪ್ರತಿಯೊಂದು ಸಂಸ್ಥೆಯೂ ತಮ್ಮವರೊಂದಿಗೆ ನಿಲ್ಲಲಿ. ಚಿತ್ರಕೂಟವು ತನ್ನ ವಿದ್ಯಾರ್ಥಿಗಳ ನೆರವಿಗೆ ಸದಾ ನಿಲ್ಲಲಿದೆ' ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ನಗರದಲ್ಲಿ ಇಂದು

ವಿಜಯ್

ವಿಶ್ವ ಪರಿಸರ ದಿನದ ಅಂಗವಾಗಿ 'ಪ್ಲಾಸ್ಟಿಕ್ ತ್ಯಜಿಸಿ –ಪರಿಸರ ಉಳಿಸಿ' ಬೀದಿ ನಾಟಕಕ್ಕೆ ಚಾಲನೆ: ನಟ ಸಂಚಾರಿ ವಿಜಯ್, ಆಯೋಜನೆ–ರಂಗ ಚಂದಿರ ಟ್ರಸ್ಟ್, ಸ್ಥಳ–ಪುರಭವನ, ಬೆಳಿಗ್ಗೆ 8.30

ವಿಶ್ವ ಪರಿಸರ ದಿನ: ಆಯೋಜನೆ–ದಯಾನಂದ ಸಾಗರ್ ಎಂಜಿನಿಯರಿಂಗ್ ಕಾಲೇಜಿನ ಸಿವಿಲ್ ಎಂಜಿನಿಯರಿಂಗ್ ವಿಭಾಗ, ಬೆಳಿಗ್ಗೆ 10 (ಆನ್‌ಲೈನ್ ಕಾರ್ಯಕ್ರಮ)

'ಕರ್ನಾಟಕದಲ್ಲಿ ಲಾಕ್‌ಡೌನ್ ಅನ್ನು ಸೂಕ್ತ ಮತ್ತು ಸುರಕ್ಷ ರೀತಿಯಲ್ಲಿ ನಿರ್ವಹಿಸಿ ತೆರವು ಗೊಳಿಸುವ ವಿಧಾನ' ಕುರಿತು ವೆಬಿನಾರ್: ಭಾಗವಹಿಸುವವರು–ಟಿ.ಎನ್.ಪ್ರಕಾಶ್ ಕಮ್ಮರಡಿ, ಎಂ.ಕೆ. ಸುದರ್ಶನ್, ವಿನೋದ್ ವ್ಯಾಸುಲು, ಗಿರಿಧರ್ ಬಾಬು, ಶ್ರೀನಿವಾಸ ಕಕ್ಕಿಲ್ಲಾಯ, ಅಮಿತ್ ಬಸೋಲೆ, ಜಿ.ಕೆ.ವೆಂಕಟೇಶ್, ಪಿ.ವಿ.ಕೃಷ್ಣನ್ ಭಟ್, ಬಿ.ಎಲ್.ಶಂಕರ್, ಪಿ.ವಿ.ವೇಣುಗೋಪಾಲ್, ಆಯೋಜನೆ–ಸೊಸೈಟಲ್ ಆ್ಯಕ್ಷನ್ ಗ್ರೂಪ್ ಆಫ್ ಎಕ್ಸ್‌ಪರ್ಟ್ಸ್, ಮಧ್ಯಾಹ್ನ 3 (ಆನ್‌ಲೈನ್ ಕಾರ್ಯಕ್ರಮ)

ಡಾ.ಮಲ್ಲಿಕಾರ್ಜುನ ಮನ್ಸೂರ್ ಸ್ಮರಣೆ: ಭಾಗವಹಿಸುವವರು–ಗೊ.ರು ಚನ್ನಬಸಪ್ಪ, ಸಿ.ಸೋಮಶೇಖರ್, ಮೃತ್ಯುಂಜಯ ಶೆಟ್ಟರ್, ವಿಜಯ್ ಕುಮಾರ್ ತೇಲಿ, ನಿಜಗುಣ ರಾಜಗುರು, ಕೆ.ವಿ.ನಾಗರಾಜ ಮೂರ್ತಿ, ಆಯೋಜನೆ–ಶರಣ ಸಾಹಿತ್ಯ ಪರಿಷತ್, ಸಂಜೆ 4 (ಆನ್‌ಲೈನ್ ಕಾರ್ಯಕ್ರಮ)

'ದೇಶ ಮೊದಲು' ವೆಬಿನಾರ್ ಸರಣಿ: ವಿಷಯ–'ಹಸಿವನ್ನು ಮೀರಿದ ಪೌಷ್ಟಿಕತೆ

ತೇಜಸ್ವಿನಿ

-ದೇಶದಲ್ಲಿ ಹೆಚ್ಚುವರಿ ಆಹಾರ ಮತ್ತು ಕಡಿಮೆ ಪೌಷ್ಟಿಕತೆಯ ಒಗಟು', ಮಾತನಾಡುವವರು–ಯೆಲ್ಲೊಜಿ ರಾವ್ ಮಿರಾಜ್ಕರ್, ತೇಜಸ್ವಿನಿ ಅನಂತ ಕುಮಾರ್, ಆಯೋಜನೆ–ಅನಂತ ಕುಮಾರ್ ಪ್ರತಿಷ್ಠಾನ, ಸಂಜೆ 4.30 (ಆನ್‌ಲೈನ್ ಕಾರ್ಯಕ್ರಮ)

ರೇರಾ ಅನುಷ್ಠಾನ ಹಾಗೂ ವರ್ಧನೆ ಕುರಿತು ವಿಚಾರ ಸಂಕಿರಣ: ಭಾಗವಹಿಸುವವರು–ಅಜಯ್ ಮೆಹ್ತಾ, ಎಂ.ಎಸ್. ಶಂಕರ್, ಅಭಯ್ ಉಪಾಧ್ಯಾಯ, ದೇವಾಶೀಶ್ ಭರೂಖ, ಆಯೋಜನೆ–ಫೋರಂ ಆಫ್ ಪೀಪಲ್ಸ್ ಕಲೆಕ್ಟಿವ್ ಎಫರ್ಟ್ಸ್ (ಎಫ್‌ಪಿಸಿಇ), ಸಂಜೆ 4.30 (ಆನ್‌ಲೈನ್ ಕಾರ್ಯಕ್ರಮ)



'ಪ್ಯಾರಿಸ್ ಕಮ್ಯೂನ್–150' ಪುಸ್ತಕ ಬಿಡುಗಡೆ: ಎಂ.ಎಸ್.ಮೀನಾಕ್ಷಿ ಸುಂದರಂ, ಪರಿಚಯ–ಬಿ.ಆರ್. ಮಂಜುನಾಥ್, ಆಯೋಜನೆ–ಕ್ರಿಯಾ ಮಾಧ್ಯಮ, ಸಂಜೆ 5 (ಆನ್‌ಲೈನ್ ಕಾರ್ಯಕ್ರಮ)

ಎಚ್.ಎಸ್.ದೊರೆಸ್ವಾಮಿ ಸ್ಮರಣಾರ್ಥ ವೆಬಿನಾರ್: ವಿಷಯ–ಸ್ವಾತಂತ್ರ್ಯೋತ್ತರ ಭಾರತದಲ್ಲಿ ಗಾಂಧೀವಾದಿ, ಮಾತನಾಡುವವರು–ಜಿ.ರಾಮಕೃಷ್ಣ, ವಿ.ಎಸ್.ಶ್ರೀಧರ್, ಎಚ್.ಜಿ.ಜಯಲಕ್ಷ್ಮಿ, ಸಿದ್ಧನಗೌಡ ಪಾಟೀಲ, ಆಯೋಜನೆ–ಎಂ.ಎಸ್.ಕೃಷ್ಣನ್ ಮೆಮೋರಿಯಲ್ ಟ್ರಸ್ಟ್, ನವಕರ್ನಾಟಕ ಪ್ರಕಾಶನ, ಹೊಸತು, ಸಂಜೆ 6 (ಆನ್‌ಲೈನ್ ಕಾರ್ಯಕ್ರಮ).

ನಿಧನ ವಾರ್ತೆ

ಜಯಪಾಲ್

ಬೆಂಗಳೂರು: 'ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್'ನ (ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್) ನಿವೃತ್ತ ನೌಕರ ಜಯಪಾಲ್ (65) ಅನಾರೋಗ್ಯದಿಂದಾಗಿ ಶುಕ್ರವಾರ ನಿಧನರಾದರು.

ಅವರಿಗೆ ಪತ್ನಿ ಮತ್ತು ಇಬ್ಬರು ಪುತ್ರರು ಇದ್ದಾರೆ.

ಬೆಂಗಳೂರು ವೃತ್ತ ಪತ್ರಿಕಾ ನೌಕರರ ಸಂಘದ (ಬಿಎನ್‌ಇಯು) ಕಾರ್ಯಕಾರಿ ಸಮಿತಿ ಸದಸ್ಯರಾಗಿಯೂ ಅವರು ಕೆಲಸ ಮಾಡಿದ್ದರು.

ಸಂಜಯ್ ಮಹಾರಾಜ್

ಬೆಂಗಳೂರು: ರಾಜ್ಯದಲ್ಲಿರುವ ಸಿಂಧಿ ಸಮುದಾಯದ ಪಂಡಿತರಾಗಿದ್ದ ಸಂಜಯ್ ಮಹಾರಾಜ್ (65) ಅವರು ಹೃದಯಾಘಾತದಿಂದಾಗಿ ಗುರುವಾರ ನಿಧನರಾದರು.

ಅವರಿಗೆ ಪತ್ನಿ ಇದ್ದಾರೆ. 'ಅಂತ್ಯಕ್ರಿಯೆಯನ್ನು ಹರಿಶ್ಚಂದ್ರ ಘಾಟ್ ಸ್ಮಶಾನದಲ್ಲಿ ನೆರವೇರಿಸಲಾಯಿತು' ಎಂದು ಅವರ ಆಪ್ತರು ಹೇಳಿದರು.

ವರ್ಷದಲ್ಲಿ ಈ ಬಯೋಪಾರ್ಕ್ ಉತ್ಪಾದಿಸುವ ಆಮ್ಲಜನಕದ ಮೌಲ್ಯ ₹ 16,725 ಕೋಟಿ

ಆಮ್ಲಜನಕ ಮರುಪೂರಣದ ಕಣಜ ಜ್ಞಾನಭಾರತಿ

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಪರಾಕಾಷ್ಠೆ ತಲುಪಿರುವ ಪರಿಸರ ಮಾಲಿನ್ಯದಿಂದ ನಗರದ ಜನ ನಲುಗುತ್ತಿದ್ದರೆ, ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನ ಭಾರತಿ ಪ್ರಾಂಗಣವು ವಾತಾವರಣದ ಆಮ್ಲಜನಕ ಮರುಪೂರಣದ ಕಣಜವಾಗಿ ಅವರನ್ನು ಪೊರೆಯುತ್ತಿದೆ. ಈ ಜೈವಿಕ ಉದ್ಯಾನವು (ಬಯೋ ಪಾರ್ಕ್) ಪ್ರತಿ ಹೆಕ್ಟೇರ್‌ಗೆ 64 ಟನ್ ಇಂಗಾಲವನ್ನು ಸ್ಥಿರೀಕರಿಸಿ, ವರ್ಷದಲ್ಲಿ 7.07 ಕೋಟಿ ಲೀ. ಆಮ್ಲಜನಕವನ್ನು ಬಿಟ್ಟುಕೊಡುವ ಮೂಲಕ ಹಸಿರು ತಾಣ ಮಾತ್ರವಲ್ಲ ಜನರ ಪಾಲಿನ 'ಉಸಿರು ತಾಣ'ವಾಗಿಯೂ ಗುರುತಿಸಿಕೊಂಡಿದೆ.

ಈ ಸಮೃದ್ಧ ಹಸಿರಿನ ಕಣಜವಾಗಿರುವ, ಅಸಂಖ್ಯಾತ ಜೀವವೈವಿಧ್ಯದ ನೆಲೆಯಾಗಿರುವ ಈ ಕಿರು ಕಾನನವನ್ನು ಸಂರಕ್ಷಿಸಬೇಕು. ಇಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳಿಗೆ ಹಾಗೂ ಒತ್ತುವರಿಗೆ ಅವಕಾಶ ಕಲ್ಪಿಸಬಾರದು ಎಂದು ಬಿಬಿಎಂಪಿ ಉಪಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಜೀವವೈವಿಧ್ಯ ನಿರ್ವಹಣೆ ಸಮಿತಿ ಸದಸ್ಯ ಎನ್.ರಂಗನಾಥ ಸ್ವಾಮಿ ಮೇ 28ರಂದು ಶಿಫಾರಸು ಮಾಡಿದ್ದಾರೆ.

ನಗರದಲ್ಲಿ ಕೋವಿಡ್ ವ್ಯಾಪಕವಾಗಿ ಹರಡಿ ಆಮ್ಲಜನಕ ಪೂರೈಕೆಗಾಗಿ ಹಾಹಾಕಾರ ಸೃಷ್ಟಿಯಾಗಿತ್ತು. ಇದು ಹಸಿರನ್ನು ಉಳಿಸುವ ಕಾಳಜಿಯನ್ನು ಹೆಚ್ಚಿಸುವುದಕ್ಕೂ ಕಾರಣವಾಗಿದೆ. ಜ್ಞಾನಭಾರತಿ ಪ್ರಾಂಗಣದ ಹಸಿರಿನ ಮಹತ್ವ ಎಷ್ಟು ಎಂಬುದನ್ನು ಮನವರಿಕೆ ಮಾಡುವ ಸಲುವಾಗಿ ಬಿಬಿಎಂಪಿಯ ಜೀವವೈವಿಧ್ಯ ನಿರ್ವಹಣೆ ಸಮಿತಿ (ಬಿಎಂಸಿ) ಇಲ್ಲಿ ಉತ್ಪಾದನೆಯಾಗುವ ಆಮ್ಲಜನಕದ ಆರ್ಥಿಕ ಲೆಕ್ಕಾಚಾರವನ್ನು ವಿಶ್ಲೇಷಿಸಿದೆ. ವರ್ಷದಲ್ಲಿ ಉತ್ಪಾದನೆಯಾಗುವ ಆಮ್ಲಜನಕದ ಬೆಲೆ ₹ 16,725 ಕೋಟಿಗಳಷ್ಟಾಗುತ್ತದೆ ಎನ್ನುತ್ತದೆ ಬಿಎಂಸಿ.

'3 ಸಾವಿರಕ್ಕೂ ಅಧಿಕ ಪ್ರಭೇದಗಳ 6 ಲಕ್ಷಕ್ಕೂ ಅಧಿಕ ಮರಗಳನ್ನು ಒಳಗೊಂಡಿರುವ ಸಾಮರ್ಥ್ಯ ಈ ಕಿರು ಅರಣ್ಯವು ಹೊಂದಿದೆ. 2012ಕ್ಕೆ ಹೋಲಿಸಿದರೆ ಇಂಗಾಲದ ಸ್ಥಿರೀಕರಣ ಸಾಮರ್ಥ್ಯವು ಪ್ರತಿ ಹೆಕ್ಟೇರ್‌ಗೆ 6 ಟನ್‌ಗಳಷ್ಟು ಹೆಚ್ಚಳ ಕಂಡಿದೆ. ಇಲ್ಲಿನ ಪ್ರತಿ ಮರವು ವರ್ಷಕ್ಕೆ ಸರಾಸರಿ 117.934 ಲೀ ಆಮ್ಲಜನಕ ಉತ್ಪತ್ತಿ ಮಾಡುತ್ತದೆ. ಅದರ ಪ್ರಕಾರ ಇಲ್ಲಿ ವರ್ಷದಲ್ಲಿ ಉತ್ಪಾದಿಸುವ ಆಮ್ಲಜನಕದ ಪ್ರಮಾಣ 7.07 ಕೋಟಿ ಲೀಟರ್‌ಗಳಷ್ಟಾಗುತ್ತದೆ. 2.75 ಲೀ ಸಾಮರ್ಥ್ಯದ ಆಮ್ಲಜನಕ ಸಿಲಿಂಡರ್‌ಗೆ ತಲಾ ₹ 6,500 ದರ ಇದೆ. ಈ ಪ್ರಕಾರ ಲೆಕ್ಕಹಾಕಿದರೆ ಈ ಬಯೊ ಪಾರ್ಕ್‌ನಲ್ಲಿ ವರ್ಷದಲ್ಲಿ ಉತ್ಪಾದನೆಯಾಗುವ ಆಮ್ಲಜನಕದ ಮೌಲ್ಯ ₹ 16,725 ಕೋಟಿ' ಎಂದು ವಿಶ್ಲೇಷಿಸುತ್ತಾರೆ ಬಿಎಂಸಿ ಸದಸ್ಯೆ ಪ್ರೊ.ಎನ್.ನಂದಿನಿ.

'ಈ ಕಿರುಕಾನನವು ಸ್ಥಳೀಯ ಪರಿಸರದ ಮೇಲೆ, ಇಂಗಾಲದ ಚಕ್ರದ ಮೇಲೆ, ಇಂಧನ ಬಳಕೆ ಮೇಲೆ ಬಹಳಷ್ಟು ಪರಿಣಾಮ ಬೀರುತ್ತದೆ. ಮಣ್ಣಿನ ಜೀವವೈವಿಧ್ಯವನ್ನು ಹಾಗೂ ಗುಣಮಟ್ಟವನ್ನು ಸಮೃದ್ಧಗೊಳಿಸುತ್ತಿದೆ. ಹವಾಮಾನ ವೈಪರೀತ್ಯವನ್ನು ತಿಳಿಗೊಳಿಸುತ್ತಿದೆ. ಇಲ್ಲಿನ ಮಣ್ಣು ಕೂಡಾ ಇಂಗಾಲವನ್ನು ಹೀರಿಕೊಳ್ಳಬಲ್ಲದು. ಇಲ್ಲಿ ಮರಗಳು ಬೆಳಕನ್ನು ಬಳಸಿ ಆಹಾರ ತಯಾರಿಸುವ ಕ್ರಿಯೆಯ (ದ್ಯುತಿಸಂಶ್ಲೇಷಣೆ) ವೇಳೆ ಇಂಗಾಲದ ಡಯಾಕ್ಸೈಡ್ ಅನ್ನು ಹೀರಿಕೊಳ್ಳುವ ಮೂಲಕ ಅದನ್ನು ಜೈವಿಕ ಸಾರವನ್ನಾಗಿ ಪರಿವರ್ತಿಸುತ್ತಾ ಬಂದಿವೆ. ತನ್ಮೂಲಕ ವಾತಾವರಣದಲ್ಲಿ ಇಂಗಾಲ ಸಮತೋಲನ ಕಾಯಲು ನೆರವಾಗುತ್ತಾ ಬಂದಿವೆ' ಎಂದು ವಿಶ್ವವಿದ್ಯಾಲಯದ ಪರಿಸರ ವಿಜ್ಞಾನ ವಿಭಾಗದ ಪ್ರಾಧ್ಯಾಪಕಿಯೂ ಆಗಿರುವ ನಂದಿನಿ 'ಪ್ರಜಾವಾಣಿ'ಗೆ ತಿಳಿಸಿದರು.

ವಿಶ್ವವಿದ್ಯಾಲಯದ ಜೈವಿಕ ಉದ್ಯಾನ

ಮುಖ್ಯಾಂಶಗಳು

- ವೃಷಭಾವತಿ ನಾಲೆ ಸುಮಾರು 1 ಕಿ.ಮೀ. ಉದ್ದಕ್ಕೆ ಈ ಬಯೊಪಾರ್ಕ್ ಮೂಲಕ ಹರಿಯುತ್ತದೆ. ಅದರ ದಂಡೆಯ ಮೇಲೆ ಸಮೃದ್ಧವಾದ ಕಿರು ಕಾಡು ಬೆಳೆದಿದ್ದು, ಸಸ್ಯ ಹಾಗೂ ಪ್ರಾಣಿ ಸಂಕುಲಗಳಿಗೆ ನೆಲೆ ಒದಗಿಸಿದೆ.
- ಅಲ್ಲಲ್ಲಿ ನಿರ್ಮಿಸಿರುವ ಚೆಕ್‌ಡ್ಯಾಮ್‌ಗಳು ಮಣ್ಣಿನ ಸವಕಳಿ ತಡೆಯುತ್ತಿವೆ. ಜೊತೆಗೆ ನೆಲದೊಳಗಿನ ಜಲಪೊಟರೆಗಳ ಮರುಪೂರಣಕ್ಕೂ ನೆರವಾಗುತ್ತಿವೆ.
- ಬಯೋ ಪಾರ್ಕ್‌ನಲ್ಲಿ ನೀರಿಂಗಿಸುವುದಕ್ಕೆ ಕೆರೆಯೊಂದನ್ನು ನಿರ್ಮಿಸಲಾಗಿದ್ದು, ಮಳೆಗಾಲದಲ್ಲಿ ಹರಿದುಬರುವ ನೀರು ಭೂಮಿಗೆ ಇಂಗುವಂತೆ ಮಾಡಲು ನೆರವಾಗುತ್ತದೆ. ಇದು 10 ಸಾವಿರದಿಂದ 15 ಸಾವಿರ ಘನ ಮೀಟರ್‌ಗಳಷ್ಟು ನೀರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿದೆ.
- ಇಲ್ಲಿ ಜೇನು ಸಾಕಣೆ ಕೇಂದ್ರವೂ ಇದೆ. ಜೇನ್ನೊಣಗಳ ವೈವಿಧ್ಯ ಹಾಗೂ ಪರಾಗಸ್ಪರ್ಶ ಕ್ರಿಯೆಯಲ್ಲಿ ಅವುಗಳ ನಿರ್ದಿಷ್ಟ ಪಾತ್ರದ ಅಧ್ಯಯನವೂ ಇಲ್ಲಿ ನಡೆಯುತ್ತದೆ.

ಹಕ್ಕಿಗಳ ಕಲರವ– ಚಿಟ್ಟೆಗಳ ರಂಗಿನಾಟ

ಬಯೋಪಾರ್ಕ್ ನೂರಾರು ಹಕ್ಕಿಗಳ ಹಾಗೂ ರಂಗು ರಂಗಿನ ಚಿಟ್ಟೆಗಳ ನೆಲೆವೀಡು.ಇಲ್ಲಿ 150ಕ್ಕೂ ಅಧಿಕ ಪ್ರಭೇದಗಳ ಚಿಟ್ಟೆಗಳು ಕಂಡು ಬರುತ್ತವೆ. ಬಣ್ಣ ಬಣ್ಣದ ಪಾತರಗಿತ್ತಿಗಳು ಗಿಡದಿಂದ ಗಿಡಕ್ಕೆ, ಹೂವಿಂದ ಹೂವಿಗೆ ಹಾರುತ್ತಾ ಮಾಡುವ ಕಸರತ್ತುಗಳು ಇಲ್ಲಿ ಕಣ್ಮನ ಸೆಳೆಯುತ್ತವೆ.

'ಬೇರೆ ಬೇರೆ ಭೌಗೋಳಿಕ ಪ್ರದೇಶಗಳಲ್ಲಿ ಕಂಡುಬರುವ ಜೀವವೈವಿಧ್ಯದ ಸಂರಕ್ಷಣೆಯ ಉದ್ದೇಶದಿಂದಲೇ ಈ ಬಯೊಪಾರ್ಕ್ ಅಭಿವೃದ್ಧಿಪಡಿಸಲಾಗಿದೆ. ನಗರದ ನೂರಾರು ವಿದ್ಯಾರ್ಥಿಗಳಿಗೆ ಹಾಗೂ ಪರಿಸರಾಸಕ್ತರಿಗೆ ತರಬೇತಿ ನೀಡುವುದಕ್ಕೂ ಇದನ್ನು ಪ್ರಯೋಗಾಲಯದಂತೆ ಬಳಸುತ್ತಿದ್ದೇವೆ' ಎಂದು ಪ್ರೊ.ನಂದಿನಿ ತಿಳಿಸಿದರು.

ಇಲ್ಲಿ ಔಷಧೀಯ ಸಸ್ಯಗಳು, ಗಿಡಮೂಲಿಕೆಗಳ ಜೊತೆಗೆ ಪೊದೆಜಾತಿಯ ಗಿಡಗಳು, ಬಳ್ಳಿಗಳನ್ನು ಬೆಳೆಸಲಾಗಿದೆ. ಸದಾ ಹಸಿರು ಕಾಡಿನಲ್ಲಿ ಮಾತ್ರ ಕಂಡುಬರುವ ಸಸ್ಯಗಳನ್ನು ಇಲ್ಲಿನ 100 ಎಕರೆ ಪ್ರದೇಶದಲ್ಲಿ ಬೆಳೆಸಲಾಗಿದೆ. ಚರಕವನ ಮತ್ತು ಶುಶ್ರುತ ವನಗಳು ಔಷಧೀಯ ಸಸ್ಯಪ್ರಭೇದಗಳನ್ನು ಬೆಳೆಸಲಾಗಿದೆ. ಬಿದಿರನ್ನೇ ಬೆಳೆಸಿ ಅವುಗಳನ್ನೇ ಜೈವಿಕ ಬೇಲಿಯಂತೆ ಬಳಸಿರುವುದು ಇದರ ವಿಶೇಷತೆ.

ಅಂಕಿ-ಅಂಶಗಳು

449.74 ಹೆಕ್ಟೇರ್ (1,100 ಎಕರೆ) ಜ್ಞಾನ ಭಾರತಿ ಪ್ರಾಂಗಣದ ಬಯೊ ಪಾರ್ಕ್‌ನ ಅಂದಾಜು ವಿಸ್ತೀರ್ಣ	**54.799** ಟನ್/ ಹೆಕ್ಟೇರ್ ಬಯೊ ಪಾರ್ಕ್‌ನ ಇಂಗಾಲ ಸ್ಥಿರೀಕರಣ ಸಾಮರ್ಥ್ಯ (2012ರಲ್ಲಿ)
64 ಟನ್/ ಹೆಕ್ಟೇರ್ ಬಯೊ ಪಾರ್ಕ್‌ನ ಇಂಗಾಲ ಸ್ಥಿರೀಕರಣ ಸಾಮರ್ಥ್ಯ (2021ರಲ್ಲಿ)	**200.931** ಟನ್/ ಹೆಕ್ಟೇರ್ ಬಯೊಪಾರ್ಕ್‌ನಲ್ಲಿ ಇಂಗಾಲದ ಡೈ ಆಕ್ಸೈಡ್ ಹೀರುವಿಕೆ ಪ್ರಮಾಣ

ಬಡಾವಣೆಯಲ್ಲಿ ನಿರ್ಮಾಣವಾಗಿರುವ ಮಿಯಾವಾಕಿ ಮಾದರಿಯ ಕಿರು ಅರಣ್ಯ

ಖಾಲಿ ಜಾಗದಲ್ಲಿ ರೂಪುಗೊಂಡ ಮಿಯಾವಾಕಿ ಕಿರು ಅರಣ್ಯ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆ.ಪಿ.ನಗರ 9ನೇ ಹಂತದಲ್ಲಿರುವ ರಾಯಲ್ ಪಾರ್ಕ್ ರೆಸಿಡೆನ್ಸಿ ನಿವಾಸಿಗಳು ತಮ್ಮ ಬಡಾವಣೆಯ ಸುತ್ತಲಿನ ಖಾಲಿ ಜಾಗಗಳಲ್ಲಿ ಮಿಯಾವಾಕಿ ಮಾದರಿಯ ಕಿರು ಅರಣ್ಯ ಬೆಳೆಸಿ ಎಲ್ಲರಿಗೂ ಮಾದರಿಯಾಗಿದ್ದಾರೆ.

'ಬಡಾವಣೆಯಲ್ಲಿ ಬಿಡಿಎಗೆ ಸೇರಿದ್ದ 12 ಸಾವಿರ ಚದರ ಅಡಿಯ ಜಾಗ ಖಾಲಿ ಇತ್ತು. ಬಿಡಿಎ ಅನುಮತಿ ಪಡೆದು ಆ ಜಾಗವನ್ನು ಸಮತಟ್ಟು ಮಾಡಿ ಅದರಲ್ಲಿ ಒಂದೂವರೆ ಅಡಿ ಆಳ, 15 ಅಡಿ ಅಗಲ ಹಾಗೂ 70 ಅಡಿ ಉದ್ದದ ಗುಂಡಿ ತೋಡಿಕೊಂಡೆವು. ಪಕ್ಕದ ಉದ್ಯಾನದಲ್ಲಿದ್ದ ಹಸಿರು ಹಾಗೂ ಒಣ ಎಲೆ, ತೆಂಗಿನ ಗರಿ ತಂದು ಹಾಕಿ ಬಳಿಕ ಅದನ್ನು ಮಣ್ಣಿನಿಂದ ಮುಚ್ಚಿದೆವು. ನಂತರ ಧನ್ವಂತರಿ ವನದಿಂದ ಸುಮಾರು 1 ಸಾವಿರ ಸಸ್ಯಗಳನ್ನು ತಂದು ಮೂರು ಅಡಿಗೊಂದರಂತೆ ನೆಟ್ಟು ಮಿಯಾವಾಕಿ ಮಾದರಿಯ ಅರಣ್ಯ ರೂಪಿಸಿದ್ದೇವೆ' ಎಂದು ಬಡಾವಣೆಯ ನಿವಾಸಿ ಚಂದ್ರಶೇಖರ್ ಕಾಕಲ್ 'ಪ್ರಜಾವಾಣಿ'ಗೆ ತಿಳಿಸಿದರು.

'ಎರಡು ವರ್ಷಗಳ ಹಿಂದೆ ಸಣ್ಣ ಜಾಗವೊಂದರಲ್ಲಿ ಸಸಿಗಳನ್ನು ನೆಟ್ಟಿದ್ದೆವು. ಒಂದೇ ವರ್ಷದಲ್ಲಿ ಅದು ಸಮೃದ್ಧವಾಗಿ ಬೆಳೆದು ಹಸಿರು ವಲಯ ಸೃಷ್ಟಿಯಾಯಿತು. ಇದರಿಂದ ಪ್ರೇರೇಪಿತರಾಗಿ ಬಿಡಿಎನ 12 ಸಾವಿರ ಚದರ ಅಡಿ ಜಾಗದಲ್ಲಿ ಗಿಡಗಳನ್ನು ನೆಡಲಾಯಿತು. ಈ ವರ್ಷ ವಿಶ್ವ ಪರಿಸರದ ದಿನದ ಅಂಗವಾಗಿ 2 ಸಾವಿರ ಗಿಡಗಳನ್ನು ನೆಡಲು ಸಿದ್ಧತೆ ಮಾಡಿಕೊಂಡಿದ್ದೇವೆ' ಎಂದರು.

'ಜಪಾನಿನ ಅರಣ್ಯ ತಜ್ಞ ಅಕಿರಾ ಮಿಯಾವಾಕಿ ಅವರು ಈ ಪದ್ಧತಿಯನ್ನು ಮೊದಲು ಪರಿಚಯಿಸಿದರು. ಈ ಮಾದರಿಯಲ್ಲಿ ಗಿಡಗಳನ್ನು ಹತ್ತಿರ ಹತ್ತಿರವಾಗಿ ನೆಡಲಾಗುತ್ತದೆ. ಇವು ಕೆಲವೇ ವರ್ಷಗಳಲ್ಲಿ ಬೆಳೆದು ದಟ್ಟ ಅರಣ್ಯ ರೂಪುಗೊಳ್ಳುತ್ತದೆ. ಇದು ನಗರ ಪ್ರದೇಶಕ್ಕೆ ಸೂಕ್ತವಾದ ವಿಧಾನ' ಎಂದು ತಿಳಿಸಿದರು.

'ಪಾಲಿಕೆಯ ಮಾಜಿ ಸದಸ್ಯ ಸೋಮಶೇಖರ್ ಸಹಕಾರ ನೀಡಿದ್ದಾರೆ. ಅರಣ್ಯದ ಸುತ್ತ ಬೇಲಿ ಹಾಗೂ ಬೇಸಿಗೆಯಲ್ಲಿ ನೀರಿನ ವ್ಯವಸ್ಥೆ ಮಾಡಿಕೊಡುವುದಾಗಿ ಹೇಳಿದ್ದಾರೆ. 30 ವಿಧದ ಔಷಧ, ಹೂವು ಹಾಗೂ ಹಣ್ಣಿನ ಗಿಡಗಳನ್ನು ಬೆಳೆಸಿದ್ದೇವೆ. 'ನಮ್ಮ ರಸ್ತೆ–ನಮ್ಮ ಹೆಮ್ಮೆ' ಅಭಿಯಾನವನ್ನೂ ಆರಂಭಿಸಿದ್ದು ಇದರ ಅಂಗವಾಗಿ ರಸ್ತೆಯ ಅಕ್ಕ ಪಕ್ಕ ಗಿಡಗಳನ್ನು ಬೆಳೆಸಲು ಮುಂದಾಗಿದ್ದೇವೆ' ಎಂದೂ ಮಾಹಿತಿ ನೀಡಿದರು.

'ಶೂನ್ಯ ಕಸ' ಸಂಕಲ್ಪದಲ್ಲಿ ಮಿಷನ್ ದಿಶಾ

• ಗುರು ಪಿ.ಎಸ್.

ಬೆಂಗಳೂರು: ಯಾವುದೇ ಸಮಾರಂಭಗಳಲ್ಲಿ, ಕ್ರೀಡಾಕೂಟ, ಜಾತ್ರೆ ಮುಂತಾದ ಕಾರ್ಯಕ್ರಮಗಳಲ್ಲಿ ಬಳಸಿ ಬಿಸಾಡುವ ಪ್ಲಾಸ್ಟಿಕ್ ತಟ್ಟೆ, ಲೋಟಗಳು ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತವೆ. ಇಂತಹ ಕಡೆಗಳಲ್ಲಿ ತನ್ನ ಸದಸ್ಯರು ಹಾಗೂ ಸ್ವಯಂಸೇವಕರ ಮೂಲಕ 'ಶೂನ್ಯ ಕಸ' ಅಥವಾ ಕಸ ಮುಕ್ತ ಅಭಿಯಾನ ನಡೆಸುವ ಮೂಲಕ ಗಮನ ಸೆಳೆಯುತ್ತಿದೆ 'ಮಿಷನ್ ದಿಶಾ' ತಂಡ.

ಬೇರೆಯವರಿಗೆ 'ಪರಿಸರ ರಕ್ಷಣೆ' ಕುರಿತು ಬೋಧನೆ ಮಾಡುವುದಲ್ಲದೆ, ಅದನ್ನು ತಮ್ಮ ಮನೆಗಳಲ್ಲಿಯೂ ಅಚ್ಚುಕಟ್ಟಾಗಿ ಪಾಲಿಸುತ್ತಿದ್ದಾರೆ ತಂಡದ 15ಕ್ಕೂ ಹೆಚ್ಚು ಸದಸ್ಯರು.

ಏನಿದು ಶೂನ್ಯ ಕಸ ಅಭಿಯಾನ?: ತಲಘಟ್ಟಪುರ ಪೊಲೀಸರು ವರ್ಷದ ಹಿಂದೆ ಸ್ಥಳೀಯರಿಗಾಗಿ ಕ್ರಿಕೆಟ್ ಟೂರ್ನಿ ಆಯೋಜಿಸಿದ್ದರು. ಈ ಟೂರ್ನಿ ಸಂಪೂರ್ಣವಾಗಿ ಕಸ ಮುಕ್ತವಾಗಿ ನಡೆಯಬೇಕು ಎಂಬುದನ್ನು ಸವಾಲಾಗಿ ಸ್ವೀಕರಿಸಿದ ಮಿಷನ್ ದಿಶಾ ತಂಡ, 'ಪ್ಲೇಟ್ ಬ್ಯಾಂಕ್'ನಿಂದ 300 ಸ್ಟೀಲ್ ತಟ್ಟೆ, ಚಮಚ ಹಾಗೂ ಜಗ್ಗುಗಳನ್ನು ತೆಗೆದುಕೊಂಡು ಹೋಗಿ ಬಳಸಲು ನೀಡಿತ್ತು. ಎರಡು ದಿನದಲ್ಲಿ ಸುಮಾರು 400 ಜನ 6 ಬಾರಿ ಇವುಗಳನ್ನು ಬಳಸಿದ್ದರು. ಇದರಿಂದ 2,400ಕ್ಕೂ ಹೆಚ್ಚು ಬಳಸಿ ಬಿಸಾಡುವ ತಟ್ಟೆ, ಲೋಟಗಳು ಕಸದ ಬುಟ್ಟಿ ಸೇರುವುದು ತಪ್ಪಿತ್ತು. ಟಿಶ್ಯೂ ಪೇಪರ್ ಬಳಸುವುದನ್ನೂ ತಂಡ ತಡೆದಿತ್ತು. ಇದೇ ರೀತಿ ಎಲ್ಲ ಸಮಾರಂಭಗಳಲ್ಲಿಯೂ ಸ್ಟೀಲ್ ತಟ್ಟೆ ಲೋಟವನ್ನು ಬಳಸುವುದನ್ನೇ ಈ ತಂಡ ಉತ್ತೇಜಿಸುತ್ತಿದೆ.

'ಬಿಬಿಎಂಪಿ, ಪೊಲೀಸರು, ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಸ್ವಯಂ ಸೇವಕರು ಒಗ್ಗೂಡಿ ಕೆಲಸ ಮಾಡಿ, ಇಚ್ಛಾಶಕ್ತಿ ಪ್ರದರ್ಶಿಸಿದರೆ ಯಾವುದೇ ಸಮಾರಂಭವನ್ನೂ ಕಸ ಮುಕ್ತವಾಗಿಸಬಹುದು. ಈ ಪರಿಕಲ್ಪನೆಯನ್ನು ಅನೇಕ ಬಾರಿ ನಾವು ಅನುಷ್ಠಾನ ಮಾಡಿದ್ದೇವೆ' ಎಂದು ತಂಡದ ಸದಸ್ಯೆ ಚೈತನ್ಯ ಸುಬ್ರಹ್ಮಣ್ಯ 'ಪ್ರಜಾವಾಣಿ'ಗೆ ತಿಳಿಸಿದರು.

ಜೈವಿಕ ದ್ರವ: ಪರಿಸರ ರಕ್ಷಣೆ ಕುರಿತು ಕೇವಲ ಬೋಧನೆ ಮಾಡುವುದಲ್ಲದೆ, ಹೇಳಿದ್ದನ್ನು ಸ್ವತಃ ಪಾಲಿಸುತ್ತಿದ್ದಾರೆ ತಂಡದ ಸದಸ್ಯರು.

'ಜನರು ಪಾತ್ರೆ ತೊಳೆಯಲು, ಬಟ್ಟೆ ಒಗೆಯಲು ಮತ್ತು ನೆಲ ಒರೆಸಲು ಅನೇಕ ವಾಷಿಂಗ್ ಪೌಡರ್, ಸಾಬೂನುಗಳು, ಮಾರ್ಜಕಗಳನ್ನು ಬಳಸುತ್ತಾರೆ. ಇವುಗಳಿಗೆ ಹೆಚ್ಚು ರಾಸಾಯನಿಕಗಳನ್ನು ಬಳಸಿರುತ್ತಾರೆ. ಅಲ್ಲದೆ, ಎಷ್ಟೇ ಜಾಗೃತಿ ವಹಿಸಿದ್ದರೂ ಈ ರಾಸಾಯನಿಕ ಅಂಶ ಆಹಾರದಲ್ಲಿಯೂ ಸೇರಿರುತ್ತದೆ. ಅದರ ಬದಲು ನೈಸರ್ಗಿಕವಾಗಿ ದೊರೆಯುವಂತಹ ಪದಾರ್ಥಗಳಿಂದಲೇ 'ವಾಷಿಂಗ್ ಲಿಕ್ವಿಡ್' ತಯಾರಿಸಿ ಬಳಸುತ್ತಿದ್ದೇವೆ' ಎಂದು ಚೈತನ್ಯ ಹೇಳಿದರು.

ಕಿತ್ತಳೆ, ನಿಂಬೆಹಣ್ಣುಗಳ ಸಿಪ್ಪೆ, ಅಂಟವಾಳ ಕಾಯಿ ಹಾಗೂ ಬೆಲ್ಲ ಬಳಸಿ ಈ ದ್ರವವನ್ನು ತಯಾರಿಸಬಹುದು. ಮನೆಯು ಟೈಲ್ಸ್, ಶೌಚಾಲಯ ಸ್ವಚ್ಛಗೊಳಿಸಲು ಮತ್ತು ಪಾತ್ರೆ ತೊಳೆಯಲೂ ಇದನ್ನು ಬಳಸಬಹುದಾಗಿದೆ. ತಂಡದ ಸದಸ್ಯರೆಲ್ಲ ಇದೇ ಕ್ರಮ ಅನುಸರಿಸುತ್ತಿದ್ದು, ಹಲವರಿಗೆ ಈ ಕುರಿತು ಜಾಗೃತಿಯನ್ನೂ ಮೂಡಿಸುತ್ತಿದ್ದೇವೆ ಎಂದು ಅವರು ಹೇಳಿದರು.

ರಾಸಾಯನಿಕಯುಕ್ತ 'ವಾಷಿಂಗ್ ಲಿಕ್ವಿಡ್' ಬದಲು 'ಜೈವಿಕ ದ್ರವ' ತಯಾರಿಕೆ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡುತ್ತಿರುವ ಮಿಷನ್ ದಿಶಾ ತಂಡದ ಸದಸ್ಯರು

ಮತಿಹೀನ ನಿರ್ಧಾರ: ಎಚ್‌ಡಿಕೆ ಟೀಕೆ

ಬೆಂಗಳೂರು: ರಾಜ್ಯದಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಗಳನ್ನು ರದ್ದುಪಡಿಸಿರುವ ಸಂದರ್ಭದಲ್ಲೇ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಲು ಮುಂದಾಗಿರುವುದು ಮತಿಹೀನ ನಿರ್ಧಾರ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಟೀಕಿಸಿದ್ದಾರೆ.

ಈ ಕುರಿತು ಶುಕ್ರವಾರ ಸರಣಿ ಟ್ವೀಟ್ ಮಾಡಿರುವ ಅವರು, 'ಇದು ರಾಜ್ಯ ಸರ್ಕಾರದ ಬುದ್ಧಿಭ್ರಮಣೆಯ ನಿರ್ಧಾರ. ಶಿಕ್ಷಣ ಸಚಿವರ ಐಲು–ಪೈಲು ನಿರ್ಧಾರದಿಂದ ರಾಜ್ಯದ ಜನರು ಹಾದಿ, ಬೀದಿಗಳಲ್ಲಿ ನಗುವಂತಾಗಿದೆ. ಎಸ್ಸೆಸ್ಸೆಲ್ಸಿ ಮಕ್ಕಳಿಗೆ ಎರಡು ಪರೀಕ್ಷೆ ನಡೆಸುವ ಮೊಂಡುತನವನ್ನು ಸರ್ಕಾರ ಕೈಬಿಡಬೇಕು' ಎಂದು ಆಗ್ರಹಿಸಿದ್ದಾರೆ.

'ಶಿಕ್ಷಣ ಸಚಿವರು ಮಕ್ಕಳ ಜೀವದ ಜತೆ ಚೆಲ್ಲಾಟವಾಡುವ ರೀತಿಯಲ್ಲಿ ಕೈಗೊಂಡಿರುವ ಎಡಬಿಡಂಗಿತನದ ನಿರ್ಧಾರಕ್ಕೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಕಡಿವಾಣ ಹಾಕಬೇಕು. ಪಿಯುಸಿ ಮಕ್ಕಳಿಗೆ ಪರೀಕ್ಷೆ ಇಲ್ಲದಿದ್ದರೆ ಅದೇ ನಿರ್ಧಾರ ಎಸ್ಸೆಸ್ಸೆಲ್ಸಿ ಮಕ್ಕಳಿಗೂ ಅನ್ವಯ ಆಗಬೇಕು' ಎಂದು ಒತ್ತಾಯಿಸಿದ್ದಾರೆ.

RASHTRIYA MILITARY SCHOOL BENGALURU DIRECT RECRUITMENT TO GP 'C' POST ANNOUNCEMENT OF WRITTEN EXAM RESULTS

Ref Advt dt 09-15 Jan 2021 published in Employment News for Direct Rect to Group 'C' Posts: Rashtriya Military School, Bengaluru. Merit List of Candidates of Written Examination conducted on 21 Mar 2021 will be available on RMS Bengaluru website: www.rashtriyamilitaryschools.edu.in on 05 Jun 2021. Trade/Skill test will be conducted at RMS Bengaluru once the situation of Covid-19 improves. Date of skill test will be updated on school website. Follow our website for latest updates.

'ಹಣ, ಕೊಡುಗೆ ಸ್ವೀಕಾರ ಸ್ಥಗಿತ'

ಬೆಂಗಳೂರು: ಕೋವಿಡ್ ಎರಡನೇ ಅಲೆಯನ್ನು ನಿಯಂತ್ರಿಸಲು ರಾಜ್ಯ ಸರ್ಕಾರ ಜಾರಿಗೊಳಿಸಿರುವ ಲಾಕ್‌ಡೌನ್‌ನಿಂದಾಗಿ ಸಂಕಷ್ಟಕ್ಕೀಡಾದ ಸಾವಿರಾರು ಜನರಿಗೆ, ಚಿತ್ರರಂಗದ ಕಲಾವಿದರು ಹಾಗೂ ಕಾರ್ಮಿಕರಿಗೆ ನಟ ಉಪೇಂದ್ರ ನೆರವಾಗಿದ್ದರು. ಇವರ ಈ ಕಾರ್ಯಕ್ಕೆ ಹಲವು ನಟ, ನಟಿಯರು ಹಾಗೂ ಸಾಮಾನ್ಯ ಜನರೂ ಕೈಜೋಡಿಸಿದ್ದರು. ಇದೀಗ ಯಾವುದೇ ಹಣ ಹಾಗೂ ಕೊಡುಗೆಗಳನ್ನು ನೀಡಬೇಡಿ ಎಂದು ಉಪ್ಪಿ ಫೌಂಡೇಷನ್ ಪರವಾಗಿ ಉಪೇಂದ್ರ ಕೇಳಿಕೊಂಡಿದ್ದಾರೆ.

ಈ ಕುರಿತು ಟ್ವಿಟರ್‌ನಲ್ಲಿ ಪೋಸ್ಟ್ ಮಾಡಿರುವ ಉಪೇಂದ್ರ, 'ಇಲ್ಲಿಯವರೆಗೂ ನಾವು ಯಾರನ್ನೂ ಏನೂ ಕೇಳದಿದ್ದರೂ ತುಂಬಾ ಹೃದಯವಂತರು ಸಹಾಯ ಮಾಡಿದ್ದಾರೆ. ಸಹೃದಯತೆ ಮೆರೆದ ತಮಗೆಲ್ಲರಿಗೂ ಧನ್ಯವಾದಗಳು' ಎಂದಿದ್ದಾರೆ.

'ಲಸಿಕೆ ಕೇಳಿದ್ದಕ್ಕೆ ಪೊಲೀಸರಿಂದ ಕಿರುಕುಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಲಸಿಕೆ ದುಬಾರಿ ಬೆಲೆಗೆ ಮಾರಾಟ ಮಾಡುತ್ತಿದ್ದ ಬಗ್ಗೆ ಆಡಿಯೊ ಸಮೇತ ದೂರು ಕೊಟ್ಟಿದ್ದಕ್ಕೆ ಗಿರಿನಗರ ಹಾಗೂ ಕುಮಾರಸ್ವಾಮಿ ಲೇಔಟ್ ಠಾಣೆ ಪೊಲೀಸರು, ವಿನಾಕಾರಣ ನೋಟಿಸ್ ನೀಡಿ ಕಿರುಕುಳ ನೀಡುತ್ತಿದ್ದಾರೆ' ಎಂದು ಸಾಮಾಜಿಕ ಕಾರ್ಯಕರ್ತ ಎಚ್.ಎಂ. ವೆಂಕಟೇಶ್ ಆರೋಪಿಸಿದ್ದಾರೆ.

'ಹೊಸಕೆರೆಹಳ್ಳಿಯ ಎ.ವಿ. ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯವರು ಕೋವಿಡ್ ಲಸಿಕೆಗೆ ₹ 900 ಪಡೆದು, ಅದರಲ್ಲಿ ಶಾಸಕ ಎಲ್.ಎ.ರವಿ ಸುಬ್ರಹ್ಮಣ್ಯ ಅವರಿಗೆ ₹ 700 ನೀಡುತ್ತಿದ್ದಾರೆ' ಎಂದು ವೆಂಕಟೇಶ್ ಆರೋಪಿಸಿದ್ದರು. 'ಆಸ್ಪತ್ರೆ ಬಗ್ಗೆ ಅಪಪ್ರಚಾರ ಮಾಡುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳಿ' ಎಂದು ಒತ್ತಾಯಿಸಿ ಆಡಳಿತ ಮಂಡಳಿಯವರು ಗಿರಿನಗರ ಠಾಣೆಗೆ ದೂರು ನೀಡಿದ್ದಾರೆ.

ದೂರಿನ ತನಿಖೆ ಆರಂಭಿಸಿರುವ ಪೊಲೀಸರು, ವೆಂಕಟೇಶ್ ಅವರಿಗೆ ವಿಚಾರಣೆಗೆ ಬರುವಂತೆ ನೋಟಿಸ್ ನೀಡಿದ್ದಾರೆ. ಈ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿರುವ ವೆಂಕಟೇಶ್ ವಿಡಿಯೊ ಹರಿಬಿಟ್ಟಿದ್ದಾರೆ.

'ಸರ್ಕಾರದಿಂದ ಉಚಿತವಾಗಿ ಜನರಿಗೆ ನೀಡಬೇಕಾದ ಲಸಿಕೆಯನ್ನು ಎ.ವಿ. ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಮೂಲಕ ಮಾರಲಾಗುತ್ತಿತ್ತು. ಅದರಲ್ಲಿ ಸ್ಥಳೀಯ ಶಾಸಕರಿಗೂ ಹಣ ನೀಡುತ್ತಿದ್ದ ಬಗ್ಗೆ ಆಸ್ಪತ್ರೆ ಸಿಬ್ಬಂದಿಯೇ ಹೇಳಿದ್ದರು. ಅದರ ಆಡಿಯೊ ಸಮೇತ ಕಮಿಷನರ್ ಅವರಿಗೆ ದೂರು ನೀಡಿದ್ದೆ' ಎಂದು ವಿಡಿಯೊದಲ್ಲಿ ವೆಂಕಟೇಶ್ ಹೇಳಿದ್ದಾರೆ.

'ರಕ್ಷಣೆ ಕೋರಿ ಇ–ಮೇಲ್ ಮೂಲಕ ಗಿರಿನಗರ ಠಾಣೆಗೆ ದೂರು ನೀಡಿದ್ದೆ. ಯಾವುದೇ ಕ್ರಮ ಕೈಗೊಳ್ಳದ ಪೊಲೀಸರು, ಆಸ್ಪತ್ರೆಯವರು ದೂರು ನೀಡುತ್ತಿದ್ದಂತೆ ನನ್ನ ವಿರುದ್ಧವೇ ತನಿಖೆ ಆರಂಭಿಸಿದ್ದಾರೆ. ಖಾಸಗಿ ವಾಹನದಲ್ಲಿ ಮನೆಗೆ ಬಂದು ನೋಟಿಸ್ ನೀಡಿದ್ದಾರೆ. ಇ–ಮೇಲ್ ಮೂಲಕ ದೂರು ಕಳುಹಿಸಿದ್ದು, ಈ ಸಂಗತಿ ದಕ್ಷಿಣ ವಿಭಾಗದ ಡಿಸಿಪಿ ಅವರಿಗೂ ಗೊತ್ತಿದೆ. ಅಷ್ಟಾದರೂ ಪೊಲೀಸರು, ಪುನಃ ನೋಟಿಸ್ ನೀಡಿ ಕಿರುಕುಳ ನೀಡುತ್ತಿದ್ದಾರೆ' ಎಂದು ವೆಂಕಟೇಶ್ ಆರೋಪಿಸಿದ್ದಾರೆ.

'ಕಾಣದ ಕೈಗಳ ಒತ್ತಡದಿಂದಾಗಿ ನನ್ನ ವಿರುದ್ಧ ಷಡ್ಯಂತ್ರ ನಡೆಸಲಾಗುತ್ತಿದೆ. ನಾನು ಕೋವಿಡ್ ಲಸಿಕೆ ಕೇಳಿದ್ದೆ ತಪ್ಪಾಯ್ತಾ' ಎಂದೂ ಅವರು ಪ್ರಶ್ನಿಸಿದ್ದಾರೆ.

'ಪೊಲೀಸರ ತನಿಖೆಗೆ ಸಹಕಾರವಿದೆ. ಆದರೆ, ಲಸಿಕೆ ಮಾರಾಟ ಹಗರಣ ಹೇಗಾಯಿತು? ಅದರಲ್ಲಿ ಯಾರೆಲ್ಲ ಇದ್ದಾರೆ ? ಎಂಬುದರ ಬಗ್ಗೆ ಜನರಿಗೆ ಸತ್ಯಾಂಶ ತಿಳಿಯಬೇಕು. ಈ ಬಗ್ಗೆ ನ್ಯಾಯಾಂಗ ತನಿಖೆ ಆಗಬೇಕು ಎಂದು ಜನರೆಲ್ಲರೂ ಒತ್ತಾಯಿಸಬೇಕು' ಎಂದೂ ವೆಂಕಟೇಶ್ ಹೇಳಿದ್ದಾರೆ.

ಮೈಸೂರು ಜಿಲ್ಲಾಧಿಕಾರಿ ನಿವಾಸದಲ್ಲಿ ಈಜುಕೊಳ–ಜಿಮ್ ನಿರ್ಮಾಣ

ತನಿಖೆಯ ಬೆನ್ನಿಗೇ ಹೊರಬಿದ್ದವು ಹೊಸ ಚಿತ್ರಗಳು

ಪ್ರಜಾವಾಣಿ ವಾರ್ತೆ

ಮೈಸೂರು: ಪಾರಂಪರಿಕ ಕಟ್ಟಡವಾದ ಮೈಸೂರು ಜಿಲ್ಲಾಧಿಕಾರಿ ನಿವಾಸದಲ್ಲಿ ₹ 50 ಲಕ್ಷ ವೆಚ್ಚದಲ್ಲಿ ಈಜುಕೊಳ ಹಾಗೂ ಜಿಮ್ ನಿರ್ಮಿಸಿರುವ ವಿಷಯವಾಗಿ, ಪ್ರಾದೇಶಿಕ ಆಯುಕ್ತರು ತನಿಖೆ ಆರಂಭಿಸಿದ ಬೆನ್ನಿನಲ್ಲೇ, ಜಿಲ್ಲಾಧಿಕಾರಿ ನಿವಾಸದ ಆವರಣದಲ್ಲಿನ ಅತ್ಯಾಧುನಿಕ ಐಷಾರಾಮಿ ಈಜುಕೊಳದ ಚಿತ್ರಗಳು ಶುಕ್ರವಾರ ರಾತ್ರಿ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿವೆ.

ಇದುವರೆಗೂ ನಿರ್ಮಾಣ ಹಂತದಲ್ಲಿದ್ದ ಹಾಗೂ ನಿರ್ಮಾಣಗೊಂಡಿದ್ದ ಈಜುಕೊಳದ ಸುತ್ತಲೂ ಕವರಿಂಗ್ ಮಾಡಿದ್ದ ಚಿತ್ರಗಳಷ್ಟೇ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದವು.

ಕೋವಿಡ್ ನಿರ್ವಹಣೆಗೆ ಸಂಬಂಧಿಸಿದಂತೆ ಸಂಸದ ಪ್ರತಾಪ ಸಿಂಹ ಬಹಿರಂಗವಾಗಿಯೇ ಲೆಕ್ಕ ಕೇಳಿದ ಮೂರ್ನಾಲ್ಕು ತಾಸಿನೊಳಗೇ ಪ್ರಕಟಣೆ ಬಿಡುಗಡೆ ಮಾಡಿದ್ದ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ, ಈಜುಕೊಳ ಹಾಗೂ ಜಿಮ್ ನಿರ್ಮಾಣದ ಬಗ್ಗೆ ಇಲ್ಲಿಯವರೆಗೂ ತುಟಿ ಬಿಚ್ಚದಿರುವುದಕ್ಕೆ ಟೀಕೆಗಳು ವ್ಯಕ್ತವಾಗಿವೆ.

ಜಿಲ್ಲಾಧಿಕಾರಿ ನಿವಾಸದಲ್ಲಿ ನಿಯಮಾವಳಿಗಳನ್ನು ಗಾಳಿಗೆ ತೂರಿ ಈಜುಕೊಳ ನಿರ್ಮಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಸ್ಪಷ್ಟನೆ ಕೊಡಿ ಎಂದು ಪತ್ರಿಕಾಗೋಷ್ಠಿ ಮೂಲಕ ರೋಹಿಣಿ ಸಿಂಧೂರಿ ಅವರನ್ನು ಆಗ್ರಹಿಸಿದ್ದ ಮಾಜಿ ಕಾರ್ಪೊರೇಟರ್ ಕೆ.ವಿ.ಮಲ್ಲೇಶ್ ಈ ಹೊಸ ಚಿತ್ರಗಳನ್ನು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಅಪ್‌ಲೋಡ್ ಮಾಡಿದ್ದು, ರೋಹಿಣಿ ನಡೆಗೆ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

ಈಜುಕೊಳದ ಚಿತ್ರ

ತರಕಾರಿಗಳು, ಹಣ್ಣುಗಳು ಮತ್ತು ದಿನಸಿ ಸಾಮಗ್ರಿಗಳು

ಈಗ ಪ್ರತಿದಿನ

@OTP123

OTP123 ಕೊಡುಗೆಗಳಿಗಾಗಿ ನಿಮ್ಮ ಆಪ್ ಅನ್ನು ಪ್ರತಿದಿನ ಪರಿಶೀಲಿಸಿ

otp xpress

ಉಚಿತ ಹೋಮ್ ಡೆಲಿವರಿ

ಕನಿಷ್ಠ ಬಿಲ್ಲಿಂಗ್ ಮೌಲ್ಯವಿಲ್ಲ

ಯಾವುದೇ ಷರತ್ತುಗಳಿಲ್ಲ

*T&C Apply. Shop in Multiples of INR 100. Get 50% Cashback Coupon. Offer not applicable for bulk purchase, applies only for personal consumption.

ತ್ವರಿತ 50% ಕ್ಯಾಶ್ ಬ್ಯಾಕ್

ತರಕಾರಿಗಳು, ಹಣ್ಣು ಮತ್ತು ದಿನಸಿ ಸಾಮಗ್ರಿಗಳ ಮೇಲೆ

ನಿಮ್ಮ ಮುಂದಿನ ಖರೀದಿಯ ಮೇಲೆ, ಮರುದಿನದಿಂದಲೇ 100% ರಿಡೀಮ್ ಮಾಡಿ.

OTP123

ಈರುಳ್ಳಿ ₹1/Kg

ಟೊಮ್ಯಾಟೋ ₹2/Kg

ಆಲೂಗಡ್ಡೆ ₹3/Kg

ಬೆಂಗಳೂರಿಗರಿಗೆ ಹಿಂದೆಂದೂ ಇಲ್ಲದ ಅನುಕೂಲ

ತರಕಾರಿಗಳು ಮತ್ತು ದಿನಸಿಗಳು

ಕೇವಲ OTP ಮಾಡಿ! ನಮಗೆ ಕರೆ ಮಾಡಿ 080-4697 1001

www.otpxpress.in

@ ನಿಮ್ಮ ಬೆರಳಂಚಿನಲ್ಲೇ!

OTP ಎಕ್ಸ್‌ಪ್ರೆಸ್ ಆಪ್ ಡೌನ್‌ಲೋಡ್ ಮಾಡಿ

GET IT ON Google Play

Download on the App Store

Offer Exclusively on OTPXpress App

‘ಶಿಲ್ಪಾ ನಾಗ್ ನನಗೆ ರಾಜೀನಾಮೆ ಸಲ್ಲಿಸಿಲ್ಲ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಮೈಸೂರು ಮಹಾನಗರ ಪಾಲಿಕೆಯ ಆಯುಕ್ತರಾದ ಶಿಲ್ಪಾ ನಾಗ್, ನನಗೆ ರಾಜೀನಾಮೆ ಸಲ್ಲಿಸಿಲ್ಲ’ ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಶುಕ್ರವಾರ ಇಲ್ಲಿ ತಿಳಿಸಿದರು.

‘ರಾಜೀನಾಮೆಯ ವಿಷಯ ಗೊತ್ತಿಲ್ಲ; ಕೋವಿಡ್ ನಿರ್ವಹಣೆಯ ಸಭೆ ನಡೆಸಲಷ್ಟೇ ಇಲ್ಲಿಗೆ ಬಂದಿದ್ದೇನೆ’ ಎಂದು ಅವರು ಹೇಳಿದರು.

ಮೈಸೂರಿನಲ್ಲಿ ಅಧಿಕಾರಿಗಳ ನಡುವೆ ಗೊಂದಲ ಇರುವುದು ನಿಜ. ಬೆಂಗಳೂರಿಗೆ ಹೋದ ಕೂಡಲೇ ಅದನ್ನು ಸರಿಪಡಿಸುತ್ತೇನೆ
ಬಿ.ಎಸ್. ಯಡಿಯೂರಪ್ಪ, ಮುಖ್ಯಮಂತ್ರಿ

ಆರೋಪ– ಪ್ರತ್ಯಾರೋಪ ● ಚಾಮುಂಡೇಶ್ವರಿ ಮಡಿಲಿಗೆ ಹಾಕಿದ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್

ಅಧಿಕಾರಿಗಳ ಮುಂದುವರಿದ ಜಟಾಪಟಿ

‘ದುರಹಂಕಾರದಿಂದ ಇಡೀ ವ್ಯವಸ್ಥೆಗೆ ಧಕ್ಕೆ’

ಪ್ರಜಾವಾಣಿ ವಾರ್ತೆ

ಮೈಸೂರು: ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ವಿರುದ್ಧ ಶುಕ್ರವಾರ ಮತ್ತೆ ಆಕ್ರೋಶ ಹೊರಹಾಕಿರುವ ಮೈಸೂರು ಮಹಾನಗರ ಪಾಲಿಕೆ ಆಯುಕ್ತೆ ಶಿಲ್ಪಾನಾಗ್, ಒಬ್ಬರ ಅಹಂಕಾರದಿಂದ ಇಡೀ ವ್ಯವಸ್ಥೆ ಹದಗೆಡಬಾರದು ಎಂಬ ವಿಚಾರ ಹೇಳಲು ತಾವು ರಾಜೀನಾಮೆ ನಿರ್ಧಾರ ತೆಗೆದುಕೊಂಡಿದ್ದು, ತಪ್ಪು ಮಾಡಿದ್ದರೆ ಕ್ಷಮಿಸುವಂತೆ ಹೇಳಿದರು.

ಮೈಸೂರು ನಾಗರಿಕರ ವೇದಿಕೆ ವತಿಯಿಂದ ಸುತ್ತೂರು ಶಾಖಾ ಮಠದಲ್ಲಿ ಶುಕ್ರವಾರ ನಡೆದ ಔಷಧಿ ಕಿಟ್ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಕೆಲಸ ನಡೆಯುತ್ತಿದ್ದರೂ ನಡೆಯುತ್ತಿಲ್ಲ ಎಂಬುದನ್ನು ಬಿಂಬಿಸಿ, ದಿನವೂ ನೋಟಿಸ್ ನೀಡುತ್ತಿದ್ದಾರೆ. ಎಲ್ಲರಲ್ಲಿ ಭಯದ ವಾತಾವರಣ ನಿರ್ಮಿಸಿ, ಅನುಮಾನ ವ್ಯಕ್ತಪಡಿಸುವುದು ಸರಿಯಲ್ಲ’ ಎಂದರು.

ಕಾರ್ಯಕ್ರಮಕ್ಕೂ ಮುನ್ನ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯ ಆಶೀರ್ವಾದ ಪಡೆದ ಶಿಲ್ಪಾನಾಗ್, ನಡೆದಿರುವ ವಿಚಾರವನ್ನು ಹೇಳಿಕೊಂಡರು. ಈ ಸಂದರ್ಭದಲ್ಲಿ ಸಚಿವ ಎಸ್.ಟಿ.ಸೋಮಶೇಖರ್, ಸಂಸದ ಪ್ರತಾಪಸಿಂಹ, ಶಾಸಕ ಎಸ್.ಎ. ರಾಮದಾಸ್ ಸೇರಿದಂತೆ ಹಲವು ಜನಪ್ರತಿನಿಧಿಗಳು ಇದ್ದರು.

ಇಷ್ಟೊಂದು ಅಹಂಕಾರ ಇರಬಾರದು. ತಾನು ಮಾಡಿದ್ದೇ ಸರಿ, ಎಲ್ಲವೂ ತನ್ನಿಂದಲೇ ಆಗಬೇಕು ಎಂಬ ಸಮರ್ಥನೆ ಸರಿಯಲ್ಲ. ಪ್ರಶಂಸೆ, ಟೀಕೆಗಳನ್ನು ಸಮನಾಗಿ ಸ್ವೀಕರಿಸಬೇಕು
ಶಿಲ್ಪಾ ನಾಗ್
ಪಾಲಿಕೆ ಆಯುಕ್ತರು

‘ವ್ಯವಸ್ಥೆ ಮೀರಿ ಮಾತಾಡಬಾರದು’

ಮೈಸೂರು: ‘ಎಲ್ಲದಕ್ಕೂ ಒಂದು ವ್ಯವಸ್ಥೆ, ಕ್ರಮ ಎಂಬುದು ಇರುತ್ತದೆ. ಒಂದು ವೇದಿಕೆ ಹಾಗೂ ಹುದ್ದೆಯ ಶ್ರೇಣಿ ಇರುತ್ತದೆ. ಅಲ್ಲಿ ಹೇಳಿಕೊಳ್ಳಬೇಕೇ ಹೊರತು, ಆ ವ್ಯವಸ್ಥೆ ಮೀರಿ ಮಾತನಾಡಬಾರದು’ ಎಂದು ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ, ಶಿಲ್ಪಾ ನಾಗ್‌ಗೆ ತಿರುಗೇಟು ನೀಡಿದರು.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಯಡಿ ಬಂದ ₹ 12 ಕೋಟಿ ಖರ್ಚಿನ ಬಗ್ಗೆ ಮಾಹಿತಿ ಕೇಳಿದ್ದು ತಪ್ಪೇ? ಆ ಬಗ್ಗೆಯಾಗಲೀ, ಪಾಲಿಕೆಯ ವಾರ್ಡ್‌ಗಳಲ್ಲಿನ ಕೋವಿಡ್ ಪ್ರಕರಣಗಳ ಬಗ್ಗೆಯಾಗಲೀ ಅವರು ಸರಿಯಾದ ಮಾಹಿತಿ ಕೊಟ್ಟಿಲ್ಲ’ ಎಂದರು. ‘ಅಷ್ಟಕ್ಕೂ ಅವರಿಗೆ ಉತ್ತರ ಕೊಡುವುದು ನನ್ನ ಜವಾಬ್ದಾರಿ ಅಲ್ಲ. ಸರ್ಕಾರಕ್ಕೆ ವರದಿ ನೀಡುತ್ತೇನೆ. ಮುಖ್ಯ ಕಾರ್ಯದರ್ಶಿಯ ಗಮನಕ್ಕೂ ತಂದಿದ್ದೇನೆ’ ಎಂದರು.

ಶಿಲ್ಪಾನಾಗ್ ಫೆ. 15ರಂದು ಪಾಲಿಕೆ ಆಯುಕ್ತರಾಗಿ ಬಂದರು. ಇತ್ತೀಚಿನವರೆಗೆ ಯಾವುದೇ ಸಮಸ್ಯೆ ಇರಲಿಲ್ಲ. ಕಳೆದ 15 ದಿನಗಳಲ್ಲಿ ಮಾತ್ರ ಏಕೆ ಸಮಸ್ಯೆ ಉದ್ಭವಿಸಿದೆ?
ರೋಹಿಣಿ ಸಿಂಧೂರಿ, ಜಿಲ್ಲಾಧಿಕಾರಿ

‘ಅಧಿಕಾರಿಗಳ ಕಿತ್ತಾಟ ನಿಲ್ಲಿಸಿ’

ಬೆಂಗಳೂರು: ಮೈಸೂರಿನಲ್ಲಿ ನಡೆಯುತ್ತಿರುವ ಐಎಎಸ್ ಅಧಿಕಾರಿಗಳ ಕಿತ್ತಾಟ ನಿಲ್ಲಿಸಲು ರಾಜ್ಯ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆಗ್ರಹಿಸಿದ್ದಾರೆ.

ಈ ಕುರಿತು ಶುಕ್ರವಾರ ಟ್ವೀಟ್ ಮಾಡಿರುವ ಅವರು, ‘ಅಧಿಕಾರಿಗಳ ಬೀದಿ ಜಗಳದಿಂದ ರಾಷ್ಟ್ರ ಮಟ್ಟದಲ್ಲಿ ರಾಜ್ಯದ ಮಾನ ಹರಾಜಾಗುವ ಅಪಾಯವಿದೆ. ಈಗಿನ ಸ್ಥಿತಿ ನೋಡಿದರೆ ರಾಜ್ಯದಲ್ಲಿ ಸರ್ಕಾರ ಇದೆಯೊ? ಇಲ್ಲವೊ? ಎಂಬ ಅನುಮಾನ ಮೂಡಿದೆ. ಇಂತಹ ಸನ್ನಿವೇಶದಲ್ಲಿ ಮುಖ್ಯಮಂತ್ರಿ ಮತ್ತು ಮುಖ್ಯ ಕಾರ್ಯದರ್ಶಿ ಏನು ಮಾಡುತ್ತಿದ್ದಾರೆ’ ಎಂದು ಪ್ರಶ್ನಿಸಿದ್ದಾರೆ.

‘ಜಗಳಕ್ಕೆ ಇಳಿದಿರುವ ಇಬ್ಬರ ವಿರುದ್ಧವೂ ಹಣ ದುರ್ಬಳಕೆ ಆರೋಪಗಳಿವೆ. ಈ ಬಗ್ಗೆ ಸರ್ಕಾರ ಕಂಡೂ ಕಾಣದಂತೆ ಇರುವುದೇಕೆ’ ಎಂದು ಕೇಳಿದ್ದಾರೆ.

‘ಯಥಾ ರಾಜಾ, ತಥಾ ಅಧಿಕಾರಿ’

ದಾವಣಗೆರೆ: ‘ಯಥಾ ರಾಜಾ, ತಥಾ ಪ್ರಜಾ;ಯಥಾ ರಾಜಾ, ತಥಾ ಅಧಿಕಾರಿ...’

ಮೈಸೂರಿನಲ್ಲಿ ನಡೆಯುತ್ತಿರುವ ಐಎಎಸ್ ಅಧಿಕಾರಿಗಳ ನಡುವಿನ ಸಂಘರ್ಷದ ಬಗ್ಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಾಡಿದ ವ್ಯಾಖ್ಯಾನವಿದು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸಚಿವರು, ಶಾಸಕರು ಅಧಿಕಾರಕ್ಕಾಗಿ ಏನೆಲ್ಲ ಮಾಡುತ್ತಿದ್ದಾರೆ ನೀವೇ ಹೇಳಿ’ ಎಂದು ಪ್ರಶ್ನಿಸಿದರು.

ಭೂಗಳ್ಳರು ಹೆಣೆದ ತಂತ್ರ: ಎಚ್. ವಿಶ್ವನಾಥ್

ಎಚ್.ವಿಶ್ವನಾಥ್

ಹುಣಸೂರು: ‘ಮೈಸೂರಿನ ಹಿರಿಯ ಅಧಿಕಾರಿಗಳ ಗುದ್ದಾಟದ ಹಿಂದೆ ಕೆಲವು ರಾಜಕಾರಣಿಗಳು, ಭೂ ಹಗರಣದಲ್ಲಿ ಭಾಗಿಯಾದವರಿದ್ದಾರೆ’ ಎಂದು ವಿಧಾನಪರಿಷತ್ ಸದಸ್ಯ ಅಡಗೂರು ಎಚ್ ವಿಶ್ವನಾಥ್ ಹೇಳಿದರು.

’ಅವರೆಲ್ಲ, ಶಿಲ್ಪಾ ನಾಗ್ ಹೆಗಲ ಮೇಲೆ ಬಂದೂಕು ಇಟ್ಟು ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿಗೆ ‘ಶೂಟ್’ ಮಾಡುವ ತಂತ್ರಗಾರಿಕೆ ನಡೆಸುತ್ತಿದ್ದಾರೆ. ಆ ಮೂಲಕ ವರ್ಗಾವಣೆಗೆ ಒತ್ತಡ ಹೇರುವ ಕೆಲಸ ನಡೆದಿದೆ. ರೋಹಿಣಿ ಅವರ ಜಾಗಕ್ಕೆ ಶಿಲ್ಪಾ ಅವರನ್ನು ತರುವ ತೆರೆಮರೆಯ ಕಸರತ್ತೂ ನಡೆದಿದೆ. ಈ ಚಟುವಟಿಕೆಯಲ್ಲಿ ಸಂಸದರು, ಸಾ.ರಾ.ಮಹೇಶ್ ಮತ್ತು ಹಲವು ಭೂಗಳ್ಳರ ಒತ್ತಡವೂ ಇದೆ’ ಎಂದು ಆರೋಪಿಸಿದರು.

‘ಎಲ್ಲವನ್ನೂ ಚಾಮುಂಡಿಯೇ ನೋಡಿಕೊಳ್ಳುತ್ತಾಳೆ’

ಸೋಮಶೇಖರ್

ಮೈಸೂರು: ‘ಅಧಿಕಾರಿಗಳು, ಜನಪ್ರತಿನಿಧಿಗಳ ಸಂಘರ್ಷ ವಿಚಾರದಲ್ಲಿ ನನ್ನದೇನೂ ಇಲ್ಲ. ಎಲ್ಲವನ್ನೂ ಆ ಚಾಮುಂಡಿಯೇ ನೋಡಿಕೊಳ್ಳುತ್ತಾಳೆ’ ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಶುಕ್ರವಾರ ಇಲ್ಲಿ ಅಸಹಾಯಕತೆ ವ್ಯಕ್ತಪಡಿಸಿದರು.

ಉಸ್ತುವಾರಿ ಸಚಿವರಾಗಿ ಜಿಲ್ಲಾಧಿಕಾರಿ–ಪಾಲಿಕೆ ಆಯುಕ್ತರ ಜಗಳವನ್ನು ಯಾವ ರೀತಿ ಬಗೆಹರಿಸುತ್ತೀರಿ ಎಂಬ ಪ್ರಶ್ನೆಗೆ, ‘ಯಾವುದು ಒಳ್ಳೆಯದು? ಯಾವುದು ಕೆಟ್ಟದ್ದು? ಯಾರಿಗೆ ಯಾರ ಮೇಲೆ ದ್ವೇಷ ಎಂಬುದನ್ನು ಬೆಟ್ಟದ ಮೇಲೆ ಕುಳಿತ ಚಾಮುಂಡೇಶ್ವರಿ ವೀಕ್ಷಿಸುತ್ತಿದ್ದಾಳೆ’ ಎಂದರು.

‘ಚಾಮುಂಡೇಶ್ವರಿಗೆ ನಮಸ್ಕಾರ ಹಾಕಿದ್ದೇನೆ. ಯಾರು ಪ್ರಾಮಾಣಿಕರಿದ್ದಾರೆ ಅವರನ್ನು ರಕ್ಷಿಸುವಂತೆ ಕೇಳಿಕೊಂಡಿದ್ದೇನೆ. ಅದನ್ನು ಬಿಟ್ಟು, ನನ್ನ ಪಾತ್ರವೇನೂ ಇಲ್ಲ’ ಎಂದರು.

‘ನನ್ನ ಕೆಲಸ ಮೈಸೂರು ಜಿಲ್ಲೆಯಲ್ಲಿ ಕೋವಿಡ್ ನಿಯಂತ್ರಿಸುವುದು; ಸಣ್ಣಪುಟ್ಟ ವಿಚಾರಗಳತ್ತ ಗಮನ ಹರಿಸುವ ವ್ಯವಧಾನ ನನಗಿಲ್ಲ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡುತ್ತಿದ್ದೇನೆ. ಒಳ್ಳೆಯ ಕೆಲಸ ಮಾಡಿದರೂ, ಇದರಿಂದ ಮನಸ್ಸಿಗೆ ನೋವಾಗಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ಅಧಿಕಾರಿಗಳಾಗಲಿ, ಜನಪ್ರತಿನಿಧಿಗಳಾಗಲಿ ಮೈಸೂರು ಜನರ ಹಿತವನ್ನು ಮನದಲ್ಲಿಟ್ಟುಕೊಳ್ಳಬೇಕು. ಇವತ್ತಿನಿಂದಲೇ ಅಹಂಕಾರ ಬಿಟ್ಟು ಕೆಲಸ ಮಾಡಬೇಕು’ ಎಂದರು.

ರೋಹಿಣಿ ವಿರುದ್ಧ ಹಕ್ಕುಚ್ಯುತಿ ಮಂಡನೆ: ಶಾಸಕ ಅನ್ನದಾನಿ

ಮಳವಳ್ಳಿ: ಮೈಸೂರು ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ವಿರುದ್ಧ ವಿಧಾನಸಭಾ ಕಾಗದ ಪತ್ರಗಳ ಸಮಿತಿಯಿಂದ ಹಕ್ಕುಚ್ಯುತಿ ಮಂಡಿಸಿದ್ದು, ಮುಂದಿನ ಅಧಿವೇಶನದಲ್ಲಿ ಚರ್ಚೆಗೆ ಬರುವ ಸಾಧ್ಯತೆ ಇದೆ ಎಂದು ಸಮಿತಿ ಸದಸ್ಯ ಡಾ.ಕೆ.ಅನ್ನದಾನಿ ಹೇಳಿದರು.

ಕಾರ್ಯಕ್ರಮವೊಂದರಲ್ಲಿ ಶುಕ್ರವಾರ ಮಾತನಾಡಿದ ಅವರು, ‘ರೋಹಿಣಿ ಸಿಂಧೂರಿ ಅವರು ಭೂಮಿಯ ಮೇಲೆ ಹುಟ್ಟಿಲ್ಲ. ಆಕಾಶದಿಂದ ಇಳಿದು ಬಂದವರ ಹಾಗೆ ನಡೆದುಕೊಳ್ಳುತ್ತಾರೆ. ಅಧ್ಯಕ್ಷರು, ಸದಸ್ಯರಿಗೆ ರೋಹಿಣಿ ಗೌರವವನ್ನೇ ನೀಡುತ್ತಿರಲಿಲ್ಲ. ಹೀಗಾಗಿ ಅವರ ವಿರುದ್ಧ ಹಕ್ಕುಚ್ಯುತಿ ಮಂಡಿಸಲಾಗಿದೆ. ಮುಂದಿನ ದಿನಗಳಲ್ಲಿ ಕ್ರಮಕ್ಕೆ ಒತ್ತಾಯಿಸಲಾಗುವುದು’ ಎಂದರು.

ಗೋಪ್ಯ ಸಭೆ ನಡೆಸಿದ ಮುಖ್ಯ ಕಾರ್ಯದರ್ಶಿ

ಒಂದನೇ ಪುಟದಿಂದ...

ಗೋಪ್ಯ ಸಭೆಯ ಆರಂಭದಲ್ಲೇ ಶಿಲ್ಪಾ ನಾಗ್ ಅವರು ಮುಖ್ಯ ಕಾರ್ಯದರ್ಶಿಗೆ ರಾಜೀನಾಮೆ ಸಲ್ಲಿಸಲು ಮುಂದಾದರು. ರಾಜೀನಾಮೆ ಸ್ವೀಕರಿಸದ ರವಿಕುಮಾರ್, ಇದೇ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚೆ ನಡೆಸಿ, ಹಲವು ಮಾಹಿತಿ ಪಡೆದರು. ಕೆಲ ಪ್ರಶ್ನೆಗಳು, ದಾಖಲಾತಿಗಳನ್ನು ಕೇಳಿದರು ಎಂಬುದು ಮೂಲಗಳಿಂದ ಗೊತ್ತಾಗಿದೆ.

ಕೋವಿಡ್ ಸಭೆ ಆರಂಭಕ್ಕೂ ಮುನ್ನವೇ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ, ಮುಖ್ಯ ಕಾರ್ಯದರ್ಶಿ ಅವರನ್ನು ಭೇಟಿಯಾಗಿ ಈಚೆಗಿನ ವಿದ್ಯಮಾನಗಳ ಮಾಹಿತಿ ನೀಡಿದರು ಎನ್ನಲಾಗಿದೆ.

ಕೃಷಿ ವಿಶ್ವವಿದ್ಯಾಲಯ, ಧಾರವಾಡ
ಕುಲಸಚಿವರ ಕಾರ್ಯಾಲಯ, ಕೃಷಿ ನಗರ, ಧಾರವಾಡ–05
ಸಂಖ್ಯೆ:ಕುಸ:ನೇವಿ:ಜಾಹಿ–59/2021 ದಿನಾಂಕ: 03–06–2021

ತಿದ್ದುಪಡಿ ಅಧಿಸೂಚನೆ

ವಿಷಯ: ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ ಅಧಿಕಾರಿ ವೃಂದದ ವಿವಿಧ ಹುದ್ದೆಗಳಿಗೆ (ನಿಶ್ಚಿತಾವಧಿಯ ಹುದ್ದೆಗಳು) ನೇರ ನೇಮಕಾತಿ ಕುರಿತು.
ಉಲ್ಲೇಖ: 1) ಅಧಿಸೂಚನೆ ಸಂಖ್ಯೆ: No.R/Rectt/Advt.59/2021 ದಿನಾಂಕ 25.05.2021
2)ತಿದ್ದುಪಡಿ ಅಧಿಸೂಜನೆ ಸಂಖ್ಯೆ:No.R/Rectt/Advt.59/2021 ದಿನಾಂಕ 03.06.2021

ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ ಅಧಿಕಾರಿ ವೃಂದದ ವಿವಿಧ (ನಿಶ್ಚಿತಾವಧಿಯ) ಹುದ್ದೆಗಳಿಗೆ ನೇಮಕಾತಿಗಾಗಿ ಉಲ್ಲೇಖ(1)ರ ವಿಶ್ವವಿದ್ಯಾಲಯದ ಅಧಿಸೂಚನೆ ಮೂಲಕ ಜಾಹೀರುಪಡಿಸಲಾಗಿದೆ. ಹೈದರಾಬಾದ–ಕರ್ನಾಟಕ (ಕಲ್ಯಾಣ ಕರ್ನಾಟಕ) ಪ್ರದೇಶದ ವ್ಯಕ್ತಿಗಳಿಗೆ ಹುದ್ದೆಯನ್ನು ಮೀಸಲಿಡುವುದಕ್ಕೆ ಸಂಬಂಧಪಟ್ಟಂತೆ ಸದರಿ ಅಧಿಸೂಚನೆಗೆ ಉಲ್ಲೇಖ(2)ರನ್ವಯ ಕೆಲವೊಂದು ತಿದ್ದುಪಡಿಗಳನ್ನು ಮಾಡಲಾಗಿದೆ ಮತ್ತು ಹುದ್ದೆಗಳಿಗೆ ಅರ್ಜಿಗಳನ್ನು ಸಲ್ಲಿಸಲು ಅಂತಿಮ ದಿನಾಂಕವನ್ನು 02.07.2021 ರವರೆಗೆ ವಿಸ್ತರಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ತಿದ್ದುಪಡಿ ಅಧಿಸೂಚನೆಯನ್ನು ವಿವಿಯ ಅಧಿಕೃತ ಜಾಲತಾಣದಲ್ಲಿ (www.uasd.edu) ವೀಕ್ಷಿಸಬಹುದು.

ಆದೇಶದ ಮೇರೆಗೆ, ಸಹಿ/–
ಕುಲಸಚಿವರು

GOVERNMENT OF KARNATAKA
CEO, ZILLA PANCHAYATH, DAVANAGERE - 577005
Phone No's:08192-261485 ;Fax:261865WEB
SITE :www.zpdavangere.kar.nic.in

TENDER SCHEDULE

E-TENDER FOR ENGAGING MANPOWER AGENCY UNDER NATIONAL RURAL LIVELIHOOD MISSION
(1) TENDER REFERENCE NO & DATE No.:ZPDVG:DV(1):CR:06/2020-21 DATE:01-06-2021 (2) APPROXIMATE VALUE OF TENDER RS.32.46 LAKHS (3) EMD AMOUNT RS.48,690-00 (4) TENDER COMMENCEMENT DATE:- 01-06-2021 (5) LAST DATE AND TIME FOR SUBMISSION OF TENDERS:- 30-06-2021 4:00 PM (6) TIME AND DATE OF OPENING OF TECHNICAL BIDS:- 01-07-2021 4:00 PM (7) TIME AND DATE OF OPENING OF FINANCIALBIDS:-02-07-2021 4:00PM (8) Letter of Intent (9) Contract Period:- 1 year (10) PLACE OF OPENING OF TENDERS CHIEF EXECUTIVE OFFICER, ZILLA PANCHAYATH, DAVANAGERE-577005.PH.NO.08192-261485, 260016

ವಾಸಾಇ/ಡಿವಿಜಿ/119/ಎಂಸಿಎ/2021–22
Sd/- Chief Executive Officer,
Zilla Panchayat, Davanagere District.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ
4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು – 560 041
ದೂ: 080–26961928 ಫ್ಯಾಕ್ಸ್–080–26961929
ಸಂಖ್ಯೆ: ರಾಗಾವಿ/ಪ್ರೊಕ್/ಮಾನವಸಂಪನ್ಮೂಲ/07/2021–22 ದಿನಾಂಕ: 04.06.2021

ಇ–ಟೆಂಡರ್ ಪ್ರಕಟಣೆ (ಆರ್‌ಎಫ್‌ಪಿ)

ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ **ರಾ.ಗಾ.ಆ.ವಿ.ವಿ.ಗೆ ಹಾಗೂ ಅದರ ಪ್ರಾದೇಶಿಕ ಕೇಂದ್ರಗಳಿಗೆ ಮಾನವಸಂಪನ್ಮೂಲ ಸೇವೆಯನ್ನು ಒದಗಿಸಲು** ಟೆಂಡರನ್ನು ಆಹ್ವಾನಿಸಿದ್ದಾರೆ. ಸೇವೆಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಲಗತ್ತಿಸಿರುವ ಉಲ್ಲೇಖಿತ ಷರತ್ತುಗಳಲ್ಲಿ ಒದಗಿಸಲಾಗಿದೆ.

ಟೆಂಡರ್ ದಾಖಲೆಗಳು ಡೌನ್‌ಲೋಡ್ ಮಾಡಲು ಲಭ್ಯತೆ	03.06.2021 ಸಂಜೆ 6:53 ಗಂಟೆಗೆ
ಬಿಡ್ ಪೂರ್ವಭಾವಿ ಸಭೆಯ ದಿನಾಂಕ	22.06.2021 ಬೆಳಿಗ್ಗೆ 11:30 ಗಂಟೆಗೆ
ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ	03.07.2021 ಸಂಜೆ 5:30 ಗಂಟೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	05.07.2021 ಬೆಳಿಗ್ಗೆ 11:00 ಗಂಟೆಗೆ
ಟೆಂಡರ್ ತೆರೆಯುವ ಸ್ಥಳ	ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು

ಹೆಚ್ಚಿನ ಮಾಹಿತಿಗಳನ್ನು https://eproc.karnataka.gov.in ನಿಂದ ಪಡೆದುಕೊಳ್ಳಬಹುದು. ಸಹಿ/–
ವಾ.ಸಾ.ಸಂ.ಇ/479/2021–22 ಕುಲಸಚಿವರು

ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರು ನಗರ ವಿಭಾಗ, ಅರಣ್ಯ ಭವನದ ಪಕ್ಕದ ಕಟ್ಟಡ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003. ಇ–ಮೇಲ್: dcfurban82@yahoo.co.in
ಸಂಖ್ಯೆ : ಎ2/ಬಿಯುಡಿ/ಮು.ತಂ/ಟೆಂಡರ್/ಸಿಆರ್–29/2021–22 ದಿನಾಂಕ: 26.05.2021

ಇ–ಟೆಂಡರ್ ಪ್ರಕಟಣೆ

2021–22ನೇ ಸಾಲಿಗೆ ಬೆಂಗಳೂರು ವೃತ್ತದ ಎಲ್ಲಾ ವಿಭಾಗಗಳಿಗೆ ಮುಳ್ಳುತಂತಿ ಹಾಗೂ ಚೈನ್‌ಲಿಂಕ್ ಮೆಷ್‌ಗಳನ್ನು ಅಂಗೀಕೃತ ಉತ್ಪಾದಕ/ಸರಬರಾಜು ಉದ್ದಿಮೆದಾರರಿಂದ ಸರಬರಾಜು ಮಾಡಲು ದರ ನಿಗದಿಪಡಿಸುವ ಸಂಬಂಧ ಅರ್ಹ ಗುತ್ತಿಗೆದಾರರು ಮಾತ್ರ ಕರ್ನಾಟಕ ಸರ್ಕಾರದ ಇ–ಪ್ರೊಕ್ ಪೋರ್ಟಲ್ (https://eproc.karnataka.gov.in) ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರನ್ನು ಇ–ಪೋರ್ಟಲ್‌ನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **24.06.2021ರ ಅಪರಾಹ್ನ 5:00 ಗಂಟೆಗೆ.** ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **25.06.2021ರ ಅಪರಾಹ್ನ 5:00 ಗಂಟೆಗೆ.** ತಾಂತ್ರಿಕ ಬಿಡ್‌ಗಳಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ ದಿನಾಂಕ: **26.06.2021ರ ಅಪರಾಹ್ನ 5:00 ಗಂಟೆಗೆ** ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು. ಪ್ರತ್ಯೇಕ ಕೆಲಸಗಳ ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ www.eproc.karnataka.gov.in ನಲ್ಲಿ ಮಾಹಿತಿಗಳನ್ನು ಪಡೆಯಬಹುದು.

ಸಹಿ/–
ಉಪ ಅರಣ್ಯ ಸಂರಕ್ಷಣಾಧಿಕಾರಿ
ವಾಸಾಸಂಇ/ಬೆಂನ/474/2021–22 ಬೆಂಗಳೂರು ನಗರ ವಿಭಾಗ, ಬೆಂಗಳೂರು

ಕೋವಿಡ್‌-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು–570 022.
ಸಂ.ಕಾಅ/ಗ್ರಾಕುನೀ&ನೈವಿ/ಮೈ/ಇ–ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ಇ–ಟೆಂಡರ್ ಪ್ರಕಟಣೆ ಸಂಖ್ಯೆ 04/2021–22 ದಿನಾಂಕ: 01.06.2021

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರುರವರು ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಬೆಂಗಳೂರುರವರ ಸಹಯೋಗದೊಂದಿಗೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ/ಎನ್‌ರೋಲ್ ಮಾಡಿದ 4 ನೇ ದರ್ಜೆ ಗುತ್ತಿಗೆದಾರರು ಮತ್ತು ಮೇಲ್ಪಟ್ಟು ಟೆಂಡರ್ ನಮೂನೆ KW-1,KW-2,KW-3 ರೀತ್ಯಾ (ಎಕ,ದ್ವಿ ಲಕೋಟೆ ಪದ್ಧತಿಯಂತೆ) ಪಿರಿಯಾಪಟ್ಟಣ ತಾಲ್ಲೂಕಿನ 01, ಕೆ.ಆರ್.ನಗರ 02, ಮೈಸೂರು 02 ಒಟ್ಟು 05 ಕಾಮಗಾರಿಗೆ (ಅಂದಾಜು ಮೊತ್ತ ರೂ.18.90 ರಿಂದ 72.25 ಲಕ್ಷಕ್ಕೆ) ಇ–ಪ್ರಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಲು ನಿಗದಿತ ಅವಧಿ **ದಿ: 02.06.2021 ರಿಂದ 11.06.2021ರವರೆಗೆ ಮತ್ತು ಪ್ರಿ–ಬಿಡ್ ಮೀಟಿಂಗ್ ದಿ:03.06.2021 ಬೆಳಿಗ್ಗೆ 11.00 ಘಂಟೆಯ ನಂತರ, ಸಾಧ್ಯವಾದರೆ ಟೆಂಡರ್ ತೆರೆಯುವ ದಿ: 14.06.2021 ರ ಸಂಜೆ 5.30 ಘಂಟೆಯ ನಂತರ.** ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (e-procurement portal) ವೆಬ್ ಸೈಟ್‌ನಲ್ಲಿ ಪಡೆಯಬಹುದು. https://eprockarnataka.gov.in ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು (ಪೋನ್ ನಂ.0821–2460495)ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ವಿಭಾಗ, ಮೈಸೂರು.
DIPR/DDMYS/MCA/182/2021-22

KARNATAKA STATE COOPERATIVE MARKETING FEDERATION LTD.,
No.8. CUNNINGHAM ROAD, BENGALURU-52
Tel:No.080-22253968/22254862

SHORT TERM TENDER NOTICE
(Through e-procurement only)
https://www.eproc.karnataka.gov.in

Tender Ref.No.**KSCMF/AI/MASK/90/2021-22** Dated: 04.06.2021

E-TENDER FOR SUPPLY OF N-95 MASK OF 6 LAYERS (WITHOUT VALVE)

Online tenders are invited from **licensed manufacturers /Suppliers for supply of N-95 Mask OF 6 LAYERS (without valve)** to KSCMF Ltd. The details of tender, are made available on website **https://www.eproc.karnataka.gov.in**
The last date / time of online submission of the tender documents is **11thJune 2021**
Sd/-
General Manager

ಜಿಲ್ಲಾ ಅಧಿಕಾರಿಗಳ ಕಾರ್ಯಾಲಯ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಜಿಲ್ಲಾ ಪಂಚಾಯಿತಿ ಕಟ್ಟಡ, ಜ್ಯೋತಿನಗರ, ಚಿಕ್ಕಮಗಳೂರು.–577102
Email:-dobcmchikkamagalore@gmail.com Phone : 0862-295922
ಸಂಖ್ಯೆ : ಹಿಂವಹಿ/ಅಕೌಂಟ್ಸ್/ಸಿಆರ್–3/2021–22 ದಿನಾಂಕ: 03.06.2021

–: ಇ–ಟೆಂಡರ್ ಪ್ರಕಟಣೆ :–

2021–2022 ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿದ್ಯಾರ್ಥಿ ನಿಲಯಗಳಲ್ಲಿ ಹಾಗೂ ಅಲೆಮಾರಿ ಆಶ್ರಮಶಾಲೆಯಲ್ಲಿ ಖಾಲಿಯಿರುವ ಗ್ರೂಪ್–'ಡಿ' ಹುದ್ದೆಗಳಾದ ಅಡುಗೆಯವರು, ಅಡುಗೆ ಸಹಾಯಕರು ಮತ್ತು ರಾತ್ರಿ ಕಾವಲುಗಾರರು ಮತ್ತು ತಾಲ್ಲೂಕು ಮಟ್ಟದ ಕಛೇರಿಗಳಲ್ಲಿ ಡಾಟಾ ಎಂಟ್ರಿ ಆಪರೇಟರ್ ಗ್ರೇಡ್–2 ಹಾಗೂ ಮೊರಾರ್ಜಿ ಶಾಲೆ ಬೋಧಕ/ಬೋಧಕೇತರ ಸಿಬ್ಬಂದಿಗಳನ್ನು ಹೊರಸಂಪನ್ಮೂಲ ಏಜೆನ್ಸಿಯ ಮುಖಾಂತರ ಪಡೆಯಲು ಅರ್ಹ ಹೊರ ಸಂಪನ್ಮೂಲ ಸಂಸ್ಥೆಯವರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು.

ಟೆಂಡರ್ ಮಾಹಿತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದು. ಟೆಂಡರ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸುವ ಕೊನೆಯ ದಿನಾಂಕ: 02.07.2021 ಸಂಜೆ 4.00 ಗಂಟೆವರೆಗೆ. ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು ಹಾಗೂ ವೆಬ್ ಸೈಟ್ https://eproc.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು.

ಸಹಿ/– ಜಿಲ್ಲಾ ಅಧಿಕಾರಿ,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಚಿಕ್ಕಮಗಳೂರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಬೊಮ್ಮನಹಳ್ಳಿ ವಿಭಾಗ, ಬೇಗೂರು ಮುಖ್ಯರಸ್ತೆ, ಬೊಮ್ಮನಹಳ್ಳಿ, ಬೆಂಗಳೂರು–560068.
ಸಂಖ್ಯೆ: ಬೃಬೆಂಮಪಾ/ಕಾಪಾಅ/ಬೋವಿ/ಟೆಂಡರ್-03/2021-22 ದಿನಾಂಕ: 04-06-2021

ಅಲ್ಪಾವಧಿ ಟೆಂಡರ್‌ಗಳ ಆಹ್ವಾನ ಪ್ರಕಟಣೆ (ಐಎಫ್‌ಟಿ) (ಏಕ ಮತ್ತು ದ್ವಿ ಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ವಿಭಾಗ, ಬೃಬೆಂಮಪಾ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಬಿ.ಬಿ.ಎಂ.ಪಿ / ಕೆ.ಪಿ.ಡಬ್ಲ್ಯೂ.ಡಿ / ಸಿ.ಪಿ.ಡಬ್ಲ್ಯೂ.ಡಿ / ಬಿಡಬ್ಲ್ಯೂಎಸ್‌ಎಸ್‌ಬಿ / ರೈಲ್ವೆ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಇತರೆ ಯಾವುದೇ ರಾಜ್ಯ ಸಂಸ್ಥೆಗಳಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು / ವರ್ಗ	ನಿಗದಿಪಡಿಸಿದ ಅಂದಾಜು ವೆಚ್ಚ (ಲಕ್ಷರೂ. ಗಳಲ್ಲಿ)
1.	ವಾರ್ಡ್ ನಂ.190ರ ಮಂಗಮ್ಮನಪಾಳ್ಯದ ಕೆಎಸ್‌ಡಿಸಿ ಹತ್ತಿರದ ಮುನೇಶ್ವರ ಬಡಾವಣೆಯ 11ನೇ ಅಡ್ಡರಸ್ತೆಯಲ್ಲಿ ಆಯ್ದ ರಸ್ತೆಗಳು ಮತ್ತು ಒಳಚರಂಡಿಗಳ ಸುಧಾರಣಾ ಕಾಮಗಾರಿ (2ನೇ ಕರೆ) (ಪರಿಶಿಷ್ಟ ಜಾತಿ).	20.00
2.	ವಾರ್ಡ್ ನಂ.174 ಹೆಚ್‌ಎಸ್‌ಆರ್ ಬಡಾವಣೆ 6ನೇ ವಲಯದ ಆಯ್ದ ರಸ್ತೆಗಳು ಮತ್ತು ಒಳಚರಂಡಿಗಳ ಸುಧಾರಣಾ ಕಾಮಗಾರಿ (3ನೇ ಕರೆ) (ಇತರೆ) .	25.00
3.	ವಾರ್ಡ್ ನಂ.189 ಹೊಂಗಸಂದ್ರದ ಓಂ ಶಕ್ತಿ ಬಡಾವಣೆಯ ಸಿಸಿ ರಸ್ತೆಗಳು ಮತ್ತು ಒಳಚರಂಡಿಗಳ ಸುಧಾರಣಾ ಕಾಮಗಾರಿ (3ನೇ ಕರೆ) (ಇತರೆ).	25.00
4.	ವಾರ್ಡ್ ನಂ.189 ಹೊಂಗಸಂದ್ರದ ಬಾಲಾಜಿ ಬಡಾವಣೆಯ ಸಿಸಿ ರಸ್ತೆಗಳು ಮತ್ತು ಒಳಚರಂಡಿಗಳ ಸುಧಾರಣಾ ಕಾಮಗಾರಿ (3ನೇ ಕರೆ) (ಇತರೆ).	25.00
5.	ವಾರ್ಡ್ ನಂ.186ರ ಜರಗನಹಳ್ಳಿಯಲ್ಲಿ ಕೊಳವೆ ಬಾವಿಯನ್ನು ಕೊರೆಯುವುದು ಇತರೆ ಸಂಯೋಜಿತ ನೀರು ಸರಬರಾಜು ಕಾರ್ಯಗಳು (3ನೇ ಕರೆ) (ಇತರೆ).	35.00
6.	ವಾರ್ಡ್ ನಂ.188ರ ಬಿಳೆಕಲ್ಲಹಳ್ಳಿಯಲ್ಲಿ ಕೊಳವೆ ಬಾವಿಯನ್ನು ಕೊರೆಯುವುದು ಮತ್ತು ಕುಡಿಯುವ ನೀರು ಸರಬರಾಜು ಸೇವೆಯನ್ನು ಒದಗಿಸುವುದು (4ನೇ ಕರೆ) (ಇತರೆ).	35.00
7.	ವಾರ್ಡ್ ನಂ. 189ರಲ್ಲಿ ನೀರು ಸರಬರಾಜು ಸೇವೆ ಒದಗಿಸುವುದು. (4ನೇ ಕರೆ) (ಇತರೆ).	40.00
8.	ವಾರ್ಡ್ ನಂ. 175ರಲ್ಲಿ ನೀರು ಸರಬರಾಜು ಸೇವೆ ಒದಗಿಸುವುದು. (ಇತರೆ).	40.00
9.	ವಾರ್ಡ್ ನಂ. 186ರ ಜರಗನಹಳ್ಳಿಯಲ್ಲಿ ರಸ್ತೆಗಳ ಡಾಂಬರೀಕರಣ ಒದಗಿಸುವುದು. (4ನೇ ಕರೆ) (ಇತರೆ).	52.00
10.	ವಾರ್ಡ್ ನಂ. 189 ಹೊಂಗಸಂದ್ರದ ಮುನಿಯಪ್ಪ ಬಡಾವಣೆಯ 7ನೇ ಮುಖ್ಯರಸ್ತೆ, 4ನೇ ಅಡ್ಡ ರಸ್ತೆ, ಹಾಗೂ ಸುತ್ತಿಲಿನ ಪ್ರದೇಶದ ರಸ್ತೆಗಳು ಮತ್ತು ಒಳಚರಂಡಿಗಳ ಹಾಗೂ ಯುಜಿಡಿ ಕಾರ್ಯಗಳ ಸುದಾರಣೆ ಕಾಮಗಾರಿ (3ನೇ ಕರೆ). (ಇತರೆ).	55.00
11.	ವಾರ್ಡ್ ನಂ. 186 ಜರಗನಹಳ್ಳಿಯ ನಂಜಪ್ಪ ಬಡಾವಣೆ ಮತ್ತು ಜರಗನಹಳ್ಳಿ ಗ್ರಾಮಠಾಣೆ ಹಾಗೂ ಸುತ್ತಲು ಸಮಗ್ರ ಅಭಿವೃದ್ದಿ ಕಾಮಗಾರಿಗಳು (2ನೇ ಕರೆ) (ಇತರೆ).	60.00
12.	ವಾರ್ಡ್ ನಂ. 193 ಅರಕೆರೆಯ ಲಕ್ಷ್ಮಿ ಬಡವಾಣೆಯ ಉಳಿಕೆ ರಸ್ತೆಗಳ ಡಾಂಬರೀಕರಣ ಮತ್ತು ಒಳ ಚರಂಡಿಗಳ ಸುದಾರಣೆ (2ನೇ ಕರೆ) (ಇತರೆ).	60.00
13.	ವಾರ್ಡ್ ನಂ. 193 ಅರಕೆರೆಯ ಹುಳಿಮಾವಿನಲ್ಲಿ ಸಮುದಾಯ ಭವನದ ನಿರ್ಮಾಣ ಕಾಮಗಾರಿ (5ನೇ ಕರೆ)	60.00
14.	ವಾರ್ಡ್ ನಂ. 193 ಅರಕೆರೆಯ ನ್ಯಾನಪ್ಪನಹಳ್ಳಿಯ ರಸ್ತೆಗಳ ಡಾಂಬರೀಕರಣ ಚಪ್ಪಡಿ ಹೊದಿಕೆಗಳು ಹಾಗೂ ಒಳಚರಂಡಿಗಳ ಸುದಾರಣ ಕಾಮಗಾರಿ, (2ನೇ ಕರೆ). (ಇತರೆ).	80.00
15.	ವಾರ್ಡ್ ನಂ. 186, ಜರಗನಹಳ್ಳಿ ಮತ್ತು ಸುತ್ತಲಿನ ಪ್ರದೇಶದ ರಸ್ತೆಗಳು ಮತ್ತು ಒಳಚರಂಡಿಗಳ ಸುದಾರಣೆ ಕಾಮಗಾರಿ. (ಇತರೆ).	100.00
16.	ವಾರ್ಡ್ ನಂ. 187 ಪುಟ್ಟೇನಹಳ್ಳಿಯ ಪಾಡುರಂಗ ನಗರದ ಮುಖ್ಯ ರಸ್ತೆಗಳ ಡಾಬಂರೀಕರಣ ಒದಗಿಸುವುದು. (ಇತರೆ).	100.00
17.	ವಾರ್ಡ್ ನಂ. 187 ಪುಟ್ಟೇನಹಳ್ಳಿಯ ಪಾಡುರಂಗ ನಗರದ ಅಡ್ಡ ರಸ್ತೆಗಳ ಡಾಬಂರೀಕರಣ ಒದಗಿಸುವುದು. (ಇತರೆ).	100.00
18.	ವಾರ್ಡ್ ನಂ. 189ರ ಹೊಂಗಸಂದ್ರದಲ್ಲಿ ಸರ್ಕಾರಿ ಶಾಲೆಯ ಹೊಸ ಕಟ್ಟಡ ನಿರ್ಮಾಣ ಕಾಮಗಾರಿ. (ಇತರೆ).	100.00
19.	ವಾರ್ಡ್ ನಂ. 174ರ ಹೆಚ್‌ಎಸ್‌ಆರ್ ಬಡಾವಣೆಯ 24ನೇ ಮುಖ್ಯ ರಸ್ತೆಯಲ್ಲಿರುವ ಬೆಂಗಳೂರು ಒನ್ ಉದ್ಯಾನವನಕ್ಕೆ ಅಲಂಕಾರಿಕ ಗ್ರೀಲ್‌ಗಳನ್ನು ಒದಗಿಸುವುದು. (ಇತರೆ).	199.00
20.	ವಾರ್ಡ್ ನಂ. 174ರ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಹೆಚ್‌ಎಸ್‌ಆರ್ ಬಡಾವಣೆ 2ನೇ ವಲಯದಲ್ಲಿ ಉದ್ಯಾನವನದ ಅಭಿವೃದ್ಧಿ ಕಾಮಗಾರಿ. (ಇತರೆ).	200.00
21.	ವಾರ್ಡ್ ನಂ. 186ರ ಕೆಆರ್. ಬಡಾವಣೆ ಮತ್ತು ಅಷ್ಟಲಕ್ಷ್ಮಿ ಬಡಾವಣೆಯ ಸುತ್ತಲಿನ ಪ್ರದೇಶಗಳ ರಸ್ತೆಗಳು ಮತ್ತು ಒಳಚರಂಡಿಗಳ ಸುದಾರಣ ಕಾಮಗಾರಿ. (ಇತರೆ).	200.00
22.	ವಾರ್ಡ್ ನಂ. 191 ಸಿಂಗಸಂದ್ರದ ಆಯ್ದ ರಸ್ತೆಗಳು ಮತ್ತು ಒಳಚಂರಡಿಗಳ ಸುದಾರಣ ಕಾಮಗಾರಿ. (ಇತರೆ).	200.00
23.	ವಾರ್ಡ್ ನಂ. 174, ಹೆಚ್‌ಎಸ್‌ಆರ್ ಬಡಾವಣೆಯ 19ನೇ ಮುಖ್ಯ ರಸ್ತೆಯಲ್ಲಿ ಶಿರಡಿ ಸಾಯಿಬಾಬಾ ದೇವಸ್ಥಾನದ ಎದುರಿನಲ್ಲಿರುವ ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣದ ಅಭಿವೃದ್ಧಿ ಕಾಮಗಾರಿ (4ನೇ ಕರೆ). (ಇತರೆ).	500.00

ಸರ್ಕಾರಿ ಆದೇಶಗಳು ನಂ/12/2020 ದಿನಾಂಕ: 22/12/20, ಪ್ರಕಾರ ಇಎಂಡಿ ಪಾವತಿ ವಿನಾಯತಿ ನೀಡಲಾಗಿರುವುದು. ಆದೇಶ ರೂ.20ರ ಚಾಪಕಾಗದಲ್ಲಿ ನೋಟರಿಯಿಂದ ದೃಡಿಕರಿಸಿದ ಪೋಷಣೆಯನ್ನು ಈ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅನುಬಂಧ–ಎ ಎಂದು ಆಪ್‌ಲೋಡ್ ಮಾಡುವುದು.

ಟೆಂಡರ್‌ನ ಕಾರ್ಯಸೂಚಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ದಿನಾಂಕ: 07–06–2021 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪೂರ್ವ ಬಿಡ್ ಸಭೆಯ ದಿನಾಂಕ ಮತ್ತು ವೇಳೆ: 11–06–2021ರ ಸಂಜೆ 4:00 ಗಂಟೆಗೆ. 3) ಟೆಂಡರ್‌ಗಳನ್ನು ಅನ್‌ಲೈನ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ: 18–06–2021 ಸಂಜೆ 4:00 ಗಂಟೆಗೆ ಅಥವಾ ಅದಕ್ಕೂ ಮುಂಚಿತವಾಗಿ. 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: 19–06–2021ರ ಸಂಜೆ 4:30 ಗಂಟೆಗೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ https://eproc.karnataka.gov.in ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ವಿಭಾಗ, ಬೃಬೆಂಮಪಾ.

ಕೋವಿಡ್‌-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ, (ರಿ)., ಚಿತ್ರದುರ್ಗ .
ಜಿಲ್ಲಾ ಯೋಜನಾ ನಿರ್ವಹಣಾ ಘಟಕ, (ಎನ್.ಹೆಚ್.ಎಂ) ಜಿಲ್ಲಾ ಪ್ರಯೋಗಾಲಯ ಆವರಣ, ಜಿಲ್ಲಾ ಆಸ್ಪತ್ರೆ ಹಿಂಭಾಗ ಚಿತ್ರದುರ್ಗ.
No.DPMU/NHM/ನೇಮಕಾತಿ/CTA/ 15/2021–22 ದಿನಾಂಕ: 02.06.2021

ಪ್ರಕಟಣೆ

ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನದಡಿಯಲ್ಲಿ ಗುತ್ತಿಗೆ ಆಧಾರದಲ್ಲಿ ಎಂ.ಬಿ.ಬಿ.ಎಸ್/ಆಯುಷ್ ವೈದ್ಯರನ್ನು ನೇಮಕಾತಿ ಮಾಡಲು ಆದೇಶವಿರುತ್ತದೆ. ಆದ್ದರಿಂದ ಈ ಕೆಳಕಂಡಂತೆ ನೇಮಕಾತಿ ಮಾಡಿಕೊಳ್ಳಲು ಅರ್ಜಿಯನ್ನು ಆಹ್ವಾನಿಸಲಾಗಿದೆ.

ಮೀಸಲಾತಿ	ಸಾಮಾನ್ಯ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಮಹಿಳಾ ಅಭ್ಯರ್ಥಿ	ಕ.ಮಾ	ಯೋಜನಾ ನಿರಾಶ್ರಿತ ಅಭ್ಯರ್ಥಿ	ಮಾ.ಸೈ	ಅಂಗವಿಕಲ ಅಭ್ಯರ್ಥಿ	ಒಟ್ಟು ಹುದ್ದೆಗಳು
ಸಾಮಾನ್ಯ	1	–	–	–	–	–	–	1
ಪ.ಜಾ.	1	–	–	–	–	–	–	1
ಪ.ಪಂ	–	–	–	–	–	–	–	–
ಪ. ವರ್ಗ–1	–	–	–	–	–	–	–	–
ಪ. ವರ್ಗ–2ಎ	–	–	–	–	–	–	–	–
ಪ. ವರ್ಗ–2ಬಿ	–	–	–	–	–	–	–	–
ಪ. ವರ್ಗ–3ಎ	–	–	–	–	–	–	–	–
ಪ. ವರ್ಗ–3ಬಿ	–	–	–	–	–	–	–	–
ಒಟ್ಟು	2	–	–	–	–	–	–	2

ವಿದ್ಯಾರ್ಹತೆ:– (1) MBBS/BAMS/BHMS/BNYS/BUMS/Siddha (2) Must have completed housemanship (3) Should have Professional Registration Certificate from government recognised registration Authority. ಮಾಸಿಕ ಸಂಚಿತ ವೇತನ:–ಎಂ.ಬಿ.ಬಿ.ಎಸ್. ವೈದ್ಯರಿಗೆ ರೂ. 35,000/– ಹಾಗೂ ಆಯುಷ್ ವೈದ್ಯರಿಗೆ ರೂ. 26,000/– ಸೂಚನೆ:– ಎಂ.ಬಿ.ಬಿ.ಎಸ್. ವೈದ್ಯರು ಬಾರದೇ ಇದ್ದಲ್ಲಿ ಆಯುಷ್ ವೈದ್ಯರನ್ನು ಪರಿಗಣಿಸಲಾಗುವುದು. ಆಸಕ್ತಿಯುಳ್ಳ ಅಭ್ಯರ್ಥಿಗಳು ದಿನಾಂಕ: 02.06.2021 ರಿಂದ 10.06.2021ರ ಸಂಜೆ 5.00 ರೊಳಗೆ ಜಿಲ್ಲಾ ಯೋಜನಾ ನಿರ್ವಹಣಾ ಘಟಕ, ಎನ್.ಹೆಚ್.ಎಂ ಜಿಲ್ಲಾ ಪ್ರಯೋಗಶಾಲಾ ಆವರಣ, ಜಿಲ್ಲಾ ಆಸ್ಪತ್ರೆ ಹಿಂಭಾಗ, ಚಿತ್ರದುರ್ಗ ಇಲ್ಲಿಗೆ ಅರ್ಜಿ ಸಲ್ಲಿಸಬಹುದು. (ಸದರಿ ನೇಮಕಾತಿಗಳು ಎನ್.ಹೆಚ್.ಎಂ. ನಿಯಮಾವಳಿಯ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

DIPR/CTA/MCA/158/2021-22 ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಚಿತ್ರದುರ್ಗ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 001. ಫೋನ್ : 080–22265383
website: www.kiadb.in
ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಡಿಪಿಆರ್–02/2093/2021–22 ದಿನಾಂಕ: 02.06.2021

ಟೆಂಡರ್ ಆಹ್ವಾನ ಪ್ರಕಟಣೆ
(ಜಿ.ಓ.ಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆಐಎಡಿಬಿಯು ಈ ಕೆಳಕಂಡ ಯೋಜನೆಗೆ ವಿವರವಾದ ಯೋಜನಾ ವರದಿಯನ್ನು ಸಿದ್ದಪಡಿಸುವುದಕ್ಕಾಗಿ ಇದೇ ರೀತಿಯ ಕಾಮಗಾರಿಯನ್ನು ನಿರ್ವಹಿಸಿದ ದಾಖಲೆಯುಳ್ಳ ಮತ್ತು ಹೆಚ್ಚಿನ ಅನುಭವವಿರುವ, ಬೆಂಗಳೂರಿನಲ್ಲಿ ಕಛೇರಿಯುಳ್ಳ ಪ್ರತಿಷ್ಠಿತ ಅರ್ಹ ಸಮಾಲೋಚಕರು / ಸಂಸ್ಥೆಗಳಿಂದ ದ್ವಿ–ಲಕೋಟೆ ಬಿಡ್ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಿದೆ.

ಕಾಮಗಾರಿಯ ಹೆಸರು: (1) ತುಮಕೂರು ಜಿಲ್ಲೆಯಲ್ಲಿ ಪ್ರಸ್ತಾಪಿತ ಮಧುಗಿರಿ ಕೈಗಾರಿಕಾ ಪ್ರದೇಶದ ರಚನೆಗಾಗಿ ಆರ್ಥಿಕ ವಿಶ್ಲೇಷಣೆ, ಸರ್ವೆ, ಬಡಾವಣೆ ನಕ್ಷೆ, ವಿನ್ಯಾಸ, ಅಂದಾಜು ಪಟ್ಟಿ, ವೆಚ್ಚ ರಚನೆಯೊಂದಿಗೆ ವಿವರವಾದ ಯೋಜನಾ ವರದಿ (ಡಿ.ಪಿ.ಆರ್) ಸಿದ್ದಪಡಿಸುವ ಸಲಹಾ ಸೇವೆಯನ್ನು ಒದಗಿಸುವುದು. (ವಿಸ್ತೀರ್ಣ 336ಎ 11ಗು) (2) ತುಮಕೂರು ಜಿಲ್ಲೆಯ ವಸಂತನರಸಾಪುರ ಕೈಗಾರಿಕಾ ಪ್ರದೇಶದಲ್ಲಿರುವ ತೃತೀಯ ಸಂಸ್ಕರಣಾ ಘಟಕದಿಂದ 2ಎಂ.ಎಲ್.ಡಿ ಸಂಸ್ಕರಿಸಿದ ನೀರನ್ನು ಶಿರಾ ಕೈಗಾರಿಕಾ ಪ್ರದೇಶಕ್ಕೆ ಸರಬರಾಜು ಮಾಡಲು ವಿವರವಾದ ಯೋಜನಾ ವರದಿ (ಡಿ.ಪಿ.ಆರ್) ಸಿದ್ದಪಡಿಸುವ ಸಲಹಾ ಸೇವೆಯನ್ನು ಒದಗಿಸುವುದು.

ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 28.06.2021, ಸಂಜೆ 4.00 ಗಂಟೆವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು
DIPR/DDU/R.O:471/2021-22

ಕೋವಿಡ್‌-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮಹಾತ್ಮ ಗಾಂಧಿ ಉದ್ಯೋಗ ಖಾತರಿ ನೀಡುತ್ತಿದೆ

ಗ್ರಾಮೀಣ ಕರ್ನಾಟಕಕ್ಕೆ ಹಸಿರು ಹೊದಿಕೆ

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ

ಕ್ಷೀಣಿಸುತ್ತಿರುವ ಹಸಿರು ಹೊದಿಕೆಯಿಂದ ಉಂಟಾಗುತ್ತಿರುವ ಹವಾಮಾನ ಬದಲಾವಣೆಯನ್ನು ತಡೆಯಲು ಪರಿಸರ ಸಮತೋಲನ ಕಾಯ್ದುಕೊಳ್ಳುವ ಅಗತ್ಯತೆ ಇದೆ. ಇದಕ್ಕಾಗಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಬೃಹತ್ ಪ್ರಮಾಣದಲ್ಲಿ ಸಸಿಗಳನ್ನು ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದು ಶ್ಲಾಘನೀಯ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಗ್ರಾಮೀಣ ಪ್ರದೇಶದಲ್ಲಿ ನಿರುದ್ಯೋಗ ನಿವಾರಣೆಯೊಂದಿಗೆ ಆಸ್ತಿ ಸೃಜನೆಗೆ ಅವಕಾಶ ಕಲ್ಪಿಸಿದೆ. ಇದರೊಂದಿಗೆ ಪರಿಸರ ಸಂರಕ್ಷಣೆಗೆ ಪೂರಕ ಚಟುವಟಿಕೆಗಳು ಗ್ರಾಮೀಣ ಜನರ ಬದುಕನ್ನು ಉತ್ತಮಪಡಿಸಲು ನೆರವಾಗಿವೆ.

ರಾಜ್ಯದಲ್ಲಿ ಜೂನ್ 05, 2021ರಂದು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಾಂಕೇತಿಕವಾಗಿ ಸಸಿಗಳನ್ನು ನೆಡುವ ಮೂಲಕ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸುತ್ತಿದ್ದು, ಈ ಸಾಲಿನಲ್ಲಿ 1.75 ಕೋಟಿ ಸಸಿಗಳನ್ನು ರೈತರ ಜಮೀನುಗಳಲ್ಲಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ನೆಡಲಾಗುವುದು. ಇದರೊಂದಿಗೆ ಜಲ ಸಂರಕ್ಷಣೆಗೆ (Catch the rain) ಅರಣ್ಯ ಪ್ರದೇಶದಲ್ಲಿ 13.94 ಲಕ್ಷ ಘನ ಮೀಟರ್ ಇಂಗು ಗುಂಡಿಗಳನ್ನು ನಿರ್ಮಿಸಲಾಗುತ್ತಿದೆ.

ಈ ಮಹತ್ತರ ಕಾರ್ಯದಲ್ಲಿ ತಾವೆಲ್ಲರೂ ಭಾಗವಹಿಸಿ ಪರಿಸರ ಸಂರಕ್ಷಿಸುವಂತೆ ಈ ಮೂಲಕ ಕರೆ ನೀಡುತ್ತಿದ್ದೇನೆ.

ಭೂಮಿಯ ಮೇಲೆ ಹಸಿರುವ ಹೊದಿಕೆಯ ನಾಶದಿಂದ ಪರಿಸರದಲ್ಲಿ ವ್ಯತಿರಿಕ್ತ ಪರಿಣಾಮ ಉಂಟಾಗುತ್ತಿದೆ. ಇದರಿಂದ ಮಳೆ ಬೀಳುವ ಅಂತರದಲ್ಲಿ ವ್ಯತ್ಯಾಸ ಆಗುತ್ತಿರುವುದನ್ನು ಕಾಣುತ್ತಿದ್ದೇವೆ. ಇದಕ್ಕೆ ಪರಿಹಾರವೆಂದರೆ ಹಸಿರು ಹೊದಿಕೆಯನ್ನು ಹೆಚ್ಚಿಸುವುದು. ಇದಕ್ಕಾಗಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (ನರೇಗಾ) ಯೋಜನೆಯಡಿ ಶೇಕಡ 65 ರಷ್ಟು ಆರ್ಥಿಕ ವೆಚ್ಚವನ್ನು ನೈಸರ್ಗಿಕ ಸಂಪನ್ಮೂಲ ನಿರ್ವಹಣೆ ಕಾಮಗಾರಿಗಳ ಅನುಷ್ಠಾನಕ್ಕೆ ವಿನಿಯೋಗಿಸಲಾಗುತ್ತಿದೆ. ಗ್ರಾಮೀಣ ಕರ್ನಾಟಕದಲ್ಲಿ ಪರಿಸರ ಸಂರಕ್ಷಣೆಗೆ ಯಾವೆಲ್ಲಾ ಕಾಮಗಾರಿಗಳನ್ನು ಅನುಷ್ಠಾನಿಸಲಾಗುತ್ತಿದೆ ಎಂಬುದರ ಕುರಿತ ಪತ್ರಿಕೆಯೊಂದಿಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಮಾಹಿತಿಯನ್ನು ಹಂಚಿಕೊಂಡಿದ್ದಾರೆ.

■ ಉದ್ಯೋಗ ಖಾತರಿ ಯೋಜನೆ ಹಸಿರು ಹೊದಿಕೆಯಲ್ಲಿ ಯಾವ ರೀತಿ ಕೊಡುಗೆ ನೀಡುತ್ತಿದೆ?

ಮಹಾತ್ಮಗಾಂಧಿ ನರೇಗಾ ಯೋಜನೆಯಡಿ 2020-21 ನೇ ಸಾಲಿನಲ್ಲಿ 4,729.85 ಹೆಕ್ಟೇರ್ ಪ್ರದೇಶದಲ್ಲಿ ಅರಣ್ಯೀಕರಣ, 1,937.37 ಕಿ.ಮೀ ರಸ್ತೆ ಬದಿ ನೆಡು ತೋಪು, ರೈತರ ಜಮೀನಿನಲ್ಲಿ ಅರಣ್ಯ ಕೃಷಿಗಾಗಿ 50.22 ಲಕ್ಷ ಸಸಿಗಳನ್ನು ವಿತರಿಸಲಾಗಿದೆ. ಈ ಸಾಲಿನಲ್ಲಿಯೂ ವೈಯಕ್ತಿಕ ಹಾಗೂ ಸಾರ್ವಜನಿಕ ಸ್ಥಳಗಳ ಜಮೀನಿನಲ್ಲಿ ಅರಣ್ಯೀಕರಣಕ್ಕಾಗಿ 1.75 ಕೋಟಿ ಸಸಿಗಳನ್ನು ಬೆಳೆಸಲಾಗಿದೆ.

■ ನಾಟಿ ಮಾಡಿದ ಸಸಿಗಳ ಪೋಷಣೆ ಅವಶ್ಯಕತೆಯಿದ್ದು, ಇದಕ್ಕಾಗಿ ಯೋಜನೆಯಡಿ ಯಾವ ಕ್ರಮಗಳನ್ನು ತೆಗೆದುಕೊಂಡಿದೆ?

ಸಮುದಾಯ ಮತ್ತು ವೈಯಕ್ತಿಕ ಜಮೀನಿನಲ್ಲಿ ಸಸಿಗಳನ್ನು ನಾಟಿ ಮಾಡಿದ ನಂತರ ಅವು ಜೀವಂತವಾಗಿ ಉಳಿಯಲು ಮೂರು ವರ್ಷ ನಿರ್ವಹಣೆಗೆ ಅವಕಾಶ ಮಾಡಿದೆ. ಹಾಗೆಯೇ ವೈಯಕ್ತಿಕ ಫಲಾನುಭವಿಗಳಿಗೂ ಸಸಿಗಳ ನಿರ್ವಹಣೆಗೆ ನೆರವನ್ನು ನೀಡಲಾಗುತ್ತಿದೆ.

ದಿನಕ್ಕೆ ₹ 289/- ಕೂಲಿ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಆಯೋಜಿಸಿದ್ದ ಸಮಾರಂಭವೊಂದರಲ್ಲಿ ಗಿಡ ನೆಟ್ಟು, ನೀರೆರೆದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ

■ ಜಲಸಂರಕ್ಷಣೆಗೆ ಯೋಜನೆಯಡಿ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ?

ಸನ್ಮಾನ್ಯ ಪ್ರಧಾನ ಮಂತ್ರಿಯವರು ಮಳೆ ನೀರು ಸಂರಕ್ಷಣೆಗೆಎ ಘೋಷಿಸಿರುವ ಜಲಶಕ್ತಿ (Catch the rain) ಅಭಿಯಾನಕ್ಕೆ ರಾಜ್ಯದಲ್ಲಿಯೂ ಚಾಲನೆ ನೀಡಲಾಗಿದೆ. ಅಭಿಯಾನದಲ್ಲಿ ಸಮಗ್ರ ಕೆರೆ ಅಭಿವೃದ್ಧಿ, ಗೋಕಟ್ಟೆ ನಿರ್ಮಾಣ, ಚೆಕ್‌ಡ್ಯಾಂ, ಇಂಗುಗುಂಡಿಗಳು, ರೈತರ ಜಮೀನಿನಲ್ಲಿ ಬದು ಮತ್ತು ಕೃಷಿ ಹೊಂಡ ನಿರ್ಮಾಣ, ಕಲ್ಯಾಣಿಗಳ ಪುನಶ್ಚೇತನ ಸೇರಿದಂತೆ ಸಾಂಪ್ರದಾಯಿಕ ಜಲಮೂಲಗಳ ಪುನಶ್ಚೇತನ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

■ ಕೋವಿಡ್-19 ಸಂಕಷ್ಟಕ್ಕೆ ಒಳಗಾದ ಗ್ರಾಮೀಣ ಕುಟುಂಬಗಳಿಗೆ ಉದ್ಯೋಗ ಖಾತರಿ ಯೋಜನೆ ಹೇಗೆ ನೆರವಾಗಿದೆ?

ಕೊರೊನಾ ಸಂಕಷ್ಟದಲ್ಲಿ ಕೆಲಸ ಕಳೆದುಕೊಂಡು ಗ್ರಾಮಗಳಿಗೆ ಮರಳಿದ ಕುಟುಂಬಗಳಿಗೆ ಯೋಜನೆಯಡಿ ಪ್ರತಿ ಕುಟುಂಬಕ್ಕೆ 100 ದಿವಸ ಕೆಲಸ ನೀಡಲಾಗುತ್ತಿದೆ. ಕಳೆದ ಸಾಲಿನಲ್ಲಿ ಸುಮಾರು 57 ಲಕ್ಷ ಜನ ಕೂಲಿಕಾರರಿಗೆ 14.85 ಕೋಟಿ ಮಾನವ ದಿನಗಳ ಕೆಲಸ ಹಾಗೂ ಪ್ರಸಕ್ತ ಸಾಲಿನಲ್ಲಿ ಈಗಾಗಲೇ 23 ಲಕ್ಷ ಜನರಿಗೆ 2.42 ಕೋಟಿ ಮಾನವ ದಿನ ಕೆಲಸ ನೀಡಿದ್ದೇವೆ. ಕೊರೊನಾ ಸಂಕಷ್ಟದ ಕಾಲದಲ್ಲಿ ಒಟ್ಟು 8.30 ಲಕ್ಷ ಕುಟುಂಬಗಳಿಗೆ ಹೊಸದಾಗಿ ಉದ್ಯೋಗ ಚೀಟಿ ನೀಡಿದ್ದು, ಸುಮಾರು 19.87 ಲಕ್ಷ ಕೂಲಿಕಾರರು ಯೋಜನೆಯಡಿ ಸೇರ್ಪಡೆಯಾಗಿದ್ದಾರೆ. ಕೆಲಸ ನಿರ್ವಹಿಸುವ ಕೂಲಿಕಾರರಿಗೆ ಪ್ರತಿ ದಿನಕ್ಕೆ ₹289 ಕೂಲಿ ಹಣವನ್ನು ಅವರ ಖಾತೆಗೆ ಜಮೆ ಮಾಡಲಾಗುತ್ತಿದೆ.

ಪ್ರಸ್ತುತಿ: ಪಿ.ಪಿ. ಬ್ರ್ಯಾಂಡ್ ಸ್ಪಾಟ್

ಪ್ರತಿ ಕುಟುಂಬಕ್ಕೆ 100 ದಿವಸ ಕೆಲಸ ಖಾತರಿ

■ ಕೊರೊನಾ ಲಾಕಡೌನ್ ಸಂದರ್ಭದಲ್ಲಿ ನರೇಗಾ ಕೆಲಸಕ್ಕೆ ಅನುಮತಿಸಿರುವುದರಿಂದ, ಜನರಿಗೆ ಯಾವ ರೀತಿ ಕೆಲಸಗಳನ್ನು ನೀಡಲಾಗುತ್ತಿದೆ?

ಕೋವಿಡ್-19 ಸೋಂಕು ಹರಡದಂತೆ ವೈಯಕ್ತಿಕ ಅಂತರದಲ್ಲಿ ಒಂದು ಕಾಮಗಾರಿಯಲ್ಲಿ ಗರಿಷ್ಠ 40 ಜನ ಕೂಲಿಕಾರರು ಮೀರದಂತೆ ಕೆಲಸ ನೀಡಲಾಗುತ್ತಿದೆ. ಕೆಲಸದಲ್ಲಿ ತೊಡಗಿದ ಕೂಲಿಕಾರರಿಗೆ ಮಾಸ್ಕ್ ಧರಿಸುವುದು, ಆಗಾಗ್ಗೆ ಕೈಗಳನ್ನು ಸ್ವಚ್ಛವಾಗಿಸಿಕೊಳ್ಳಲು ನೀರು/ಸೋಪು/ಸ್ಯಾನಿಟೈಸರ್ ವ್ಯವಸ್ಥೆ ಕಲ್ಪಿಸುತ್ತಿದ್ದೇವೆ. ಕೂಲಿಕಾರರಲ್ಲಿ ಕೋವಿಡ್ ಲಕ್ಷಣಗಳು ಕಂಡು ಬಂದಲ್ಲಿ ಕೂಡಲೇ ಸ್ಥಳೀಯ ಆರೋಗ್ಯ ಕಾರ್ಯಕರ್ತರಿಗೆ ಮಾಹಿತಿ ನೀಡಿ ಚಿಕಿತ್ಸೆ ಪಡೆಯಲು ವ್ಯವಸ್ಥೆ ಮಾಡಲಾಗುತ್ತಿದೆ. ಇನ್ನೊಂದು ಅಂಶವೆಂದರೆ ವೈಯಕ್ತಿಕ ಅಂತರ ದೃಷ್ಟಿಯಿಂದ ವೈಯಕ್ತಿಕ ಕಾಮಗಾರಿ ಅನುಷ್ಠಾನಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದ್ದೇವೆ. ರೈತರು ತಮ್ಮ ಸ್ವಂತ ಜಮೀನುಗಳಲ್ಲಿ ಕಾಮಗಾರಿ ಅನುಷ್ಠಾನಕ್ಕಾಗಿ ಯೋಜನೆಯಡಿ ₹ 2.5 ಲಕ್ಷ ವರೆಗೆ ನೆರವು ನೀಡಲಾಗುತ್ತಿದೆ.

ರೈತರ ಬಾಳಿಗೆ ತಂಪೆರೆದ ಉದ್ಯೋಗ ಖಾತರಿ

ಬುಡ್ರ್ಯಾನ್ ಕೊಳ್ಳದಲ್ಲಿ ಕೆರೆ ನಿರ್ಮಾಣ ಕಾಮಗಾರಿಯಲ್ಲಿ ನಿರತರಾಗಿರುವ ಕೂಲಿ ಕಾರ್ಮಿಕರು

ಬೆಳಗಾವಿ ತಾಲ್ಲೂಕಿನ ಹೊನಗಾ ಗ್ರಾಮ ಪಂಚಾಯಿತಿ ಕಳೆದ ವರ್ಷದ ಲಾಕ್‌ಡೌನ್ ಅವಧಿಯನ್ನೇ ಸದ್ಬಳಕೆ ಮಾಡಿಕೊಂಡು ನರೇಗಾ ಯೋಜನೆಯಡಿ ಬೃಹತ್ ಕೆರೆಯೊಂದನ್ನು ನಿರ್ಮಿಸಿದೆ. ಆಗ ನೂರಾರು ಕುಟುಂಬಗಳಿಗೆ ಆರ್ಥಿಕವಾಗಿ ಶಕ್ತಿ ತುಂಬಿದ್ದ ಈ ಕಾಮಗಾರಿ, ಈಗ ಸುತ್ತಲಿನ ರೈತರ ಜಮೀನುಗಳಲ್ಲಿ ಹಸಿರ ಹೊನಲು ಹರಿಸಿದೆ.

ಹೊನಗಾ ಗಾಮ ಪಂಚಾಯಿತಿ ವ್ಯಾಪ್ತಿಯ ಅರಣ್ಯ ಪ್ರದೇಶದಲ್ಲಿ ಹರಿದು ಬರುವ ನೀರನ್ನು ತಡೆ ಹಿಡಿಯಲು ಯಾವುದೇ ವ್ಯವಸ್ಥೆ ಇರಲಿಲ್ಲ. ಹಾಗಾಗಿ ಅರಣ್ಯ ಪ್ರದೇಶದಿಂದ ಮಳೆಗಾಲದಲ್ಲಿ ಹರಿದು ಬರುವ ದೊಡ್ಡ ಪ್ರಮಾಣದ ನೀರು ರೈತರ ಜಮೀನುಗಳನ್ನು ಕೊರೆದು ಫಲವತ್ತಾದ ಭೂಮಿ ಹಾಳಾಗುತ್ತಿತ್ತು. ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬುಡ್ರ್ಯಾನಕೊಳ್ಳ ಅರಣ್ಯ ಪ್ರದೇಶದಲ್ಲಿ ನರೇಗಾ ಯೋಜನೆ ಮೂಲಕ 3.5 ಎಕರೆ ವಿಸ್ತಾರದ ಕೆರೆ ನಿರ್ಮಿಸಲಾಗಿದೆ. ಲಕ್ಷಾಂತರ ಲೀಟರ್ ನೀರನ್ನು ಹಿಡಿದಿಡಬಲ್ಲ ಕೆರೆಯಿಂದಾಗಿ ಈಗ ಅಲ್ಲಿನ ಚಿತ್ರಣವೇ ಬದಲಾಗಿದೆ.

ಮಹಿಳೆಯರ ಸಕ್ರಿಯ ಪಾಲ್ಗೊಳ್ಳುವಿಕೆ

ಹಳೆ ಹೊಸೂರ, ಜುಮನಾಳ, ಕೆಂಚನಟ್ಟಿ, ಹೊಸ ಹೊಸೂರ, ಈರಣಬಾವಿ, ದಾಸರವಾಡಿ ಹಾಗೂ ಹೊನಗಾ ಈ ಗ್ರಾಮಗಳಲ್ಲಿ ಸಣ್ಣ ರೈತರು, ಬಡತನ ಹೊಂದಿದವರು ಹೆಚ್ಚಿನ ಪ್ರಮಾಣದಲ್ಲಿ ಇದ್ದಾರೆ. ಇಲ್ಲಿ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ.

13,370 ಮಾನವ ದಿನಗಳು: ಈ ಕೆರೆ ನಿರ್ಮಾಣಕ್ಕೆ ಹಳೆ ಹೊಸೂರ, ಜುಮಾನ, ಕೆಂಚನಟ್ಟಿ, ಹೊಸ ಹೊಸೂರ, ಈರಣಬಾವಿ, ದಾಸರವಾಡಿ ಹಾಗೂ ಹೊನಗಾ ಸೇರಿದಂತೆ, ಒಟ್ಟು 7 ಗ್ರಾಮಗಳ ಕೂಲಿ ಕಾರ್ಮಿಕರು ನರೇಗಾ ಯೋಜನೆಯಲ್ಲಿ ಕೆಲಸ ಮಾಡಿದ್ದಾರೆ. ಈ ಕಾಮಗಾರಿಯಲ್ಲಿ 13,370 ಮಾನವ ದಿನಗಳಷ್ಟು ಕೆಲಸ ನಡೆದಿದ್ದು, ಒಟ್ಟು ₹ 60.60 ಲಕ್ಷ ಖರ್ಚು ಮಾಡಲಾಗಿದೆ.

ನೈಸರ್ಗಿಕವಾದ ಕಲ್ಲು ಹಾಗೂ ಮಣ್ಣನ್ನೇ ಬಳಸಿಕೊಂಡು ನೀರಿನ ತಡೆಗೋಡೆಯನ್ನು (ಬಂಡ್) ನಿರ್ಮಿಸಲಾಗಿದೆ. ದೊಡ್ಡ ದೊಡ್ಡ ಗಾತ್ರದ ಕಲ್ಲು ಬಂಡೆಗಳನ್ನು ಕೂಲಿ ಕಾರ್ಮಿಕರೇ ಒಡೆದು ಬಂಡನ್ನು ನಿರ್ಮಿಸಿದ್ದಾರೆ.

ರೈತರಿಗೆ ಅನುಕೂಲ: ಈ ಕೆರೆಯು ಗುಡ್ಡದ ಎತ್ತರವಾದ ಪ್ರದೇಶದಲ್ಲಿ ಇರುವುದರಿಂದ ಕೆರೆಯ ಪೂರ್ವ ಭಾಗದಲ್ಲಿ ಸಣ್ಣ ರೈತರಿಗೆ ಸೇರಿದ ಸುಮಾರು 50 ರಿಂದ 60 ಎಕರೆಯಷ್ಟು ಜಮೀನುಗಳು ಇವೆ. ಇಲ್ಲಿ ಭತ್ತ ಹಾಗೂ ತರಕಾರಿ ಬೆಳಗಳನ್ನು ಬೆಳೆಯುತ್ತಿದ್ದು, ಹೆಚ್ಚು ನೀರಿನ ಅವಶ್ಯಕತೆ ಇದೆ. ಅಂದಾಜು 9.2 ದಶಲಕ್ಷ ಲೀಟರ್ ನೀರು ಸಂಗ್ರಹ ಸಾಮರ್ಥ್ಯದ ಕೆರೆ ಪೂರ್ಣ ತುಂಬಿದರೆ ಈ ಎಲ್ಲ ಜಮೀನುಗಳ ಕೊಳವೆ ಬಾವಿ ಹಾಗೂ ಅಲ್ಪ ಆಳದ ಬಾವಿಗಳು ಬೇಸಿಗೆ ಕಾಲದಲ್ಲಿ ಬತ್ತುವುದಿಲ್ಲ. 12 ತಿಂಗಳು ರೈತರು ತಮಗೆ ಬೇಕಾದ ಬೆಳೆಗಳನ್ನು ಬೆಳೆಯಬಹುದು.

ಬರದ ನಾಡಲ್ಲೂ ಬಂಗಾರದ ಬೆಳೆ ತೆಗೆದ ಕುಷ್ಟಗಿ ರೈತ

ಮಂದಹಾಸ ಮೂಡಿಸಿದ ಪೇರಲ

ಬರಪೀಡಿತ ಕೊಪ್ಪಳ ಜಿಲ್ಲೆಯಲ್ಲಿ ಮಳೆಯಾಶ್ರಿತ ಬೆಳೆಗಳನ್ನು ಬೆಳೆದು ನಿರಂತರವಾಗಿ ನಷ್ಟ ಅನುಭವಿಸುವ ರೈತರೇ ಹೆಚ್ಚು. ಆದರೆ, ಅದೇ ಜಿಲ್ಲೆಯ ರೈತರೊಬ್ಬರು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (ನರೇಗಾ) ಯೋಜನೆಯ ನೆರವು ಪಡೆದು ಪೇರಲ ಬೆಳೆದು ಯಶಸ್ಸು ಕಂಡಿದ್ದಾರೆ.

ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಗುಮಗೇರಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಾಗರಾಳ ಗ್ರಾಮದ ನಾಗರಾಜ ಎಂಬ ರೈತ ನರೇಗಾ ನೆರವಿನಲ್ಲಿ ತಮ್ಮ ಕೃಷಿ ಜೀವನದ ದಿಕ್ಕನ್ನೇ ಬದಲಿಸಿಕೊಂಡವರು. ತನ್ನ 2.60 ಎಕರೆಯ ಜಮೀನಿನಲ್ಲಿ ತೋಟಗಾರಿಕೆ ಇಲಾಖೆಯಿಂದ ನರೇಗಾ ಯೋಜನೆಯಡಿ ಪೇರಲ ಬೆಳೆಯನ್ನು ಬೆಳೆದಿರುವ ಇವರು, ಕೃಷಿಯನ್ನು ಲಾಭದಾಯಕ ವೃತ್ತಿಯನ್ನಾಗಿ ಪರಿವರ್ತಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಮೊದಲು ಮಳೆಯಾಶ್ರಿತ ಬೆಳೆಗಳಾದ ಜೋಳ, ಮೆಕ್ಕೆಜೋಳ, ಸಜ್ಜೆ, ಸೂರ್ಯಕಾಂತಿಯನ್ನು ಬೆಳೆಯುತ್ತಿದ್ದರು. ಆದರೆ, ಆ ಬೆಳೆಗಳಿಂದ ಅವರಿಗೆ ನಿರೀಕ್ಷಿತ ಪ್ರಮಾಣದ ಆದಾಯ ಸಿಗುತ್ತಿರಲಿಲ್ಲ. ಇದರಿಂದ ಅವರಿಗೆ ಕುಟುಂಬ ನಿರ್ವಹಣೆಯೂ ಕಷ್ಟಕರವಾಗಿತ್ತು.

ಮಳೆಯಾಶ್ರಿತ ಬೆಳೆಗಳಿಂದ ನಿರೀಕ್ಷಿತ ಪ್ರಮಾಣದ ಆದಾಯ ದೊರಕದೇ ಸಂಕಷ್ಟಕ್ಕೆ ಸಿಲುಕಿದ್ದ ನಾಗರಾಜ, ನರೇಗಾ ಯೋಜನೆಯಡಿ ತೋಟಗಾರಿಕಾ ಚಟುವಟಿಕೆಗೂ ನೆರವು ದೊರೆಯುವ ಕುರಿತು ಗ್ರಾಮದ ಕಾಯಕ ಬಂಧುವೊಬ್ಬರಿಂದ ಮಾಹಿತಿ ಪಡೆದಿದ್ದರು. ನಂತರ ಗುಮಗೇರಾ ಗ್ರಾಮ ಪಂಚಾಯಿತಿ ಕಚೇರಿಗೆ ಭೇಟಿನೀಡಿ ತಮ್ಮ ಸಂಕಷ್ಟವನ್ನು ಹೇಳಿಕೊಂಡರು. ರೈತನ ಸಂಕಷ್ಟಕ್ಕೆ ಸ್ಪಂದಿಸಿದ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹಾಗೂ ತಾಂತ್ರಿಕ ಸಹಾಯಕರು, ಇರುವ ಜಮೀನಿನಲ್ಲಿಯೇ ವೈಯಕ್ತಿಕ ಕಾಮಗಾರಿಯಾಗಿ ಪೇರಲ ಬೆಳೆಯನ್ನು ಬೆಳೆಯುವಂತೆ ಸಲಹೆ ನೀಡಿದ್ದರು. ಬಳಿಕ ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿ ಕಳೆದ ವರ್ಷ ತೋಟಗಾರಿಕಾ ಇಲಾಖೆಯಿಂದ ನರೇಗಾದಡಿ 400 ಸಸಿಗಳನ್ನು ನಾಟಿ ಮಾಡಿಸಲಾಯಿತು.

ತೋಟದಲ್ಲಿ ಸಮೃದ್ಧವಾಗಿ ಬೆಳೆದಿರುವ ಪೇರಳೆ ಹಣ್ಣುಗಳೊಂದಿಗೆ ರೈತ ನಾಗಾರಾಜ ಕುಟುಂಬದ ಮಹಿಳೆ

> ಇದುವರೆಗೂ ನಾನು ಒಣಬೇಸಾಯ ಮಾಡುವ ಮೂಲಕ ನಿರೀಕ್ಷಿತ ಮಟ್ಟದ ಆದಾಯವನ್ನು ಗಳಿಸಲು ಸಾಧ್ಯವಾಗುತ್ತಿರಲಿಲ್ಲ. ಬಳಿಕ ನರೇಗಾ ಯೋಜನೆಯಡಿ ತೋಟಗಾರಿಕೆ ಬೆಳೆಯಾದ ಪೇರಲ ಬೆಳೆಯನ್ನು ಬೆಳೆದು ಇದೀಗ ನಾನು ಕೈತುಂಬಾ ಆದಾಯ ಗಳಿಸಲು ಅನುಕೂಲವಾಗಿದೆ. ಜೊತೆಗೆ ಮಕ್ಕಳ ಶೈಕ್ಷಣಿಕ ಭವಿಷ್ಯ ಹಾಗು ನನ್ನ ಆರ್ಥಿಕ ಮಟ್ಟವು ಸುಧಾರಿಸಿದ್ದು, ಗ್ರಾಮದ ಇತರ ರೈತರಿಗೂ ನರೇಗಾ ಯೋಜನೆಯಡಿ ತೋಟಗಾರಿಕಾ ಬೆಳೆಯನ್ನು ಅನುಸರಿಸುವಂತೆ ಸಲಹೆ ನೀಡುತ್ತಿದ್ದೇನೆ.
>
> **-ನಾಗರಾಜ** ರೈತ, ಗುಮಗೇರಾ ಕುಷ್ಟಗಿ

ಸಮೃದ್ಧವಾಗಿ ಬೆಳೆದ ಪೇರಲ: ಕುಟುಂಬದವರೆಲ್ಲಾ ಸೇರಿಕೊಂಡು ತಮ್ಮ ಜಮೀನಿನಲ್ಲೇ ನರೇಗಾದಡಿ ಕೆಲಸ ಮಾಡುವ ಮೂಲಕ ಪೇರಲ ಬೆಳೆಯನ್ನು ಪೋಷಣೆ ಮಾಡಿದ್ದಾರೆ. ಇದೀಗ ಪೇರಲ ಬೆಳೆ ಸಮೃದ್ಧವಾಗಿ ಬೆಳೆದಿದ್ದು, ಸಾಕಷ್ಟು ಹಣ್ಣುಗಳನ್ನು ಬಿಟ್ಟಿದೆ. ಪೇರಳೆಯ ಫಸಲನ್ನು ಕಂಡು ನಾಗರಾಜ ಅವರ ಮುಖದಲ್ಲಿ ಮಂದಹಾಸ ಮೂಡಿರುವುದಲ್ಲದೇ, ಅಧಿಕ ಲಾಭವನ್ನು ತಂದುಕೊಡುವ ಮೂಲಕ ಪೇರಳೆ ಬೆಳೆ ಕುಟುಂಬದ ಆರ್ಥಿಕ ಅಭದ್ರತೆಯನ್ನು ದೂರವಾಗಿಸಿದೆ.

ರೈತರಿಗೆ ಮಾದರಿ: ಗುಮಗೇರಾ ಗ್ರಾಮದ ರೈತ ನಾಗರಾಜ ಅವರ ಪೇರಲ ಬೆಳೆಯನ್ನು ಕಂಡು, ಗ್ರಾಮದಲ್ಲಿ ಒಣಬೇಸಾಯ ಮಾಡುತ್ತಿರುವ ಇತರ ರೈತರು ಕೂಡ ಈ ಬೆಳೆಗೆ ಆಕರ್ಷಿತಗೊಂಡಿದ್ದಾರೆ. ಜೊತೆಗೆ ತಮ್ಮ ಗ್ರಾಮ ಪಂಚಾಯಿತಿಗೆ ಹೋಗಿ ತೋಟಗಾರಿಕಾ ಬೆಳೆಗಳನ್ನು ಬೆಳೆಯಲು ಆಸಕ್ತಿಯನ್ನು ತೋರುತ್ತಿದ್ದಾರೆ. ನರೇಗಾ ನೆರವಿನಲ್ಲಿ ತೋಟಗಾರಿಕೆಯಲ್ಲಿ ಯಶಸ್ಸು ಸಾಧಿಸುವುದಕ್ಕೆ ನಾಗರಾಜ ಅವರ ತೋಟ ಒಂದು ಮಾದರಿ ಕಾರ್ಯಕ್ಷೇತ್ರವಾಗಿ ಪರಿವರ್ತನೆಯಾಗಿದೆ.

ನಾಗಮಂಗಲ ತಾಲ್ಲೂಕಿನ ಬ್ರಹ್ಮದೇವರಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ನರೇಗಾ ಯೋಜನೆ ಅಡಿಯಲ್ಲಿ ನಿರ್ಮಿಸಿರುವ ಮಾದರಿ ಉದ್ಯಾನ

ಸಾವಳಸಂಗದ ನೆಡುತೋಪಿನಲ್ಲಿರುವ ತುಂಬಿದ ಚೆಕ್‌ಡ್ಯಾಂ ಬಳಿ ಕೈಮುಗಿದು ಕುಳಿತಿರುವ ಸ್ಥಳೀಯ ಹಿರೀಕ ನರೇಗಾ ಯೋಜನೆಗೆ ಧನ್ಯವಾದ ಅರ್ಪಿಸುತ್ತಿರುವುದು

ಬರದ ನಾಡಿಗೆ ಮಲೆನಾಡ ಸಿರಿ ಹೊದಿಸಿದ ನರೇಗಾ

ಬರಪೀಡಿತ ಜಲ್ಲೆ ಎಂಬ ಹಣೆಪಟ್ಟಿ ಹೊತ್ತಿದ್ದ ವಿಜಯಪುರ ಜಿಲ್ಲೆಯಲ್ಲೊಂದು ಮಲೆನಾಡ ನಿಸರ್ಗ ಸಂಭ್ರಮ ನಿರ್ಮಾಣವಾಗಿದೆ. ಹೌದು, ವಿಜಯಪುರ ಜಿಲ್ಲೆ ಇಂಡಿ ತಾಲ್ಲೂಕಿನ ಕೊಳುರಗಿ ಪಂಚಾಯಿತಿ ವ್ಯಾಪ್ತಿಯ ಸಾವಳಸಂಗ ಗ್ರಾಮವು ಪ್ರಕೃತಿ ಪ್ರಿಯರನ್ನು ಕೈಬೀಸಿ ಕರೆಯುತಿದೆ.

ಸಾವಳಸಂಗ ಗ್ರಾಮದಲ್ಲಿ ಎತ್ತರದ ಗುಡ್ಡಗಡು ಪ್ರದೇಶದಲ್ಲಿರುವ 100 ಎಕರೆ ಸರ್ಕಾರಿ ಜಮೀನಿನಲ್ಲಿ ನರೇಗಾ ಯೋಜನೆಯಡಿ ನೆಡುತೋಪು ನಿರ್ಮಿಸುವ ಯೋಜನೆಯನ್ನು 2018ರಲ್ಲಿ ಕೈಗೆತ್ತಿಕೊಳ್ಳಲಾಗಿತ್ತು. ₹ 2.11 ಕೋಟಿ ವೆಚ್ಚದ ಕಾಮಗಾರಿಯಲ್ಲಿ 56,596 ಮಾನವ ದಿನಗಳಷ್ಟು ಉದ್ಯೋಗ ಸೃಜಿಸುವ ಗುರಿ ಹೊಂದಲಾಗಿತ್ತು.

2021–22ನೇ ಸಾಲಿನ ಮೇ ಅಂತ್ಯದವರೆಗೆ 2,000 ಇಂಗು ಗುಂಡಿಗಳನ್ನು ನಿರ್ಮಿಸಿ ಒಟ್ಟು 4,000 ಘನ ಮೀಟರ್ ಅಳತೆಯಲ್ಲಿ ಮಣ್ಣು ಮತ್ತು ನೀರು ಸಂರಕ್ಷಣೆ ಮಾಡುವ ಕಾಮಗಾರಿ ಪೂರ್ಣಗೊಂಡಿದೆ. 33 ಹೆಕ್ಟೇರ್ ಪ್ರದೇಶದಲ್ಲಿ 11,700 ಗಿಡಗಳನ್ನು ನೆಡಲಾಗಿದೆ. ಈ ಕಾಮಗಾರಿಯಲ್ಲಿ 13,420 ಮಾನವ ದಿನಗಳನ್ನು ಸೃಜಿಸಲಾಗಿದೆ. ಈ ಕಾಮಗಾರಿಯಿಂದ 85.95 ಲಕ್ಷ ಲೀಟರ್‌ಗಿಂತ ಹೆಚ್ಚು ನೀರು ಇಂಗಿಸುವುದಕ್ಕೆ ಅವಕಾಶ ಸೃಷ್ಟಿಯಾಗಿದೆ. ಈ ಯೋಜನೆಯಡಿ ಇಲ್ಲಿ ಪ್ರತಿ ದಿನ 25ಕ್ಕೂ ಹೆಚ್ಚು ಕೂಲಿ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಾರೆ.

ಖಾತ್ರಿ ಕಾರ್ಮಿಕರಿಗೆ ತಾಗದ ಸೋಂಕು

ಮನುಕುಲವನ್ನು ಎಗ್ಗಿಲ್ಲದಂತೆ ಭಾದಿಸುತ್ತಿರುವ ಭಯಾನಕ ಕೊರೊನಾ ಸೋಂಕಿನಿಂದ ಬಚಾವ್ ಮಾಡಬೇಕೆಂಬ ದೂರದೃಷ್ಟಿಯಿಂದ ಸರ್ಕಾರ ಲಾಕ್‌ಡೌನ್ ಹೇರಿದೆ. ನರೇಗಾ ಯೋಜನೆ ಅಡಿಯಲ್ಲಿ ಅಂದಾಜು 35 ವಿವಿಧ ಕಾಮಗಾರಿಗಳು ಚಾಲ್ತಿಯಲ್ಲಿವೆ. ಸರ್ಕಾರದ ಲಾಕ್‌ಡೌನ್ ಕಟ್ಟುನಿಟ್ಟಿನ ಕ್ರಮಗಳನ್ನು ಅನುಸರಿಸಿ ನರೇಗಾ ಕೂಲಿ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಾರೆ. ಸ್ಯಾನಿಟೈಸರ್ ಬಳಕೆ, ಮಾಸ್ಕ್ ಧರಿಸುವುದು, ಅಂತರ ಕಾಯ್ದುಕೊಳ್ಳುವ ಮೂಲಕ ಸೋಂಕು ಹರಡದಂತೆ ಜಾಗ್ರತೆಯಿಂದ ಕೆಲಸ ಮಾಡುತ್ತಿದ್ದಾರೆ.

ನೆಡುತೋಪು ನಿರ್ಮಾಣ: ಪ್ರಸಕ್ತ ಸಾಲಿನಲ್ಲಿ ಅಂದಾಜು ₹82.98 ಲಕ್ಷ ವೆಚ್ಚದಲ್ಲಿ 24 ಹೆಕ್ಟೇರ್ ಪ್ರದೇಶದಲ್ಲಿ 7,200 ಗಿಡಗಳ ನೆಡುತೋಪು ನಿರ್ಮಾಣ ಮಾಡುವ ಕ್ರಿಯಾಯೋಜನೆ ರೂಪಿಸಲಾಗಿದೆ. 19,486 ಮಾನವ ದಿನಗಳ ಸೃಜನೆಯ ಗುರಿ ಇದೆ. ಬೇವು, ಹೊಂಗೆ, ಮಾವು, ಆಲ. ಅರಳಿ, ಹುಣಸೆ, ಹಿಪ್ಪೆ, ನೇರಳೆ, ನೆಲ್ಲಿ, ಬಿದಿರು, ಪತ್ರಿ, ಪೆಲ್ಟೊಫಾರ್ಮ್, ಸಂಕೇಶ್ವರ ಹೀಗೆ ತರಹೇವಾರಿ ಗಿಡಗಳನ್ನು ನೆಡುವ ಕೆಲಸ ಪ್ರಗತಿಯಲ್ಲಿದೆ.

ಅಂತರ್ಜಲ ಮಟ್ಟ ಹೆಚ್ಚಳ ಸಾವಳಸಂಗದಲ್ಲಿ ನರೇಗಾ ಯೋಜನೆ ನೆರವಿನಲ್ಲಿ ಒಟ್ಟು ಐದು ಚೆಕ್ ಡ್ಯಾಮ್‌ಗಳನ್ನು ನಿರ್ಮಿಸಲಾಗಿದೆ. ಇದರಿಂದ ಸುತ್ತಮುತ್ತಲಿನ ರೈತರ ಕೊಳವೆಬಾವಿ, ಬಾವಿಗಳು ಮತ್ತು ಕೆರೆ–ಕಟ್ಟೆಗಳಲ್ಲಿ ನೀರಿನ ಮಟ್ಟ ಹೆಚ್ಚಿದೆ.

ಈ ಹಿಂದೆ ಕೊಳವೆಬಾವಿಯಲ್ಲಿ 300ರಿಂದ 400 ಅಡಿ ಆಳದಲ್ಲಿ ನೀರು ದೊರೆಯುತ್ತಿತ್ತು. ಈಗ 100 ಅಡಿಗಳ ಆಳದಲ್ಲಿ ನೀರು ಸಿಗುತ್ತಿದೆ ಎನ್ನುತ್ತಾರೆ ಇಲ್ಲಿನ ರೈತರು. ಇದರಿಂದಾಗಿ ಸುತ್ತಮುತ್ತಲಿನ ಗ್ರಾಮಗಳಲ್ಲಿ 30ಕ್ಕೂ ಹೆಚ್ಚು ಕೊಳವೆಬಾವಿಗಳು ಮರುಜೀವ ಪಡೆದಿವೆ.

ನೆರೆಯ ಜಿಲ್ಲೆ, ರಾಜ್ಯಕ್ಕೆ ಅಲೆದಾಟ ನಿಂತಿದೆ:

ಕೃಷಿಯನ್ನೇ ಮೂಲ ಕಸುಬಾಗಿಸಿಕೊಂಡ ಜನರು ಇಲ್ಲಿನ ಗುಡ್ಡಗಾಡು ಪ್ರದೇಶದಲ್ಲಿ ಸರಿಯಾಗಿ ಮಳೆ–ಬೆಳೆ ಇಲ್ಲದೇ ಹೊಟ್ಟೆಪಾಡಿಗಾಗಿ ಉದ್ಯೋಗವನ್ನು ಅರಸಿ ನೆರೆಯ ಜಿಲ್ಲೆ, ರಾಜ್ಯಗಳಿಗೆ ಗುಳೆ ಹೋಗುತ್ತಿದ್ದರು. ಆದರೆ, ನರೇಗಾ ಯೋಜನೆಯು ಉದ್ಯೋಗ ನೀಡಿ ಸ್ವ ಗ್ರಾಮದಲ್ಲಿ ನೆಲೆ ನಿಲ್ಲುವಂತೆ ಮಾಡಿದೆ. ಕೋವಿಡ್ ಸಂಕಷ್ಟದಲ್ಲಿಯೂ ಉದ್ಯೋಗ ಕೊಟ್ಟು ಹೊಟ್ಟೆ ತುಂಬಿಸುತ್ತಿದೆ. ಇದರಿಂದ ವಲಸೆ ಅಲೆದಾಟ ತಪ್ಪಿದಂತಾಗಿದೆ.

ರಾಜ್ಯದ ಹಲವು ಜಿಲ್ಲೆಗಳಲ್ಲಿ ಧಾರಾಕಾರ ಮಳೆ: ನೆಲಕ್ಕುರುಳಿದ ವಿದ್ಯುತ್ ಕಂಬಗಳು

600ಕ್ಕೂ ಹೆಚ್ಚು ಬಾಳೆ ಗಿಡ ಧರೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವು ಜಿಲ್ಲೆಗಳಲ್ಲಿ ಶುಕ್ರವಾರ ಧಾರಾಕಾರ ಮಳೆಯಾಗಿದೆ.

ಚಿತ್ರದುರ್ಗ ಜಿಲ್ಲೆಯ ಕೆಲವೆಡೆ ಗುರುವಾರ ರಾತ್ರಿ ಮತ್ತು ಶುಕ್ರವಾರ ಮಧ್ಯಾಹ್ನ ಗುಡುಗು-ಮಿಂಚು ಸಹಿತ ಧಾರಾಕಾರ ಮಳೆ ಸುರಿದಿದೆ. ಹಿರಿಯೂರು ತಾಲ್ಲೂಕಿನ ಓಣಿ ಹಟ್ಟಿಯಲ್ಲಿ ದನದ ಕೊಟ್ಟಿಗೆಯೊಂದು ಕುಸಿದು ಹಸುವೊಂದು ಸ್ಥಳದಲ್ಲೇ ಮೃತಪಟ್ಟಿದೆ.

ಹಿರಿಯೂರು ತಾಲ್ಲೂಕಿನ ಕರಿಯಾಲ ಗ್ರಾಮದಲ್ಲಿ ಗುರುವಾರ ರಾತ್ರಿ ಸುರಿದ ಭಾರಿ ಮಳೆಗೆ 600ಕ್ಕೂ ಹೆಚ್ಚು ಫಸಲಿಗೆ ಬಂದಿದ್ದ ಬಾಳೆ ಗಿಡಗಳು, ಐದು ತೆಂಗಿನ ಮರಗಳು ಧರೆಗೆ ಉರುಳಿವೆ. ಓಣಿ ಹಟ್ಟಿಯಲ್ಲಿ 5 ಗುಡಿಸಲುಗಳು ಕುಸಿದುಬಿದ್ದಿವೆ. ತಾಲ್ಲೂಕಿನಲ್ಲಿ 25ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ನೆಲಕ್ಕುರುಳಿವೆ. ಒಂದು ಪರಿವರ್ತಕ ಹಾನಿಗೆ ಒಳಗಾಗಿದೆ.

ಚಿತ್ರದುರ್ಗ ನಗರ ಸೇರಿ ತಾಲ್ಲೂಕಿನ ಕೆಲವೆಡೆ ಶುಕ್ರವಾರ ಮಧ್ಯಾಹ್ನ 1.30ಕ್ಕೆ ಮೋಡ ಮುಸುಕಿದ ವಾತಾವರಣ ಇತ್ತು. 2.30ಕ್ಕೆ ಆರಂಭವಾದ ಮಳೆ ಕೆಲವೇ ಕ್ಷಣಗಳಲ್ಲಿ ಬಿರುಸು ಪಡೆಯಿತು. ಗುಡುಗು-ಮಿಂಚು ಸಹಿತ ಒಂದು ತಾಸು ಉತ್ತಮ ಮಳೆಯಾಯಿತು.

ದಾವಣಗೆರೆ, ಕೊಡಗು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲೂ ಉತ್ತಮ ಮಳೆಯಾಗಿದೆ. ಚಾಮರಾಜನಗರ ಜಿಲ್ಲೆಯ ಮಹದೇಶ್ವರ ಬೆಟ್ಟ, ಚಾಮರಾಜನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಒಂದು ತಾಸಿಗೂ ಹೆಚ್ಚು ಮಳೆ ಸುರಿದಿದೆ.

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಕರಿಯಾಲ ಗ್ರಾಮದಲ್ಲಿ ಗುರುವಾರ ರಾತ್ರಿ ಸುರಿದ ಭಾರಿ ಮಳೆಗೆ ಫಸಲಿಗೆ ಬಂದಿದ್ದ ಅನೇಕ ಬಾಳೆ ಗಿಡಗಳು ಧರೆಗೆ ಉರುಳಿವೆ.

ಸಿಡಿಲಿಗೆ 12 ಕುರಿಗಳ ಸಾವು

ಹುಬ್ಬಳ್ಳಿ: ಬೆಳಗಾವಿ, ವಿಜಯನಗರ, ಉತ್ತರ ಕನ್ನಡ ಜಿಲ್ಲೆಗಳಲ್ಲೂ ಮಳೆಯಾಗಿದೆ.

ಹೊಸಪೇಟೆ ತಾಲ್ಲೂಕಿನ ಕಲ್ಲಹಳ್ಳಿಯ-ಲ್ಲಿ ಗುರುವಾರ ಸಂಜೆ ಗುಡುಗು, ಸಿಡಿಲಿಗೆ 12 ಕುರಿಗಳು ಸಾವಿಗೀಡಾಗಿವೆ. ಹೊಸಪೇಟೆ ತಾಲ್ಲೂಕಿನ ಮಲಪನಗುಡಿ-ಸಂಕ್ಲಾಪುರ ರಸ್ತೆಯಲ್ಲಿ ಹನ್ನೆರಡು ವಿದ್ಯುತ್ ಕಂಬಗಳು ನೆಲಕ್ಕುರುಳಿದ್ದು 50ಕ್ಕೂ ಹೆಚ್ಚು ಕಂಬಗಳು ಬಾಗಿವೆ. ಹಂಪಿ, ಕಮಲಾಪುರ, ಇಪ್ಪಿತ್ತೇರಿ ಮಾಗಾಣಿ, ಹೊಸೂರಿನಲ್ಲಿ ಬಿರುಸಿನ ಮಳೆಯಾಗಿದ್ದ-ರಿಂದ ಬಾಳೆ ಗದ್ದೆಗೆ ನೀರು ನುಗ್ಗಿದೆ. ಬೆಳಗಾವಿ ಜಿಲ್ಲೆಯ ಘಟಪ್ರಭಾದಲ್ಲಿ ಗುರುವಾರ ರಾತ್ರಿ ಸಿಡಿಲಿನ ಹೊಡೆತಕ್ಕೆ ಮನೆಯೊಂದರಲ್ಲಿ ವಿದ್ಯುತ್ ಅವಘಡ ಸಂಭವಿಸಿ ಮನೆಯ ಅನೇಕ ವಸ್ತುಗಳು ಸುಟ್ಟು ಭಸ್ಮವಾಗಿವೆ. ಸಮೀ-ಪದಲ್ಲಿದ್ದ ಮರವೊಂದು ಸುಟ್ಟು ಭಸ್ಮವಾಗಿದೆ. ಕಾರವಾರ, ಅಂಕೋಲಾ, ಹೊನ್ನಾವರದಲ್ಲಿ ಉತ್ತಮ ಮಳೆಯಾಗಿದೆ. ಶಿರಸಿಯಲ್ಲಿ ಆಗಾಗ ತುಂತುರು ಮಳೆ ಬಂದಿದೆ.

ಉಡುಪಿ: ಕಾರುಗಳು ಜಲಾವೃತ

ಮಂಗಳೂರು: ಕರಾವಳಿಯಲ್ಲಿ ಗುರುವಾರ ರಾತ್ರಿಯಿಂದಲೇ ಉತ್ತಮ ಮಳೆಯಾಗಿದ್ದು, ಶುಕ್ರವಾರವೂ ಮುಂದುವರಿದಿತ್ತು.

ರಾತ್ರಿ ಸುರಿದ ಭಾರಿ ಮಳೆಯಿಂದಾಗಿ ಉಡುಪಿ ನಗರದ ಬಿಗ್ ಬಜಾರ್ ಕಟ್ಟಡದ ಪಾರ್ಕಿಂಗ್ ಪ್ರದೇಶ ಸಂಪೂರ್ಣ ಜಲಾವೃತವಾಗಿತ್ತು. ಆರು ಕಾರು, ಹತ್ತಕ್ಕೂ ಹೆಚ್ಚು ಬೈಕ್‌ಗಳು ಮುಳುಗಿದ್ದವು. ಅಗ್ನಿಶಾಮಕದಳದ ಸಿಬ್ಬಂದಿ ಪಂಪ್‌ಗಳ ಮೂಲಕ ನೀರು ಮೇಲಕ್ಕೆತ್ತಿದರು.

ಬೈಂದೂರು, ಬ್ರಹ್ಮಾವರ, ಹಿರಿಯಡಕ, ಪಡುಬಿದ್ರಿ, ಕುಂದಾಪುರ ಸೇರಿದಂತೆ ವಿವಿಧ ಕಡೆಗಳಲ್ಲಿ ಮಳೆ ಸುರಿದಿದೆ. ಕಾಪು ತಾಲ್ಲೂಕಿನ ಕಟಪಾಡಿ, ಶಿರ್ವ, ಕಾಪು, ಪಡುಬಿದ್ರಿ ಪರಿಸರದಲ್ಲಿ ರಾತ್ರಿಯಿಂದ ಶುಕ್ರವಾರ ಮಧ್ಯಾಹ್ನದ-ವರೆಗೆ ಭಾರಿ ಮಳೆ ಸುರಿದಿದೆ. ಕೆಲವಡೆ ಸಿಡಿಲು ಬಡಿದು ವಿದ್ಯುತ್ ಉಪಕರಣ-ಗಳಿಗೆ ಹಾನಿಯಾಗಿದೆ.

ಮಂಗಳೂರು, ಬಂಟ್ವಾಳ, ಬೆಳ್ತಂಗಡಿ ತಾಲ್ಲೂಕಿನಲ್ಲಿಯೂ ಉತ್ತಮ ಮಳೆಯಾಗಿದೆ. ಮುಂಗಾರು ಕೇರಳಕ್ಕೆ ಪ್ರವೇಶಿಸಿದ ಬೆನ್ನಲ್ಲೇ ಕರಾವಳಿಯಲ್ಲಿ ನಿರಂತರ ಮಳೆ ಆರಂಭವಾಗಿದೆ.

ಉಡುಪಿಯ ಬಿಗ್ ಬಜಾರ್‌ನ ಪಾರ್ಕಿಂಗ್ ಸ್ಥಳ ಜಲಾವೃತವಾಗಿತ್ತು.

ಪ್ರಜಾವಾಣಿ DH DECCAN HERALD ಕೋವಿಡ್ ಪರಿಹಾರ ನಿಧಿ

ಆಸ್ಪತ್ರೆಗಳ ಮುಂದೆ ಏದುಸಿರು ಬಿಡುವ ರೋಗಿಗಳನ್ನು ಹೊತ್ತುನಿಂತ ಆಂಬುಲೆನ್ಸ್‌ಗಳು, ಆಪ್ತರ ಜೀವ ಉಳಿಸಲು ಪ್ರಾಣವಾಯುವಿಗಾಗಿ ಅಂಗಲಾಚುವವರು, ಚಿತಾಗಾರಗಳ ಮುಂದೆ ಸಾಲು ಸಾಲು ಮೃತದೇಹಗಳು... ರಾಜ್ಯದಲ್ಲಿ ಕಳೆದ ಕೆಲವು ವಾರಗಳಿಂದ ಇಂತಹದ್ದೇ ಹೃದಯವಿದ್ರಾವಕ ನೋಟಗಳು. ಕೋವಿಡ್-19 ಕಾಣಿಸಿಕೊಂಡ ದಿನದಿಂದ ಇಲ್ಲಿಯವರೆಗೂ 26 ಲಕ್ಷಕ್ಕೂ ಅಧಿಕ ಜನ ಕಾಯಿಲೆಪೀಡಿತರಾಗಿದ್ದು, 30 ಸಾವಿರಕ್ಕೂ ಅಧಿಕ ಜನ ಮೃತಪಟ್ಟಿದ್ದಾರೆ. ಈ ಅಂಕಿ-ಸಂಖ್ಯೆಗಳು ಅಧಿಕೃತ ಮಾಹಿತಿಯಷ್ಟೆ. ನೈಜ ಚಿತ್ರಣ ಇನ್ನೂ ಕರಾಳವಾಗಿದೆ. ಎರಡನೇ ಅಲೆ ಪ್ರಾರಂಭವಾಗಿ ಈಗಾಗಲೇ ಎರಡು ತಿಂಗಳಿಗೂ ಅಧಿಕ ಸಮಯ ಕಳೆದಿದೆ.

ಇಂತಹ ಸನ್ನಿವೇಶದಲ್ಲಿ, ಕೋವಿಡ್ ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸ್ವಯಂಸೇವಾ ಸಂಸ್ಥೆಗಳಿಗೆ 'ಡೆಕ್ಕನ್ ಹೆರಾಲ್ಡ್' ಹಾಗೂ 'ಪ್ರಜಾವಾಣಿ' ಪತ್ರಿಕೆಗಳು ಬೆಂಬಲ ನೀಡಲು ನಿರ್ಧರಿಸಿವೆ. ನೀವು ನೀಡುವ ದೇಣಿಗೆಯ ಪ್ರತೀ ಪೈಸೆಯೂ ಸಂಕಷ್ಟಕ್ಕೆ ಒಳಗಾಗಿರುವ ಅರ್ಹ ಫಲಾನುಭವಿಗೆ ನೇರವಾಗಿ ಸೇರಿ, ಅವರ ಕಣ್ಣೀರು ಒರೆಸಲು ನೆರವಾಗಲಿದೆ.

₹ 1000 ಮತ್ತು ಅದಕ್ಕಿಂತ ಹೆಚ್ಚಿನ ದೇಣಿಗೆ ನೀಡಿದವರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ 80ಜಿ ಅನ್ವಯ ಆದಾಯ ತೆರಿಗೆಯಲ್ಲಿ ವಿನಾಯಿತಿ ಸಿಗಲಿದೆ.

ಹೀಗಾಗಿ, ನಿಮ್ಮ ಕೈಲಾದ ದೇಣಿಗೆಯನ್ನು (ಅದರ ಪ್ರಮಾಣ ಎಷ್ಟೇ ಇರಲಿ) ನೀಡಿ ಸಂಕಷ್ಟದಲ್ಲಿ ಸಿಲುಕಿದವರ ಬೆಂಬಲಕ್ಕೆ ನಿಲ್ಲುವ ಮಾನವೀಯ ಕಾರ್ಯದಲ್ಲಿ ಕೈಜೋಡಿಸುವಂತೆ ಕೋರುತ್ತೇವೆ.

ಆನ್‌ಲೈನ್ ಹಣ ವರ್ಗಾವಣೆ ಮೂಲಕ ಡೆಕ್ಕನ್ ಹೆರಾಲ್ಡ್-ಪ್ರಜಾವಾಣಿ ಪರಿಹಾರ ನಿಧಿ ಟ್ರಸ್ಟ್‌ಗೆ ದೇಣಿಗೆ ನೀಡಬಹುದು:
(Canara Bank, Cantonment Branch;
A/C NO.0404101200385, IFSC CODE : CNRB0000404)

ಡೆಬಿಟ್/ಕ್ರೆಡಿಟ್ ಕಾರ್ಡ್, ಯುಪಿಐ, ಇ-ವ್ಯಾಲೆಟ್ ಅಥವಾ ನೆಟ್‌ಬ್ಯಾಂಕಿಂಗ್ ಮೂಲಕ ಪಾವತಿಸುವವರು QR ಕೋಡ್ ಸ್ಕ್ಯಾನ್ ಮಾಡಿ ಅಥವಾ ಈ ಕೆಳಗಿನ ಲಿಂಕ್‌ಗೆ ಭೇಟಿ ಮಾಡಿ: https://bit.ly/3uKxGny

ದೇಣಿಗೆದಾರರು ತಾವು ನೀಡಿದ ದೇಣಿಗೆ ವಿವರದ ಜತೆಗೆ ಹೆಸರು, ವಿಳಾಸ ಹಾಗೂ ಸಂಪರ್ಕ ಸಂಖ್ಯೆಯನ್ನು dept.finc@printersmysore.co.in ಈ ಇ-ಮೇಲ್‌ಗೆ ಕಳುಹಿಸಲು ವಿನಂತಿ. ಇದರಿಂದ ದೇಣಿಗೆದಾರರಿಗೆ ರಸೀದಿ ಕಳಿಸಲು ಅನುಕೂಲವಾಗುತ್ತದೆ.

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1.	**ಸೀತಾರಾಮನ್ ಶಂಕರ್,** 121, ಅವೆನ್ಯೂ 21, ಫೇಸ್ 1, ಆದರ್ಶ್ ಪಾಮ್ ಮೆಡೋಸ್, ರಾಮಗೊಂಡನಹಳ್ಳಿ, ಬೆಂಗಳೂರು	25,000
2.	**ಅನಿಲ್‌ಕುಮಾರ್ ಚನ್ನೇಗೌಡ,** 2003, ಮೊದಲನೇ 'ಸಿ' ಮುಖ್ಯರಸ್ತೆ, ವಿಜಯನಗರ 2ನೇ ಹಂತ, ಬೆಂಗಳೂರು	20,000
3.	**ಗೀತಾ ಕುಮಾರಸ್ವಾಮಿ,** ನಂ. 122, ಶಾಶ್ವತಿ, 4ನೇ ಕ್ರಾಸ್, 2ನೇ ಹಂತ, ಆರ್.ಕೆ. ಲೇಔಟ್, ಪದ್ಮನಾಭ ನಗರ, ಬೆಂಗಳೂರು	10,000
4.	**ಕರ್ನಾಟಕ ಕನ್ವೇಯರ್ಸ್ ಅಂಡ್ ಸಿಸ್ಟಮ್ಸ್ ಪ್ರೈ. ಲಿ.,** ಎನ್-26, ಇಂಡಸ್ಟ್ರಿಯಲ್ ಎಸ್ಟೇಟ್, ಗೋಕುಲ ರಸ್ತೆ, ಹುಬ್ಬಳ್ಳಿ	10,000
5.	**ಜಿ.ಎನ್.ವಾರಿಕರ್,** ನಂ. 75, 3ನೇ ಕ್ರಾಸ್, ರೆಸಿಡೆನ್ಸಿ ರಸ್ತೆ, ಬೆಂಗಳೂರು	10,000
6.	**ಆಶಾ ಆರ್. ಹೆಗಡೆ,** ಹೊಂಗಿರಣ ಬಿಲ್ಡಿಂಗ್, ವಿದ್ಯಾನಗರ ಮೇನ್, ಶಿರಸಿ, ಉತ್ತರ ಕನ್ನಡ	10,000
7.	**ಪಿ.ಎಸ್. ಶಾಸ್ತ್ರಿ,** ಪ್ರೊಫೆಸರ್, ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ವಿಭಾಗ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಬೆಂಗಳೂರು	10,000
8.	**ವೆಂಕಟೇಶ ಮಾಚಕನೂರ,** 22, ಗಾಂಧಿನಗರ ಮುಖ್ಯರಸ್ತೆ, ಧಾರವಾಡ	5,005
9.	**ಜಸ್ಪೀರ್ ಸಿಂಗ್,** 196, ಮೊದಲನೇ ಮೇನ್, ಇಸ್ರೊ ಲೇಔಟ್, ವಿಕ್ರಮ್ ನಗರ, ಬೆಂಗಳೂರು	5,001
10.	**ಆ್ಯಂಥಿಯಾ ರಾಬರ್ಟ್ಸ್,** ಬೆಂಗಳೂರು	5,000
11.	**ಸುಜಾತ ದಯಾಶಂಕರ,** 681, 4ನೇ ಮೇನ್, ಇಸ್ರೊ ಲೇಔಟ್, ಬೆಂಗಳೂರು	5,000
12.	**ಫ್ಲಾಂಬರ್ಗ್ ಸರ್ವೀಸ್ಸ್ ಪ್ರೈ. ಲಿ.** 26, ಕ್ಲಾರ್ಕ್ಸ್ ಪೆಟ್, ಎ ಸ್ಟ್ರೀಟ್, ಕೆ. ಕಾಮರಾಜ್ ರೋಡ್ ಕ್ರಾಸ್, ಜಿಪಿಒ, ಬೆಂಗಳೂರು	5,000
13.	**ಎಸ್.ಆರ್.ಸುಜಯಾ,** ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ, ಗೋಪಾಡಿ, ಕುಂದಾಪುರ	5,000
14.	**ಡಿ.ಸಿ. ವಿಜಯ್‌ಕುಮಾರ್,** ಹಳೇಪೇಟೆ, ಬೀರೂರು	2,000
15.	**ಹಿರೇಮಗಳೂರು ಪ್ರದೀಪ್,** ನಂ. 21, 'ಸುದರ್ಶನ', 9ನೇ ಕ್ರಾಸ್, 5ನೇ ಮೇನ್, ಮಲ್ಲೇಶ್ವರ, ಬೆಂಗಳೂರು	2,000
16.	**ಭಾಗೀರಥಿ ಹೆಗಡೆ,** ಸ್ಟೇಟ್ ಬ್ಯಾಂಕ್ ಕಾಲೊನಿ, ಶಿರಸಿ, ಉತ್ತರಕನ್ನಡ	2,000
17.	**ಧರಣೇಂದ್ರ ಬಿ.ಜವಳಿ,** ಹುಬ್ಬಳ್ಳಿ	1,111
18.	**ಆರ್. ನಾಗರತ್ನಮ್ಮ,** ನಂ. 58/42, 7ನೇ ಕ್ರಾಸ್, ಮೊದಲನೇ ಮೇನ್, ಮೂಡಲಪಾಳ್ಯ, ಬೆಂಗಳೂರು	1,100
19.	**ಬಿ.ಎಸ್. ಸುಮಂಗಳಾ ಜೈನ್,** d/o ಬಿ.ಸುರೇಶ್ ಜೈನ್, ನಂ. 5, ಸುಮಶ್ರೀ, 10ನೇ ಕ್ರಾಸ್, ಕೆ.ಕೆ.ಲೇನ್, ಕಾಟನ್ ಪೇಟೆ, ಬೆಂಗಳೂರು	1,050
20.	**ತಿಮ್ಮೇಗೌಡ,** 190, ಸರಸ್ವತಿ ನಗರ, ವಿಜಯನಗರ, ಬೆಂಗಳೂರು	1,001
21.	**ಹರಳೆಗೌಡ,** 190, ಸರಸ್ವತಿ ನಗರ, ವಿಜಯನಗರ, ಬೆಂಗಳೂರು	1,001
22.	**ಕುಸುಮಾ ಎಂ.ಎಸ್,** ನಂ. 104, ಪ್ರಾಮೆನೇಡ್ ಅಪಾರ್ಟ್‌ಮೆಂಟ್, ದಾಸರಹಳ್ಳಿ ಮುಖ್ಯರಸ್ತೆ, ದಾಸರಹಳ್ಳಿ, ಹೆಬ್ಬಾಳ ಪೋಸ್ಟ್, ಬೆಂಗಳೂರು	1,001
23.	**ಎಸ್.ಪಿ.ನಾಗರಾಜ್,** ನಂ. 102, ಮೊದಲನೇ ಮಹಡಿ, ಜಿ.ಡಿ. ಪಾರ್ಕ್ ಎಕ್ಸ್‌ಟೆನ್ಷನ್, 15ನೇ ಕ್ರಾಸ್, ವೈಯಾಲಿಕಾವಲ್, ಬೆಂಗಳೂರು	1,001
24.	**ಶ್ರೀಕಾಂತ್ ಭರಮಣ್ಣನವರ,** ಸರ್ಕಾರಿ ಆಸ್ಪತ್ರೆ ಕ್ವಾಟರ್ಸ್, ಮನೆ ನಂ. 7, ಗೋಕಾಕ್	1,001
25.	**ಡಾ.ಎಂ. ವೆಂಕಟಸ್ವಾಮಿ,** ನಂ. 4 ಡಿ, ಕಾಸ್ಮಸ್, ಕ್ಲಾಸಿಕ್ ಲ್ಯಾಂಡ್ ಮಾರ್ಕ್, ಕಸವನಹಳ್ಳಿ, ಬೆಂಗಳೂರು	1,000
26.	**ಎಂ. ದಾಕ್ಷಾಣಮ್ಮ,** ಹರಿಹರ ತಾ. ದಾವಣಗೆರೆ ಜಿ.	1,000
27.	**ಆರ್. ಶ್ರೀಧರ,** ನಂ. 74, ರಾಜೇಶ್ವರಿ ಪ್ಯಾರಡೈಸ್, 1 ಡಿ, 12ನೇ ಕ್ರಾಸ್, ಐಡಿಯಲ್ ಹೋಮ್ಸ್, ರಾಜರಾಜೇಶ್ವರಿನಗರ, ಬೆಂಗಳೂರು	1,000
28.	**ಡಾ.ಆರ್. ಶಿವಕುಮಾರ್,** ಶಿಕ್ಷಕ, ಕಾಟಮನಲ್ಲೂರು ಹಳ್ಳಿ, ವರ್ಗೋ ನಗರ ಪೋಸ್ಟ್, ಬೆಂಗಳೂರು	1,000
29.	**ಪದ್ಮನಾಭ ರಾವ್ ನಿಜಗಲ್,** ಬೆಂಗಳೂರು	1,000
30.	**ಯು.ಪಿ. ಧರ್ಮರಾಜು,** 214, ಶಿವನಿಲಯ, 22ನೇ ಮುಖ್ಯರಸ್ತೆ, ಶ್ರೀನಿವಾಸ ನಗರ, ನಂದಿನಿ ಲೇಔಟ್, ಬೆಂಗಳೂರು	1,000
31.	**ಕೆ. ದಾಮೋದರ ಪೈ,** ನಂ. 7/1, ತಾರಾ ನಿಲಯ, ಒಂದನೇ ಕ್ರಾಸ್, 5ನೇ ಮೇನ್, ಮಾರುತಿ ಎಕ್ಸ್‌ಟೆನ್ಷನ್, ಶ್ರೀರಾಮಪುರ, ಬೆಂಗಳೂರು	1,000
	ಒಟ್ಟು ಹಣ	1,46,272
	ಇದುವರೆಗೆ ಸಂಗ್ರಹವಾದ ಒಟ್ಟು ಮೊತ್ತ	93,45,000

ಪ್ರಜಾವಾಣಿ
ಜಸ್ಟ್ ಮ್ಯೂಸಿಕ್- ಹಿತಾನುಭವ

ಮಹದೇಶ್ವರ...ಬಿತ್ತು ಏಟು!
ನೀರಿಗೆ ಬರುವವಳ ನಡುಸಣ್ಣ... ಜನಪದ ಗೀತೆ ಹಾಡಿದ್ದಕ್ಕೆ ಹಳ್ಳಿ ಜನರು ಏಟು ಕೊಟ್ಟರು...
https://bit.ly/3z1Gcls

ಕೋವಿಡ್: ದೂರು ಸಲ್ಲಿಕೆಗೆ ಹೊಸ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ನಿಯಮಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ದೂರುಗಳನ್ನು ದಾಖಲಿಸಲು ಹೊಸ ವ್ಯವಸ್ಥೆಯೊಂದನ್ನು ರೂಪಿಸಲಾಗಿದೆ' ಎಂದು ಹೈಕೋರ್ಟ್‌ಗೆ ರಾಜ್ಯ ಸರ್ಕಾರ ಮಾಹಿತಿ ನೀಡಿದೆ.

ವಾಟ್ಸ್‌ಆ್ಯಪ್ ಮತ್ತು ಟೆಲಿಗ್ರಾಮ್ ರೀತಿಯ ಆ್ಯಪ್‌ಗಳ ಮೂಲಕವೂ ದೂರು ಸಲ್ಲಿಸಲು ಅವಕಾಶ ಕಲ್ಪಿಸಬೇಕು ಎಂದು ಸರ್ಕಾರಕ್ಕೆ ಕೋರ್ಟ್ ನಿರ್ದೇಶನ ನೀಡಿತು.

ಕೋವಿಡ್ ನಿಯಮ ಉಲ್ಲಂಘನೆಗಳ ಕುರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, 'ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು. ಹೊಸ ವ್ಯವಸ್ಥೆ ಬಗ್ಗೆ ವ್ಯಾಪಕ ಪ್ರಚಾರ ನೀಡಬೇಕು' ಎಂದು ಆದೇಶಿಸಿತು.

'ದೂರುಗಳನ್ನು ಸ್ವೀಕರಿಸಿ ಪರಿಹರಿಸಲು ವ್ಯವಸ್ಥೆಯನ್ನು ರೂಪಿಸಿ ಜೂ.2ರಂದು ಅಧಿಸೂಚನೆ ಹೊರಡಿಸಲಾಗಿದೆ' ಎಂದು ಸರ್ಕಾರ ವಿವರಿಸಿತು.

'ನಮ್ಮ ಮೆಟ್ರೊ ಕೆಂಗೇರಿ ಮಾರ್ಗದ ತಪಾಸಣೆ ಸಂದರ್ಭದಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಅವರ ಜತೆ ಇದ್ದ ಸಚಿವರಾದ ಆರ್. ಅಶೋಕ, ಬಸವರಾಜ ಬೊಮ್ಮಾಯಿ ಮತ್ತು ವಿ. ಸೋಮಣ್ಣ ಕೋವಿಡ್ ನಿಯಮ ಉಲ್ಲಂಘಿಸಿದ್ದಾರೆ. ಹೊಸಕೋಟೆಯಲ್ಲಿ ಸಚಿವ ಎಂ.ಟಿ.ಬಿ. ನಾಗರಾಜ್ ಭಾಗವಹಿಸಿದ್ದ ಕಾರ್ಯಕ್ರಮ, ಬೆಳಗಾವಿ ಶಾಸಕ ಅಭಯ ಪಾಟೀಲ ಭಾಗವಹಿಸಿದ್ದ ಮತ್ತೊಂದು ಧಾರ್ಮಿಕ ಕಾರ್ಯಕ್ರಮದ ಸಂದರ್ಭದಲ್ಲೂ ನಿಯಮ ಪಾಲನೆಯಾಗಿಲ್ಲ' ಎಂದು ವಕೀಲರಾದ ಗೀತಾ ಮಿಶ್ರಾ ಅರ್ಜಿ ಸಲ್ಲಿಸಿದ್ದರು.

'ಕೋವಿಡ್ ನಿಯಮ ಉಲ್ಲಂಘನೆ ಬಗ್ಗೆ ದೂರು ಸಲ್ಲಿಸಲು ಸರ್ಕಾರ ಹೊಸದಾಗಿ ರಚಿಸಿರುವ ಪ್ರಾಧಿಕಾರದ ಮುಂದೆ ಮನವಿ ಸಲ್ಲಿಸಬೇಕು. ಹೊಸ ವ್ಯವಸ್ಥೆ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದೆಯೇ ಇಲ್ಲವೇ ಎಂಬುದನ್ನು ಪರೀಕ್ಷಿಸಲು ಸಹಾಯವಾಗಲಿದೆ' ಎಂದು ಪೀಠ ತಿಳಿಸಿತು. ವಿಚಾರಣೆಯನ್ನು ಜೂ.10ಕ್ಕೆ ಮುಂದೂಡಿತು.

ಪ್ರಜಾವಾಣಿ facebook LIVE fb.com/prajavani.net
ವಿದ್ಯಾರ್ಥಿಗಳ ಪ್ರಶ್ನೆ.. ತಜ್ಞರ ಉತ್ತರ!

ಹರೀಶ್ ಶೆಟ್ಟಿ ಬಂಡ್ಸಾಲೆ
ಪಿಎಚ್‌ಡಿ ಸ್ಕಾಲರ್ - ಐಐಎಂ ಅಹಮದಾಬಾದ್
ಸಮಾಜ ವಿಜ್ಞಾನ, ಸಮಾಜ ಕಾರ್ಯ, ಮ್ಯಾನೇಜ್ಮೆಂಟ್ ಮತ್ತು ವಾಣಿಜ್ಯ ಅಧ್ಯಯನ ಈ ವಿಭಾಗಗಳಲ್ಲಿ
ಸ್ನಾತಕೋತ್ತರ ಪದವಿ (MBA, MCom, MSW, MA): ಆಯ್ಕೆಗಳು, ಪ್ರವೇಶ ಪರೀಕ್ಷೆಗಳ ವಿವರಗಳು, ತಯಾರಿ ವಿಧಾನಗಳು
ಪಿಎಚ್‌ಡಿ: ಪ್ರವೇಶಾತಿ ತಯಾರಿ, ಆಯ್ಕೆ ಮತ್ತು ಅವಕಾಶಗಳು
ಇಂದು ಸಂಜೆ 5 ರಿಂದ 6

ದ್ವಿತೀಯ ಪಿಯು ಪರೀಕ್ಷೆ ರದ್ದು

ಒಂದನೇ ಪುಟದಿಂದ...

ಈ ಫಲಿತಾಂಶವು ಯಾವುದೇ ವಿದ್ಯಾರ್ಥಿಗೆ ತೃಪ್ತಿಕರವಾಗದೇ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಮಾತ್ರ ಪರೀಕ್ಷೆ ನಡೆಸಲಾಗುತ್ತದೆ.

'ದ್ವಿತೀಯ ಪಿಯುಸಿ ಪರೀಕ್ಷೆಗೆ ಹಾಜರಾಗಲು ನೋಂದಾಯಿಸಿಕೊಂಡ ಪುನರಾವರ್ತಿತ ವಿದ್ಯಾರ್ಥಿಗಳು ಹಾಗೂ ಖಾಸಗಿ ಅಭ್ಯರ್ಥಿಗಳ ಫಲಿತಾಂಶವನ್ನು ಗ್ರೇಡ್ ಆಧಾರದಲ್ಲಿ ಪ್ರಕಟಿಸಲು ಯಾವುದೇ ಸ್ಪಷ್ಟ ದಾಖಲೆಗಳು ಲಭ್ಯ ಇರುವುದಿಲ್ಲ. ಹೀಗಾಗಿ ಈ ವಿದ್ಯಾರ್ಥಿಗಳು ಮುಂದಿನ ದಿನಗಳಲ್ಲಿ ಇಲಾಖೆ ನಡೆಸುವ ಪರೀಕ್ಷೆಗೆ ಹಾಜರಾಗಬೇಕಾಗು-ತ್ತದೆ' ಎಂದು ಸುರೇಶ್‌ಕುಮಾರ್ ತಿಳಿಸಿದರು.

ಅನುತ್ತೀರ್ಣ ಇಲ್ಲ: 'ಕಳೆದ ವರ್ಷ ಒಂಬತ್ತನೆಯ ತರಗತಿಯ ಪರೀಕ್ಷೆ ನಡೆಸಿರಲಿಲ್ಲ. ಅದಕ್ಕಾಗಿ ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಸಲು ತೀರ್ಮಾನಿಸಿದ್ದೇವೆ. ಪ್ರಶ್ನೆಗಳು ತುಂಬಾ ಸರಳವಾಗಿದ್ದು, ನೇರವಾಗಿರುತ್ತವೆ. ಯಾವ ವಿದ್ಯಾರ್ಥಿಯನ್ನೂ ಅನುತ್ತೀರ್ಣಗೊಳಿಸುವುದಿಲ್ಲ' ಎಂದು ಸಚಿವರು ಸ್ಪಷ್ಟಪಡಿಸಿದರು.

'ಆರು ಸಾವಿರ ಪರೀಕ್ಷಾ ಕೇಂದ್ರಗಳನ್ನು ರಚಿಸಿ, ಒಂದು ಡೆಸ್ಕ್‌ಗೆ ಒಬ್ಬ ವಿದ್ಯಾರ್ಥಿಯಂತೆ ವ್ಯವಸ್ಥೆ ಮಾಡಲಾಗುವುದು. ಪರೀಕ್ಷಾ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ಎಲ್ಲ ಶಿಕ್ಷಕರು ಹಾಗೂ ಸಿಬ್ಬಂದಿಯು ಕೋವಿಡ್ ಲಸಿಕೆ ಹಾಕಿಸಿಕೊಳ್ಳಬೇಕಾದುದು ಕಡ್ಡಾಯ' ಎಂದೂ ಹೇಳಿದರು.

ಜುಲೈ ಮೂರನೇ ವಾರದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಯಬಹುದು. ಆದರೂ, ಆರೋಗ್ಯ ಇಲಾಖೆಯ ಸಲಹೆ ಪಡೆದು 20 ದಿನಗಳ ಮುಂಚೆ ಪರೀಕ್ಷಾ ವೇಳಾಪಟ್ಟಿ ಪ್ರಕಟಿಸಲಾಗು-ವುದು ಎಂದರು.

'ಅಪ್ರಬುದ್ಧ ನಿರ್ಧಾರ'

'18 ವರ್ಷದ ವಿದ್ಯಾರ್ಥಿಗಳ ಪರೀಕ್ಷೆ ರದ್ದು ಮಾಡಿ, 16 ವರ್ಷದ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಲು ಮುಂದಾಗಿರುವುದು ಅಪ್ರಬುದ್ಧ, ಅಜ್ಞಾನದ ನಿರ್ಧಾರ' ಎಂದು ಶಿಕ್ಷಣ ತಜ್ಞ ವಿ.ಪಿ. ನಿರಂಜನಾರಾಧ್ಯ ದೂರಿದರು.

'ಸಿಬಿಎಸ್‌ಇ, ಐಸಿಎಸ್‌ಇ ಪಠ್ಯಕ್ರಮದ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳನ್ನು ಪರೀಕ್ಷೆ ಇಲ್ಲದೆ ಉತ್ತೀರ್ಣಗೊಳಿಸಲಾಗಿ-ದೆ. ರಾಜ್ಯ ಪಠ್ಯಕ್ರಮದ ವಿದ್ಯಾರ್ಥಿಗಳು ಮಾತ್ರ ಏಕೆ ಪರೀಕ್ಷೆ ಬರೆಯಬೇಕು. ಇದು ತಾರತಮ್ಯ ಮತ್ತು ಸಂವಿಧಾನಕ್ಕೆ ವಿರುದ್ಧವಾದದ್ದು' ಎಂದರು.

'ಸರ್ಕಾರಕ್ಕೆ ವಿದ್ಯಾರ್ಥಿಗಳ ಭವಿಷ್ಯ ಮುಖ್ಯವೇ ಆಗಿದ್ದರೆ ಎಲ್ಲ ವಿದ್ಯಾರ್ಥಿಗಳನ್ನು ಉತ್ತೀರ್ಣಗೊಳಿಸಿ, ವಿದ್ಯಾರ್ಥಿಯ ನಿವಾಸದ ಸುತ್ತ-ಮುತ್ತಲಿನ ಕಾಲೇಜುಗಳಲ್ಲಿಯೇ ಪ್ರವೇಶ ದೊರಕಿಸಿಕೊಡಬೇಕು. ಹೆಚ್ಚು ವಿದ್ಯಾರ್ಥಿಗಳು ಇದ್ದರೆ ಲಾಟರಿ ಮೂಲಕ ಆಯ್ಕೆ ಮಾಡಿ ಪ್ರವೇಶ ನೀಡಬೇಕು' ಎಂದೂ ಅವರು ಸಲಹೆ ನೀಡಿದರು.

'ನಿರ್ಧಾರ ಸ್ವಾಗತಾರ್ಹ'

'ಎಸ್ಸೆಸ್ಸೆಲ್ಸಿ ಪರೀಕ್ಷೆ ಬಗ್ಗೆ ಸಚಿವ ಸುರೇಶ್‌ಕುಮಾರ್, ಮಕ್ಕಳ ಉತ್ತಮ ಭವಿಷ್ಯಕ್ಕೆ ಪೂರಕವಾದ ನಿರ್ಧಾರ ತೆಗೆ-ದುಕೊಂಡಿದ್ದಾರೆ' ಎಂದು ಕಬೀರ್ ಟ್ರಸ್ಟ್‌ನ ಟಿ. ಪ್ರಭಾಕರ್ ಹೇಳಿದ್ದಾರೆ.

'ಆದರೆ, 120 ಬಹುಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಲು ಮೂರು ತಾಸುಗಳ ಸಮಯ ಹೆಚ್ಚು ಎನಿಸುತ್ತದೆ. ಅದರ ಬದಲು, ಒಂದು ಪ್ರಶ್ನೆಗೆ ಒಂದು ನಿಮಿಷದಂತೆ 120 ನಿಮಿಷ ಅವಧಿ ನಿಗದಿ ಮಾಡಬೇಕು' ಎಂದು ಅವರು ಸಲಹೆ ನೀಡಿದ್ದಾರೆ.

'ದ್ವಿತೀಯ ಪಿಯುಸಿಗೂ ಪರೀಕ್ಷೆ ನಡೆಸಲಿ'

'ದ್ವಿತೀಯ ಪಿಯುಸಿಗೆ ಪರೀಕ್ಷೆ ನಡೆಸದೆ ಎಲ್ಲರನ್ನೂ ಉತ್ತೀರ್ಣಗೊಳಿಸಿದರೆ, ಮೆಡಿಕಲ್, ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಲಾಬಿ ಹೆಚ್ಚಲಿದೆ. ಶ್ರೀಮಂತರ ಮಕ್ಕಳು ಮಾತ್ರ ಪ್ರವೇಶ ಗಿಟ್ಟಿಸಿಕೊಳ್ಳಲಿದ್ದು, ಪ್ರತಿಭಾವಂತ, ಬಡ ವಿದ್ಯಾರ್ಥಿಗಳಿಗೆ ಅನ್ಯಾಯವಾಗಲಿದೆ. ಎಸ್ಸೆಸ್ಸೆಲ್ಸಿ ಮಾದರಿಯಲ್ಲಿಯೇ ದ್ವಿತೀಯ ಪಿಯುಸಿ ವಿದ್ಯಾರ್ಥಿ-ಗಳಿಗೂ ಸರಳವಾಗಿ ಪರೀಕ್ಷೆ ನಡೆಸಲು ಸರ್ಕಾರ ಕ್ರಮ ಕೈಗೊಳ್ಳಬೇಕು' ಎಂದು ಉಳ್ಳಾಲದ ಆಕ್ಸ್‌ಫರ್ಡ್ ಕಾಲೇಜಿನ ಪ್ರಾಚಾರ್ಯ ಡಾ.ಬಿ.ಆರ್. ಸುಪ್ರೀತ್ ಒತ್ತಾಯಿಸಿದರು.

'ಸಿಬಿಎಸ್‌ಇ, ಐಸಿಎಸ್‌ಇ ಪಠ್ಯಕ್ರಮದ ವಿದ್ಯಾರ್ಥಿ-ಗಳಿಗೆ ಪ್ರತಿ ಮೂರು ತಿಂಗಳಿಗೊಮ್ಮೆ ಪರೀಕ್ಷೆ ಇರುತ್ತದೆ. ಅವರ ಮೌಲ್ಯಮಾಪನ ನಿಯಮಿತವಾಗಿ ನಡೆಯು-ತ್ತಿರುತ್ತದೆ. ಆದರೆ, ರಾಜ್ಯ ಪಠ್ಯಕ್ರಮದಲ್ಲಿ ಅಂತಿಮ ಪರೀಕ್ಷೆಯ ಫಲಿತಾಂಶ ಅಳೆಯಲಾಗುತ್ತದೆ. ಬಹಳಷ್ಟು ವಿದ್ಯಾರ್ಥಿಗಳು ಪ್ರಥಮ ಪಿಯುಸಿಯನ್ನು ಗಂಭೀರವಾಗಿ ತೆಗೆದುಕೊಂಡಿರುವುದಿಲ್ಲ. ಈ ಪರೀಕ್ಷೆಯಲ್ಲಿ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾದವರೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ರ‍್ಯಾಂಕ್ ಬಂದ ಉದಾಹರಣೆ ಇದೆ. ವಿದ್ಯಾರ್ಥಿಗಳಿಗೆ ನ್ಯಾಯ ಸಿಗಬೇಕೆಂದರೆ ಪರೀಕ್ಷೆ ನಡೆಸಬೇಕು' ಎಂದು ಹೇಳಿದರು.

'ಮಕ್ಕಳು ಸತ್ತರೆ ಹೊಣೆ ಯಾರು?'

'ಪರೀಕ್ಷೆ ನಡೆಸಲು ಸರ್ಕಾರ ಇಷ್ಟೇಕೆ ಅವಸರ ತೋರುತ್ತಿದೆಯೋ ಗೊತ್ತಾಗುತ್ತಿಲ್ಲ. ಮಕ್ಕಳು ಸತ್ತರೆ ಅದರ ಹೊಣೆ ಹೊತ್ತುಕೊಳ್ಳಲು ಸರ್ಕಾರ ಸಿದ್ಧವಿದೆಯೇ? ಎರಡು ದಿನ ಪರೀಕ್ಷೆ ಬರೆದ ಮೇಲೆ ಮಕ್ಕಳು ಕೋವಿಡ್ ಬಂದು ಸಾವನ್ನಪ್ಪಿದ ನಂತರ, ಇನ್ನು ಮುಂದೆ ಇಂತಹ ಪರೀಕ್ಷೆ ನಡೆಸುವುದಿಲ್ಲ ಎಂದು ಸರ್ಕಾರ ಹೇಳಿದರೆ ಅದಕ್ಕೆ ಅರ್ಥವಿದೆಯೇ' ಎಸ್ಸೆಸ್ಸೆಲ್ಸಿ ಮಕ್ಕಳ ಪೋಷಕರೂ ಆಗಿರುವ ಸರ್ಕಾರಿ ಶಾಲೆಯ ಶಿಕ್ಷಕರೊಬ್ಬರು ಪ್ರಶ್ನಿಸಿದರು.

'ಮೂರನೇ ಅಲೆಯು ಮಕ್ಕಳ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ ಎಂದು ತಜ್ಞರು ಹೇಳಿದ್ದಾರೆ. ಪರೀಕ್ಷೆ ನಡೆಸಲೇಬೇಕೆಂದಾದರೆ ಸೆಪ್ಟೆಂಬರ್‌ನಲ್ಲಿ ನಡೆಸಲಿ' ಎಂದೂ ಅವರು ಸಲಹೆ ನೀಡಿದರು.

'ಪರೀಕ್ಷೆಗೆ ಮಕ್ಕಳನ್ನು ಕಳುಹಿಸಬೇಕೆ, ಬೇಡವೇ ಎಂಬುದರ ಬಗ್ಗೆಯೇ ನಮಗೆ ಗೊಂದಲವಿದೆ. ಇದೇ ರೀತಿ ಬಹು ಆಯ್ಕೆಯ ಪ್ರಶ್ನೆಗಳ ಪರೀಕ್ಷೆ ನಡೆಸಿದರೆ, ಇದೇ ವ್ಯವಸ್ಥೆ ಮುಂದುವರಿಯುವ ಅಪಾಯವೂ ಇದೆ. ನನಗೆ ತಿಳಿದಂತೆ ಯಾವ ಪೋಷಕರೂ ಪರೀಕ್ಷೆ ನಡೆಯಬೇಕು ಎಂದು ಒತ್ತಾಯಿಸಿಲ್ಲ' ಎಂದು ಪೋಷಕ ಸಿ.ಎಸ್. ಜನಾರ್ದನ ಹೇಳಿದರು.

ಜುಲೈ 1ರಿಂದ ನೂತನ ಶೈಕ್ಷಣಿಕ ವರ್ಷ

ಒಂದನೇ ಪುಟದಿಂದ...

ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಬೇಸಿಗೆ ರಜೆ, ದಸರಾ, ಇನ್ನಿತರ ರಜೆಗಳನ್ನು ಕಳೆದು, ಒಟ್ಟು 223 ಶಾಲಾ ಕರ್ತವ್ಯದ ದಿನಗಳು ಲಭ್ಯವಾಗಿವೆ.ಬೋಧನಾ ಶುಲ್ಕದ ಕುರಿತು ಪ್ರತಿಕ್ರಿಯಿಸಿರುವ ಸಚಿವ ಸುರೇಶ್‌ಕುಮಾರ್, 'ಬೋಧನಾ ಶುಲ್ಕದ ಕುರಿತ ಪ್ರಕರಣ ಬಗ್ಗೆ ಹೈಕೋರ್ಟ್ ಆದೇಶದ ನೀಡಿದ ನಿರ್ಧಾರ ಪ್ರಕ-ಟಿಸಲಾಗುವುದು' ಎಂದರು.

ಪಿವಿ ಬ್ರ್ಯಾಂಡ್ ಸ್ಪಾಟ್
ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಮೃತರ ಕುಟುಂಬಕ್ಕೆ ಪರಿಹಾರ

ಬೆಂಗಳೂರು: ರಾಮನಗರದ-ಲ್ಲಿ ಮ್ಯಾನ್‌ಹೋಲ್‌ಗೆ ಇಳಿದು ಪ್ರಾಣ ಕಳೆದುಕೊಂಡ ಮೂವರ ಕುಟುಂಬಗಳಿಗೆ ಸರ್ಕಾರ ಪರಿಹಾರ ಘೋಷಿಸಿದೆ.

ಮೃತಪಟ್ಟವರಲ್ಲಿ ಇಬ್ಬರು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದು, ಅವರ ಕುಟುಂಬಗಳಿಗೆ ತಲಾ ₹18.5 ಲಕ್ಷ, ಮತ್ತೊಬ್ಬರು ಹಿಂದುಳಿದ ವರ್ಗಕ್ಕೆ ಸೇರಿದ್ದು ಅವರ ಕುಟುಂಬಕ್ಕೆ ₹10 ಲಕ್ಷ ಪರಿಹಾರ ನೀಡಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವ-ತ್ಥನಾರಾಯಣ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಪ್ರೊ.ವಸಂತ ಕುಷ್ಟಗಿ

ಕಲಬುರ್ಗಿ: ಹಿರಿಯ ಸಾಹಿತಿ, ಚಿಂತಕ ಪ್ರೊ.ವಸಂತ ಕುಷ್ಟಗಿ (85) ಅವರು ಶುಕ್ರವಾರ ಬೆಳಿಗ್ಗೆ ಹೃದಯಾಘಾತದಿಂದ ನಿಧನರಾದರು. ಅವರಿಗೆ ಮೂವರು ಪುತ್ರರು ಮತ್ತು ಪುತ್ರಿ ಇದ್ದಾರೆ.

ತಿಂಗಳ ಹಿಂದೆ ಕೋವಿಡ್ ದೃಢಪಟ್ಟಿದ್ದರಿಂದ ಅವರು ಇಲ್ಲಿನ ಗುಲಬರ್ಗಾ ಹಾರ್ಟ್ ಫೌಂಡೇಷನ್ ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ಎರಡು ವಾರದ ಬಳಿಕ ಗುಣಮುಖರಾಗಿದ್ದರು. ಮತ್ತೆ ರಕ್ತದೊತ್ತಡ ಕಡಿಮೆಯಾದ ಕಾರಣ ಆಸ್ಪತ್ರೆಯಲ್ಲೇ ಚಿಕಿತ್ಸೆ ಮುಂದುವರಿದಿತ್ತು. ನಾಲ್ಕು ದಿನಗಳಿಂದ ಅವರಿಗೆ ವೆಂಟಿಲೇಟರ್ ನೆರವು ನೀಡಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಕೊನೆಯುಸಿರೆಳೆದ-ರು ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ.

60ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದ ಪ್ರೊ.ವಸಂತ ಕುಷ್ಟಗಿ ಅವರು ದಾಸ ಸಾಹಿತ್ಯ ಕ್ಷೇತ್ರದಲ್ಲಿ ಹೆಚ್ಚಿನ ಸಾಧನೆ ಮಾಡಿದ್ದರು. ಪ್ರಾಧ್ಯಾಪಕ, ಸಾಹಿತಿ, ಲೇಖಕ, ಪತ್ರಕರ್ತ, ವಿದ್ವಾಂಸ, ವಿಮರ್ಶಕ, ಭಾಷಾಜ್ಞಾನಿ, ಹೋರಾ-ಟಗಾರಾಗಿದ್ದರು. ಕತೆ, ಕವನ, ದಾಸ ಸಾಹಿತ್ಯ, ನಾಟಕ, ಲೇಖನ ಸೇರಿದಂತೆ ಹಲವು ಪ್ರಕಾರಗಳಲ್ಲಿ ಅವರು ಕಲ್ಯಾಣ ಕರ್ನಾಟಕ ಭಾಗದ ಭಾಷೆಗೆ ಗಟ್ಟಿ ನೆಲೆ ತಂದುಕೊಟ್ಟಿದ್ದರು. ಅವರು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾಗಿ-ದ್ದರು.

ಇಲ್ಲಿನ ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಪದವಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ನಂತರ, ನೂತನ ವಿದ್ಯಾಲಯದ ಪದವಿ ಕಾಲೇಜಿನ ಪ್ರಾಂಶುಪಾಲರಾಗಿ ಅವರು ಸೇವೆ ಸಲ್ಲಿಸಿದ್ದರು. ನಗರದ ಸಂತ್ರಾಸವಾಡಿಯ ರುದ್ರಭೂಮಿಯಲ್ಲಿ ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನಡೆಯಿತು. ಮೃತರ ಗೌರವಾರ್ಥ ಪೊಲೀಸರು ಗಾಳಿಯಲ್ಲಿ ಗುಂಡು ಹಾರಿಸಿದರು. ಕೋವಿಡ್ ಮಾರ್ಗಸೂಚಿ ಅನ್ವಯ ಕುಟುಂಬದ ಕೆಲವೇ ಸದಸ್ಯರು ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿದ್ದರು.

ಪ್ರೊ. ನಾಗರಾಜ್

ದಾವಣಗೆರೆ: ಗಣಿತ ಪ್ರಾಧ್ಯಾಪಕ, ಹಿರಿಯ ವಾಗ್ಮಿ ಪ್ರೊ.ಬಿ.ಜಿ. ನಾಗರಾಜ್ (82) ಗುರುವಾರ ರಾತ್ರಿ ನಿಧನರಾದರು.

ದಾವಣಗೆರೆಯ ಡಿಆರ್‌ಎಂ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ನಿವೃತ್ತರಾ-ಗಿದ್ದರು. 'ಪ್ರತಿಮಾ ಸಭಾ' ಸಾಂಸ್ಕೃತಿಕ ಸಂಘಟನೆಯ ಹುಟ್ಟಿಗೆ ಕಾರಣವಾ-ಗಿದ್ದರು. ಅವರಿಗೆ ಪತ್ನಿ, ಪುತ್ರಿ ಪತ್ರಕರ್ತೆ-ಲೇಖಕಿ ಪ್ರೀತಿ ನಾಗರಾಜ್ ಇದ್ದಾರೆ. ಅಂತ್ಯಕ್ರಿಯೆ ಶಾಮನೂರಿನ ವೀರಶೈವ ರುದ್ರಭೂಮಿ-ಯಲ್ಲಿ ನೆರವೇರಿತು.

ಮ್ಯಾನ್‌ಹೋಲ್‌ನಲ್ಲಿ ಮೂವರ ಸಾವು

ಒಂದನೇ ಪುಟದಿಂದ..

ಮೊದಲಿಗೆ ರಾಜೇಶ ಕೆಳಗೆ ಇಳಿದಿದ್ದು, ಆಯತಪ್ಪಿ ಬಿದ್ದಿದ್ದಾರೆ. ಈ ಸಂದರ್ಭ ತಲೆಗೆ ಪೆಟ್ಟಾಗಿದೆ. ಅವರನ್ನು ರಕ್ಷಿಸಲು ಉಳಿದ ಇಬ್ಬರು ಕೆಳಗೆ ಇಳಿದಿದ್ದು, ಉಸಿರುಗಟ್ಟಿ ಅಲ್ಲಿಯೇ ಸಾವನ್ನ-ಪ್ಪಿದ್ದಾರೆ. ಸ್ಥಳೀಯರು ರಕ್ಷಿಸುವ ಪ್ರಯತ್ನ ಮಾಡಿದರಾದರೂ ಬದುಕುಳಿಯಲಿಲ್ಲ.

ಅಗ್ನಿಶಾಮಕ ದಳದ ಸಿಬ್ಬಂದಿ ಆಮ್ಲಜನಕ ಮಾಸ್ಕ್ ತೊಟ್ಟು ಕೆಳಗೆ ಇಳಿದು ಶವಗಳನ್ನು ಹೊರತೆಗೆದರು.

ಗುತ್ತಿಗೆದಾರರ ನಿರ್ಲಕ್ಷ್ಯ

ರಾಮನಗರದ ಹರೀಶ್ ಎಂಬುವರು ಈ ಕಾಮಗಾರಿಯ ಗುತ್ತಿಗೆ ಪಡೆದಿದ್ದು, ಬೆಂಗಳೂರಿನಿಂದ ಕಾರ್ಮಿಕರನ್ನು ಕರೆತಂದಿದ್ದರು. ಮ್ಯಾನ್‌ಹೋಲ್‌ಗೆ ಏಕಾಏಕಿ ಕಾರ್ಮಿಕರನ್ನು ಇಳಿಸಿದ್ದು, ಒಳಗೆ ಆಮ್ಲಜನಕ ಇದೆಯೋ ಇಲ್ಲವೋ ಎಂದು ಕೂಡ ಪರೀಕ್ಷಿಸಿಕೊಂಡಿರಲಿಲ್ಲ. ಕೆಲಸ ಮಾಡುವವರಿಗೆ ಸುರಕ್ಷಾ ಸಾಧನಗಳನ್ನೂ ನೀಡಿರಲಿಲ್ಲ ಎಂದು ಆರೋಪಿಸಲಾಗಿದೆ. ಘಟನೆ ಬಳಿಕ ಗುತ್ತಿಗೆದಾರ ಹರೀಶ್ ಹಾಗೂ ಅವರ ಸಹಾಯಕ ಮನೋಜ್ ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ. 'ಪ್ರಕರಣದಲ್ಲಿ ಗುತ್ತಿಗೆದಾರರ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ. ಯಾವುದೇ ಸುರಕ್ಷತಾ ನಿಯಮ ಅನುಸರಿಸದೇ ಕಾಮಗಾರಿ ನಡೆಸಿದ್ದು, ಕಾರ್ಮಿಕರನ್ನು ಮ್ಯಾನ್‌ಹೋಲ್‌ಗೆ ಇಳಿಸಿದ್ದಾರೆ. ಅವರ ವಿರುದ್ಧ ಮ್ಯಾನುಯೆಲ್ ಸ್ಕ್ಯಾವೆಂಜರ್ ಕಾಯ್ದೆಯೂ ಸೇರಿದಂತೆ ಮೂರು ಪ್ರಕರಣಗಳನ್ನು ದಾಖಲಿಸಲಾಗಿದೆ' ಎಂದು ರಾಮನಗರ ಎಸ್ಪಿ ಗಿರೀಶ್ ತಿಳಿಸಿದರು.

'ಗಮನಕ್ಕೆ ತಂದಿಲ್ಲ'

'ಕಾಮಗಾರಿ ಕುರಿತು ಮುಂಚಿತವಾಗಿ ನಗರಸಭೆಗೆ ಮಾಹಿತಿ ನೀಡಬೇಕಿತ್ತು. ನಮ್ಮ ಎಂಜಿನಿಯರ್ ಸಮ್ಮುಖದಲ್ಲಿ ಕೆಲಸ ಮಾಡಬೇಕಿತ್ತು. ಆದರೆ ನಮ್ಮ ಗಮನಕ್ಕೆ ತರದೆಯೇ ಗುತ್ತಿಗೆದಾರರು ಮ್ಯಾನ್‌ಹೋಲ್‌ಗೆ ಕಾರ್ಮಿಕರನ್ನು ಇಳಿಸಿದ್ದಾರೆ' ಎಂದು ರಾಮನಗರ ನಗರಸಭೆ ಆಯುಕ್ತ ನಂದಕುಮಾರ್ ದೂರಿದರು.

ತಾಂತ್ರಿಕ ಸಲಹಾ ಸಮಿತಿಯಿಂದ ವಾರದಲ್ಲಿ ವರದಿ: ಬಿಎಸ್‌ವೈ

ಹುಬ್ಬಳ್ಳಿ: ಕೋವಿಡ್ ಮೂರನೇ ಅಲೆ ತಡೆಗೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ರಚಿಸಲಾಗಿರುವ ತಾಂತ್ರಿಕ ಸಲಹಾ ಸಮಿತಿಯು ವಾರ ದಲ್ಲಿ ವರದಿ ನೀಡಲಿದೆ ಎಂದು ಮುಖ್ಯ ಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

'ಡಾ.ದೇವಿಶೆಟ್ಟಿ ಅವರ ನೇತೃತ್ವದ ತಂಡ ಮಧ್ಯಂತರ ವರದಿ ಸಲ್ಲಿಸಿದೆ; ಅಂತಿಮ ವರದಿಯ ನಿರೀಕ್ಷೆಯಲ್ಲಿದ್ದೇ-ವೆ. ಮಕ್ಕಳ ರಕ್ಷಣೆಗೆ ಎಲ್ಲ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಕೋವಿಡ್ ಪಾಸಿಟಿವಿಟಿ ದರವನ್ನು ಶೇ 5ಕ್ಕಿಂತ ಕೆಳಗಿಳಿಸಲು ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಧಾರವಾಡ ಜಿಲ್ಲೆಯಲ್ಲಿ ಮರಣ ಪ್ರಮಾಣ ಶೇ 1.70 ರಷ್ಟಿದ್ದು, ಇದು ರಾಜ್ಯಕ್ಕಿಂತ ಹೆಚ್ಚಾಗಿದೆ. ಇದನ್ನು ಕಡಿಮೆಗೊಳಿಸಲು ಅಗತ್ಯದ ಕ್ರಮಕೈಗೊಳ್ಳಲು ಸೂಚಿಸಲಾಗಿದೆ ಎಂದು ಹೇಳಿದರು.

'ಗ್ರಾಮೀಣ ಪ್ರದೇಶದ ಜನರಿಗೆ ಹೋಂ ಐಸೋಲೇಷನ್ ನೀಡದೆ ಕೋವಿಡ್ ಆರೈಕೆ ಕೇಂದ್ರಗಳಿಗೆ ಕರೆ ತರಲು ಸೂಚಿಸಿದ್ದೇನೆ. ಅಲ್ಲಿ ಹರಡುವಿಕೆ ತಡೆಯದ ಹೊರತು ಕೋವಿಡ್ ನಿಯಂತ್ರಣ ಅಸಾಧ್ಯ' ಎಂದರು.

ಶಾಸಕ ವೇದವ್ಯಾಸ ಕಾಮತ್‌ಗೆ ಕೋವಿಡ್

ಮಂಗಳೂರು: ನಗರ ದಕ್ಷಿಣ ಕ್ಷೇತ್ರದ ಶಾಸಕ ಡಿ.ವೇದವ್ಯಾಸ ಕಾಮತ್ ಅವರಿಗೆ ಕೋವಿಡ್-19 ದೃಢಪಟ್ಟಿದೆ.

'ನನಗೆ ಸ್ವಲ್ಪ ಜ್ವರ ಕಾಣಿಸಿಕೊಂ-ಡಿದ್ದರಿಂದ ಪರೀಕ್ಷೆಗೆ ಒಳಪಟ್ಟಿದ್ದೆ. ನನಗೆ ಕೋವಿಡ್ ದೃಢಪಟ್ಟಿದೆ. ಹೋಂ ಐಸೊಲೇಷನ್‌ನಲ್ಲಿದ್ದು, ಆರೋಗ್ಯವಾ-ಗಿದ್ದೇನೆ. ಸಾರ್ವಜನಿಕರೂ ಆರೋಗ್ಯದ ಕಡೆ ಗಮನ ಹರಿಸಬೇಕು. ಕೋವಿಡ್ ವಿರುದ್ಧದ ಹೋರಾಟದಲ್ಲಿ ಅಂತಿಮ ಗೆಲುವು ನಮ್ಮದೇ ಆಗಲಿದೆ' ಎಂದು ಶುಕ್ರವಾರ ತಿಳಿಸಿದ್ದಾರೆ.

ಪ್ರಯಾಣದ ನಿರ್ಬಂಧ

ಸಂಬಂಧಕ್ಕೆ ಬೇಲಿಯಾಗದಿರಲಿ..



ಸಂಬಂಧ ಗಟ್ಟಿಯಾಗಿರಲಿ

ಸದ್ಯದ ಪರಿಸ್ಥಿತಿಯಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಪ್ರಯಾಣ ಮಾಡುವುದು ಒಳ್ಳೆಯದಲ್ಲ. ನಿಮ್ಮ ಸಂಗಾತಿಯ ಆರೋಗ್ಯದ ದೃಷ್ಟಿಯಿಂದಲೂ ಒಂದಷ್ಟು ದಿನ ಒಂಟಿಯಾಗಿ ಇರುವುದನ್ನು ರೂಢಿಸಿಕೊಳ್ಳುವುದು ಉತ್ತಮ.

- ಸಂಗಾತಿಯಲ್ಲಿ ಭರವಸೆ ಮೂಡಿಸಿ.
- ಅವರಿಗೆ ಧೈರ್ಯ ಹೇಳಿ, ಆದಷ್ಟು ಬೇಗ ಭೇಟಿ ಮಾಡುವ ಆತ್ಮವಿಶ್ವಾಸ ತುಂಬಿ.
- ಸಮಯ ಸಿಕ್ಕಾಗಲೆಲ್ಲಾ ವಿಡಿಯೊ ಅಥವಾ ಫೋನ್ ಕರೆಯ ಮೂಲಕ ಮಾತನಾಡಿ.
- ಭವಿಷ್ಯದ ಯೋಜನೆಗಳ ಬಗ್ಗೆ ಚರ್ಚಿಸಿ. ಇದರಿಂದ ಅವರಲ್ಲಿ ಆತ್ಮವಿಶ್ವಾಸ ಹೆಚ್ಚುತ್ತದೆ.
- ನಿಮ್ಮ ಮೇಲಿನ ಪ್ರೀತಿ ಕಡಿಮೆಯಾಗದಂತೆ ಅವರೊಂದಿಗೆ ವರ್ತಿಸಿ.
- ಸಾಧ್ಯವಾದಷ್ಟು ಸಕಾರಾತ್ಮಕವಾಗಿ ಯೋಚಿಸಿ.
- ಊಟ– ತಿಂಡಿ ಮಾಡುವಾಗ ವಿಡಿಯೊ ಕರೆ ಮಾಡಿ, ಸಮಯ ಹೊಂದಾಣಿಕೆ ಮಾಡಿಕೊಂಡು ತಿನ್ನುವ ಅಭ್ಯಾಸ ಬೆಳೆಸಿಕೊಳ್ಳಿ.
- ದಿನದ ಚಟುವಟಿಕೆಗಳ ಬಗ್ಗೆ ಮಾಹಿತಿ ಹಂಚಿಕೊಳ್ಳಿ.
- ಕೋಪಕ್ಕೆ ಕಡಿವಾಣ ಹಾಕಿ ಪರಿಸ್ಥಿತಿಯನ್ನು ಅರಿತುಕೊಳ್ಳಿ.

ರೇಷ್ಮಾ

‘ಕಳೆದ ಆರು ತಿಂಗಳ ಹಿಂದೆ ನನ್ನ ಗಂಡ ಕೆಲಸದ ಮೇಲೆ ವಿದೇಶಕ್ಕೆ ಹೋಗಿದ್ದರು. ಇನ್ನೇನು ಕೆಲವೇ ದಿನಗಳಲ್ಲಿ ಮರಳಿ ಬರುವವರಿದ್ದರು. ಅಷ್ಟರಲ್ಲಿ ಲಾಕ್‌ಡೌನ್ ಮಾಡಿಬಿಟ್ಟರು. ಭಾರತಕ್ಕೆ ಮರಳುವ ಅವಕಾಶ ಇದ್ದರೂ ಇಲ್ಲಿ ಕೊರೊನಾ ಸೋಂಕಿನ ಪ್ರಮಾಣ ಹೆಚ್ಚಿರುವ ಕಾರಣ ಸದ್ಯ ಮರಳುವುದು ಬೇಡ ಎಂದು ಕಂಪನಿ ಕಡೆಯಿಂದ ಹೇಳಿದ್ದಾರಂತೆ. ಅಂದಿನಿಂದ ನಾನು ಹಾಗೂ ಮಗ ಇಬ್ಬರೇ ಈ ಮೂರು ಬೆಡ್‌ರೂಮ್‌ನ ಮನೆಯಲ್ಲಿ ವಾಸಿಸುತ್ತಿದ್ದೇವೆ. ನಾವು ಹೊಸದಾಗಿ ಅಪಾರ್ಟ್‌ಮೆಂಟ್‌ಗೆ ಬಂದ ಕಾರಣ ಅಕ್ಕಪಕ್ಕದವರ ಪರಿಚಯ ಅಷ್ಟಾಗಿ ಇಲ್ಲ. ಅವರಲ್ಲಿ ನಾವಿಲ್ಲಿ, ಇದೊಂಥರಾ ಹಿಂಸೆ. ನನ್ನ ಮಗ ಕೂಡ ಪ್ರತಿದಿನ ಅಪ್ಪನ ಕನವರಿಕೆ ಮಾಡುತ್ತಾನೆ. ಈ ಕೊರೊನಾದಿಂದ ಯಾವಾಗ ಬಿಡುಗಡೆ ಸಿಗುತ್ತದೋ, ಅವರನ್ನು ಯಾವಾಗ ನೋಡುತ್ತೇವೋ ಅನ್ನಿಸಲು ಶುರುವಾಗಿದೆ. ಮಗ ಜೊತೆಗೇ ಇದ್ದರೂ ನನಗೆ ತುಂಬಾನೇ ಒಂಟಿತನ ಕಾಡುತ್ತಿದೆ’ ಎಂದು ತನ್ನ ಗೆಳತಿಯ ಬಳಿ ನೋವು ಹಂಚಿಕೊಂಡಿದ್ದಳು ವಿಸ್ಮಯ.

> ಕೋವಿಡ್‌ನಿಂದಾಗಿ ಹಲವು ದೇಶಗಳಲ್ಲಿ ಪ್ರಯಾಣದ ನಿರ್ಬಂಧ ಹೇರಲಾಗಿದೆ. ಈ ಅನಿಶ್ಚಿತ ಪರಿಸ್ಥಿತಿಯಲ್ಲಿ ವಿದೇಶಗಳಲ್ಲಿ ಇರುವವರು ತಮ್ಮ ಸಂಗಾತಿಯನ್ನು ಭೇಟಿ ಮಾಡಲು ಸಾಧ್ಯ ಆಗುತ್ತಿಲ್ಲ. ಆದರೆ ಇದೇ ಕಾರಣಕ್ಕೆ ಸಂಬಂಧ ಹಳಸದಂತೆ ನೋಡಿಕೊಳ್ಳುವುದು ಮುಖ್ಯ.

ಈಗೀಗ ಓದು, ಉದ್ಯೋಗ, ಉದ್ಯಮ ಹೀಗೆ ಹಲವು ಕಾರಣಗಳಿಂದ ಮೂರು ತಿಂಗಳು, ಆರು ತಿಂಗಳು ಹಾಗೂ ವರ್ಷಗಳ ಕಾಲ ವಿದೇಶಕ್ಕೆ ತೆರಳುವುದು ಸಾಮಾನ್ಯ. ಅಂತಹ ಸಂದರ್ಭದಲ್ಲಿ ಸಂಗಾತಿಯಿಂದ ದೂರವಿರಬೇಕಾದ ಅನಿವಾರ್ಯ ಪರಿಸ್ಥಿತಿ ಎದುರಾಗುತ್ತದೆ. ಇನ್ನೇನು ಕೆಲವೇ ತಿಂಗಳಲ್ಲಿ ಮರಳುತ್ತೇವೆ ಎಂದುಕೊಂಡವರು ಕೋವಿಡ್, ಲಾಕ್‌ಡೌನ್‌ನಿಂದ ಹಿಂದಿರುಗಲು ಸಾಧ್ಯವಾಗುತ್ತಿಲ್ಲ. ಇರುವ ಸ್ಥಳದಲ್ಲಿಯೇ ಒಂಟಿಯಾಗಿ ಉಳಿದುಕೊಳ್ಳುವ ಇಂತಹ ಪರಿಸ್ಥಿತಿಯನ್ನು ದಂಪತಿ ಮಾತ್ರವಲ್ಲ ಪ್ರೇಮಿಗಳೂ ಎದುರಿಸುತ್ತಿದ್ದಾರೆ.

‘ನಾನು ಹಾಗೂ ಪ್ರಶಾಂತ್ ಕಳೆದ ನಾಲ್ಕೈದು ವರ್ಷಗಳಿಂದ ಪ್ರೀತಿಸುತ್ತಿದ್ದೇವೆ. ಅವನು ಓದು ಮುಗಿದ ಮೇಲೆ ವಿದೇಶದಲ್ಲಿ ಕೆಲಸ ಗಿಟ್ಟಿಸಿಕೊಂಡು ಅಲ್ಲಿಯೇ ನೆಲೆಯಾಗಿದ್ದಾನೆ. ನಾವು ನಮ್ಮ ಪ್ರೀತಿಯ ಬಗ್ಗೆ ಮನೆಯಲ್ಲಿ ಹೇಳಿ ಮದುವೆ ಮಾತುಕತೆ ಕೂಡ ನಡೆದಿತ್ತು. ಆದರೆ ಕೋವಿಡ್ ಕಾರಣದಿಂದ ಅವನಿಗೆ ಭಾರತಕ್ಕೆ ಬರಲು ಆಗುತ್ತಿಲ್ಲ. ನಮ್ಮ ಮನೆಯಲ್ಲಿ ‘ಹೀಗೇ ಬಿಟ್ಟರೆ ವಯಸ್ಸು ನಿಲ್ಲುವುದಿಲ್ಲ, ಇನ್ನು ಕಾಯಲು ಆಗುವುದಿಲ್ಲ’ ಎಂದು ಬೇರೆ ಮದುವೆ ಸಿದ್ಧತೆ ಮಾಡುತ್ತಿದ್ದಾರೆ. ನನಗೆ ಅವನನ್ನು ಬಿಟ್ಟು ಬೇರೆಯವರನ್ನು ಮದುವೆ ಆಗಲು ಇಷ್ಟವಿಲ್ಲ. ಹೀಗೆ ಆದರೆ ನಮ್ಮ ಸಂಬಂಧ ಮುರಿದು ಹೋಗಬಹುದು ಎಂಬ ಭಯ ಆಗುತ್ತಿದೆ’ ಎಂದು ನೋವು ತೋಡಿಕೊಳ್ಳುತ್ತಾಳೆ ಬೆಂಗಳೂರಿನ ಖಾಸಗಿ ಕಂಪನಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ಶ್ರಾವ್ಯಾ ಮಂಜುನಾಥ್.

ಈ ರೀತಿ ಬಹಳಷ್ಟು ಮಂದಿ ವಿದೇಶದಲ್ಲಿರುವ ಸಂಗಾತಿಯನ್ನು ನೆನೆಸಿಕೊಂಡು ನೋವು ಅನುಭವಿಸುತ್ತಿದ್ದಾರೆ. ಸಂಗಾತಿ ಇದ್ದೂ ಇಲ್ಲದಂತೆ ಬದುಕುವ ಅನಿವಾರ್ಯ ಪರಿಸ್ಥಿತಿಯನ್ನು ತಂದೊಡ್ಡಿದೆ ಈ ಪ್ರಯಾಣದ ಮೇಲಿನ ನಿರ್ಬಂಧ. ಲಾಕ್‌ಡೌನ್‌ನ ಅನಿಶ್ಚಿತ ಸ್ಥಿತಿ, ಸೋಂಕು ತಗಲುವ ಭೀತಿ, ಕಂಪನಿಗಳ ನೀತಿ–ನಿಯಮ.. ಹೀಗೆ ಹಲವು ಕಾರಣದಿಂದ ತಮ್ಮ ದೇಶಕ್ಕೆ ಹಾಗೂ ತಮ್ಮ ಸಂಗಾತಿ ಇರುವೆಡೆಗೆ ಮರಳಲಾಗದೇ ಪರದಾಡುತ್ತಿದ್ದಾರೆ ಹಲವರು. ಈ ನಿರ್ಬಂಧ ಎನ್ನುವುದು ಬಾಂಧವ್ಯದಲ್ಲೂ ಬಿರುಕು ಮೂಡುವಂತೆ ಮಾಡಿದೆ. ದಂಪತಿ, ಪ್ರೇಮಿಗಳಲ್ಲಿ ಮಾನಸಿಕ ಹಾಗೂ ದೈಹಿಕ ತಳಮಳ ಹೆಚ್ಚುವಂತೆ ಮಾಡಿದೆ. ಇದು ಸಾಂಸಾರಿಕವಾಗಿ ಸಮಸ್ಯೆಗಳನ್ನೂ ತಂದೊಡ್ಡಿದೆ.

ಮೊಬೈಲ್‌ಗೆ ಸೀಮಿತವಾದ ಸಂಬಂಧ

ಬೇರೆ ಬೇರೆ ದೇಶಗಳಲ್ಲಿ ನೆಲೆಸಿರುವ ಸಂಗಾತಿಗಳ ನಡುವೆ ಫೋನ್ ಕರೆ ಅಥವಾ ಮೆಸೇಜ್‌ಗೇ ಸಂಬಂಧಗಳು ಸೀಮಿತವಾಗಿವೆ. ವರ್ಷ ಕಳೆದರೂ ನೇರ ಭೇಟಿ ಸಾಧ್ಯವಾಗದೆ ವಿಡಿಯೊ ಕರೆಗಳ ಮೂಲಕವೇ ಮಾತನಾಡಿ ಸಮಾಧಾನ ಪಟ್ಟುಕೊಳ್ಳಬೇಕಾಗಿದೆ.

ಸಂಬಂಧದಲ್ಲಿ ಬಿರುಕು

ಪ್ರಯಾಣದ ನಿರ್ಬಂಧ ಎನ್ನುವುದು ಸಂಗಾತಿಗಳ ನಡುವೆ ಕೆಲವೊಮ್ಮೆ ಸಂಬಂಧದಲ್ಲಿ ಬಿರುಕು ಮೂಡಿಸಬಹುದು. ಸಂಗಾತಿಯ ದೈಹಿಕ ಅನುಪಸ್ಥಿತಿಯು ಸಂಬಂಧದಲ್ಲಿ ವೈಮನಸ್ಸು, ಭಿನ್ನಾಭಿಪ್ರಾಯಗಳು ಹೆಚ್ಚುವಂತೆ ಮಾಡಿದೆ. ಕೆಲವೊಮ್ಮೆ ಇದು ಅನುಮಾನಕ್ಕೂ ಎಡೆ ಮಾಡಿಕೊಟ್ಟು ಸಂಬಂಧವನ್ನು ಹಾಳು ಮಾಡುತ್ತಿದೆ.

ಮಾನಸಿಕ ತಲ್ಲಣ

ಪತಿ ವಿದೇಶದಲ್ಲೇ ಉಳಿದಾಗ ಹೆಂಡತಿಯ ಮನಸ್ಸಿಗೆ ಬೇಸರ, ನೋವು ಉಂಟಾಗುವುದು ಸಹಜ. ಇದರೊಂದಿಗೆ ಖಿನ್ನತೆ, ಆತಂಕ ಹಾಗೂ ಒಂಟಿತನದಂತಹ ಮಾನಸಿಕ ಸಮಸ್ಯೆಗಳೂ ಹೆಚ್ಚಾಗಿ ಕಾಡುತ್ತವೆ ಎನ್ನುತ್ತದೆ ಅಧ್ಯಯನ. ಪರಸ್ಪರ ಭೇಟಿ ಮಾಡಲಾಗದೇ ಇರುವುದು, ನೇರವಾಗಿ ಕೂತು ಮಾತನಾಡಲು ಸಾಧ್ಯವಾಗದಿರುವುದು, ಒಂಟಿಯಾಗಿ ಎಲ್ಲಾ ಸಂದರ್ಭಗಳನ್ನೂ ಎದುರಿಸುವ ಪರಿಸ್ಥಿತಿ, ತಂದೆ–ತಾಯಿ ಸಂಬಂಧಿಕರ ಬಳಿಗೂ ಹೋಗಲಾರದ ಸಂದರ್ಭ ಮಾನಸಿಕ ತಲ್ಲಣ ಹೆಚ್ಚಾಗಲು ಕಾರಣ.

ಹೆಚ್ಚುತ್ತಿರುವ ಬ್ರೇಕ್‌ಅಪ್

ಈ ಅನಿಶ್ಚಿತ ಪರಿಸ್ಥಿತಿ ಹಲವರ ಸಂಬಂಧಕ್ಕೆ ಮುಳುವಾಗಿದೆ. ಸಾಂಸಾರಿಕ ಕಲಹ, ಪ್ರೇಮಿಗಳ ನಡುವಿನ ಬ್ರೇಕ್‌ಅಪ್‌ನಂತಹ ಸಮಸ್ಯೆಗಳಿಗೂ ಕಾರಣವಾಗಿದೆ. ಹಳೆಯ ಸಂಬಂಧವನ್ನು ಮುರಿದುಕೊಂಡು ಹೊಸ ಸಂಬಂಧವನ್ನು ಹುಡುಕಿಕೊಂಡು ಮಾನಸಿಕ ನೆಮ್ಮದಿ ಕಂಡುಕೊಳ್ಳುವ ಪ್ರಯತ್ನವನ್ನೂ ಮಾಡಬಹುದು. ಹೀಗಾಗಿ ವಿಚ್ಛೇದನ ಪ್ರಕರಣಗಳೂ ಹೆಚ್ಚುತ್ತಿವೆ.

ಸಿಗಡಿ ಘೀ ರೋಸ್ಟ್ ಅಂಜಲ್ ತವಾ ಫ್ರೈ

ಫಾತಿಮಾ ಇಶ್ರತ್

ನಳಪಾಕ

ಸಿಗಡಿ ಘೀ ರೋಸ್ಟ್

ಬೇಕಾಗುವ ಸಾಮಗ್ರಿಗಳು: ಸಿಗಡಿ - 1 ಕೆ.ಜಿ, ಖಾರದಪುಡಿ - 1 ಟೇಬಲ್ ಚಮಚ, ಅರಿಸಿನ ಪುಡಿ - 1 ಟೀ ಚಮಚ, ಶುಂಠಿ–ಬೆಳ್ಳುಳ್ಳಿ ಪೇಸ್ಟ್ - 1/2 ಟೇಬಲ್ ಚಮಚ, ಉಪ್ಪು- ರುಚಿಗೆ ತಕ್ಕಷ್ಟು, ಹುಣಸೆಹಣ್ಣು ಅಥವಾ ಲಿಂಬೆರಸ - ಸ್ವಲ್ಪ, ಕರಿಬೇವು ಸೊಪ್ಪು - ಸ್ವಲ್ಪ, ಈರುಳ್ಳಿ - ದೊಡ್ಡದು ಒಂದು

ಮಸಾಲೆಗೆ: ಒಣಮೆಣಸು - 5-6, ಕೊತ್ತಂಬರಿ ಬೀಜ - 1/2 ಟೇಬಲ್ ಚಮಚ, ಸೋಂಪು - 1/2 ಟೇಬಲ್ ಚಮಚ, ಜೀರಿಗೆ - 1/2 ಟೇಬಲ್ ಚಮಚ, ಕಾಳುಮೆಣಸು - 1 ಟೀ ಚಮಚ, ಲವಂಗ - 4, ಏಲಕ್ಕಿ - 4, ಚಕ್ಕೆ - 1 ದೊಡ್ಡದು, ಸಾಸಿವೆ - 1/2 ಟೀ ಚಮಚ, ಮೆಂತ್ಯೆ - 1/2 ಟೀ ಚಮಚ. ಮೇಲಿನ ಎಲ್ಲವನ್ನೂ ಒಂದು ಪ್ಯಾನ್‌ನಲ್ಲಿ ಹುರಿದು ಅದನ್ನು ಮಿಕ್ಸಿಯಲ್ಲಿ ನುಣ್ಣಗೆ ಅರೆಯಿರಿ. ಅದಕ್ಕೆ ಹುಣಸೆಹಣ್ಣು ಅಥವಾ ಲಿಂಬೆರಸ ಸೇರಿಸಿ ಮಸಾಲೆ ತಯಾರಿಸಿ.

ತಯಾರಿಸುವ ವಿಧಾನ: ಪಾತ್ರೆಯೊಂದಕ್ಕೆ ಸಿಗಡಿ, ಖಾರದಪುಡಿ, ಶುಂಠಿ–ಬೆಳ್ಳುಳ್ಳಿ ಪೇಸ್ಟ್, ಅರಿಸಿನ, ಉಪ್ಪು ಸ್ವಲ್ಪ ಹಾಕಿ ಚೆನ್ನಾಗಿ ಕಲಸಿ 1 ಗಂಟೆ ಕಾಲ ನೆನೆಸಿಡಿ. ನಂತರ ಒಂದು ಪ್ಯಾನ್‌ಗೆ ಕಲೆಸಿಟ್ಟ ಸಿಗಡಿ ಹಾಕಿ ಅರ್ಧ ಬೇಯುವವರೆಗೂ ಬೇಯಿಸಿಕೊಂಡು ನೀರು ಮತ್ತು ಸಿಗಡಿಯನ್ನು ಬೇರೆ ಬೇರೆ ತೆಗೆದಿಡಿ. ಇನ್ನೊಂದು ಪ್ಯಾನ್‌ಗೆ 3 ಚಮಚ ತುಪ್ಪ ಹಾಕಿ ಅದಕ್ಕೆ ಸಣ್ಣಗೆ ಹೆಚ್ಚಿದ ಈರುಳ್ಳಿ ಹಾಕಿ ಕೈ ಆಡಿಸಿ. ನಂತರ ಅರೆದ ಮಸಾಲೆ ಸೇರಿಸಿ ಚೆನ್ನಾಗಿ ಹುರಿಯಿರಿ. ಆಮೇಲೆ ಅರ್ಧ ಬೆಂದ ಸಿಗಡಿ ಹಾಕಿ ಹುರಿಯಿರಿ. ಅದಕ್ಕೆ ರುಚಿಗೆ ಬೇಕಾದಷ್ಟು ಉಪ್ಪು, ಚಿಟಿಕೆ ಸಕ್ಕರೆ ಮತ್ತು ಕರಿಬೇವು ಸೇರಿಸಿ. ಬೆಂದ ನಂತರ 1 ಚಮಚ ತುಪ್ಪ ಹಾಕಿ ಬೆರೆಸಿ ಬಿಸಿ ಬಿಸಿಯಾಗಿದ್ದಾಗಲೇ ತಿನ್ನಲು ಕೊಡಿ. ಮಳೆಗಾಲದಲ್ಲಿ ಸಿಗಡಿ ಘೀ ರೋಸ್ಟ್ ಬಿಸಿಯಾಗಿ ತಿನ್ನಲು ತುಂಬಾ ಚೆನ್ನಾಗಿರುತ್ತದೆ.

ಅಂಜಲ್ ತವಾ ಫ್ರೈ

ಬೇಕಾಗುವ ಸಾಮಗ್ರಿಗಳು: ಅಂಜಲ್ ಮೀನು - ಅರ್ಧ ಕೆ.ಜಿ, ಒಣಮೆಣಸು - 10, ಕೊತ್ತಂಬರಿ ಬೀಜ - 1 ಟೇಬಲ್ ಚಮಚ, ಈರುಳ್ಳಿ- ಅರ್ಧ, ಹುಣಸೆಹುಳಿ - ದೊಡ್ಡ ಲಿಂಬೆ ಗಾತ್ರ, ಕಾರ್ನ್‌ಫ್ಲೋರ್ – 1 ಚಮಚ, ಎಣ್ಣೆ – ಸ್ವಲ್ಪ.

ತಯಾರಿಸುವ ವಿಧಾನ: ಮೆಣಸು, ಕೊತ್ತಂಬರಿ ಬೀಜ, ಈರುಳ್ಳಿ, ಹುಣಸೆಹುಳಿಯನ್ನು ಮಿಕ್ಸಿಯಲ್ಲಿ ಹಾಕಿ ರುಬ್ಬಿ. ಅದನ್ನು ಕಪ್‌ಗೆ ಹಾಕಿ ಅದಕ್ಕೆ ಉಪ್ಪು, ಕಾರ್ನ್‌ಫ್ಲೋರ್, ಶುಂಠಿ–ಬೆಳ್ಳುಳ್ಳಿ ಪೇಸ್ಟ್ ಹಾಕಿ ಚೆನ್ನಾಗಿ ಮಿಶ್ರಣ ಮಾಡಿ. ಮೀನಿಗೆ ಸರಿಯಾಗಿ ಮಸಾಲೆ ಸವರಿ ಅರ್ಧ ಗಂಟೆ ಇಡಿ. ನಂತರ ಒಂದು ಪ್ಯಾನ್‌ಗೆ ತೆಂಗಿನೆಣ್ಣೆ ಹಾಕಿ ದೂರ ದೂರಕ್ಕೆ ಮಸಾಲೆ ಮೀನನ್ನು ಹರಡಿ. ಮೀನಿನ ಮೇಲೆ ಸ್ವಲ್ಪ ಸ್ವಲ್ಪ ಎಣ್ಣೆ ಹಾಕಿ ಎರಡೂ ಕಡೆ ಚೆನ್ನಾಗಿ ಕಾಯಿಸಿ. ಮೇಲೆ ಕರಿಬೇವು ಹಾಕಿ 15 ನಿಮಿಷ ಚೆನ್ನಾಗಿ ಕಾಯಿಸಿದರೆ ಅಂಜಲ್ ತವಾ ಫ್ರೈ ಸವಿಯಲು ಸಿದ್ಧ.

ತಂದೂರಿ ಚಿಕನ್

ಬೇಕಾಗುವ ಸಾಮಗ್ರಿಗಳು: ಚಿಕನ್ - 1 ಕೆ.ಜಿ, ಕಾಶ್ಮೀರಿ ಮೆಣಸಿನ ಹುಡಿ - 2 ಟೇಬಲ್ ಚಮಚ, ಶುಂಠಿ ಪೌಡರ್ - 1 ಟೀ ಚಮಚ, ಬೆಳ್ಳುಳ್ಳಿ ಪೇಸ್ಟ್ - 1ಟೀ ಚಮಚ, ವಿನೆಗರ್ - 2 ಟೇಬಲ್ ಚಮಚ, ಜೀರಿಗೆ -1 ಟೀ ಚಮಚ, ಗೋಡಂಬಿ - 12, ಕಡ್ಲೆಹಿಟ್ಟು - 2 ಟೇಬಲ್ ಚಮಚ, ಗಟ್ಟಿ ಮೊಸರು - 1/4 ಕಪ್, ಕೊತ್ತಂಬರಿ ಪುಡಿ - 2 ಟೇಬಲ್ ಚಮಚ, ಗರಂ ಮಸಾಲೆ - 1 ಟೇಬಲ್ ಚಮಚ, ಜೀರಿಗೆ ಪುಡಿ - 1/2 ಟೀ ಚಮಚ, ಕಸೂರಿಮೇಥಿ - 1/4 ಟೀ ಚಮಚ, ಕೆಂಪು ಫುಡ್ ಕಲರ್ - 1 ಚಿಟಿಕೆ, ಎಣ್ಣೆ - 5 ಟೇಬಲ್ ಚಮಚ, ಉಪ್ಪು-ರುಚಿಗೆ ತಕ್ಕಷ್ಟು

ತಯಾರಿಸುವ ವಿಧಾನ: ದೊಡ್ಡ ಚಿಕನ್ ತುಂಡಿಗೆ ಚಾಕುವಿನಿಂದ ಗೆರೆ ಎಳೆಯಿರಿ. ನೀರು ಒರೆಸಿ. ಬೌಲ್‌ನಲ್ಲಿ ಕಾಶ್ಮೀರಿ ಮೆಣಸಿನ ಪುಡಿ, ಶುಂಠಿ–ಬೆಳ್ಳುಳ್ಳಿ ಪೇಸ್ಟ್, ಉಪ್ಪು, ವಿನೆಗರ್ ಹಾಕಿ ಚೆನ್ನಾಗಿ ಮಿಶ್ರಣ ಮಾಡಿ. ಅದನ್ನು ಚಿಕನ್‌ಗೆ ಸರಿಯಾಗಿ ಸವರಿ ಫ್ರಿಜ್‌ನಲ್ಲಿ ಇಟ್ಟು 15 ನಿಮಿಷಗಳ ನಂತರ ತೆಗೆಯಿರಿ. ಒಂದು ಪ್ಯಾನ್‌ಗೆ 2 ಚಮಚ ಎಣ್ಣೆ ಹಾಕಿ ಬಿಸಿಯಾದ ಮೇಲೆ ಜೀರಿಗೆ, ಕಡ್ಲೆಹಿಟ್ಟು, ಗೋಡಂಬಿ ಸೇರಿಸಿ ಸಣ್ಣ ಉರಿಯಲ್ಲಿ 3 ರಿಂದ 4 ನಿಮಿಷಗಳ ಕಾಲ ಹುರಿದುಕೊಳ್ಳಿ. ಅದು ತಣ್ಣಗಾದ ಮೇಲೆ ಮಿಕ್ಸಿ ಜಾರಿಗೆ ಹಾಕಿ ಅದಕ್ಕೆ ಮೊಸರು, ಕೊತ್ತಂಬರಿ ಪುಡಿ, ಗರಂ ಮಸಾಲೆ, ಜೀರಿಗೆ ಪುಡಿ, ಕಸೂರಿಮೇಥಿ, ಕೆಂಪು ಕಲರ್ ಪುಡಿ ಹಾಗೂ ಉಪ್ಪು ಸೇರಿಸಿ ನುಣ್ಣಗೆ ರುಬ್ಬಿಕೊಳ್ಳಿ. ಅದನ್ನು ಮಸಾಲೆ ಹಚ್ಚಿದ ಚಿಕನ್ ಮೇಲೆ ಸುರಿದು ಚೆನ್ನಾಗಿ ಮಿಶ್ರಣ ಮಾಡಿ ಮತ್ತೆ 15 ನಿಮಿಷಗಳ ಕಾಲ ಫ್ರಿಜ್‌ನಲ್ಲಿಡಿ. ಪ್ಯಾನ್‌ಗೆ ಬೆಣ್ಣೆ ಅಥವಾ ಎಣ್ಣೆ ಸವರಿ ಚಿಕನ್ ತುಂಡುಗಳನ್ನು ಇರಿಸಿ ಸಣ್ಣ ಉರಿಯಲ್ಲಿ ಮುಚ್ಚಳ ಮುಚ್ಚಿ ಬೇಯಿಸಿ. ನಂತರ ತಿರುಗಿಸಿ ಹಾಕಿ ಚಿಕನ್‌ನ ಇನ್ನೊಂದು ಬದಿಯನ್ನು ಚೆನ್ನಾಗಿ ಬೇಯಿಸಿ ರೋಸ್ಟ್ ಮಾಡಿ. ಈಗ ನಿಮ್ಮ ಮುಂದೆ ರುಚಿಯಾದ ಚಿಕನ್ ತಂದೂರಿ ಸವಿಯಲು ಸಿದ್ಧ.

ಗರ್ಭಿಣಿಯರಲ್ಲಿ ಕೋವಿಡ್: ವೈದ್ಯರ ಸಲಹೆಯಿಲ್ಲದೇ ಮಾತ್ರೆ ಸೇವನೆ ಬೇಡ!

ಸ್ಪಂದನ

ಡಾ. ವೀಣಾ ಎಸ್. ಭಟ್

- **ನನ್ನ ತಂಗಿ 5 ತಿಂಗಳ ಗರ್ಭಿಣಿ. ಒಂದೇ ದಿನ ಜ್ವರ ಬಂದಿತ್ತು. ಆಶಾ ಕಾರ್ಯಕರ್ತೆಯರು ಪರೀಕ್ಷಿಸಿ ಕೋವಿಡ್ ಪಾಸಿಟಿವ್ ಎಂದರು. ‘ಮನೆಯಲ್ಲೇ ಇರಿ’ ಎಂದು ಹೇಳಿದ್ದಾರೆ. ವಿಟಮಿನ್ ಮಾತ್ರೆ ಕೊಟ್ಟಿದ್ದಾರೆ. ನನ್ನ ಅಮ್ಮನಿಗೆ 45 ವರ್ಷ, ಅವರಿಗೂ ಕೋವಿಡ್ ಪಾಸಿಟಿವ್ ಬಂದಿದೆ. ಸ್ವಲ್ಪ ಶೀತ, ನೆಗಡಿ ಇದೆ. ನನಗೆ ಹೆದರಿಕೆಯಾಗುತ್ತಿದೆ. ಏನು ಮಾಡಲಿ?**

ರಾಜೇಶ್ವರಿ, ಬೀರೂರು

ರಾಜೇಶ್ವರಿಯವರೇ, ಆಶಾ ಕಾರ್ಯಕರ್ತೆಯರು ಹೇಳಿದ ಹಾಗೆ ಏನೂ ತೊಂದರೆ ಇಲ್ಲದಿದ್ದರೆ ಅವರು ಕೊಟ್ಟ ವಿಟಮಿನ್ ಮಾತ್ರೆ ಸೇವಿಸುತ್ತಾ ಮನೆಯಲ್ಲಿರಬಹುದು. ಆದರೆ ಗರ್ಭಿಣಿಯರು ತಜ್ಞ ವೈದ್ಯರ ಸಲಹೆ ಇಲ್ಲದೇ ಯಾವುದೇ ಆ್ಯಂಟಿ ಬಯೋಟಿಕ್ ಮಾತ್ರೆಗಳನ್ನು ಸೇವಿಸಬಾರದು. ಈಗ ಹಲವರು ಅವರಾಗಿಯೇ ಕೋವಿಡ್ ಪರೀಕ್ಷೆ ಮಾಡಿಸಿಕೊಂಡು ಡಾಕ್ಸಿಸೈಕ್ಲಿನ್, ಅಜಿತ್ರೋಮೈಸಿನ್ ಹಾಗೂ ಕೆಲವೊಮ್ಮೆ ಸ್ಟೀರಾಯ್ಡ್ ಮಾತ್ರೆಗಳನ್ನು ಸೇವಿಸುತ್ತಾರೆ. ಇದು ತಪ್ಪು. ಅದರಲ್ಲೂ ಗರ್ಭಿಣಿಯರು ಡಾಕ್ಸಿಸೈಕ್ಲಿನ್ ಮಾತ್ರೆಗಳನ್ನು ಸೇವಿಸಲೇಬಾರದು. ಇದರಿಂದ ಹುಟ್ಟುವ ಮಗುವಿಗೂ ತೊಂದರೆಯಾಗಬಹುದು. ಯಾವುದಕ್ಕೂ ನೀವು ಹಾಗೂ ನಿಮ್ಮ ತಂಗಿ ಮತ್ತು ಅಮ್ಮ ತಜ್ಞರ ಮೇಲ್ವಿಚಾರಣೆಯಲ್ಲಿದ್ದು ಜಾಗರೂಕತೆಯಿಂದಿರಿ. ಅದರಲ್ಲೂ ನಿಮ್ಮ ತಂಗಿಗೆ ಸೋಂಕು ಆರಂಭವಾದ 8ನೇ ದಿನದಿಂದ 15ನೇ ದಿನವರೆಗೆ ಜ್ವರ ಬರುತ್ತಿದ್ದಲ್ಲಿ ಅಥವಾ ಉಸಿರಾಟದ ತೊಂದರೆ ಇದ್ದಲ್ಲಿ ನಿರ್ಲಕ್ಷಿಸದೆ ತಕ್ಷಣ ವೈದ್ಯರನ್ನು ಸಂಪರ್ಕಿಸಿ ಸಲಹೆ, ಚಿಕಿತ್ಸೆ ಪಡೆದುಕೊಳ್ಳಿ. ತಾಯಿಗೆ ಕೋವಿಡ್ ಇದ್ದಾಗ ಮಗುವಿಗೆ ತೊಂದರೆಯಾಗುವ ಸಂಭವ ಅತೀ ಕಡಿಮೆ. ಹೆರಿಗೆಯ ಕ್ರಮದಲ್ಲೂ, ಹೆರಿಗೆಯ ಸಂದರ್ಭದ ಚಿಕಿತ್ಸೆಯಲ್ಲೂ ವ್ಯತ್ಯಾಸವೇನೂ ಇಲ್ಲ. ನಂತರ ಎದೆಹಾಲನ್ನೂ ಎಂದಿನಂತೆ ಕುಡಿಸಬಹುದು. ಆದರೆ ಮುಂಜಾಗ್ರತೆ ಇರಬೇಕು. ತಾಜಾ ಪೌಷ್ಟಿಕ ಆಹಾರ ಸೇವಿಸಿ. ಆತಂಕಗೊಳ್ಳದೆ, ತಪ್ಪದೇ ಮನೆಯಲ್ಲೂ ಕೂಡಾ ಮಾಸ್ಕ್ ಧರಿಸುತ್ತಾ ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ನಿಮ್ಮ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಿ.

- **ನನಗೆ 18 ವರ್ಷ. ನಾನು ಕಳೆದ 2 ವರ್ಷಗಳಿಂದ ಋತುಚಕ್ರದ ತೊಂದರೆಯಿಂದ ಬಳಲುತ್ತಿದ್ದೆ. ಆದರೆ ಈಗ ಎರಡು ತಿಂಗಳಿಂದ ಸರಿಯಾಗಿದೆ. ಆದರೆ ಮೊದಲ ಸಲ ನನಗೆ ಸೊಂಟದ ನೋವು ಶುರುವಾಗಿದೆ. ಅದು ಕಡಿಮೆ ಆಗ್ತಾ ಇಲ್ಲ. ನಾನು ಈ ಸಮಸ್ಯೆಗೆ ಡಾಕ್ಟರ್ ಸಲಹೆ ಪಡೆದು ಔಷಧ ತೆಗೆದುಕೊಂಡಿದ್ದೆ. ಈಗ ಆಸ್ಪತ್ರೆಗೆ ಹೋಗಲು ಆಗುತ್ತಿಲ್ಲ. ಇದಕ್ಕೆ ಪರಿಹಾರ ತಿಳಿಸಿ.**

ಅನುಷಾ, ಭಟ್ಕಳ

ಅನುಷಾರವರೇ, ಮೊದಲೆರಡು ವರ್ಷ ಋತುಚಕ್ರದ ಆರಂಭದಲ್ಲಿ ಋತುಚಕ್ರದ ಏರುಪೇರು ಸಹಜ. ಆದರೆ 18ನೇ ವಯಸ್ಸಿನಲ್ಲಿ ಸೊಂಟದ ನೋವು ಸಹಜವಲ್ಲ. ಋತುಚಕ್ರ ಸಮಯದಲ್ಲಿ ಸ್ವಲ್ಪಮಟ್ಟಿಗೆ ಸೊಂಟ ನೋವು, ಹೊಟ್ಟೆ ನೋವು ಎಲ್ಲ ಸಹಜವೇ. ಯಾಕೆಂದರೆ ಮುಟ್ಟಾಗುವಾಗ ಪ್ರೊಸ್ಟಗ್ಲಾಂಡಿನ್‌ನಂತಹ ಸ್ಥಳೀಯ ಹಾರ್ಮೋನುಗಳು ಒಂದು ರೀತಿಯ ಹೊಟ್ಟೆನೋವು, ಸೊಂಟನೋವು ಇನ್ನಿತರ ಅಸ್ವಸ್ಥತೆಯನ್ನು ಹೆಣ್ಣುಮಕ್ಕಳಲ್ಲಿ ಉಂಟುಮಾಡುತ್ತವೆ. ವೈದ್ಯರ ಸಲಹೆ ಮೇರೆಗೆ ಅವಶ್ಯವಿದ್ದರೆ ನೋವು ನಿವಾರಕ ಔಷಧ ತೆಗೆದುಕೊಂಡರೆ ಕಡಿಮೆ ಆಗುತ್ತದೆ. ಕಡಿಮೆ ಆಗದಿದ್ದಲ್ಲಿ ನೀವು ನಿಮ್ಮ ಸೊಂಟನೋವಿಗೆ ಕಾರಣವನ್ನು ಹುಡುಕಲು ಪ್ರಯತ್ನಿಸಿ. ನೀವು ಕುಳಿತುಕೊಳ್ಳುವ ಭಂಗಿಯೇ ಸರಿಯಿಲ್ಲದಿರಬಹುದು, ನೀವು ನಿಲ್ಲುವಾಗ, ಕೂರುವಾಗ ಬೆನ್ನುಹುರಿ ಸದಾ ನೇರವಾಗೇ ಇರಲಿ ಇನ್ನು ಕೆಲವರಲ್ಲಿ ಗರ್ಭಕೋಶವು ಹಿಮ್ಮುಖವಾಗಿ ಬಾಗಿರುತ್ತದೆ (ರೆಟ್ರೋವರ್ಟೆಡ್). ಅಂತಹವರಿಗೂ ಕೂಡ ಈ ತರಹದ ಸೊಂಟ ನೋವು ಬರಬಹುದು. ಯಾವುದಕ್ಕೂ ತಜ್ಞವೈದ್ಯರಿಂದ ಸೂಕ್ತ ತಪಾಸಣೆ ಮಾಡಿಸಿಕೊಂಡು ಅವಶ್ಯವಿದ್ದಲ್ಲಿ ಅಲ್ಟ್ರಾ ಸೌಂಡ್ ಸ್ಕ್ಯಾನಿಂಗ್ ಮಾಡಿಸುವುದು ಒಳ್ಳೆಯದು ಮತ್ತು ಕಟಿಪ್ರದೇಶದ ಸ್ನಾಯುಗಳ (ಪೆಲ್ವಿಕ್ ಫ್ಲೋರ್‌ಮಸಲ್ಸ್) ಬಲವರ್ಧನೆಗಾಗಿ ನಿಯಮಿತವಾಗಿ ಬದ್ಧಕೋಣಾಸನ, ಉಪವಿಷ್ಟಕೋಣಾಸನ, ಸೇತುಬಂಧಾಸನ, ಚಕ್ಕಿಚಲನಾಸನ, ಸೂರ್ಯ ನಮಸ್ಕಾರ ಇತ್ಯಾದಿಗಳನ್ನು ದಿನವೂ ಮಾಡಿದರೆ ಅತ್ಯುತ್ತಮ ಲಾಭ ಸಿಗುತ್ತದೆ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಸ್ಪಂದನ...

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳಿದ್ದರೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.in ಗೆ ಕಳಿಸಬಹುದು.

ಮಿತಿಯಿಲ್ಲದ ಕಾಡಿನ ಪ್ರೀತಿ

ಪೂರ್ಣಿಮಾ

ಸುಕೃತ ಎಸ್.

‘**ಇಪ್ಪತ್ತು** ವರ್ಷಗಳ ಹಿಂದೆ ನಾನು ಈ ಜಾಗ ಕೊಂಡಾಗ ಅಲ್ಲಲ್ಲಿ ಕೆಲವು ಮರಗಳನ್ನು ಬಿಟ್ಟರೆ, ಇದೊಂದು ಬೋಳು ಗುಡ್ಡವಾಗಿತ್ತು. ಮಲೆನಾಡಿನಲ್ಲಿ ಈ ಸ್ಥಿತಿಯೇ ಎಂದು ಬೇಸರವಾಗಿತ್ತು. ಆದರೆ ಈಗ ಇದೊಂದು ತರಹೇವಾರಿ ಮರ– ಗಿಡಗಳಿಂದ, ಪ್ರಾಣಿ–ಪಕ್ಷಿಗಳಿಂದ ತುಂಬಿದ ಕಾಡು. ಮಾನವನ ಹಸ್ತಕ್ಷೇಪ ಇಲ್ಲದೆ ಪ್ರಕೃತಿ ತಾನಾಗಿಯೇ ಮೈದುಂಬಿಕೊಂಡಿದೆ’

ಶಿವಮೊಗ್ಗದ ಸಾಗರ ತಾಲ್ಲೂಕಿನ ತಾಳಗುಪ್ಪ ಹತ್ತಿರದ ಹಿರೇಮನೆ ಗ್ರಾಮದ ನವಿಲೆ ಎಂಬ ಪುಟ್ಟ ಹಳ್ಳಿಯಲ್ಲಿ ಪೂರ್ಣಿಮಾ ತಾವು ಬೆಳೆಸಿದ ಕಾಡಿನ ಬಗ್ಗೆ ಹೇಳುವಾಗ ಅವರ ಮೊಗದಲ್ಲಿ ಸಂತೃಪ್ತಿಯ ನಗುವಿತ್ತು. ಪೂರ್ಣಿಮಾ ಅವರದ್ದು ಪ್ರಕೃತಿ ಪ್ರೀತಿಯ ಬದುಕು. ತಮ್ಮ ಒಟ್ಟು 12 ಎಕರೆ ಜಾಗದಲ್ಲಿ 4 ಎಕರೆಯಲ್ಲಿ ಅಡಿಕೆ ತೋಟ, ಗದ್ದೆ, ತರಕಾರಿ ಕೃಷಿ ಮಾಡಿಕೊಂಡು ಉಳಿದ ಎಂಟು ಎಕರೆಯಲ್ಲಿ ಕಾಡು ಬೆಳೆಯಲು ಬಿಟ್ಟಿದ್ದಾರೆ. ನಗರ ಪ್ರದೇಶದಿಂದ ದೂರ, ತೋಟ– ಕಾಡಿನ ಮಧ್ಯೆ ಪುಟ್ಟದೊಂದು ಮನೆ. ಸಹ ಜೀವಿಗಳಾಗಿ ನಾಲ್ಕು ಹಸುಗಳು, ಒಂದು ಪುಟ್ಟ ನಾಯಿಮರಿ. ಇದು ಅವರ ಪುಟ್ಟ ಸಂಸಾರ.

ಮೂಲತಃ ಕೊಪ್ಪದವರಾದ ಪೂರ್ಣಿಮಾ ನಿಸರ್ಗದ ಮೇಲಿನ ಪ್ರೀತಿಯಿಂದಾಗಿ 20–22 ವರ್ಷಗಳ ಹಿಂದೆ ನವಿಲೆ ಗ್ರಾಮಕ್ಕೆ ಬಂದು ನೆಲೆಸಿದ್ದಾರೆ. ಗೇಟಿನ ಒಳಹೊಕ್ಕರೆ ಎತ್ತರೆತ್ತರಕ್ಕೆ ಬೆಳೆದ ಅಡಿಕೆ, ಏಲಕ್ಕಿ, ಹಲಸು, ಬಾಳೆ ಹೀಗೆ ತರಹೇವಾರಿ ಬೆಳೆಗಳು. ಮನೆಗೆ ಪ್ರವೇಶಿಸಿದರೆ ಮಣ್ಣು ಮೆತ್ತಿದ ಗೋಡೆಗಳ ಜಗುಲಿ ಸ್ವಾಗತಿಸುತ್ತದೆ.

ಕಾಡಿನ ಮಧ್ಯೆ ಇರುವ ಪೂರ್ಣಿಮಾ ಅವರ ಮನೆ

ಅಮೂಲ್ಯ ಮರಗಳ ಸಂಕುಲ

ಅವರ ತೋಟ, ಕಾಡು ನೋಡಲು ಹೊರಟ ನಮಗೆ ಅಲ್ಲಿಯ ಸಸ್ಯ ಸಂಕುಲ, ಜೀವ ವೈವಿಧ್ಯ ನೋಡಿ ಹಿಂದೊಮ್ಮೆ ಇದು ಬೋಳು ಗುಡ್ಡವಾಗಿತ್ತೇ ಎಂದು ಅಚ್ಚರಿಪಡುವಂತಾಯಿತು. ಹಸಿರೆಲೆಗಳಿಂದ ಕೂಡಿದ ತೇಗ, ಮತ್ತಿ, ಹೊನ್ನೆ, ಆಲ, ನೇರಳೆ, ಸಳ್ಳೆಯಲ್ಲದೇ ಹೆಸರೇ ಗೊತ್ತಿಲ್ಲದ ಮರಗಳ ಸಂಕುಲ ದಟ್ಟ ಕಾಡನ್ನೇ ಸೃಷ್ಟಿಸಿದೆ. ಆಕರ್ಷಕ ಹೂವುಗಳಿಂದ, ಹಣ್ಣುಗಳಿಂದ ತೂಗುವ ಮರಗಳು.. ನೋಡಲು ಇಡೀ ದಿನ ಸಾಲದು!

‘ಮೂಲತಃ ಕೃಷಿ ಕುಟುಂಬ ನಮ್ಮದು. ಕಾಡಿನ ಜೊತೆಗೆ ಬೆಸೆದುಕೊಂಡು ಬದುಕು ಕಟ್ಟಿಕೊಳ್ಳಬೇಕು ಎನ್ನುವ ಬಯಕೆ ಯಾವಾಗಲೂ ಇತ್ತು. ಆದರೆ, ನನ್ನ ಆಯ್ಕೆಯ ಈ ಬದುಕು, ನನ್ನ ಬಂಧುಗಳ ಮಾತಿಗೆ ಆಹಾರವಾಗಬಾರದೆಂದು ದೂರದ ಈ ಊರಿಗೆ ಬಂದೆ...’ ಅವರ ಮಾತು ಕೇಳುತ್ತ, ಕಾಡಿನ ಸೌಂದರ್ಯವನ್ನು ಕಣ್ಣಿನಲ್ಲಿ ತುಂಬಿಕೊಳ್ಳುತ್ತ ಮುಂದಡಿ ಇಡುತ್ತಿದ್ದೆವು ಅಷ್ಟೆ, ಹಳದಿ ಬಣ್ಣದ ಆಕರ್ಷಕ ನಾಗರಹಾವೊಂದು ಬಳಿಯಲ್ಲೇ ಹಾದು ಹೋಯಿತು.

‘ಜೀವವೈವಿಧ್ಯವೇ ಇಲ್ಲದ ಜಾಗದಲ್ಲಿ ಈಗ ಹೆಸರೇ ಗೊತ್ತಿಲ್ಲದ ಕೀಟ, ಹೂವು, ಹಣ್ಣಿನ ಮರಗಳು ತಾವಾಗಿಯೇ ಬೆಳೆದಿವೆ. ಬೆಳಿಗ್ಗೆ ಎದ್ದು ಒಮ್ಮೆ ಕಾಡು ಸುತ್ತುವ ಅಭ್ಯಾಸ ನನ್ನದು. ಪ್ರತೀ ದಿನವೂ ಹೊಸದೊಂದು ಹೂವು, ಗಿಡ ಕಾಣಸಿಗುತ್ತದೆ. ಅದನ್ನು ನೋಡುವುದೇ ಸೋಜಿಗ. ಪ್ರತಿನಿತ್ಯವೂ ಕಾಲಿಗೆ ಸಿಗುವ ಹಾವುಗಳ ವೈವಿಧ್ಯ, ಅದರ ಬಣ್ಣ, ರಚನೆ ನೋಡಿ, ಬೆರಗಾಗಿದ್ದೇನೆ’ ಎನ್ನುವ ಪೂರ್ಣಿಮಾ ‘ಮಲೆನಾಡಿಗೆ ಅಕೇಶಿಯಾ ಬೇಡ’ ಎನ್ನುವ ಹೋರಾಟದಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ‘ಒಮ್ಮೆ ಈ ಕಾಡು ಹೊಕ್ಕು ಸಿಗುವ ಅನುಭವ ನೋಡಿ, ಅಕೇಶಿಯಾ ಮರಗಳ ಮಧ್ಯೆ ಇದ್ದು ಬಂದು ನೋಡಿ; ಉಸಿರುಕಟ್ಟಿಸುತ್ತದೆ ಅಲ್ಲಿ. ಜೀವವೈವಿಧ್ಯವೂ ಇರುವುದಿಲ್ಲ..’ ಎಂದು ಸಿಟ್ಟಾದರು.

ಕಾಡಿನ ಒಳಗೆ ಸುಮಾರು ದೂರ ಹೋದ ನಮಗೆ ಆಗಷ್ಟೇ ಶುರುವಾದ ಮಳೆ ವಾಪಸ್ಸಾಗುವ ಸಮಯವನ್ನು ನೆನಪಿಸಿತು. ಪೂರ್ಣಿಮಾ ತರಹ ಒಬ್ಬೊಬ್ಬರೂ ಒಂದಿಷ್ಟು ಕಾಡು ಬೆಳೆಸಿದರೆ ಅರಣ್ಯ ರಕ್ಷಣೆ ಒಂದು ಸಮಸ್ಯೆಯೇ ಅಲ್ಲ ಎನಿಸಿದ್ದು ಸುಳ್ಳಲ್ಲ.

ಸಂಸ್ಥೆ ಕಟ್ಟಬೇಕು...

‘ನಾನು ಕೋಲ್ಕತ್ತದ ಶಾಂತಿನಿಕೇತನದಲ್ಲಿ ಪೇಂಟಿಂಗ್ ಕಲಿತವಳು. ಈ ಇಡೀ ಜಾಗವನ್ನು ಒಂದು ಸಂಸ್ಥೆಯಾಗಿ ಬೆಳೆಸಬೇಕು ಎಂದುಕೊಂಡಿದ್ದೇನೆ. ಕೃಷಿಯಲ್ಲಿ ಆಸಕ್ತಿ ಇದ್ದವರು ಕೃಷಿ ಮಾಡಬಹುದು; ಕಾಡಿನ ಬಗ್ಗೆ ಪ್ರೀತಿಯಿದ್ದವರು ಅಲ್ಲಿ ಸುತ್ತಬಹುದು. ಪೇಂಟಿಂಗ್ ಕಲಿಯಬಹುದು, ನನಗೆ ಹೊಲಿಗೆಯೂ ಬರುತ್ತದೆ; ಅದನ್ನೂ ಸಹ ಹೇಳಿಕೊಡುತ್ತೇನೆ. ಎಲ್ಲರೂ ಸೇರಿ ಅಡುಗೆ ಮಾಡಿಕೊಂಡು ಕೆಲವು ಕಾಲ ಇಲ್ಲಿ ಇದ್ದು ಹೋಗಬಹುದಾದ ಸಂಸ್ಥೆ ಮಾಡಬೇಕು ಎನ್ನುವ ಹಂಬಲ ಇದೆ. ಅದಕ್ಕಾಗಿ ಯೋಜನೆ ಸಿದ್ಧ ಮಾಡುತ್ತಿದ್ದೇನೆ’ ಎಂದು ತಮ್ಮ ಕನಸು ಬಿಚ್ಚಿಡುತ್ತಾರೆ ಪೂರ್ಣಿಮಾ.

ಸುಭಾಷಿತ

ಜಗತ್ತು ನಿಮ್ಮ ಬಗ್ಗೆ ಏನು ಯೋಚಿಸುತ್ತದೆ ಎಂಬುದರ ಬಗ್ಗೆ ಚಿಂತಿಸುವುದನ್ನು ನೀವು ನಿಲ್ಲಿಸುತ್ತಿದ್ದಂತೆಯೇ, ಬದುಕು ನಡೆಸುವುದು ನಿಮಗೆ ತುಂಬಾ ಸುಲಭವಾಗತೊಡಗುತ್ತದೆ.

-ಅನಿತಾ ನಯ್ಯರ್

ವಿನೋದ್ ದುವಾ ಪ್ರಕರಣ ಕಾರ್ಮುಗಿಲ ಅಂಚಿನ ಬೆಳ್ಳಿರೇಖೆ?

ಯಾವುದೇ ಟೀಕೆಯನ್ನು ಎರಡು ರೀತಿಗಳಲ್ಲಿ ವರ್ಗೀಕರಿಸಬಹುದು. ಸದಾಶಯದ ಟೀಕೆ ಹಾಗೂ ದುರುದ್ದೇಶದಿಂದ ಕೂಡಿದ ಟೀಕೆ. ಸದಾಶಯದಿಂದ ಮಾಡಿದ ಟೀಕೆಗಳ ಹಿಂದೆ ವ್ಯವಸ್ಥೆಯ ಬಗ್ಗೆ, ಜನರ ಬಗ್ಗೆ ಅಪಾರ ಕಾಳಜಿ ಇರುತ್ತದೆ. ಚಲನಶೀಲ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇಂತಹ ಟೀಕೆಗಳು ಅಪೇಕ್ಷಣೀಯ. ಭಾರತದ ಸಂದರ್ಭದಲ್ಲಿ, ಬಹುಮತದಿಂದ ಅಧಿಕಾರಕ್ಕೆ ಬಂದ ಸರ್ಕಾರಗಳು ಟೀಕೆಗಳಿಗೆ ಅತ್ಯಂತ ಅಸಹಿಷ್ಣುಗಳಾಗಿ ಪರಿವರ್ತನೆ ಕಂಡಿದ್ದನ್ನು ಗುರುತಿಸಬಹುದು. ಇದಕ್ಕೆ ಪಕ್ಷಗಳ ಭೇದ ಇಲ್ಲ. ಸರ್ಕಾರಗಳನ್ನು ಟೀಕೆ ಮಾಡುವುದು ಇಂತಹ ಪ್ರಭುತ್ವಗಳಿಗೆ ದೇಶದ್ರೋಹದ ರೀತಿಯಲ್ಲಿ ಕಾಣಿಸಲು ಆರಂಭಿಸುತ್ತದೆ. ದೇಶ ಸಂಕಷ್ಟಕ್ಕೆ ಸಿಲುಕಿದಾಗ, ದೇಶದ ಮೇಲಿನ ಪ್ರೀತಿಯಿಂದ ಸರ್ಕಾರವನ್ನು ಪ್ರಜೆ ಟೀಕಿಸುತ್ತಾನೆ, ಸರ್ಕಾರ ಇನ್ನಷ್ಟು ಸಂವೇದನಾಶೀಲವಾಗಿ ವರ್ತಿಸಲಿ ಎಂದು ಬಯಸುತ್ತಾನೆ ಎಂಬುದು ಇಂತಹ ಸರ್ಕಾರಗಳಿಗೆ ಅರ್ಥವಾಗುವುದಿಲ್ಲ. ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸುವುದು, ದೇಶಕ್ಕೆ ದ್ರೋಹ ಎಸಗುವುದಕ್ಕೆ ಸಮ ಎಂದು ಸರ್ಕಾರಗಳು ಗ್ರಹಿಸುತ್ತವೆ. 'ದೇಶ'ವೆಂದರೆ 'ಪಕ್ಷ, ಅದರ ಸಿದ್ಧಾಂತ, ಅದರ ನಾಯಕ' ಎಂದು ಭಾವಿಸುವವರಿಗೆ ಟೀಕೆಗಳನ್ನು ಅರ್ಥ ಮಾಡಿಕೊಳ್ಳಬೇಕಾದ ಬಗೆ ಯಾವುದು ಎಂಬುದು ಗೊತ್ತಾಗುವುದಿಲ್ಲ. ಈ ರೀತಿ ಆದಾಗ, ದೇಶದ್ರೋಹವು ಶಿಕ್ಷಾರ್ಹವೆಂದು ಹೇಳುವ, ಭಾರತೀಯ ದಂಡಸಂಹಿತೆಯ (ಐಪಿಸಿ) ಸೆಕ್ಷನ್ 124(ಎ) ಮತ್ತೆ ಮತ್ತೆ ಬಳಕೆಯಾಗುತ್ತದೆ. ಪತ್ರಕರ್ತ ವಿನೋದ್ ದುವಾ ವಿರುದ್ಧ ದಾಖಲಾಗಿದ್ದ ದೇಶದ್ರೋಹದ ಪ್ರಕರಣ ಇದಕ್ಕೆ ಒಂದು ಉದಾಹರಣೆ. ಕೋವಿಡ್-19 ಸಾಂಕ್ರಾಮಿಕ ದಿಂದಾಗಿ ಎದುರಾದ ಪರಿಸ್ಥಿತಿಯನ್ನು ನಿಭಾಯಿಸಲು ಸರ್ಕಾರ ವಿಫಲವಾಗಿದೆ ಎಂದು ಅವರು ಟೀಕಿಸಿದ ಪರಿಣಾಮವಾಗಿ, ದೇಶದ್ರೋಹದ ಆರೋಪ ಎದುರಿಸಬೇಕಾಯಿತು! ಹಾಗಾದರೆ, ಕನಿಷ್ಠ ಚಿಕಿತ್ಸೆಯೂ ಸಿಗದೆ ಕೋವಿಡ್‌ಪೀಡಿತರು ಅಸುನೀಗಿದಾಗ, ಅದಕ್ಕೆ ನೇರ ಹೊಣೆಯಾಗಿರುವ ಸರ್ಕಾರವನ್ನು ಟೀಕಿಸಬಾರದೇ? ಇಂತಹ ಸಂದರ್ಭಗಳಲ್ಲಿ ಟೀಕೆಯ ಹಿಂದೆ ಇರುವುದು ಜನರ ನೋವಿಗೆ ಸ್ಪಂದಿಸುವ ಮನಸ್ಸೇ ಹೊರತು, ದೇಶಕ್ಕೆ ದ್ರೋಹ ಎಸಗುವ ಇಚ್ಛೆ ಅಲ್ಲ ಎಂಬುದೂ ಗೊತ್ತಾಗದಷ್ಟು ನಮ್ಮ ಆಡಳಿತಾರೂಢರು ಸಂವೇದನೆ ಕಳೆದುಕೊಂಡಿದ್ದಾರೆಯೇ?

ತಮಗೆ ರುಚಿಸದ ರೀತಿಯಲ್ಲಿ ಬರಹ ಪ್ರಕಟಿಸುವ, ಕಾರ್ಯಕ್ರಮ ಪ್ರಸಾರ ಮಾಡುವ ಪತ್ರಕರ್ತರ ವಿರುದ್ಧ ದೇಶದ್ರೋಹದ ಅಸ್ತ್ರ ಝಳಪಿಸುವ ಪ್ರಭುತ್ವಗಳು ಈ ತೀರ್ಪಿನ ಸಾರ ಅರಿಯಲಿ

1962ರಲ್ಲಿ ಸುಪ್ರೀಂ ಕೋರ್ಟ್ ನೀಡಿದ ಮಹತ್ವದ ತೀರ್ಪುಗಳಲ್ಲಿ ಕೇದಾರನಾಥ ಸಿಂಗ್ ಪ್ರಕರಣದ ತೀರ್ಪು ಕೂಡ ಒಂದು. 'ಯಾವುದೇ ಕ್ರಿಯೆ, ದೇಶದ್ರೋಹಕ್ಕೆ ಸಮ ಎಂಬುದಾಗಿ ಪರಿಗಣಿತ ಆಗಬೇಕಾದರೆ, ಅದು ಹಿಂಸಾ ಮಾರ್ಗ ಅನುಸರಿಸಿ ಸರ್ಕಾರವನ್ನು ಬುಡಮೇಲು ಮಾಡುವ ಪರಿಣಾಮ ಹೊಂದಿರಬೇಕು. ಹಿಂಸೆ ಸೃಷ್ಟಿಸಿ, ಸಾರ್ವಜನಿಕ ಶಾಂತಿಗೆ ಧಕ್ಕೆ ತರುವಂಥದ್ದಾಗಿರಬೇಕು. ಈ ಆಯಾಮಗಳನ್ನು ಹೊಂದಿಲ್ಲದ ಅನಿಸಿಕೆ, ಅಭಿಪ್ರಾಯಗಳು ದೇಶದ್ರೋಹದ ವ್ಯಾಪ್ತಿಗೆ ಬರುವುದಿಲ್ಲ' ಎಂಬುದನ್ನು ಆ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿತು. ಈ ತೀರ್ಪು ಐಪಿಸಿಯ ಸೆಕ್ಷನ್ 124(ಎ) ಬಳಕೆಯ ಮೇಲೆ ಮಿತಿಗಳನ್ನು ಹೇರಿತು. ಈಗ ವಿನೋದ್ ದುವಾ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್, ಇನ್ನೊಂದು ವಿಚಾರವನ್ನು ಸ್ಪಷ್ಟಪಡಿಸಿದೆ. ದೇಶದ್ರೋಹದ ಪ್ರಕರಣಗಳಿಗೆ ಸಂಬಂಧಿಸಿದಂತೆ 'ಪ್ರತೀ ಪತ್ರಕರ್ತನಿಗೂ ಕೇದಾರನಾಥ ಸಿಂಗ್ ಪ್ರಕರಣದ ತೀರ್ಪಿನಲ್ಲಿ ಹೇಳಿರುವ ರೀತಿಯಲ್ಲಿ ರಕ್ಷಣೆ ಇರುತ್ತದೆ. ಸೆಕ್ಷನ್ 124(ಎ) ಅಡಿ ಕ್ರಮ ಜರುಗಿಸಬೇಕಿದ್ದರೆ ಅದು ಕೇದಾರನಾಥ ಸಿಂಗ್ ಪ್ರಕರಣದ ತೀರ್ಪಿನಲ್ಲಿ ವಿವರಿಸಿರುವ ರೀತಿಯಲ್ಲಿಯೇ ಆಗಬೇಕು' ಎಂದು ತಾಕೀತು ಮಾಡಿದೆ. ತಮಗೆ ರುಚಿಸದ ರೀತಿಯಲ್ಲಿ ಬರಹ ಪ್ರಕಟಿಸಿದರೆ, ಕಾರ್ಯಕ್ರಮ ಪ್ರಸಾರ ಮಾಡಿದರೆ ಅಂತಹ ಪತ್ರಕರ್ತರ ವಿರುದ್ಧ ದೇಶದ್ರೋಹದ ಅಸ್ತ್ರ ಝಳಪಿಸುವ ಪ್ರಭುತ್ವಗಳಿಗೆ ಈ ತೀರ್ಪಿನ ಸಾರ ಅರ್ಥವಾದರೆ ಚೆನ್ನ. ನ್ಯಾಯಮೂರ್ತಿಗಳಾದ ಯು.ಯು. ಲಲಿತ್ ಮತ್ತು ವಿನೀತ್ ಸರಣ್ ಅವರಿದ್ದ ವಿಭಾಗೀಯ ಪೀಠ ನೀಡಿರುವ ಈ ತೀರ್ಪು ಪತ್ರಕರ್ತ ಸಮುದಾಯಕ್ಕೆ ಬಹುದೊಡ್ಡ ನೈತಿಕ ಜಯವೂ ಹೌದು. ಆದರೆ, ಈ ತೀರ್ಪಿನ ಪ್ರಯೋಜನವು ಪತ್ರಕರ್ತರಿಗೆ ಮಾತ್ರವೇ ಅಲ್ಲದೆ, ದೇಶದ ಪ್ರತೀ ಪ್ರಜೆಗೂ ಸಿಗುವಂತೆ ಆಗಬೇಕು. ದಿಶಾ ರವಿ ಪ್ರಕರಣದಲ್ಲಿ ಕೂಡ ಐಪಿಸಿಯ ಸೆಕ್ಷನ್ 124(ಎ) ಅನ್ನು ತೀರಾ ಒರಟಾಗಿ ಬಳಸಿಕೊಳ್ಳಲಾಯಿತು. ಪರಿಸರ ಕಾರ್ಯಕರ್ತೆ ದಿಶಾ ಅವರ ಮೇಲೆ ವಿನಾಕಾರಣ ದೇಶದ್ರೋಹದ ಆರೋಪ ಹೊರಿಸಿ, ಬಂಧಿಸಲಾಯಿತು. ನಂತರ ಅವರಿಗೆ ನ್ಯಾಯಾಲಯ ಜಾಮೀನು ನೀಡಿತು. ರಾಮಚಂದ್ರ ಗುಹಾ ಸೇರಿದಂತೆ ಕೆಲವು ವಿದ್ವಾಂಸರು ಪ್ರಧಾನಿಗೆ ಬರೆದ ಪತ್ರವೊಂದನ್ನು ನೆಪವಾಗಿ ಇರಿಸಿಕೊಂಡು ಅವರ ವಿರುದ್ಧ ದೇಶದ್ರೋಹದ ಪ್ರಕರಣ ದಾಖಲಿಸಲಾಗಿತ್ತು. ಕೇಂದ್ರದಲ್ಲಿ ನರೇಂದ್ರ ಮೋದಿ ನೇತೃತ್ವದಲ್ಲಿ ಸರ್ಕಾರ ರಚನೆಯಾದ ನಂತರ ದೇಶದ್ರೋಹದ ಪ್ರಕರಣಗಳು ದಾಖಲಾಗುವುದು ಹೆಚ್ಚಾಗಿದೆ. ಸೆಕ್ಷನ್ 124(ಎ)ಯನ್ನು ತೆಗೆದುಹಾಕುವ ಬಗ್ಗೆ ಆಲೋಚಿಸಲು ಇದು ಸಕಾಲ. ದುವಾ ಪ್ರಕರಣದ ತೀರ್ಪು, ಸಾಂವಿಧಾನಿಕ ಉದಾರವಾದದಲ್ಲಿ, ರಾಜಕೀಯ ಬಹುತ್ವದಲ್ಲಿ ನಂಬಿಕೆಯಿರುವ ಎಲ್ಲರಿಗೂ, ಕಾರ್ಮುಗಿಲ ಅಂಚಿನಲ್ಲಿನ ಬೆಳ್ಳಿರೇಖೆಯಂತೆ ಕಾಣಿಸುತ್ತಿದೆ.

ದಿನದ ಟ್ವೀಟ್

ಬದಲಾಗುವುದು ಯಾವಾಗ?

ಗೂಗಲ್ ಒಂದು ಖಾಸಗಿ ಸಂಸ್ಥೆ. ಹೀಗಾಗಿ ಜನರ ಭಾವನೆಗಳಿಗೆ ಸ್ಪಂದಿಸಿ ತನ್ನ ತಪ್ಪು ತಿದ್ದಿಕೊಳ್ಳುತ್ತದೆ. ಬ್ಯಾಂಕು, ರೈಲ್ವೆ, ಅಂಚೆ, ವಿಮೆ, ತೆರಿಗೆ ತರಹದ ಇಲಾಖೆಗಳಲ್ಲಿ ಕನ್ನಡದಲ್ಲಿ ಯಾವುದೇ ರೀತಿಯ ಸೇವೆಯನ್ನು ಕೊಡದೇ, ಕೇಳಿದವರನ್ನೇ ಬೆದರಿಸಿ ಹೊರಹಾಕುವ ವ್ಯವಸ್ಥೆ ಯಾವಾಗ ಕ್ಷಮೆ ಕೇಳುತ್ತೆ? ಯಾವಾಗ ಬದಲಾಗುತ್ತೆ?

ವಸಂತ್ ಶೆಟ್ಟಿ, ಬರಹಗಾರ

25 ವರ್ಷಗಳ ಹಿಂದೆ

ಬುಧವಾರ, 5-6-1996

● ಗಜಗಾತ್ರ ರಾಜ್ಯ ಸಂಪುಟ ಇಂದು ಅಸ್ತಿತ್ವಕ್ಕೆ

ಬೆಂಗಳೂರು, ಜೂನ್ 4– ಜಾತಿ ಹಾಗೂ ಪ್ರಭಾವಕ್ಕೆ ಮಣಿಯದೆ ದಕ್ಷ ಮತ್ತು ಇದ್ದುದರಲ್ಲಿ ಪ್ರಾಮಾಣಿಕರಿಗೆ ಆದ್ಯತೆ ನೀಡಿ ಸಂಪುಟ ರಚನೆಯಲ್ಲಿ ತಮ್ಮತನ ತೋರಿಸಲು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಹಾಗೂ ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೆಣಗಾಡುತ್ತಿದ್ದಾರೆ; ಗಜಗಾತ್ರದ ಸಂಪುಟ ಅಸ್ತಿತ್ವಕ್ಕೆ ಬರುವ ಸಾಧ್ಯತೆ ಇದೆ.

ಒತ್ತಡ ಹೆಚ್ಚುತ್ತಿರುವ ಕಾರಣ ಸಂಪುಟ ರಚನೆ ಕಾರ್ಯ ತೊಡಕಿನಲ್ಲಿ ಸಿಲುಕಿದೆ. ಇಂದು ರಾತ್ರಿ ದೆಹಲಿಯಿಂದ ನಗರಕ್ಕೆ ಮರಳಬೇಕಾಗಿದ್ದ ಪಟೇಲ್ ಮತ್ತು ಸಿದ್ದರಾಮಯ್ಯ ಅವರು ನಾಳೆ ಬೆಳಿಗ್ಗೆ ಬರಲಿದ್ದಾರೆ. ನೂತನ ಸಚಿವರ ಪ್ರಮಾಣ ವಚನ ಸಮಾರಂಭ ಬುಧವಾರ ಬೆಳಗಿನ ಬದಲು ಸಂಜೆ ನಡೆಯುವ ನಿರೀಕ್ಷೆ ಇದೆ.

● 'ವಿಶ್ವಾಸಮತಕ್ಕೆ ಮುನ್ನ ಹೊಸ ನೀತಿ ಇಲ್ಲ'

ನವದೆಹಲಿ, ಜೂನ್ 4 (ಪಿಟಿಐ)– ಸಂಯುಕ್ತ ರಂಗ ಸರ್ಕಾರ ವಿಶ್ವಾಸಮತ ಗಳಿಸುವ ತನಕ ಹೊಸ ನೀತಿ–ಕಾರ್ಯಕ್ರಮಗಳ ಘೋಷಣೆ ಹಾಗೂ ಹೆಚ್ಚಿನ ವೆಚ್ಚ ಬೇಡ ಎಂದು ಪ್ರಧಾನಿ ಎಚ್.ಡಿ. ದೇವೇಗೌಡ ಅವರು ಸೂಚನೆ ನೀಡಿದ್ದಾರೆ ಎಂದು ತಿಳಿದುಬಂದಿದೆ.

ಪ್ರಧಾನಿ ಸೂಚನೆ ಮೇರೆಗೆ ಸಂಪುಟ ಕಾರ್ಯದರ್ಶಿ ಸುರೇಂದ್ರ ಸಿಂಗ್, ವಿವಿಧ ಇಲಾಖೆಗಳ ಕಾರ್ಯದರ್ಶಿಗಳಿಗೆ ಈ ಬಗ್ಗೆ ಪತ್ರ ಬರೆದಿದ್ದಾರೆ.

50 ವರ್ಷಗಳ ಹಿಂದೆ

ಶನಿವಾರ, 5-6-1971

● ಮುಂದಿನ ವಾರದಲ್ಲಿ ಪಿಎಸ್‌ಪಿ- ಎಸ್‌ಎಸ್‌ಪಿ ವಿಲೀನದ ಘೋಷಣೆ

ಬೆಂಗಳೂರು, ಜೂನ್ 4– ಪ್ರಜಾ ಸೋಷಲಿಸ್ಟ್ ಪಕ್ಷ– ಸಂಯುಕ್ತ ಸೋಷಲಿಸ್ಟ್ ಪಕ್ಷಗಳ ವಿಲೀನ ಮುಂದಿನ ವಾರ ನಡೆಯಲಿದೆ. ವಿಲೀನದಿಂದ ಉದ್ಭವಿಸುವ ಪಕ್ಷದ ಹೆಸರು 'ಸೋಷಲಿಸ್ಟ್ ಪಕ್ಷ'.

ಈ ವಿಷಯವನ್ನು ಇಂದು ಇಲ್ಲಿ ವರದಿಗಾರರಿಗೆ ತಿಳಿಸಿದ ಸಂಯುಕ್ತ ಸಮಾಜವಾದಿ ಪಕ್ಷದ ಪ್ರಧಾನ ಕಾರ್ಯದರ್ಶಿ ಜಾರ್ಜ್ ಫರ್ನಾಂಡಿಸ್ ಅವರು ವಿಲೀನಕ್ಕೆ ಆಧಾರವಾದ ಕರಡು ಒಪ್ಪಂದ ಅಂತಿಮವಾಗಿ ಸಿದ್ಧವಾಗಿದೆ- ಯೆಂದೂ, ಮುಂದಿನ ವಾರ ದೆಹಲಿಯಲ್ಲಿ ಎರಡೂ ಪಕ್ಷಗಳ ಪ್ರತಿನಿಧಿಗಳು ಒಪ್ಪಂದಕ್ಕೆ ಸಹಿ ಹಾಕುವರೆಂದೂ ತಿಳಿಸಿದರು.

● ರೈಲುಗಳ ವಿಳಂಬಕ್ಕೆ ಕಾರಣರಾದವರಿಗೆ ಶಿಕ್ಷೆ: ಕೆಂಗಲ್ ಎಚ್ಚರಿಕೆ

ನವದೆಹಲಿ, ಜೂನ್ 4– ರೈಲುಗಳ ವಿಳಂಬ ಸಂಚಾರಕ್ಕೆ ಕಾರಣರಾದವರನ್ನು ಶಿಕ್ಷಿಸಲಾಗುವುದೆಂದು ಕೇಂದ್ರ ರೈಲ್ವೆ ಸಚಿವ ಕೆ. ಹನುಮಂತಯ್ಯನವರು ಇಂದು ಇಲ್ಲಿ ರೈಲ್ವೆ ನೌಕರರಿಗೆ ಎಚ್ಚರಿಕೆ ನೀಡಿದರು.

ವಲಯ ರೈಲ್ವೆಗಳು ಮತ್ತು ಉತ್ಪಾದನಾ ಘಟಕಗಳ ಜನರಲ್ ಮ್ಯಾನೇಜರುಗಳ ಮೂರು ದಿನಗಳ ಸಮ್ಮೇಳನ ಉದ್ಘಾಟಿಸಿದ ಅವರು ವೇಳಾಪಟ್ಟಿಗನುಗುಣವಾಗಿ ರೈಲುಗಳ ಸಂಚಾರಕ್ಕೆ ಸಕಲ ಯತ್ನಗಳನ್ನೂ ನಡೆಸುವಂತೆ ಕರೆ ನೀಡಿದರು.

ಕಾನೂನು, ಆಡಳಿತ ಹಾಗೂ ಯೋಜನೆಗಳೆಲ್ಲ ಸೋಲುತ್ತಿರುವಾಗ, ಸಮುದಾಯ ಪ್ರಯತ್ನಗಳೇ ಆಶಾಕಿರಣ!

ಪರಿಸರ ಬದ್ಧತೆಯ ಹಿತ್ತಲ ಹಣತೆ

ವಿಶ್ಲೇಷಣೆ

ಕೇಶವ ಎಚ್. ಕೊರ್ಸೆ

ಕೋವಿಡ್-19 ಲಾಕ್‌ಡೌನ್‌ನಿಂದ ನಾಡು ಪರಿತಪಿಸುತ್ತಿರುವ ಈ ಸಂದರ್ಭದಲ್ಲಿ, ಮಲೆನಾಡಿನ ಹಳೆಸೊರಬ ಹಳ್ಳಿಯಲ್ಲಿ ನಡೆದ ಈ ಘಟನೆಯು ನಮ್ಮ ಕಣ್ಣು ತೆರೆಸಬೇಕು. ಸಾಂಕ್ರಾಮಿಕಕ್ಕೆ ಬೆದರಿ ಊರು ಸೇರಿದ್ದ ಕೆಲವರೊಡನೆ ಬೆರಳೆಣಿಕೆಯ ಸ್ಥಳೀಯರೂ ಜೊತೆಯಾಗಿ, ಶತಮಾನಗಳಿಂದ ಗ್ರಾಮಸ್ಥರು ಶ್ರದ್ಧಾಭಕ್ತಿಯಿಂದ ರಕ್ಷಿಸಿಕೊಂಡು ಬಂದಿದ್ದ ನಿತ್ಯಹರಿದ್ವರ್ಣ ದೇವರಕಾಡಿನ ಹಲವು ಬಲಿತ ಮರಗಳನ್ನು ರಾತ್ರೋರಾತ್ರಿ ಕಡಿದುರುಳಿಸಿದರು. ದೇವದಾರು, ಬಿಲಕಂಬಿ, ಹೆಬ್ಬಲಸಿನಂಥ ವಿನಾಶದಂಚಿನ ಪ್ರಭೇದಗಳ ಭಾರಿ ಗಾತ್ರದ ನೂರಾರು ಗಗನಚುಂಬಿ ಮರಗಳು ಧರೆಗುರುಳಿದವು!

ಈ ಕಾಲದ ಪರಿಸರ ತುರ್ತುಪರಿಸ್ಥಿತಿಗೆ ಕಾರಣ ತಿಳಿಸಬಲ್ಲ ಕೈಗನ್ನಡಿಯಾಗಬಲ್ಲ ಘಟನೆಯಿದು. ತಲೆಮಾರುಗಳಿಂದ ತಮ್ಮವರಿಂದಲೇ ಪೂಜಿಸಲ್ಪಡುತ್ತಿರುವ ದೇವರಕಾಡಿನ ಮರ ಕಡಿಯುವುದನ್ನು ಸಮುದಾಯದ ನೈತಿಕಪ್ರಜ್ಞೆಯೂ ಆ ದುಷ್ಕರ್ಮಿಗಳನ್ನು ತಡೆಯಲಿಲ್ಲ. ಸಕಾಲದಲ್ಲಿ ತಡೆಯೊಡ್ಡಬೇಕಿದ್ದ ಅರಣ್ಯ ಇಲಾಖೆಗೆ ವೃತ್ತಿನಿಷ್ಠೆ, ಕಾರ್ಯತತ್ಪರತೆ ಸಾಕಾಗಲಿಲ್ಲ. ಅರಣ್ಯ ಸಂರಕ್ಷಣೆಯ ಕಾನೂನು, ನಿಯಮಗಳೂ ಸರ್ಕಾರದ ಕಾರ್ಯಾಚರಣೆಗೆ ಬಲ ತರಲಿಲ್ಲ.

ತಂತ್ರಜ್ಞಾನದ ಬಲದಿಂದ ತನ್ನ ಕ್ಷಮತೆ ಹೆಚ್ಚಿಸಿಕೊಳ್ಳುವ ಚರ್ಚೆಗಳಲ್ಲೇ ಅರಣ್ಯ ಇಲಾಖೆ ಮುಳುಗಿದ್ದರೆ, ಅತ್ತ ಕಾಡುಗಳ್ಳರು ಮೊಬೈಲ್ ಸಂಪರ್ಕ ಹಾಗೂ ವಿದ್ಯುತ್‌ಚಾಲಿತ ಯಂತ್ರಗಳ ಸಹಾಯದಿಂದ ತಮ್ಮ ಕೈಚಳಕ ತೋರಿಸುತ್ತಿದ್ದಾರೆ! ಕಾನೂನು, ಆಡಳಿತಶಾಹಿ, ಅನುದಾನ, ಯೋಜನೆಗಳು, ಅಂತಿಮವಾಗಿ ಪರಿಸರ ರಕ್ಷಣೆಯ ಪಾರಂಪರಿಕ ಮೌಲ್ಯ- ಎಲ್ಲವೂ, ನಿಸರ್ಗ ಸಂಪತ್ತಿನ ಮೋಹದ ದಾಹಕ್ಕೆ ಬಲಿಯಾಗುತ್ತಿವೆಯಲ್ಲವೇ?

ಪರಿಸರನಾಶದ ಸಂಕಷ್ಟಗಳು ಯಾರೂ ಅರಿಯದವೇನಲ್ಲ. ಹಿಮಾಲಯದ ನೀರ್ಗಲ್ಲ ಸ್ಫೋಟ, ಸಮುದ್ರಗಳ ಭಾರಿ ಚಂಡಮಾರುತ, ಸಹ್ಯಾದ್ರಿಯ ಭೂಕುಸಿತ, ಒಣಗುತ್ತಿರುವ ನದಿ-ಕೆರೆಗಳು, ಕಣ್ಮರೆಯಾಗುತ್ತಿರುವ ಕಾಡು-ಗೋಮಾಳ, ಹೆಚ್ಚುತ್ತಿರುವ ಕಾಡುಪ್ರಾಣಿ-ಮಾನವ ಸಂಘರ್ಷ, ನೆರೆ, ಬರ ಅಬ್ಬಾ! ವಾತಾವರಣದ ಇಂಗಾಲದ ಡೈ ಆಕ್ಸೈಡ್ ಪ್ರಮಾಣವಂತೂ ಸುರಕ್ಷತೆಯ ಮಿತಿ ದಾಟಿ 420ಪಿಪಿಎಂ ತಲುಪಿ, ತಾಪಮಾನ ಹೆಚ್ಚಿಸುತ್ತಲೇ ಇದೆ. ವಾಯುಮಾಲಿನ್ಯದಿಂದಾಗಿ, ಇನ್ನು ಎರಡೇ ದಶಕಗಳಲ್ಲಿ ಉಸಿರಾಟದ ಮಾಸ್ಕ್ ಧರಿಸಿ ಓಡಾಡುವುದು ಅನಿವಾರ್ಯವಾಗಬಹುದೆಂದು ವಿಜ್ಞಾನಿಗಳು ಕಳವಳ ವ್ಯಕ್ತಪಡಿಸುತ್ತಿದ್ದಾರೆ!

ಈ ವಿಷಮ ಪರಿಸ್ಥಿತಿಯಾದರೂ ನಮ್ಮ ಅಂತಃಸಾಕ್ಷಿಯನ್ನು ಕೆಣಕಬೇಕಲ್ಲವೇ? ಮುಂದಿನ ತಲೆಮಾರು ಬಿಡಿ, ವರ್ತಮಾನದ ಬದುಕೇ ಇನ್ನಷ್ಟು ನರಕವಾಗದಿರಲು ಕನಿಷ್ಠ ಜವಾಬ್ದಾರಿಯನ್ನಾದರೂ ತೋರಬೇಕಿದೆ. ಈ ವರ್ಷದ 'ವಿಶ್ವ ಪರಿಸರ ದಿನಾಚರಣೆ'ಯ (ಜೂನ್ 5) 'ಪರಿಸರ ವ್ಯವಸ್ಥೆಗಳ ಪುನರುಜ್ಜೀವನ' ಘೋಷವಾಕ್ಯವನ್ನು ಈ ಹಿನ್ನೆಲೆಯಲ್ಲಿ ಅರ್ಥೈಸಬೇಕಿದೆ. ಕಾಡು, ಗೋಮಾಳ, ನದಿ, ಕೆರೆ, ಕೃಷಿಭೂಮಿ, ವಸತಿ ಪ್ರದೇಶಗಳು- ಈ ಒಂದೊಂದೂ ಪರಿಸರ ವ್ಯವಸ್ಥೆಯನ್ನು ನಿಸರ್ಗಸ್ನೇಹಿಯಾಗಿ ಪುನಶ್ಚೇತನಗೊಳಿಸಬೇಕಾದ ಕಾರ್ಯವದು. ಇದನ್ನು ಸಾಧಿಸುವುದು ಹೇಗೆ? ಸರ್ಕಾರಗಳು, ಆಡಳಿತ ವ್ಯವಸ್ಥೆ, ಕಾನೂನು, ಯೋಜನೆಗಳು ಎಲ್ಲವೂ ವಿಫಲವಾಗುತ್ತಿರುವಾಗ, ಮುನ್ನಡೆಸಬಲ್ಲ ಶಕ್ತಿ ಯಾವುದು?

ಅಂಗಳದ ತೋರಿಕೆಯ ಬೊಕ್ಕಸ ಬರಿದಾದಾಗಲೆಲ್ಲ, ಹಿತ್ತಲಿನ ಸಂಪತ್ತೇ ಮನೆ ಮುನ್ನಡೆಸಬೇಕು. ಆಡಳಿತ ವ್ಯವಸ್ಥೆ ಬೆತ್ತಲಾಗಿರುವಾಗ, ಶತಮಾನಗಳಿಂದ ಬದುಕು ರೂಪಿಸುತ್ತಿರುವ ಸಮುದಾಯಗಳ ವಿವೇಕಕ್ಕೆ ಶರಣಾಗಬೇಕಿದೆ. ಸಂಪ್ರದಾಯವೇ ಶ್ರೇಷ್ಠವೆಂಬ ಹಳಹಳಿಕೆ ಅದಲ್ಲ. ದೇಶಕಾಲದ ಅಗತ್ಯಕ್ಕಾಗಿ ಹಳೆಯ ಕುಶಲತೆಗಳ ಬೇರಿನ ಜೊತೆ, ಹೊಸ ಜ್ಞಾನಕ್ಷೇತ್ರಗಳ ಚಿಗುರನ್ನು ಮರುಜೋಡಿಸಿಕೊಳ್ಳುವ ಸಮಷ್ಟಿಪ್ರಜ್ಞೆ ಅದು. ಈ ಸಂಕ್ರಮಣದಲ್ಲಿಯೂ ನೆಲ-ಜಲ ಸಂರಕ್ಷಣೆಗಾಗಿ ವಿವಿಧೆಡೆ ಕಾಣುವ ಸಮುದಾಯ ಪ್ರಯತ್ನಗಳೇ ಇದಕ್ಕೆ ಸಾಕ್ಷಿ. ಅವನ್ನು ಗುರುತಿಸಿ, ಅಗತ್ಯವಿದ್ದೆಡೆ ಸೂಕ್ತವಾಗಿ ಪರಿಷ್ಕರಿಸಿ ಬಳಸಿಕೊಳ್ಳುವುದೇ ಇಂದಿನ ಸವಾಲುಗಳಿಗೆ ಪರಿಹಾರವಾಗಬಲ್ಲದು.

ಮೂರು ದಶಕಗಳ ಹಿಂದೆಯೇ 'ರಾಷ್ಟ್ರೀಯ ಅರಣ್ಯ ನೀತಿ'ಯು (1988), ದೇಶದ ಶೇ 33ರಷ್ಟು ಭಾಗದಲ್ಲಾದರೂ ಅರಣ್ಯದ ಹೊದಿಕೆಯಿರಬೇಕೆಂದು ತರ್ಕಪೂರ್ಣವಾಗಿ ಆಶಿಸಿತ್ತು. ಆದರೆ, ಕಾಡು ಕರಗುತ್ತಲೇ ಸಾಗಿದೆ. ರಾಜ್ಯದಲ್ಲಿ ಶೇ 20ರಷ್ಟು ಅರಣ್ಯವಿದೆಯೆಂದು ಸರ್ಕಾರ ಹೇಳಿದರೂ ನೈಜಕಾಡು ಶೇ 10ಕ್ಕಿಂತಲೂ ಕಡಿಮೆಯಾಗಿರುವುದನ್ನು ಅಧ್ಯಯನಗಳು ತೋರಿಸುತ್ತಿವೆ.

ಅರಣ್ಯ ನಾಶವು ನಿತ್ಯಸಂಗತಿಯಾಗಿರುವ ಈ ನಿರಾಶಾದಾಯಕ ಗಳಿಗೆಯಲ್ಲೂ ತಮ್ಮ ಸಾಮೂಹಿಕ ಪರಿಶ್ರಮದಿಂದಲೇ ಕಾನನವನ್ನು ಕಾಪಿಟ್ಟುಕೊಂಡಿರುವ ಹಲವು ಗ್ರಾಮಗಳು ನಾಡಿನಲ್ಲಿವೆ. ಅದಕ್ಕೊಂದು ಉದಾಹರಣೆ, ಮಲೆನಾಡಿನ ಶಾಲ್ಮಲಾ ಕಣಿವೆಯ ಅಗಸಾಲಬೊಮ್ಮನಳ್ಳಿ ಗ್ರಾಮ ಅರಣ್ಯ ಸಮಿತಿ. ಸರ್ಕಾರಿ ಇಲಾಖೆಗಳ ಹಾಗೂ ಗ್ರಾಮಸ್ಥರೆಲ್ಲರ ಸಹಭಾಗಿತ್ವದೊಂದಿಗೆ ಒತ್ತುವರಿ, ಮರಕಡಿತಗಳನ್ನೆಲ್ಲ ನಿಯಂತ್ರಿಸಿ, ತಮ್ಮ ವ್ಯಾಪ್ತಿಯಲ್ಲಿ ಜೀವವೈವಿಧ್ಯಭರಿತ ದಟ್ಟಕಾಡನ್ನು ಪೋಷಿಸುತ್ತಿರುವ ಈ ಹಳ್ಳಿಗರ ಕಾಳಜಿಯು ನಾಡಿಗೊಂದು ಮಾದರಿಯೇ ಸರಿ.

ರಾಜ್ಯ ಕರಾವಳಿಯ ಸುಮಾರು 320 ಕಿ.ಮೀ. ಉದ್ದನೆಯ ಸಮುದ್ರತೀರ, ಕಾಂಡ್ಲಾಕಾಡು, ಅಳಿವೆಗಳೆಲ್ಲ ಅಪಾಯಕ್ಕೆ ಸಿಲುಕಿವೆ. ಗರಿಷ್ಠ ಉಬ್ಬರರೇಖೆಯ ಮಿತಿಯೊಳಗಿನ ಸಮುದ್ರತಟದಲ್ಲಿ ವಿನಾಶಕಾರಿ ಕಾಮಗಾರಿ ಹಮ್ಮಿಕೊಳ್ಳಬಾರದೆಂದು 'ಪರಿಸರ ಸಂರಕ್ಷಣಾ ಕಾಯ್ದೆ'ಯ (1986) 'ಕರಾವಳಿ ನಿರ್ವಹಣಾ ನಿಯಮ' ಸ್ಪಷ್ಟಪಡಿಸಿದ್ದರೂ ಅಲ್ಲಿನ ಪರಿಸರ ನಾಶ ನಿಲ್ಲುತ್ತಿಲ್ಲ. ಸಹ್ಯಾದ್ರಿಯೊಡಲಲ್ಲಿ ಹುಟ್ಟಿ ಸಾಗರ ಸೇರುವ ನದಿಗಳಲ್ಲಿ ಸಿಹಿನೀರ ಹರಿವು ಕಡಿಮೆಯಾಗಿ, ಪೋಷಕಾಂಶ ಕೊರತೆಯಿಂದ ಸಮುದ್ರದಲ್ಲೇ ಮತ್ಸ್ಯಕ್ಷಾಮವಾಗಿ, ಮೀನುಗಾರರ ಸಂಕಷ್ಟಕ್ಕೆ ಎಣೆಯಿಲ್ಲದಾಗುತ್ತಿದೆ.

ಸಮುದ್ರಕೊರೆತ ತಡೆಯಬಲ್ಲ ಸಿರಿಹೊನ್ನೆ, ಹಿಪ್ಪೆ, ಹೊಂಗೆ, ಸಮುದ್ರಫಲ ವೃಕ್ಷಗಳ ಹಸಿರುಗೋಡೆಯ ಬದಲಾಗಿ, ಸಾವಿರಾರು ಕೋಟಿ ರೂಪಾಯಿ ವೆಚ್ಚದಲ್ಲಿ ಸಮುದ್ರದಡದಲ್ಲಿ ತಡೆಗೋಡೆಗಾಗಿ ಕಲ್ಲು ಸುರಿಯುವ ಬಂದರು ಇಲಾಖೆಯ ಕೃತ್ಯವಂತೂ ಮುಂದುವರಿದೇ ಇದೆ! ಈ ವಿಷಮ ಪರಿಸ್ಥಿತಿಯಲ್ಲೂ ಕುಂದಾಪುರ ತಾಲ್ಲೂಕಿನ ಪಂಚಗಂಗಾ ನದಿಗಳು ಸಮುದ್ರ ಸೇರುವ ಗಂಗೊಳ್ಳಿ ಪ್ರದೇಶದ ಮೀನುಗಾರರು, ಅಲ್ಲಿನ ಅಳಿವೆ ಹಾಗೂ ಕಾಂಡ್ಲಾಕಾಡನ್ನು ರಕ್ಷಿಸುತ್ತಲೇ ತಮ್ಮ ಜೀವನೋಪಾಯವನ್ನೂ ಸಾಧಿಸಿಕೊಳ್ಳುತ್ತಿರುವ ಪರಿಯು ದೇಶಕ್ಕೇ ಮಾದರಿ ಎನ್ನಬೇಕು.

ರಾಜ್ಯದ 5,728 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ, 33,000ಕ್ಕೂ ಮೇಲ್ಪಟ್ಟು ಸಣ್ಣಕೆರೆಗಳಿವೆ. ಕಿರು ನೀರಾವರಿ ಇಲಾಖೆಯ ಬಳಿ ಸುಮಾರು ನಾಲ್ಕು ಸಾವಿರ ದೊಡ್ಡಕೆರೆಗಳಿವೆ. ಇವುಗಳಲ್ಲಿ ಬಹುಪಾಲನ್ನು ಒತ್ತುವರಿ, ಹೂಳು ಹಾಗೂ ಮಾಲಿನ್ಯವು ಉಸಿರುಗಟ್ಟಿಸುತ್ತಿವೆ. ನ್ಯಾಯಾಲಯದ ಆದೇಶಗಳು, ಸರ್ಕಾರಿ ಯೋಜನೆಗಳು, ಇದಕ್ಕೆಂದೇ ರಚಿತವಾದ 'ಕೆರೆ ಅಭಿವೃದ್ಧಿ ಪ್ರಾಧಿಕಾರ'- ಯಾವುದೂ ಪರಿಸ್ಥಿತಿಯನ್ನು ನಿಯಂತ್ರಿಸಲಾಗದಿರುವುದು ವಾಸ್ತವ! ಇಂಥ ಸಂದರ್ಭದಲ್ಲೂ ಸ್ವಂತ ಪರಿಶ್ರಮದಿಂದಲೇ ಹೂಳು ತೆಗೆದ, ಮಾಲಿನ್ಯ ಹಾಗೂ ಅತಿಕ್ರಮಣ ತಡೆದ ಸಮುದಾಯ ಪ್ರಯತ್ನಗಳು ನಾಡಿನೆಲ್ಲೆಡೆ ನಡೆಯುತ್ತಿವೆ. ಉದಾಹರಣೆಗೆ, ಬೆಂಗಳೂರು ಹೊರವಲಯದ ಜಕ್ಕೂರು ಕೆರೆಯನ್ನು ಸ್ಥಳೀಯ ನಿವಾಸಿಗಳ ಸಮುದಾಯವು ಯಶಸ್ವಿಯಾಗಿ ನಿರ್ವಹಿಸುತ್ತಿರುವ ರೀತಿಯು ದೇಶಕ್ಕೊಂದು ಆದರ್ಶ.

ನದಿಗಳ ಪರಿಸ್ಥಿತಿಯಂತೂ ಹೇಳತೀರದು. ಜಲಮೂಲಗಳ ನಾಶ, ನದಿಯಂಚಿನ ಕಾಡಿನ ಕಣ್ಮರೆ, ಅತಿಕ್ರಮಣ, ಮರಳುಗಣಿಗಾರಿಕೆಗಳು ಅವನ್ನು ಬರಡಾಗಿಸುತ್ತಿವೆ. ರಾಜ್ಯದ 17 ಪ್ರಮುಖ ನದಿಗಳ ನೀರು ಬಳಸಬಾರದಷ್ಟು ಕಲುಷಿತಗೊಂಡಿದೆಯೆಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯೇ ಹೇಳಿದೆ! ಇಷ್ಟಾಗ್ಯೂ ನದಿಗಳ ಅವೈಜ್ಞಾನಿಕ ನಿರ್ವಹಣೆಯ ಸರ್ಕಾರಿ ನಡವಳಿಕೆ ಬದಲಾಗಿಲ್ಲ. ಈ ನಡುವೆಯೂ ನದಿಗಳನ್ನು ರಕ್ಷಿಸಲು ಶ್ರಮಿಸುತ್ತಿರುವ ಹಳ್ಳಿಗಳಿವೆ. ಜಲಾನಯನ ಪ್ರದೇಶದ ಹಸಿರು ಹಾಗೂ ನೀರಿನ ಹರಿವನ್ನು ಕಾಯ್ದುಕೊಂಡು ನದಿಯನ್ನು ಜೀವಂತವಾಗಿಟ್ಟಿರುವ, ಪಶ್ಚಿಮಘಟ್ಟದ ತಪ್ಪಲಿನ ಅಘನಾಶಿನಿ ಕಣಿವೆಯ ಸಮುದಾಯಗಳು ದೇಶಕ್ಕೇ ಅನುಸರಣೀಯವಾದ ಒಂದು ಉದಾಹರಣೆ.

ಹಳೆಸೊರಬದ ಕಾಡುನಾಶದಂಥ ಕಿಡಿಗೇಡಿ ಕೃತ್ಯ ಕಾಳ್ಗಿಚ್ಚಾಗದಿರಲಿ. ಸಮುದಾಯ ಕಾಳಜಿಯ ಹಣತೆಗಳು ಹೆಚ್ಚಿ ಜೀವಪರಿಸರದ ಸುರಕ್ಷತೆ ಬೆಳಗಲಿ.

ಲೇಖಕ: ನಿರ್ದೇಶಕ, ಸಂರಕ್ಷಣಾ ಜೀವಶಾಸ್ತ್ರ ಮತ್ತು ಸುಸ್ಥಿರ ಅಭಿವೃದ್ಧಿ ಅಧ್ಯಯನ ಕೇಂದ್ರ, ಶಿರಸಿ

ಚುರುಮುರಿ

ಬ್ರಹ್ಮಾಂಡ ಉಸ್ತುವಾರಿ!

● ಬಿ.ಎನ್.ಮಲ್ಲೇಶ್

'ಹಲೋ... ಸ್ವಾಮಿಗಳೇ, ನೀವು ಈ ಕೊರೊನಾನ ದೇಶ ಬಿಟ್ಟು ಓಡಿಸ್ತೀನಿ ಅಂತ ಹೇಳಿದ್ದು ಕೇಳಿದೆ. ಹೆಂಗೆ, ಎಲ್ಲಿಗೆ ಓಡಿಸ್ತೀರಿ?'

'ಲೋ ಮುಂಡೇದೆ, ನಾನು ಮಠದ ಸ್ವಾಮಿ ಅಲ್ಲ, ತ್ರಿಕಾಲ ಜ್ಞಾನಿ. ಬ್ರಹ್ಮಾಂಡವೇ ನನ್ನ ಕೈಲಿದೆ. ಯಃಕಶ್ಚಿತ್ ಯಾರು ನೀನು?'

'ನಾನು ತೆಪರೇಸಿ ಅಂತ. ಅಲ್ಲ, ಅದೇನೋ ಕೋನಮಾರಮ್ಮ ಅಂತ ಮಾಡಿ ಅದಕ್ಕೆ ಮೊಸರನ್ನ ತಿನ್ನಿಸಿ ಓಡಿಸ್ತೀನಿ ಅಂತಿದ್ರಿ... ಎಲ್ಲಿಗೆ ಓಡಿಸ್ತೀರಿ?'

'ಮುಂಡಾಮೋಚ್ತು... ದೇಶ ಅಲ್ಲ, ಇಡೀ ಬ್ರಹ್ಮಾಂಡ ಬಿಟ್ಟು ಓಡಿಸ್ತೀನಿ. ನನ್ನ ಶಕ್ತಿ ನಿಂಗೊತ್ತಿಲ್ಲ...'

'ಅಲ್ಲ... ಓಡಿಸೋದಿರ್‍ಲಿ, ನಿಮಗೆ ಅಷ್ಟು ಶಕ್ತಿ ಇದ್ದಿದ್ರೆ ಅದು ಬರದಂಗೇ ತಡೀಬಹುದಿತ್ತಲ್ಲ?'

ಗುರೂಜಿ ತಡವರಿಸಿದರು, 'ಅದು ವೇಷ ಬದಲಿಸಿ ಬಂದರೆ ಯಾರಿಗೆ ಗೊತ್ತಾಗುತ್ತೆ?'

'ಅಲ್ಲ, ನೀವು ತ್ರಿಕಾಲ ಜ್ಞಾನಿ ಅಂತೀರಿ. ಎಲ್ಲ ಕಾಲದಲ್ಲೂ ನೀವು ಎಚ್ಚರ ಇರಲ್ವ? ಹೋಗ್ಲಿ ಬಿಡಿ, ಇಲ್ಲೊಬ್ಬ ಸ್ವಾಮಿಗಳು ಭವಿಷ್ಯ ನುಡಿದಿದ್ದಾರೆ. ದೊಡ್ಡ ದೊಡ್ಡ ತಲೆಗಳು ಉರುಳ್ತಾವಂತೆ?'

'ಅದನ್ನ ಅವರ ಬಳಿಯೇ ಕೇಳು. ನಾನು ಬ್ರಹ್ಮಾಂಡ ಉಸ್ತುವಾರಿ...'

'ನಿಮ್ ತಲೆ, ತ್ರಿಕಾಲ ಜ್ಞಾನಿ, ಬ್ರಹ್ಮಾಂಡ ಉಸ್ತುವಾರಿ, ಬದ್ನೇಕಾಯಿ ಅಂತೀರಿ. ಎಲ್ಲ ಗೊತ್ತಿದ್ರೆ ಇಂಥದ್ದೊಂದು ರೋಗ ಬರ್ತತಿ ಅಂತ ನಾಲ್ಕು ವರ್ಷ ಮೊದ್ಲೇ ಹೇಳೋಕೆ ಏನಾಗಿತ್ತು ನಿಮಗೆ?'

'ಲೋ ಮೂರ್ಖ, ಹೀಗೆಲ್ಲ ಮಾತಾಡಿದ್ರೆ ನಿನ್ನ ತಲೆನೇ ಉರುಳುತ್ತೆ ನೋಡ್ತಿರು...' ಗುರೂಜಿ ಗರಂ ಆದರು.

'ಏನು? ತಲೆ ಉರುಳಿಸ್ತೀರಾ? ನಂಗೆ ತಲೆನೇ ಇಲ್ಲಪ್ಪ, ಏನು ಉರುಳಿಸಿ ಉಪ್ಪಿನಕಾಯಿ ಹಾಕ್ತೀರಿ?' ತೆಪರೇಸಿಯೂ ರಾಂಗಾದ. ಗುರೂಜಿ ಫೋನ್ ಕಟ್ ಮಾಡಿದರು.

ಸಂಗತ

ಮುರಿದು ಕಟ್ಟೋಣ... ಮನೋಮಿತಿಯನ್ನು

ಸಂಕಷ್ಟದ ಸಮಯದಲ್ಲಷ್ಟೇ ಪುಟಿದೇಳುವ ಮಾನವೀಯತೆಯು ಇನ್ನುಳಿದ ಅವಧಿಯಲ್ಲೂ ಜೀವಂತವಾಗಿರಲಿ

● ಸತೀಶ್ ಜಿ.ಕೆ. ತೀರ್ಥಹಳ್ಳಿ

'ನನ್ನದು ದೇಶ, ನನ್ನದು ನಾಡು ಎನ್ನದ ಮಾನವನೆದೆ ಸುಡುಗಾಡು' ಅಂದವರು ಕುವೆಂಪು. ಪ್ರತಿಯೊಬ್ಬರೂ ತನ್ನ ನಾಡು, ನುಡಿ, ನೆಲ, ಜಲ, ಜನ, ಸಂಸ್ಕೃತಿ ಬಗ್ಗೆ ಅಭಿಮಾನ, ಹೆಮ್ಮೆಯ ಭಾವ ಹೊಂದುವುದು ಅವಶ್ಯಕ. ರಾಷ್ಟ್ರಾಭಿಮಾನ ಮೆರೆಯುವುದು, ಸಮಾಜದ ಸ್ವಾಸ್ಥ್ಯಕ್ಕಾಗಿ ದುಡಿಯುವುದು, ಮನುಷ್ಯತ್ವವನ್ನು ಎಲ್ಲ ಕಾಲದ ಆದ್ಯತೆಯನ್ನಾಗಿ ಪರಿಗಣಿಸುವುದು ಕೂಡ ಅಗತ್ಯವೇ.

ಅತಿಯಾದಾಗ ಅಮೃತವೂ ವಿಷವಾಗುವಂತೆ, ಜನ್ಮಗುಣದಂತೆ ತನ್ನದನ್ನು ಪ್ರೀತಿಸುವುದರಾಚೆಗೆ ತಾನಷ್ಟೇ ಎಂಬಂತಹ ಅತಿರೇಕದ ವರ್ತನೆಗಳ ಉತ್ಪನ್ನಗಳಾಗಿ ಹೊರಹೊಮ್ಮುವ ಸಂಕುಚಿತತೆ, ದುರಭಿಮಾನ, ಶ್ರೇಷ್ಠತೆಯ ವ್ಯಸನ, ಹುಸಿ ದೇಶಭಕ್ತಿಗಳೆಲ್ಲವೂ ಸಾಮರಸ್ಯ ಕದಡುತ್ತವಲ್ಲದೆ ರಾಷ್ಟ್ರವೊಂದರ ಸಮಗ್ರತೆ, ಏಕತೆ ಮತ್ತು ಔನ್ನತ್ಯಕ್ಕಿರುವ ತೊಡರುಗಾಲುಗಳು. ಮಾನವೀಯತೆಯ ಪರಿಧಿಯ ವಿಸ್ತೃತತೆಯ ಭಾಗವಾಗಿ ಕುವೆಂಪು ಅವರದೇ 'ವಿಶ್ವಮಾನವ' ಪರಿಕಲ್ಪನೆಯು 'ವಸುಧೈವ ಕುಟುಂಬಕಂ' ಮೂಲತತ್ವವನ್ನು ಎತ್ತಿಹಿಡಿದಿತ್ತು. ಇಡೀ ಮಾನವಕುಲವೇ ಒಂದು, ನಾವೆಲ್ಲರೂ ಕೊನೆಗೆ ಜಗತ್ತಿಗೆ ಸೇರಿದವರೆಂಬ ದಿವ್ಯ ಸಂದೇಶವದು.

ಕಾಲಯಾನದಲ್ಲಿ ಜನಾಂಗಗಳನ್ನು ಬೆಸೆಯುವ, ಎಲ್ಲರನ್ನೂ ಒಳಗೊಳ್ಳುವ ಹಂಬಲದಲ್ಲಿ ಜನ್ಮತಳೆದ ಮತಧರ್ಮಗಳು ಬರಬರುತ್ತಾ ಮನುಕುಲದ ವಿಭಜಕ ಹತಾರಗಳಾಗಿ ಬದಲಾಗಿರುವುದರ ಅನಿಷ್ಟ ಚಿತ್ರಣಗಳು ಕಣ್ಣೆದುರಿಗಿವೆ. ಮನುಷ್ಯ ತಾನು ಅಲ್ಪಾಯುಷಿಯಾಗಿಯೂ ಪ್ರೀತಿ-ಸಹಕಾರಗಳ ಬಲದಿಂದ ಮಹತ್ತರವಾದುದನ್ನು ಸಾಧಿಸಬಲ್ಲ ಸಾಧ್ಯತೆಗಳನ್ನು ಅರ್ಥೈಸಿಕೊಳ್ಳುವುದರಲ್ಲಿ ಸೋತು, ಕೇವಲ ಹಣ, ಬಣ್ಣ, ರೂಪ, ಜಾತಿ, ಧರ್ಮ, ದೇಶ, ಭಾಷೆ ಗಡಿಗಳ ಗೋಡೆ ಕಟ್ಟಿಕೊಳ್ಳುತ್ತಾ ಜನಮನವನ್ನು ಪ್ರತ್ಯೇಕಿಸುತ್ತಿದ್ದಾನೆ. ಹಿಂಸೆ-ಕ್ರೌರ್ಯವನ್ನು ಸಂಭ್ರಮಿಸುತ್ತಾನೆ.

ವಿವಿಧ ಕಾಲಘಟ್ಟದ ಜಾಗತಿಕ ಸಂದರ್ಭಗಳಲ್ಲಿ ತೀವ್ರ ರಾಷ್ಟ್ರೀಯವಾದವು ಮುನ್ನೆಲೆಗೆ ಬರುತ್ತಿದ್ದಂತೆ, ಹಲವಾರು ರಾಷ್ಟ್ರಗಳಲ್ಲಿ ಬಲಾಢ್ಯರ ಸ್ವಾರ್ಥ, ಅಧಿಕಾರದಾಹಕ್ಕೆ ಆಹಾರವಾಗಿ ಬಹುಸಂಖ್ಯಾತ ಬಡ, ಕೆಳಮಧ್ಯಮ ವರ್ಗಗಳಲ್ಲಿ ಧರ್ಮಾಂಧತೆ ಮತ್ತು ಹಗೆದ್ವೇಷಗಳನ್ನು ಬಿತ್ತುವುದು, ಹಿಂಸಾಚಾರಗಳಿಗೆ ಪ್ರಚೋದಿಸುವುದರ ಮೂಲಕ ರಾಷ್ಟ್ರದ ಒಟ್ಟಾರೆ ಅಭಿವೃದ್ಧಿಯ ನೊಗವನ್ನು ಹಿಂದಕ್ಕೆ ಜಗ್ಗುತ್ತಿರುವ ಉದಾಹರಣೆಗಳು ಹತ್ತಾರು. ಸರ್ವಜನಾಂಗದ ಸಮಷ್ಟಿಪ್ರಜ್ಞೆಯ, ಶಾಂತಿಪ್ರಿಯ ರಾಷ್ಟ್ರಗಳ ತುಲನೆಯಲ್ಲಿ ಸಂಕುಚಿತತೆ ಮತ್ತು ಧರ್ಮಾಂಧತೆಯನ್ನು ಉಸಿರಾಡುವ ದೇಶಗಳು ಅಭಿವೃದ್ಧಿಯ ಮಾನದಂಡ ಮಾತ್ರವಲ್ಲ ಸಂತುಷ್ಟಿಯ ಸೂಚ್ಯಂಕದಲ್ಲಿಯೂ ತೀರಾ ಕೆಳಮಟ್ಟದಲ್ಲಿವೆ!

ಪ್ರಕೃತಿಯಲ್ಲಿ ಅಜೈವಿಕ, ಜೈವಿಕಾಂಶಗಳಲ್ಲಿ ಪರಸ್ಪರ ಚಲನೆಯಿದೆ, ಅವಲಂಬನೆಯಿದೆ. ಜೀವಿಜೀವಿಗಳ ನಡುವಿನಲ್ಲೊಂದು ಮುದ್ದಾದ ಸಂಬಂಧವಿದೆ. ಒಂದಕ್ಕೊಂದು ಪೂರಕವಾದ ಹೊಂದಾಣಿಕೆಯ ಜೀವನವಿಧಾನವೇ ಅಲ್ಲಿಯ ಸಂವಿಧಾನ. ಕಾಲಾಂತರದಿಂದ ಮನುಕುಲದೊಳಗೂ ಪರಸ್ಪರ ಪ್ರೀತಿ, ಸಹಕಾರ, ಅವಲಂಬನೆಯುಳ್ಳ ಭಾವೈಕ್ಯ ಬಂಧವಿದೆ. ಅದು ಆರ್ದ್ರತೆಯ ಸೆಲೆಯೂ ಹೌದು, ಬದುಕುವ ಕಲೆಯೂ... ಅದರರ್ಥ ಸ್ಪಷ್ಟ. ಬದುಕು ನೂಕಲು ಎಲ್ಲರಿಗೆ ಎಲ್ಲರೂ ಬೇಕು. ಪರಸ್ಪರರ ನೆರವಿಗೆ ಒದಗಲೇಬೇಕು. ದೇಶದೇಶಗಳ ನಡುವೆಯೂ ಅಂಥದ್ದೇ ಸೌಹಾರ್ದ ಸಂಬಂಧವೊಂದರ ಅನಿವಾರ್ಯವನ್ನು ಕೊರೊನಾದಂತಹ ಕಷ್ಟಕಾಲಗಳು ತೋರಿಸಿಕೊಟ್ಟಿವೆ. ವಿಶ್ವ ಸಮುದಾಯವು ಪ್ರತಿಷ್ಠೆ ಮರೆತು ಸಂಕಟದಲ್ಲಿ ಒಂದಾಗಿದೆ. ಅಹಂಕಾರ, ತಾರತಮ್ಯ, ಹಿಂಸೆ, ಯುದ್ಧೋನ್ಮಾದಗಳಲ್ಲಿ ಸರ್ವಾಧಿಕಾರವನ್ನು ಮೆರೆವ ರಾಷ್ಟ್ರಗಳೂ ಯುದ್ಧ ಅಥವಾ ನೈಸರ್ಗಿಕ ವಿಕೋಪಗಳಂತಹ ದುರಿತ ಕಾಲದಲ್ಲಿ ಸಹಾಯಕ್ಕಾಗಿ ಮತ್ತೊಬ್ಬರತ್ತ ಕೈಚಾಚಿವೆ. ಕಷ್ಟಕಾಲದಲ್ಲಿ ಸಂತ್ರಸ್ತದೇಶಗಳ ನೋವಿಗೆ ಸ್ಪಂದಿಸಿವೆ, ಸಹಾಯಕ್ಕೆ ಕೈಜೋಡಿಸಿವೆ!

ವಿಶ್ವಗುರುವಾಗುವ ಕನಸು ಕಂಡಿದ್ದ ಭಾರತವನ್ನೂ ಇದೀಗ ಕೊರೊನಾಮಾರಿ ಉಸಿರುಗಟ್ಟಿಸುತ್ತಿದೆ. ಅಮೆರಿಕ, ಇಂಗ್ಲೆಂಡ್, ಫ್ರಾನ್ಸ್, ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಸೇರಿದಂತೆ ಜಗತ್ತಿನ ಸುಮಾರು ನಲವತ್ತು ದೇಶಗಳು ವೈರಾಣು ತಂದಿಟ್ಟ ಸಂಕಟದಿಂದ ಪಾರಾಗಲು ನಮ್ಮ ನೆರವಿಗೆ ಧಾವಿಸುತ್ತಿವೆ. ಪಾಕಿಸ್ತಾನ ಮಾತ್ರವಲ್ಲ, ಕೊಲ್ಲಿ ರಾಷ್ಟ್ರಗಳಾದ ಯುಎಇ, ಸೌದಿ ಅರೇಬಿಯಾ, ಕತಾರ್, ಬಹ್ರೇನ್ ಮೊದಲಾದವುಗಳೂ ಸ್ವಯಂಪ್ರೇರಣೆಯಲ್ಲಿ ಭಾರತದೆಡೆಗೆ ಸಹಾಯಹಸ್ತ ಚಾಚಿವೆ. ಪರಸ್ಪರ ಕತ್ತಿ ಮಸೆಯುವ, ಯುದ್ಧದಾಹಿ ಜಗತ್ತಿನಲ್ಲಿ ಇಂಥದ್ದೂ ಸಾಧ್ಯವಿದೆ!

ಹುಳುಕುಗಳನ್ನು ಕಡೆಗಣಿಸಿ ಆಪತ್ಕಾಲದಲ್ಲಿ ಜನಹಿತಕ್ಕೆ ಒದಗುವ ಆಪತ್ಬಾಂಧವರು ಎಲ್ಲ ಕಾಲದಲ್ಲಿಯೂ ಹೀಗೇ ಕೈಜೋಡಿಸಿದರೆ ಎಷ್ಟು ಚೆನ್ನ. ಪರಸ್ಪರ ಪೂರಕವಾಗಿ ಬೆಳೆದು ನಿಂತರಲ್ಲವೇ ಎಲ್ಲರಿಗೂ ಕ್ಷೇಮ. ಚಾರಿತ್ರಿಕ ಮತ್ತು ಸೈದ್ಧಾಂತಿಕ ಇತಿಮಿತಿಗಳನ್ನರಿತು, ನಮ್ಮ ಅಪಾಯಕಾರಿ ಧೋರಣೆಗಳನ್ನೂ ನೀತಿ- ನಿಲುವುಗಳನ್ನೂ ಮುರಿದು ಕಟ್ಟಿಕೊಳ್ಳಲು ಇದಕ್ಕಿಂತ ಸೂಕ್ತ ಸಮಯ ಇನ್ಯಾವುದಿದೆ?

ನಮ್ಮಿಂದ ಬಹಳಷ್ಟನ್ನು ಕಿತ್ತುಕೊಳ್ಳುತ್ತಿರುವ ಕೊರೊನಾದಿಂದ ಕೆಲವಷ್ಟನ್ನಾದರೂ ಪಡೆದುಕೊಳ್ಳಬೇಕಾದ ಸಂದರ್ಭವಿದು. ಸ್ವಾರ್ಥ, ಧನದಾಹ, ಭೇದಭಾವ, ಹಗೆದ್ವೇಷಗಳ ಕೊಳೆಯನ್ನು ತೊಳೆದುಕೊಂಡು ಮನುಷ್ಯಪ್ರೀತಿಯನ್ನು ಸಾಕಿಕೊಳ್ಳುವಂತಾಗಬೇಕು. ಸಂಕಷ್ಟದ ಸಮಯದಲ್ಲಷ್ಟೇ ಪುಟಿದೇಳುವ ಮಾನವೀಯತೆಯು ಇನ್ನುಳಿದ ಅವಧಿಯಲ್ಲೂ ಜೀವಂತವಾಗಿರಲಿ. ಮನುಷ್ಯಜಗತ್ತು ತನಗಿಂತ ಮೊದಲು ಮನುಷ್ಯತ್ವವನ್ನು ಸಾಯಗೊಡದೆ ತಾನಿರುವಷ್ಟು ಕಾಲವೂ ಜೀವಕಾರುಣ್ಯವನ್ನೇ ಹೊರಸೂಸುತಿರಲಿ.

ವಾಚಕರ ವಾಣಿ

ವೈದ್ಯಕೀಯ ವ್ಯವಸ್ಥೆ ಬದಲಾಗುವುದು ಎಂದು?

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 1,788 ಹಳ್ಳಿಗಳಿದ್ದರೂ ಇರುವುದು 57 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮಾತ್ರ! (ಪ್ರ.ವಾ., ಜೂನ್ 3). ಅಲ್ಲಿಗೆ 32 ಹಳ್ಳಿಗಳಿಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಎಂದಾಯಿತು. ಒಂದು ಹಳ್ಳಿಯ ಜನಸಂಖ್ಯೆ ಕನಿಷ್ಠ ಎರಡು ಸಾವಿರ ಇದ್ದರೆ, ಒಂದು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಒಬ್ಬ ನುರಿತ ವೈದ್ಯರು ಇದ್ದರೆ, ಆ ವೈದ್ಯರು 64,000 ರೋಗಿಗಳನ್ನು ಪರೀಕ್ಷಿಸಬೇಕಾಗುತ್ತದೆ (ಎಲ್ಲರೂ ರೋಗಿಗಳಾದರೆ ಇದು ಅನ್ವಯವಾಗುತ್ತದೆ. ಆದರೆ ಹಾಗಾಗಿಲ್ಲ, ಕೊರೊನಾ ನಮ್ಮ ಮೇಲೆ ದಯೆ ತೋರಿದೆ).

ನಮ್ಮ ಭಾರತೀಯ ವೈದ್ಯಕೀಯ ವ್ಯವಸ್ಥೆ ಯಾವ ಆಧಾರದ ಮೇಲೆ ಇದೆಯೋ ತಿಳಿಯದು. ಜರ್ಮನಿಯಲ್ಲಿ ಕನಿಷ್ಠ 25 ಜನರಿಗೆ ಒಬ್ಬ ವೈದ್ಯರಿದ್ದಾರಂತೆ. ಒಂದು ಕರೆ ಮಾಡಿದರೆ ಮನೆಗೆ ಬಂದು ಪರೀಕ್ಷಿಸುತ್ತಾರೆ. ಇಂತಹ ವ್ಯವಸ್ಥೆ ಭಾರತದಲ್ಲಿ ಬರುವುದು ಯಾವಾಗ?

ಜ್ಞಾನೇಶ್ವರ ಪಿಸೆ, ರಾಣೆಬೆನ್ನೂರು

ಆವೇಶಕ್ಕೆ ಒಳಗಾಗದ ಕನ್ನಡಿಗರು

ಗೂಗಲ್‌ನಲ್ಲಿ ಕನ್ನಡದ ಬಗ್ಗೆ ಆಕ್ಷೇಪಾರ್ಹ ಅಂಶ ಕಂಡುಬಂದರೂ ಆವೇಶಕ್ಕೆ ಒಳಗಾಗದೆ ನ್ಯಾಯಯುತವಾಗಿಯೇ ಗೂಗಲ್‌ನಿಂದ ತೆಗೆದುಹಾಕುವಂತೆ ಮಾಡಿದ್ದಲ್ಲದೆ, ಅದರಿಂದ ಕ್ಷಮಾಪಣೆಯನ್ನೂ ಕೇಳಿಸಿದ ಕನ್ನಡಿಗರು ಅಭಿನಂದನಾರ್ಹರು. ಬೇರೆ ರಾಜ್ಯಗಳಲ್ಲಾದರೆ ಎಷ್ಟೋ ವಾಹನಗಳು ಹೊತ್ತಿ ಉರಿದು, ಆಸ್ತಿ ಪಾಸ್ತಿಗೆ ಹಾನಿ ಉಂಟಾಗಿ, ಮುಗ್ಧರ ಸಾವು ನೋವುಗಳಿಗೂ ಸಾಕ್ಷಿಯಾಗಬೇಕಾದ ಸಾಧ್ಯತೆ ಇರುತ್ತಿತ್ತು. ಜಾತಿ, ಧರ್ಮ, ಭಾಷೆ, ನಾಡು, ದೇಶ, ಇತಿಹಾಸ, ನಾಯಕ ಮುಂತಾದ ವಿವಾದಾತ್ಮಕ ಅಂಶಗಳನ್ನು ದೂರವಿರಿಸುವ ಸೋಸುವಿಕೆಯನ್ನು ಅಳವಡಿಸಿಕೊಳ್ಳಲು ಗೂಗಲ್‌ನಂತಹ ಸಂಸ್ಥೆಗೆ ಅಸಾಧ್ಯವಾಗಲಾರದೆಂದು ಭಾವಿಸೋಣವೇ?

ಭರತ್ ಬಿ.ಎನ್., ಮೈಸೂರು

ಹುಟ್ಟುಹಬ್ಬದ ಸಂಭ್ರಮ ನೂರ್ಮಡಿ ಆಗಲಿ

ಕೆಲವರು ತಮ್ಮ ಪ್ರೀತಿಪಾತ್ರ ಸಾಕುನಾಯಿಗಳ ಹುಟ್ಟುಹಬ್ಬ ಆಚರಿಸುವುದನ್ನು ಕಂಡಿರುತ್ತೇವೆ ಅಥವಾ ಕೇಳಿರುತ್ತೇವೆ. ಆದರೆ ನಮ್ಮ ಶಾಲೆಯ ಆವರಣದಲ್ಲಿ ಮಕ್ಕಳೊಂದಿಗೆ ನಾವು ಶಿಕ್ಷಕರು ಸೇರಿ ನೆಟ್ಟಿದ್ದ ಗಿಡಗಳ ಹುಟ್ಟುಹಬ್ಬವನ್ನು ಆಚರಿಸಿ ಸಂಭ್ರಮಿಸಿದ್ದೆವಲ್ಲದೆ, ಪ್ರತಿವರ್ಷವೂ ಇಂತಿಷ್ಟು ಗಿಡಗಳನ್ನು ನೆಡುವ ಸಂಕಲ್ಪವನ್ನೂ ಮಾಡಿದ್ದೆವು.

ಪ್ರಕೃತಿದತ್ತ ಪ್ರಾಣವಾಯುವಾದ ಆಮ್ಲಜನಕದ ಅತ್ಯವಶ್ಯಕತೆ ನಮಗೆಲ್ಲರಿಗೂ ಮನವರಿಕೆಯಾಗಿದೆ. ಗಿಡಮರಗಳನ್ನು ಹೆಚ್ಚು ಹೆಚ್ಚಾಗಿ ಬೆಳೆಸುವಲ್ಲಿ ಮುತುವರ್ಜಿ ವಹಿಸಿ, ಮಕ್ಕಳಿಗೂ ಅವುಗಳ ಪಾಲನೆಯ ಜವಾಬ್ದಾರಿಯನ್ನು ವಹಿಸಬೇಕು. ಮಗುವಿನ ಹುಟ್ಟುಹಬ್ಬ ಆಚರಣೆಯ ಸಂಭ್ರಮವನ್ನು ಗಿಡ ನೆಡುವುದರ ಮೂಲಕ ಆಚರಿಸಿದರೆ ಆ ಸಂಭ್ರಮ ನೂರ್ಮಡಿ ಆಗುವುದರಲ್ಲಿ ಸಂದೇಹವಿಲ್ಲ.

ಪ್ರತಿಭಾ ಟಿ.ಎಸ್., ಚಿತ್ರದುರ್ಗ

ಇದು ಸಂಭ್ರಮಿಸುವ ಸಮಯವಲ್ಲ

ಶುಕ್ರವಾರ ಬೆಳಿಗ್ಗೆ ಬಕಪಕ್ಷಿಗಳಂತೆ ಟಿ.ವಿ ಮುಂದೆ ಕುಳಿತಿದ್ದ ದ್ವಿತೀಯ ಪಿಯು ವಿದ್ಯಾರ್ಥಿಗಳು, ಯಾವಾಗ ಶಿಕ್ಷಣ ಸಚಿವರು ಈ ವರ್ಷದ ದ್ವಿತೀಯ ಪಿಯು ಪರೀಕ್ಷೆಯನ್ನು ರದ್ದುಪಡಿಸಿರುವುದಾಗಿ ಘೋಷಿಸಿದರೋ ಆಗ ಕುಣಿದು ಕುಪ್ಪಳಿಸಿ ಖುಷಿಪಟ್ಟಿದ್ದಾರೆ. ಇದು ಒಂದು ತರಹ ಭಾರತವು ಹಿಂದೆ ಕ್ರಿಕೆಟ್ ಆಟದಲ್ಲಿ ತನ್ನ ಸಾಂಪ್ರದಾಯಿಕ ಕ್ರೀಡಾ ವಿರೋಧಿಯಾದ ಪಾಕಿಸ್ತಾನವನ್ನು ಸೋಲಿಸಿ ಟಿ20 ವರ್ಲ್ಡ್ ಕಪ್ ಗೆದ್ದಾಗ ಸಂಭ್ರಮಪಟ್ಟಂತೆ. ವಿದ್ಯಾರ್ಥಿಗಳು ತಮ್ಮ ವಾಟ್ಸ್‌ಆ್ಯಪ್ ಸ್ಟೇಟಸ್‌ಗಳಲ್ಲಿ ಆನಂದ ಪರಮಾನಂದ ಎಂಬ ಹಾಡಿನ ತುಣುಕುಗಳನ್ನು ಹಾಕಿಕೊಂಡು ಖುಷಿ ಪಡುತ್ತಿದ್ದಾರೆ. ವಿದ್ಯಾರ್ಥಿಗಳೇ, ಇದು ಸಂಭ್ರಮಿಸುವ ಸಮಯವಲ್ಲ. ಸದ್ಯ ಕೋವಿಡ್ ಸಂಕಷ್ಟದಲ್ಲಿ ನಿಮ್ಮ ಜೀವಕ್ಕೆ ಆಪತ್ತು ಒಡ್ಡುವುದು ತರವಲ್ಲವೆಂದು ಸರ್ಕಾರ ಸೂಕ್ತ ನಿರ್ಧಾರ ತೆಗೆದುಕೊಂಡಿದೆ. ಮುಂದೊಂದು ದಿನ ನಿಮ್ಮ ಜೀವನ ರೂಪಿಸುವ ಸ್ಪರ್ಧಾತ್ಮಕ ಪರೀಕ್ಷೆಗಳು ಮಾತ್ರ ಎಂದಿಗೂ ರದ್ದಾಗುವುದಿಲ್ಲ. ಅಂತಹ ಪರೀಕ್ಷೆಗಳನ್ನು ಎದುರಿಸಲು ಬೇಕಾಗುವ ತಾಲೀಮು ಇಂತಹ ವಾರ್ಷಿಕ ಪರೀಕ್ಷೆಗಳಲ್ಲಿ ಅಡಗಿರುತ್ತದೆ ಎಂಬುದನ್ನು ಮರೆಯದಿರಿ.

ಇಮಾಮ್ ಸಾಹೇಬ್ ಹಡಗಲಿ, ಕನಕಗಿರಿ, ಕೊಪ್ಪಳ

ತ್ಯಾಜ್ಯ ನೀರಿನ ಸದ್ಬಳಕೆ: ನಾಗರಿಕರ ಮನವೊಲಿಸಿ

ಶುದ್ಧ ಕುಡಿಯುವ ನೀರಿಗಾಗಿ ಬಹುತೇಕರು ನೀರು ಸೋಸುವ ಯಂತ್ರಗಳನ್ನು ಬಳಸುತ್ತಿರುತ್ತಾರೆ. ಅದರಿಂದ ಬರುವ ತ್ಯಾಜ್ಯ ನೀರನ್ನು ಗಟಾರಕ್ಕೆ ಬಿಡುತ್ತಾರೆ. ಈ ನೀರನ್ನು ಬಡಾವಣೆಯ ಪಾದಚಾರಿ ಮಾರ್ಗಗಳ ಪಕ್ಕ ನೆಡಲಾದ ಗಿಡಗಳಿಗೆ ಒದಗಿಸುವುದನ್ನು ಪಾಲಿಕೆಗಳು ಕಡ್ಡಾಯಗೊಳಿಸಬೇಕು. ಸಸಿ ನೆಡುವ ಸಂದರ್ಭದಲ್ಲಿ ಅವುಗಳ ಪಕ್ಕ, ಬಳಸಿ ಬಿಟ್ಟ ಹೂಜಿ, ಮಡಕೆಗಳಿಗೆ ತಳದಲ್ಲಿ ತೂತು ಕೊರೆದು, ಮಣ್ಣೊಳಗೆ ಹುಗಿದು, ಅದರಲ್ಲಿ ತ್ಯಾಜ್ಯ ನೀರನ್ನು ನಾಗರಿಕರು ಹಾಕುವಂತೆ ಮನವೊಲಿಸಬೇಕು. ಇದರಿಂದ ಗಿಡಗಳು ಉತ್ತಮವಾಗಿ ಬೆಳೆದು ಪರಿಸರಕ್ಕೆ ಆಮ್ಲಜನಕ ಒದಗಿಸುವ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ನಾಡಿನ ನಾಗರಿಕರಿಗೆ ಅವಕಾಶ ಮಾಡಿಕೊಟ್ಟಂತೆ ಆಗುತ್ತದೆ.

ಬಸವರಾಜ ಹುಡೇದಗಡ್ಡಿ, ಮೈಸೂರು

ಸಂಕಷ್ಟದ ಸ್ಥಿತಿಯಲ್ಲಿ ಒಗ್ಗಟ್ಟಿರಲಿ

ಮೈಸೂರಿನ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಮತ್ತು ಮಹಾನಗರಪಾಲಿಕೆಯ ಆಯುಕ್ತೆ ಶಿಲ್ಪಾ ನಾಗ್ ಅವರ ನಡುವೆ ನಡೆಯುತ್ತಿದ್ದ ಮುಸುಕಿನೊಳಗಿನ ಗುದ್ದಾಟ, ಶಿಲ್ಪಾ ನಾಗ್ ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಲು ಮುಂದಾಗುವುದರೊಂದಿಗೆ ಮಹತ್ವದ ತಿರುವು ಪಡೆದುಕೊಂಡಿದೆ. ಜಿಲ್ಲಾಧಿಕಾರಿಯ ಕಾರ್ಯವೈಖರಿಯ ಬಗ್ಗೆ ಕೆಲವು ಜನಪ್ರತಿನಿಧಿಗಳು ಇತ್ತೀಚಿನ ದಿನಗಳಲ್ಲಿ ವ್ಯಾಪಕ ಟೀಕೆ ಮಾಡುತ್ತಿದ್ದಾರೆ.

ಮೈಸೂರು ಜಿಲ್ಲೆಯಲ್ಲಿ ಕೋವಿಡ್ ಮಹಾಮಾರಿ ವಿಷಜ್ವಾಲೆಯಂತೆ ಹೆಚ್ಚುತ್ತಿದ್ದು, ಸೋಂಕನ್ನು ನಿವಾರಿಸಲು ಜಿಲ್ಲಾಡಳಿತ ಕೈಗೊಂಡಿರುವ ಕ್ರಮಗಳು ಪರಿಣಾಮಕಾರಿಯಾದಂತಿಲ್ಲ. ಇಂತಹ ಸಂಕಷ್ಟದ ಪರಿಸ್ಥಿತಿಯಲ್ಲಿ ಜಿಲ್ಲಾಡಳಿತ ಒಗ್ಗಟ್ಟಾಗಿ ಕೆಲಸ ಮಾಡಬೇಕಾದ ಅಗತ್ಯವಿದೆ. ಆದರೆ ಜಿಲ್ಲಾಡಳಿತದ ಕೇಂದ್ರಬಿಂದುವಾದ ಜಿಲ್ಲಾಧಿಕಾರಿಯ ವಿರುದ್ಧವೇ ದೂರುಗಳ ಸುರಿಮಳೆಯಾಗುತ್ತಿರುವುದು ಕಳವಳಕಾರಿ. ರಾಜ್ಯ ಸರ್ಕಾರ ತುರ್ತಾಗಿ ಇದರ ಬಗ್ಗೆ ಗಮನಹರಿಸಿ, ಜಿಲ್ಲಾಡಳಿತಕ್ಕೆ ಮೇಜರ್ ಸರ್ಜರಿ ನಡೆಸುವ ಮೂಲಕ ಸುಗಮ ಆಡಳಿತಕ್ಕೆ ಅನುವು ಮಾಡಿಕೊಡುವುದು ಇಂದಿನ ತುರ್ತು ಅಗತ್ಯ.

ಕೆ.ವಿ.ವಾಸು, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಇಂದು ವಿಶ್ವ ಪರಿಸರ ದಿನ. 'ಮರುಕಲ್ಪನೆ, ಮರುಸೃಷ್ಟಿ, ಮರುಸ್ಥಾಪನೆ' ಈ ಬಾರಿಯ ವಿಷಯ. ಅಂದರೆ, ವಿನಾಶದ ಅಂಚಿನಲ್ಲಿರುವ ಪರಿಸರ ವ್ಯವಸ್ಥೆಗಳಿಗೆ ಕಾಯಕಲ್ಪ ಕೊಟ್ಟು ಸಂರಕ್ಷಿಸೋಣ ಎಂಬುದಾಗಿದೆ. ಪರಿಸರದ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವುದಕ್ಕಾಗಿ ವಿಶ್ವ ಸಂಸ್ಥೆ ಈ ದಿನ ಆಚರಿಸುತ್ತಿದೆ. ವಿಶ್ವ ಸಂಸ್ಥೆಯು ಆಚರಿಸುವ ಅತ್ಯಂತ ದೊಡ್ಡ ಕಾರ್ಯಕ್ರಮ ಇದು. ಪರಿಸರ ವ್ಯವಸ್ಥೆಯು ಸುಸ್ಥಿರವಾಗಿಯೇ ಉಳಿಯುವುದಕ್ಕಾಗಿ ನಮ್ಮ ಸುತ್ತಲಿನಲ್ಲಿ ಆಗಿರುವ ಕಾಯಕದ ಬಗೆಗಿನ ಕೆಲವು ವರದಿಗಳು ಇಲ್ಲಿವೆ

ಕುರುಹು ಇಲ್ಲದೇ ನಶಿಸಿದ್ದ 'ಕ್ಯಾದಿಗೆಕಟ್ಟೆ'ಗೆ ಮರುಜೀವ

• ಚಂದ್ರಹಾಸ ಹಿರೇಮಳಲಿ

ಶಿವಮೊಗ್ಗ: ನಗರೀಕರಣದ ಕಬಂಧಬಾಹುವಿಗೆ ಸಿಲುಕಿ ಗ್ರಾಮೀಣ ಬದುಕಿನ ಜೀವನಾಡಿಯಾಗಿದ್ದ ಕೆರೆಗಳು ಕಣ್ಮರೆಯಾಗುತ್ತಿರುವ ಈ ಕಾಲಘಟ್ಟದಲ್ಲಿ ಕೆಲವು ಪರಿಸರಾಸಕ್ತರು ಸೇರಿ, ವಾಜಪೇಯಿ ಬಡಾವಣೆಯಲ್ಲಿ ಕುರುಹು ಇಲ್ಲದಂತೆ ನೆಲಸಮವಾಗಿದ್ದ ಕ್ಯಾದಿಗೆಕಟ್ಟೆ ಕೆರೆಗೆ ಮರುಜೀವ ನೀಡಿದ್ದಾರೆ.

ಶಿವಮೊಗ್ಗ–ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರ ಅಭಿವೃದ್ಧಿಪಡಿಸಿದ ಬಡಾವಣೆಯಲ್ಲಿ 6 ಎಕರೆ ಉದ್ಯಾನ ಇದ್ದ ಸ್ಥಳದಲ್ಲಿ 'ನಮ್ಮ ಶಿವಮೊಗ್ಗ ಪರಿಸರಾಸಕ್ತರ ತಂಡ' ಹಸಿರು ಬೆಳೆಸಲು ಮುಂದಾದಾಗ, ಮಲ್ಲಿಗೇನಹಳ್ಳಿ ಸರ್ವೆ ನಂಬರ್ 52ರ ದಾಖಲೆಗಳಲ್ಲಿ ಕ್ಯಾದಿಗೆಕಟ್ಟೆ ಕೆರೆ ಇರುವುದು ಗಮನ ಸೆಳೆದಿತ್ತು, ಗುರುತೇ ಸಿಗದಂತೆ ನಶಿಸಿ ಹೋಗಿದ್ದ ಪುರಾತನ ಕೆರೆಗೆ ಮರು ಜೀವ ನೀಡಬೇಕು ಎಂದು ಅಂದೇ ನಿರ್ಧರಿಸಿದ್ದರು.

ಅವರ ಈ ಕಾರ್ಯಕ್ಕೆ ಸ್ಫೂರ್ತಿಯಾದವರು ಹೊಸನಗರ ತಾಲ್ಲೂಕು ಬಟ್ಟೆಮಲ್ಲಪ್ಪ, ಸುತ್ತಮುತ್ತಲ ಗ್ರಾಮಗಳ ಪರಿಸರಾಸಕ್ತ ತಂಡ. ಅಲ್ಲಿನ ಸಾರಾ ಸಂಸ್ಥೆಯ ಏಸು ಪ್ರಕಾಶ್ ನೇತೃತ್ವದಲ್ಲಿ ಗ್ರಾಮಸ್ಥರ ಶ್ರಮದಾನದ ಮೂಲಕ ಐದು ಕೆರೆಗಳಿಗೆ ಮರುಜೀವ ನೀಡಿದ್ದರು. ಅದೇ ರೀತಿ ಇಲ್ಲಿನ ಕ್ಯಾದಿಗೆಕಟ್ಟೆ ಕೆರೆಗೂ ಮರುಜೀವ ನೀಡಲು ನಿರ್ಧರಿಸಿದರು.

ಹಲವರು ಸೇರಿ ನಮ್ಮ ಶಿವಮೊಗ್ಗ ಪರಿಸರಾಸಕ್ತರ ತಂಡ ರಚಿಸಿಕೊಂಡು ಕೆರೆ ಪುನರುಜ್ಜೀವನಕ್ಕೆ ಶ್ರಮಿಸಿದ್ದೇವೆ. ಈ ಕೆರೆ ನಗರದಲ್ಲಿ ಈಗಾಗಲೇ ಕಣ್ಮರೆಯಾಗುವ ಹಲವು ಕೆರೆಗಳ ಉಳಿವಿಗೆ ಮುನ್ನುಡಿ ಬರೆದಿದೆ

ತ್ಯಾಗರಾಜ ಮಿತ್ಯಾಂತ, ಸದಸ್ಯ, ನಮ್ಮ ಶಿವಮೊಗ್ಗ ಪರಿಸರಾಸಕ್ತ ತಂಡ

ಸಾರಾ ಸಂಸ್ಥೆಯು ಯೋಜನೆಯ ರೂಪುರೇಷೆ ಸಿದ್ಧಪಡಿಸಿತು. ತಂಡ ಸಿದ್ಧವಾಯಿತು. ಇದೇ ವರ್ಷ ಏ.30ರಂದು ಕೆರೆ ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡಲಾಯಿತು. ಒಂದು ಹಿಟಾಚಿ, ಎರಡು ಟಿಪ್ಪರ್ ಹಾಗೂ ತಾವೇ ಕೈಯಿಂದ ಹಾಕಿದ ಕೆಲವು ಸಾವಿರ ರೂಪಾಯಿ ಇಟ್ಟುಕೊಂಡು ಆರಂಭವಾದ ಕೆಲಸಕ್ಕೆ ನಂತರ ಹಲವು ದಾನಿಗಳು ನೆರವಾದರು. ಲಾಕ್‌ಡೌನ್ ಅಡತಡೆ, ಅಕಾಲಿಕ ಮಳೆಯ ಮಧ್ಯೆಯೂ ತಿಂಗಳ ಒಳಗೆ ಗುರಿ ಸಾಧಿಸುವಲ್ಲಿ ತಂಡ ಸಫಲತೆ ಕಂಡಿತು.

ಕ್ಯಾದಿಗೆಕಟ್ಟೆ ಕೆರೆ ವಿಹಂಗಮ ನೋಟ.

ಎರಡು ಎಕರೆ ವ್ಯಾಪ್ತಿಯ ಕೆರೆಯನ್ನು ಕಲ್ಯಾಣಿ ರೂಪದಲ್ಲಿ ನಿರ್ಮಿಸಲಾಗಿದೆ. 10 ಅಡಿ ಆಳ ಹೂಳು ತೆಗೆದು ಸುತ್ತಲೂ ಕಟ್ಟೆ ಕಟ್ಟಲಾಗಿದೆ. ಆರು ಅಡಿಯವರೆಗೆ ನೀರು ನಿಲ್ಲುವ ವ್ಯವಸ್ಥೆ ಮಾಡಲಾಗಿದೆ. ಸುತ್ತಲೂ ನಡಿಗೆ ಪಥ, ಅಲಂಕಾರಿಕ ಸಸಿಗಳನ್ನು ನೆಡುವ ಕಾರ್ಯ ಬಾಕಿ ಇದೆ. ಜೆಸಿಬಿ ನೆರವಿನಲ್ಲಿ ಸಾಕಷ್ಟು ಮಣ್ಣು ಹಾಕಲಾಗಿದೆ. ಕೆಲಸ ಮುಗಿಯುವ ಮೊದಲೇ ಆರಂಭವಾದ ಮುಂಗಾರುಪೂರ್ವ ಮಳೆ ಕೆರೆಗೆ ನೀರು ತುಂಬಿಸಿ, ಕಂಗೊಳಿಸುವಂತೆ ಮಾಡಿದೆ. ಮುಂದಿನ ದಿನಗಳಲ್ಲಿ ವಾಜಪೇಯಿ ಬಡಾವಣೆಯಲ್ಲಿ ನಿರ್ಮಾಣವಾಗುವ ಎಲ್ಲ ಮನೆಗಳ ಚಾವಣಿಯ ಮಳೆ ನೀರು ಪೈಪುಗಳ ಮೂಲಕ ನೇರವಾಗಿ ಕೆರೆ ಸೇರಿಸುವ ಗುರಿ ಹೊಂದಲಾಗಿದೆ.

'ಕೆರೆಗಳು ಪರಿಸರದ ಜೀವಕೋಶಗಳು. ಅವುಗಳನ್ನು ಉಳಿಸುವ ಜವಾಬ್ದಾರಿ ಎಲ್ಲರ ಮೇಲಿದೆ. ಈಗಾಗಲೇ ಆರು ಕೆರೆಗಳಿಗೆ ಮರು ಜೀವ ನೀಡಿದ್ದೇವೆ' ಎನ್ನುತ್ತಾರೆ ಸಾರಾ ಸಂಸ್ಥೆಯ ಏಸು ಪ್ರಕಾಶ್.

'ಕೆರೆಯಲ್ಲಿ ಎರಡು ಕೋಟಿ ಲೀಟರ್ ನೀರು ಸಂಗ್ರಹಿಸಲಾಗುತ್ತಿದೆ. ಪ್ರಾಣಿ, ಪಕ್ಷಿಗಳಿಗೆ ಬೇಸಿಗೆಯಲ್ಲೂ ನೀರು ದೊರೆಯುತ್ತದೆ. ಈ ಪ್ರದೇಶವು ಮೋಹಕ ಹಸಿರು ತಾಣವಾಗಲಿದೆ. ಬಡಾವಣೆಯ ತಾಪಮಾನ ಕಡಿಮೆಯಾಗಲಿದೆ' ಎಂದು ಪರಿಸರಾಸಕ್ತ ಪ್ರೊ.ಬಿ.ಎಂ. ಕುಮಾರಸ್ವಾಮಿ ಪ್ರತಿಕ್ರಿಯಿಸಿದರು.

ಇಮಾರತ್ತಿನ ನೆರಳಲ್ಲಿ ಹಸಿರು ಹಾಸು

• ಸಂಧ್ಯಾ ಹೆಗಡೆ

ಮಂಗಳೂರು: ಕಾಯ್ದಿಟ್ಟ ಅರಣ್ಯ, ವನಗಳಲ್ಲಿ ಸಸಿ ನೆಡುವ ಮೂಲಕ ಹಸಿರು ರಕ್ಷಣೆಗೆ ಟೊಂಕಕಟ್ಟಿ ನಿಂತಿರುವ ತಂಡವೊಂದು ಮಂಗಳೂರು ನಗರಕ್ಕೆ ಹಸಿರು ತೋರಣ ಕಟ್ಟುತ್ತಿದೆ. ಬಡಾವಣೆಗಳಲ್ಲಿ ಪಾಳುಬಿದ್ದ ಜಾಗದಲ್ಲಿ ಗಿಡಗಳನ್ನು ನಾಟಿ ಮಾಡಿ, ಹಸಿರು ಹೆಚ್ಚಿಸುವ ಕಾಯಕದಲ್ಲಿ ತೊಡಗಿದೆ.

20 ವರ್ಷಗಳಿಂದ ಪರಿಸರ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ರಾಷ್ಟ್ರೀಯ ಪರಿಸರ ಸಂರಕ್ಷಣಾ ಒಕ್ಕೂಟವು (ಎನ್‌ಇಸಿಎಫ್) ನಗರದ ಶಕ್ತಿನಗರದ ಬಡಾವಣೆಯಲ್ಲಿ ತ್ಯಾಜ್ಯ ತುಂಬಿದ್ದ ಜಾಗದಲ್ಲಿ ವನ ನಿರ್ಮಿಸಿದೆ. ಒಂದು ವರ್ಷದ ಹಿಂದೆ ಎರಡೂವರೆ ಎಕರೆ ಪ್ರದೇಶದಲ್ಲಿ ನಾಟಿ ಮಾಡಿರುವ ಸುಮಾರು 1,350 ಗಿಡಗಳು ಆಳೆತ್ತರಕ್ಕೆ ಬೆಳೆದು ನಿಂತಿವೆ.

'ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರವು ಹಸಿರೀಕರಣಕ್ಕೆ ಮತ್ತೆ ನಾಲ್ಕು ಬಡಾವಣೆಗಳನ್ನು ನೀಡಿದೆ. ಈ ಮುಂಗಾರಿನಲ್ಲಿ ನಗರ ಹಾಗೂ ಅರಣ್ಯ ಪ್ರದೇಶ ಸೇರಿ ಸುಮಾರು 4,500 ಗಿಡಗಳನ್ನು ನೆಡುವ ಯೋಜನೆಯಿದೆ. ನಾವು ಜೂನ್, ಜುಲೈನಲ್ಲಿ ನಡೆಸುವ ಪ್ರತಿ ಭಾನುವಾರದ 'ವೃಕ್ಷ ಯಜ್ಞ' ಕಾರ್ಯಕ್ರಮವನ್ನು ಲಾಕ್‌ಡೌನ್ ನಡುವೆಯೇ ಎರಡು ವಾರಗಳ ಹಿಂದೆ ಪ್ರಾರಂಭಿಸಿದ್ದೇವೆ' ಎನ್ನುತ್ತಾರೆ ಸಂಘಟನೆಯ ಪ್ರಮುಖ ಶಶಿಧರ್ ಶೆಟ್ಟಿ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

'ಮಂಗ, ಕರಡಿಗಳಿಗೆ ಅರಣ್ಯದಲ್ಲಿ ಆಹಾರ ದೊರೆತರೆ ಅವು ನಾಡಿಗೆ ಬರುವುದಿಲ್ಲ. ಹೀಗಾಗಿ, ಕಾಡಂಚಿನ ಪ್ರದೇಶಗಳಲ್ಲಿ ಶೇ 90ರಷ್ಟು ಹಣ್ಣಿನ ಗಿಡಗಳನ್ನೇ ನಾಟಿ ಮಾಡುತ್ತೇವೆ. ನಗರದಲ್ಲೂ ಪಕ್ಷಿಗಳಿಗೆ ಅನುಕೂಲವಾಗುವಂತೆ ಅರಣ್ಯ ಇಲಾಖೆ ಸಹಕಾರದಲ್ಲಿ ಹಣ್ಣಿನ ಗಿಡಗಳನ್ನು ಬೆಳೆಸಲಾಗಿದೆ. ನಿರಂತರವಾಗಿ ನೀರುಣಿಸುವ ಕಾರ್ಯಕರ್ತರ ಕಾಳಜಿಯಿಂದ ಶೇ 90ರಷ್ಟು ಸಸಿಗಳು ಸಮೃದ್ಧವಾಗಿ ಮೇಲೆದ್ದಿವೆ. ಹಸಿರು ಚರ್ಚೆಗೆ ಲಾಕ್‌ಡೌನ್ ಅಡ್ಡಿಯಾಗಿಲ್ಲ. ಯುವಜನರು, ಚಿಕ್ಕ ಮಕ್ಕಳು ಪರಿಸರ ಆಸಕ್ತಿ ಬೆಳೆಸಿಕೊಂಡಿರುವುದು ತಂಡಕ್ಕೆ ದೊರೆತಿರುವ ದೊಡ್ಡ ಯಶಸ್ಸು' ಎಂದು ಹೆಮ್ಮೆಯಿಂದ ಹೇಳಿಕೊಂಡರು.

'ಗುದ್ದಲಿ, ಪಿಕಾಸು ಹಿಡಿದು ಹೊಂಡ ತೆಗೆಯುವ, ಗಿಡ ನೆಡುವ ಶ್ರಮದಾನದಲ್ಲಿ ಎಲ್ಲರಿಗೂ ಸಮಪಾಲು. 85 ವರ್ಷದ ಹಿರಿಯ ಮಾಧವ ಭಕ್ತ, ಏಳು ವರ್ಷದ ಬಾಲಕ ಶೌರ್ಯನೂ ಈ ತಂಡದ ಸದಸ್ಯರು. ಉದ್ಯಮಿಗಳು, ವೃತ್ತಿಪರರು, ನಿವೃತ್ತರು, ವಿದ್ಯಾರ್ಥಿಗಳು ಸ್ವಯಂ ಖುಷಿಗಾಗಿ ಹಸಿರು ಉಕ್ಕಿಸುವ ಕಾರ್ಯಕ್ಕೆ ಕೈಜೋಡಿಸುತ್ತಾರೆ. ಮಣ್ಣಿನ ನಂಟು ನೀಡುವ ಆಪ್ಯಾಯ ಅನುಭವಕ್ಕೆ ಹೋಲಿಕೆಯಿಲ್ಲ' ಎಂದು ಪರಿಸರ ಪ್ರೇಮಿ ಜೀತ್ ಮಿಲನ್ ರೋಚ್ ಹೇಳಿದರು.

ಪಟ್ಟಣದ ಮಡಿಲಲ್ಲಿ 'ಆಮ್ಲಜನಕ ಬ್ಯಾಂಕ್'

• ಸದಾಶಿವ ಎಂ.ಎಸ್

ಕಾರವಾರ: 1924ರಲ್ಲಿ ಸ್ಥಾಪನೆಯಾದ 219 ಎಕರೆ ವಿಸ್ತೀರ್ಣದ ಈ 'ಗ್ರಾಮ ಅರಣ್ಯ'ವು ಪ್ರಸ್ತುತ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಕ್ರಿಯವಾಗಿರುವ ಏಕೈಕ ಸ್ವತಂತ್ರ ಸಮಿತಿಯಾಗಿದೆ. ಪಟ್ಟಣಕ್ಕೆ ಮತ್ತು ಸುತ್ತಮುತ್ತಲಿನ ಗ್ರಾಮಗಳಿಗೆ 'ಆಮ್ಲಜನಕದ ಬ್ಯಾಂಕ್' ಆಗಿರುವ ವನರಾಶಿಯನ್ನು ಸ್ಥಳೀಯರೇ ನಿರ್ವಹಿಸುತ್ತಿದ್ದಾರೆ.

ಕುಮಟಾ ಪಟ್ಟಣಕ್ಕೆ ಹೊಂದಿಕೊಂಡೇ ಇರುವ 'ಹಳಕಾರ ಗ್ರಾಮ ಅರಣ್ಯ'ವು ತನ್ನ ಇತಿಹಾಸದಿಂದಲೇ ಗಮನ ಸೆಳೆಯುತ್ತದೆ. ರಾಜ್ಯದಲ್ಲಿ ಬ್ರಿಟಿಷರ ಕಾಲದಲ್ಲಿ ಆರಂಭವಾಗಿದ್ದ 'ಗ್ರಾಮ ಅರಣ್ಯ'ಗಳನ್ನು 1974ರಲ್ಲಿ ರಾಜ್ಯ ಸರ್ಕಾರವು ಅರಣ್ಯ ಇಲಾಖೆಯ ವಶಕ್ಕೆ ನೀಡುವಂತೆ ಜಿಲ್ಲಾಡಳಿತಕ್ಕೆ ಸೂಚನೆ ನೀಡಿತ್ತು. ಆಗ ಜಿಲ್ಲೆಯಲ್ಲಿ 165 ಸ್ವತಂತ್ರ ಗ್ರಾಮ ಅರಣ್ಯ ಸಮಿತಿಗಳಿದ್ದವು. ಕುಮಟಾ ತಾಲ್ಲೂಕು ಒಂದರಲ್ಲೇ 13 ಇದ್ದವು.

ಈ ಆದೇಶದ ವಿರುದ್ಧ ಹಳಕಾರ ಗ್ರಾಮ ಅರಣ್ಯ ಸಮಿತಿಯವರು ನ್ಯಾಯಾಲಯದ ಮೊರೆ ಹೋದರು. ಅರಣ್ಯ ಪ್ರದೇಶವು ಸರ್ಕಾರದ ವಶವಾಗುವುದನ್ನು ತಡೆದರು.

ದಟ್ಟವಾದ ಕಾಡಿನಿಂದ ಕೂಡಿರುವ ಈ ಗ್ರಾಮ ಅರಣ್ಯವು, ಸುತ್ತಮುತ್ತಲಿನ ನೂರಾರು ಮನೆಗಳ ನೀರಿನ ಪರಾವಲಂಬನೆಯನ್ನು ತಪ್ಪಿಸಿದೆ. ಇಲ್ಲಿನ ಉಷ್ಣಾಂಶವೂ ಇತರ ಪ್ರದೇಶಗಳಿಗಿಂತ ಎರಡು, ಮೂರು ಡಿಗ್ರಿ ಸೆಲ್ಸಿಯಸ್‌ಗಳಷ್ಟು ಕಡಿಮೆ ಇರುವಂತೆ ಮಾಡಿದೆ.

'ಕುಮಟಾದ ಹೆಗಡೆ ರಸ್ತೆಯ ಹಳಕಾರ ಕ್ರಾಸ್‌ನಿಂದ ಚಿತ್ರಿಗಿ ರಸ್ತೆಯ ಹಳಕಾರ ಕ್ರಾಸ್‌ವರೆಗೆ ಈ ಅರಣ್ಯದ ವ್ಯಾಪ್ತಿಯಿದೆ. ಜಿಲ್ಲಾಧಿಕಾರಿ ಮುಖ್ಯಸ್ಥರಾಗಿದ್ದರೂ ಸಮಿತಿಯು ಸಂಪೂರ್ಣ ಸ್ವತಂತ್ರವಾಗಿದೆ. ಅಧ್ಯಕ್ಷ, ಕಾರ್ಯದರ್ಶಿ ಹಾಗೂ ಒಂಬತ್ತು ಸದಸ್ಯರಿದ್ದೇವೆ. ಸಮಿತಿಗೆ ಮೂರು ವರ್ಷಗಳಿಗೊಮ್ಮೆ ತಹಶೀಲ್ದಾರ್ ನೇತೃತ್ವದಲ್ಲಿ ಚುನಾವಣೆ ನಡೆಯುತ್ತದೆ' ಎಂದು ಸಮಿತಿಯ ಅಧ್ಯಕ್ಷ ನಾಗರಾಜ ಭಟ್ಟ 'ಪ್ರಜಾವಾಣಿ'ಗೆ ವಿವರಿಸಿದರು.

ಕುಮಟಾ ಪಟ್ಟಣದ ಸಮೀಪದಲ್ಲಿರುವ ಹಳಕಾರ ಗ್ರಾಮ ಅರಣ್ಯದಲ್ಲಿ ಚಪ್ಪರದಂತೆ ಚಾಚಿಕೊಂಡಿರುವ ಮರಗಳ ನಡುವೆ ರಸ್ತೆಯು ಸಾಗಿದೆ

'ಈ ಕಾಡಿನ ಸುತ್ತಮುತ್ತ ಇರುವ ಕುಟುಂಬಗಳಿಗೆ ಸಮಿತಿಯಲ್ಲಿ ಸದಸ್ಯತ್ವ ನೀಡಲಾಗುತ್ತದೆ. ವರ್ಷಕ್ಕೆ ₹ 30 ಶುಲ್ಕ ಪಡೆಯಲಾಗುತ್ತದೆ. ಅವರು ಈ ಕಾಡಿನಿಂದ ತರಗೆಲೆ ಹಾಗೂ ಒಣಕಟ್ಟಿಗೆಯನ್ನು ತೆಗೆದುಕೊಂಡು ಹೋಗಲು ಅರ್ಹರಾಗಿರುತ್ತಾರೆ. ಸದಸ್ಯರಿಂದ ಸಂಗ್ರಹಿಸಿದ ಶುಲ್ಕದ ಮೊತ್ತದಿಂದ ಮತ್ತು ಅರಣ್ಯ ಉತ್ಪನ್ನವನ್ನು ಹರಾಜು ಹಾಕಿದಾಗ ಬರುವ ಹಣದಿಂದ ಕಾರ್ಯದರ್ಶಿಗೆ ಗೌರವಧನ ಮತ್ತು ಭದ್ರತಾ ಸಿಬ್ಬಂದಿಗೆ ವೇತನ ನೀಡಲಾಗುತ್ತಿದೆ' ಎಂದರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಸಮಿತಿಯ ಗೌರವ ಕಾರ್ಯದರ್ಶಿ ಶಾಂತಾರಾಮ ಹರಿಕಾಂತ ಮಾತನಾಡಿ, 'ಅಂದಿನ ದಿನಗಳಲ್ಲಿ ಬ್ರಿಟಿಷ್ ಅಧಿಕಾರಿ ಕಾಲನ್ ಎಂಬುವವರು ಈ ಪ್ರದೇಶವನ್ನು ಗ್ರಾಮಸ್ಥರ ಅನುಕೂಲಕ್ಕೆಂದು ವಹಿಸಿದ್ದರು. ಅಂದಿನಿಂದಲೂ ಈ ಕಾಡನ್ನು ನಮ್ಮದೇ ಆಸ್ತಿ ಎಂಬಂತೆ ಕಾಯ್ದುಕೊಂಡು ಬಂದಿದ್ದೇವೆ' ಎಂದರು.

'ಇಲ್ಲಿ ಸುತ್ತಮುತ್ತ 12 ಸರ್ಕಾರಿ ಬಾವಿಗಳು, 200ರಷ್ಟು ಖಾಸಗಿ ಬಾವಿಗಳಿವೆ. ಮಾವಿನಕೆರೆ ಎಂಬ ಕೆರೆಯೂ ಇಲ್ಲೇ ಇದೆ. ಕಾಡಿನ ಮಧ್ಯೆ ಒಂದು ಎಕರೆಯಷ್ಟು ಇಂಗುಗುಂಡಿ ಮಾಡಿರುವ ಕಾರಣ ನೀರು ಇಂಗುತ್ತದೆ' ಎಂದು ವಿವರಿಸಿದರು.

ದಂಡದ ಅರ್ಧ ಬಹುಮಾನ!

'ಕಾಡಿನೊಳಗೆ ಯಾರೂ ಹರಿತವಾದ ಆಯುಧಗಳೊಂದಿಗೆ ಹೋಗುವುದನ್ನು, ಹಸಿ ಮರ, ಟೊಂಗೆಗಳನ್ನು ಕತ್ತರಿಸುವುದನ್ನು ನಿಷೇಧಿಸಲಾಗಿದೆ. ಒಂದುವೇಳೆ ಯಾರಾದರೂ ಹಾಗೆ ಮಾಡಿದರೆ ಅವರಿಗೆ ದಂಡ ವಿಧಿಸಲಾಗುತ್ತದೆ. ಆ ಮೊತ್ತದಲ್ಲಿ ಅರ್ಧದಷ್ಟನ್ನು ಮಾಹಿತಿ ನೀಡಿದವರಿಗೆ ಬಹುಮಾನವಾಗಿ ನೀಡಲಾಗುತ್ತದೆ. ಈ ಬಗ್ಗೆ ಚಿಕ್ಕ ಮಕ್ಕಳಲ್ಲೂ ಜಾಗೃತಿ ಮೂಡಿಸಲಾಗಿದೆ' ಎಂದು ನಾಗರಾಜ ಭಟ್ಟ ಆಡಳಿತದ ಕ್ರಮವನ್ನು ವಿವರಿಸಿದರು.

ಮುಖ್ಯಾಂಶಗಳು

- 1924ರಲ್ಲಿ ಸ್ಥಾಪನೆಯಾದ ಅರಣ್ಯ ಸಮಿತಿ
- ಇಂದಿಗೂ ಸಕ್ರಿಯವಾಗಿರುವ ಸ್ವತಂತ್ರ ಸಮಿತಿ

ಹಳಚೇರಿ, ಸುರಗಿ, ಮತ್ತಿ, ಹೊನಗಲು, ಜುಮ್ಮ, ಬಿದಿರು, ಗೇರು, ಹೊಳೆಗೆರೆ ಸೇರಿದಂತೆ ಹಲವು ಮರಗಳು ಇಲ್ಲಿ ಬೃಹದಾಗಿ ಬೆಳೆದಿವೆ. ಹತ್ತಾರು ಪ್ರಭೇದಗಳ ಪಕ್ಷಿಗಳು, ಪ್ರಾಣಿಗಳು ಇಲ್ಲಿ ನಲಿಯುತ್ತಿವೆ. ಕಾಡಿನ ನಡುವೆ ಇಂಗು ಗುಂಡಿಗಳನ್ನು ನಿರ್ಮಿಸಲಾಗಿದೆ. ಅವುಗಳಲ್ಲಿ ಮಳೆ ನೀರು ಇಂಗಿ ಸಮೀಪದ ಜಲಮೂಲಗಳು ಸಮೃದ್ಧವಾಗಿವೆ. ಧನ್ವಂತರಿ ವನ ನಿರ್ಮಿಸಲಾಗಿದ್ದು, ಗಿಡಗಳ ಸಂರಕ್ಷಣೆ ಮಾಡಲಾಗುತ್ತಿದೆ.

ಕೆರೆಯ ಹೂಳೆತ್ತಿದ ನಂತರ ಹಸಿರು ಹೊದ್ದ ಧೂಪತಮಹಾಗಾಂವ

ಗೊಗ್ಗವ್ವೆ ಕೆರೆಗೆ ಜೀವ ಕೊಟ್ಟ ಗ್ರಾಮಸ್ಥರು

• ಚಂದ್ರಕಾಂತ ಮಸಾನಿ

ಬೀದರ್: ಔರಾದ್ ತಾಲ್ಲೂಕಿನ ಧೂಪತಮಹಾಗಾಂವ ಗ್ರಾಮಸ್ಥರು ಕಳೆದ ವರ್ಷದ ಲಾಕ್‌ಡೌನ್ ಸಮಯವನ್ನು ಸದ್ಬಳಕೆ ಮಾಡಿಕೊಂಡು ಪುರಾತನ ಕೆರೆಗೆ ಕಾಯಕಲ್ಪ ನೀಡಿ ಪರಿಸರಕ್ಕೆ ಜೀವ ಕಳೆ ತುಂಬಿದ್ದಾರೆ. 12ನೇ ಶತಮಾನದಲ್ಲಿ ನಿರ್ಮಿಸಿದ್ದ ಈ ಕೆರೆಯ ಒಡ್ಡು ಬಹಳ ವರ್ಷಗಳ ಹಿಂದೆ ಒಡೆದು ಕೆರೆಯಲ್ಲಿ ಹೂಳು ತುಂಬಿಕೊಂಡಿತ್ತು. ಅಂತರ್ಜಲ ಮಟ್ಟವೂ ಕುಸಿದು ಗ್ರಾಮದಲ್ಲಿ ನೀರಿನ ಸಮಸ್ಯೆಗೆ ಕಾರಣವಾಗಿತ್ತು.

ಧೂಪತಮಹಾಗಾಂವ ಪಿಡಿಒ ಶಿವಾನಂದ ಔರಾದೆ ಅವರು ಜಿಲ್ಲಾ ಪಂಚಾಯಿತಿ ಅಧಿಕಾರಿಗಳ ಅನುಮತಿ ಪಡೆದು ಕೆರೆ ಹೂಳೆತ್ತುವ ಪ್ರಸ್ತಾವವನ್ನು ಗ್ರಾಮಸ್ಥರ ಮುಂದಿಟ್ಟರು. ಚುನಾಯಿತ ಪ್ರತಿನಿಧಿಗಳು ಹಾಗೂ ಗ್ರಾಮಸ್ಥರು ಇದಕ್ಕೆ ಒಪ್ಪಿಗೆ ಸೂಚಿಸಿ ತಡ ಮಾಡದೆ ಹೂಳೆತ್ತುವ ಕಾಮಗಾರಿಯನ್ನೂ ಆರಂಭಿಸಿ ಅಚ್ಚುಕಟ್ಟಾಗಿ ಒಡ್ಡು ನಿರ್ಮಿಸಿದರು. ಇದೇ ಅವಧಿಯಲ್ಲಿ ಗ್ರಾಮದ ಎರಡು ಹಳೆಯ ಬಾವಿಗಳ ಹೂಳು ತೆಗೆದು ಸ್ವಚ್ಛಗೊಳಿಸಿದರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಕಳೆದ ವರ್ಷ ಚೆನ್ನಾಗಿ ಮಳೆ ಬಂದ ಕಾರಣ ಕೆರೆ ಭರ್ತಿಯಾಗಿದೆ. ಅಂತರ್ಜಲ ಮಟ್ಟ ಹೆಚ್ಚಾಗಿ ಗ್ರಾಮದ ತೆರೆದ ಬಾವಿಗಳು ಹಾಗೂ ಕೊಳವೆಬಾವಿಗಳಲ್ಲಿ ನೀರು ಬಂದಿದೆ. ಕುಡಿಯುವ ನೀರಿನ ಸಮಸ್ಯೆಯೂ ನಿವಾರಣೆಯಾಗಿದೆ. ಪಂಚಾಯಿತಿಯವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಕೆರೆ ಮೇಲೆ ಪಾದಚಾರಿ ರಸ್ತೆ ನಿರ್ಮಾಣ ಮಾಡಿ ಕೆರೆಯ ಪಕ್ಕದಲ್ಲಿ ಗಿಡಗಳನ್ನು ಬೆಳೆಸಿದ್ದಾರೆ. ಸಮೀಪದಲ್ಲಿ ಒಂದು ಚಿಕ್ಕ ಉದ್ಯಾನವನ್ನೂ ನಿರ್ಮಿಸುತ್ತಿದ್ದಾರೆ.

ಧೂಪತಮಹಾಗಾಂವದಲ್ಲಿ ಸೋಲಾರ್ ದೀಪಗಳನ್ನು ಅಳವಡಿಸಿ ಲಕ್ಷಾಂತರ ರೂಪಾಯಿ ವಿದ್ಯುತ್ ಬಿಲ್ ಉಳಿಸಿದ್ದೇವೆ. ಕೆರೆಯ ಸುತ್ತ ಕೂಡ ಸೋಲಾರ್ ದೀಪಗಳನ್ನು ಅಳವಡಿಸಲು ನಿರ್ಧರಿಸಿದ್ದೇವೆ

ಶ್ರೀನಿವಾಸ ಜೊನ್ನಿಕೆರೆ, ಗ್ರಾಮ ಪಂಚಾಯಿತಿ ಅಧ್ಯಕ್ಷ

ಇದಕ್ಕೆ ಗ್ರಾಮಸ್ಥರ ಒಗ್ಗಟ್ಟಿನ ಮಂತ್ರ ಇನ್ನಷ್ಟು ಬಲ ನೀಡಿದೆ.

'ಲಾಕ್‌ಡೌನ್ ಅವಧಿಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ 65 ಜನರು ಸತತ 80 ದಿನಗಳ ವರೆಗೆ ಕೆಲಸ ಮಾಡಿ ಕೆರೆಯ ಹೂಳು ತೆಗೆದಿದ್ದಾರೆ. ಕೆರೆಗೆ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಪಕ್ಕದಲ್ಲಿ ಎರಡು ಕಟ್ಟೆಗಳನ್ನು ಕಟ್ಟಲಾಗಿದೆ. ಕೆರೆಗೆ ಕಾಯಕಲ್ಪ ನೀಡಿದ ನಂತರ ಗ್ರಾಮದ ಸೌಂದರ್ಯ ಹೆಚ್ಚಿದೆ' ಎಂದು ಪಿಡಿಒ ಶಿವಾನಂದ ಹೇಳಿದರು.

ಜಾನುವಾರುಗಳಿಗೆ ನೀರು ಕುಡಿಯಲು ಗ್ರಾಮದಲ್ಲಿ ನೀರಿನ ತೊಟ್ಟಿ ಮಾಡಲಾಗಿದೆ. ಕೊಳವೆಬಾವಿಗಳ ಸುತ್ತ ಇಂಗುಗುಂಡಿ ನಿರ್ಮಿಸಲಾಗಿದೆ. ಕೆರೆಯಲ್ಲಿ ನೀರು ನಿಂತ ನಂತರ ಗಿಡಮರಗಳು ಹಸಿರಿನಿಂದ ನಳನಳಿಸುತ್ತಿವೆ. ಗ್ರಾಮದ ಪರಿಸರದಲ್ಲಿ ಹೊಸ ಗಿಡಗಳನ್ನು ನೆಡಲಾಗಿದೆ. ವಿಶ್ವ ಜಲ ದಿನಾಚರಣೆ ದಿನ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಗ್ರಾಮ ಪಂಚಾಯಿತಿ ಅಧ್ಯಕ್ಷ ಶ್ರೀನಿವಾಸ ಜೊನ್ನಿಕೆರೆ ಅವರೊಂದಿಗೆ ವಿಡಿಯೊ ಸಂವಾದ ನಡೆಸಿ ಜಲ ಸಂರಕ್ಷಣೆ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

'400 ಮನೆಗಳು ಇರುವ ಧೂಪತಮಹಾಗಾಂವ 3,500 ಜನಸಂಖ್ಯೆ ಹೊಂದಿದೆ. ಗೊಗ್ಗವ್ವೆ ಕೆರೆಯ ಯಶೋಗಾಥೆಯನ್ನು ನೋಡಲು ಅಕ್ಕ ಪಕ್ಕದ ಊರಿನವರು ಕುತೂಹಲದಿಂದ ನಮ್ಮೂರಿಗೆ ಬರುತ್ತಿದ್ದಾರೆ. ಅರಣ್ಯ ಇಲಾಖೆಯ ನೆರವು ಪಡೆದು 2 ಸಾವಿರ ಗಿಡಗಳನ್ನು ಬೆಳೆಸಲು ನಿರ್ಧರಿಸಿದ್ದೇವೆ' ಎಂದು ಗ್ರಾಮ ಪಂಚಾಯಿತಿ ಅಧ್ಯಕ್ಷ ಶ್ರೀನಿವಾಸ ಜೊನ್ನಿಕೆರೆ ಹೇಳಿದರು.

ಗುಂಡಣ್ಣ



ಸಚ್ಚಿದಾನಂದ ಸತ್ಯಸಂದೇಶ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಛಲವೇ ಜೀವನದ ಬಲ

ಬದುಕುವ ಛಲವಿಲ್ಲದಿದ್ದರೆ ಯಾವ ಜೀವಿಯೂ ಭೂಮಿ ಮೇಲೆ ಒಂದಿಂಚು ಚಲಿಸಲಾರವು. ಹಾಗೇ ಒಂದು ನಿಮಿಷವೂ ಬದುಕುಳಿಯಲಾರವು. ಏಕೆಂದರೆ ಪ್ರತಿಯೊಂದು ಜೀವಿಯೂ ಬದುಕುವ ಛಲದಿಂದಲೇ ಭೂಮಿಗೆ ಬಂದಿರುತ್ತವೆ. ಭಗವಂತ ಸಾವನ್ನ ಬೆನ್ನಿಗೆ ಕಟ್ಟಿ ಕಳುಹಿಸಿದ್ದರೂ, ಬದುಕುವ ಛಲವನ್ನ ಕೊನೆ ಉಸಿರಿರುವವರೆಗೂ ಬಿಟ್ಟುಕೊಡಲಾರವು. ಹೀಗಾಗಿಯೇ ಕೋಟ್ಯಂತರ ವರ್ಷಗಳಿಂದ ಭೂಮಿಯ ಮೇಲೆ ಜೀವಿಗಳ ಸಾವು-ಬದುಕಿನ ನಿರಂತರ ಯಾತ್ರೆ ಮುಂದುವರೆದಿದೆ. ಛಲವೇ ಜೀವನದ ಬಲವಾಗಿರುವುದರಿಂದ ಛಲವಿಲ್ಲದೆ ಬದುಕಿಲ್ಲ ಎಂಬುದು ಸತ್ಯ.

ಮನುಷ್ಯನ ಹೊರತು ಬೇರಾವ ಜೀವಿಗೂ ಬದುಕಿನ ಪಾಠ ಕಲಿಸಬೇಕಾಗಿಲ್ಲ. ಅವು ಹುಟ್ಟುತ್ತಲೇ ಬದುಕುವ ಮಾರ್ಗ ಕಂಡುಕೊಂಡುಬಿಡುತ್ತವೆ. ಆದರೆ ಮಾನವಜೀವಿಗೆ ಮಾತ್ರ ವೃದ್ಧಾಪ್ಯವಾಗುತ್ತಬಂದರೂ ಬದುಕುವ ಮಾರ್ಗವನ್ನು ಕಲಿಸುತ್ತಲೇ ಇರಬೇಕು. ಮನುಷ್ಯನಿಗೆ ಬದುಕುವ ಮಾರ್ಗ ಕಲಿಸಲು ಶಾಲೆ-ಕಾಲೇಜುಗಳಿವೆ. ಇವ್ಯಾವುದೂ ಮನುಷ್ಯನನ್ನ ಪರಿಪೂರ್ಣವಾಗಿ ಬದುಕಿನ ಪಾಠ ಕಲಿಸಲಾರವು. ಏಕೆಂದರೆ, ಬದುಕಿನ ಪಾಠ ಹೇಳಿಕೊಟ್ಟು ಕಲಿಯುವಂಥದ್ದಲ್ಲ. ಅದು ಸ್ವಾನುಭವದಿಂದ ಕಲಿಯುವಂಥದ್ದು. ಈ ಕಲಿಕೆಗೆ ಕೊನೆ ಎಂಬುದಿಲ್ಲ.

ಕಲಿಕೆ ಅಥವ ಶಿಕ್ಷಣ ಎಂದರೆ; ಬದುಕುವ ಛಲ. ಕಲಿಯಬೇಕೆನ್ನುವ ಛಲಗಾರನಿಗೆ ಬದುಕು ಒಲಿಯುತ್ತದೆ. ಛಲವಿಲ್ಲದವನಿಗೆ ಬದುಕು ಮುನಿಯುತ್ತದೆ. ಇದನ್ನ ಮನುಷ್ಯ ಎಷ್ಟು ಬೇಗ ಅರ್ಥ ಮಾಡಿಕೊಳ್ಳುತ್ತಾನೋ, ಅಷ್ಟು ಬೇಗ ಅವನ ಬದುಕು ಬೆಳಗುತ್ತದೆ. ಇದಕ್ಕಾಗೇ ಛಲಬೇಕು ಪ್ರತಿ ಮನುಷ್ಯನಿಗೆ. ಆದರೆ ಈ ಛಲದ ಬಲದ ಮರ್ಮ ಮಾತ್ರ ಎಲ್ಲಾ ಮನುಷ್ಯರಿಗೂ ಅರ್ಥವಾಗೋಲ್ಲ. ಸರಿಯಾಗಿ ಅರ್ಥ ಮಾಡಿಕೊಂಡವರು ಮಾತ್ರ ಬಹುಬೇಗ ಸಾಧನೆಯ ಹಾದಿ ತುಳಿಯುತ್ತಾರೆ. ಸಾಧನೆಯ ಹಾದಿ ತುಳಿದವರೆಲ್ಲಾ ಯಶಸ್ಸಿನ ಶಿಖರ ಮುಟ್ಟುವುದಿಲ್ಲ. ಸಾಧನೆ ಹಾದಿಯಲ್ಲಿ ಎದುರಾಗುವ ಕಡು ಕಷ್ಟಗಳನ್ನು ಸಹಿಸಿದವರು ಮಾತ್ರವೇ ಯಶಸ್ಸಿನ ಶಿಖರ ಏರಿ ರಾರಾಜಿಸುತ್ತಾರೆ.

ಶ್ರಮವಿಲ್ಲದೆ ಭೂಮಿ ಮೇಲೆ ಹುಲ್ಲುಕಡ್ಡಿಯೂ ಚಿಗುರಲಾರದು. ಆನೆ ಭಾರ ಆನೆಗೆ ಇರುವೆ ಭಾರ ಇರುವೆಗೆ ಎಂಬಂತೆ ಪ್ರತಿಜೀವಿಯೂ ಶ್ರಮದ ಮೇಲೆ ಬದುಕು ಕಟ್ಟಿಕೊಳ್ಳುತ್ತವೆ. ಮೊಟ್ಟೆ ಇಡುವ ಮುನ್ನ ಸಣ್ಣಪುಟ್ಟ ಹಕ್ಕಿ, ಹುಳುಹುಪ್ಪಟ್ಟೆಗಳು ಸಹ ಗೂಡು ಕಟ್ಟಲು ಅದೆಷ್ಟು ಕಷ್ಟಪಡುತ್ತವೆ. ಆದರೆ ಲೋಭಿಮನುಷ್ಯರು ಮಾತ್ರ ಯಾವುದೇ ಶ್ರಮವಿಲ್ಲದೆ ಬದುಕು ಕಟ್ಟಿಕೊಳ್ಳಲು ಯೋಚಿಸುತ್ತಾರೆ. ಇವರಾರೂ ಭವಿಷ್ಯದಲ್ಲಿ ಉತ್ತಮ ಬದುಕನ್ನು ಕಟ್ಟಿಕೊಳ್ಳಲಾರರು. ಯಾವುದೇ ಕಲೆ ಕಲಾವಿದನ ಶ್ರಮದಿಂದ ಅರಳಬೇಕು. ಶ್ರಮವಿಲ್ಲದ ಬಣ್ಣದ ಎರಕದಿಂದ ಉತ್ತಮ ಕಲೆ ರೂಪುಗೊಳ್ಳಲಾರದು. ಕವಿ ಬರೆಯುವಾಗಲೂ ಬೌದ್ಧಿಕಶ್ರಮ ಹಾಕದೆ ಉತ್ತಮ ಕವಿತೆ ರೂಪುಗೊಳ್ಳಲಾರದು. ಆದ್ದರಿಂದ ಯಾವುದೇ ಯೋಜನೆ ಕಾರ್ಯಕ್ಕಿಳಿಸುವಾಗ ಶ್ರಮದ ಪಟ್ಟನ್ನು ಹಾಕಲೇಬೇಕು.

ಎಷ್ಟೋ ಜನ ತಮ್ಮಿಂದ ಏನೂ ಸಾಧಿಸಲಾಗಲ್ಲ ಅಂತ ಹತಾಶರಾಗುತ್ತಾರೆ. ದುಡ್ಡಿದ್ದರೆ ಮಾತ್ರ ಸಾಧನೆಯ ಗುರಿ ಮುಟ್ಟಬಹುದು ಅಂತ ತಮ್ಮಲ್ಲಿರುವ ಕೊರತೆಗಳ ಬಗ್ಗೆಯೇ ಜಾಲಾಡಿಕೊಂಡಿರುತ್ತಾರೆ. ವಾಸ್ತವವಾಗಿ ಯಾವುದೇ ಸಾಧನೆಗೆ ದುಡ್ಡು ಮುಖ್ಯವಲ್ಲ; ಹಣ ಸಾಧನೆಯ ಸಾಧನದೊಳಗಿರುವ ಒಂದು ಭಾಗವಷ್ಟೆ. ಹಣವಿಲ್ಲ ಅಂತ ನಾನು 55 ವರ್ಷಗಳ ಹಿಂದೆ ಯೋಚಿಸುತ್ತಾ ಕೂತಿದ್ದರೆ, ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮ ಇಂದು ವಿಶ್ವಾದ್ಯಂತ 87 ಆಶ್ರಮಗಳಷ್ಟು ವಿಸ್ತಾರಗೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಹೇಳಿರುವಂತೆ ಕೆಲಸ ನಾವು ಮಾಡುತ್ತಾ ಇರಬೇಕು; ಅದರ ಫಲಾಫಲಗಳನ್ನ ಭಗವಂತನಿಗೆ ಬಿಡಬೇಕು. ಒಂದಲ್ಲ ಒಂದು ದಿನ ನಮ್ಮ ಪರಿಶ್ರಮಕ್ಕೆ ತಕ್ಕ ಪ್ರತಿಫಲ ಸಿಕ್ಕೇ ಸಿಗುತ್ತೆ. ನಿಃಸ್ವಾರ್ಥವಾದ ಸಾತ್ವಿಕ ಸಾಧಕನಿಗೆ 'ಸಚ್ಚಿದಾನಂದ'ದ ಕೃಪೆ ಸದಾ ಇರುತ್ತದೆ.

ದಿನ ಭವಿಷ್ಯ

ಶನಿವಾರ ಜೂನ್ 5, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ವೈಶಾಖ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ರೋಹಿಣಿ ದಶಮೀ ಗಂ. 0-10 (ಬೆ. 6-05) ಶನಿವಾರ ನಿತ್ಯ ನಕ್ಷತ್ರ ರೇವತಿ ಗಂ. 47-39 (ರಾ. 1-04) ಸೌಭಾಗ್ಯ ನಾಮ ಯೋಗ ಗಂ. 58-22 ಭದ್ರೆ ಕರಣ ಗಂ. 0-10 ವಿಷ ಗಂ. 13-57 ಅಮೃತ ಗಂ. 41-38 : ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 ಸೂರ್ಯೋದಯ: 5-56 ಸೂರ್ಯಾಸ್ತ: 6-40 ಅದೃಷ್ಟ ಸಂಖ್ಯೆ 14

ಮೇಷ: ಉದ್ಯೋಗ ವ್ಯವಹಾರಗಳಲ್ಲಿ ಉನ್ನತಿ ಕಾಣುವಿರಿ. ಹತ್ತಿ ಅರಳೆ, ಬಟ್ಟೆ ವ್ಯಾಪಾರಸ್ಥರಿಗೆ ಆದಾಯದಲ್ಲಿ ಹೆಚ್ಚಳ. ಕಲಾವಿದರಿಗೆ, ನಿರ್ದೇಶಕರು ಹಾಗೂ ಸಾರಿಗೆ ಸೌಕರ್ಯ ವ್ಯವಹಾರದಲ್ಲಿರುವವರಿಗೆ ವ್ಯವಹಾರದಲ್ಲಿ ಅನುಕೂಲ.

ವೃಷಭ: ಮನೆಯಲ್ಲಿ ಸಂಭ್ರಮ. ವಸ್ತ್ರಾಭರಣಗಳ ಖರೀದಿ ಸಾಧ್ಯತೆ. ಲೋಹದ ವ್ಯಾಪಾರಿಗಳಿಗೆ ವ್ಯವಹಾರ ಉತ್ತಮಗೊಂಡು ಅಧಿಕ ಲಾಭ ದೊರಕಲಿದೆ.

ಮಿಥುನ: ಹಿರಿಯ ಅಧಿಕಾರಿಗಳ ಸಹಮತದೊಂದಿಗೆ ಕೆಲಸ ಕಾರ್ಯಗಳು ಸುಗಮ. ಕೃಷಿ ಕಾರ್ಯಗಳಲ್ಲಿ ತೊಡಗಿಕೊಂಡವರಿಗೆ ಉತ್ತಮ ದಿನವಾಗಿದೆ. ಮಹಿಳಾ ಉದ್ಯೋಗಿಗಳಿಗೆ ಕಚೇರಿಯಲ್ಲಿ ಉತ್ತಮ ವಾತಾವರಣ.

ಕರ್ಕಾಟಕ: ಕೆಲಸ ಮಾಡುವ ಸ್ಥಳದಲ್ಲಿ ನಿಮ್ಮ ಒಣ ಪ್ರತಿಷ್ಠೆಯಿಂದಾಗಿ ವಿರೋಧವನ್ನು ಎದುರಿಸಬೇಕಾದೀತು. ನೇಕಾರರಿಗೂ ವ್ಯವಸಾಯಗಾರರಿಗೂ ಕೆಲಸ ಕಾರ್ಯಗಳಲ್ಲಿ ತೊಂದರೆ ಎದುರಾಗುವ ಸಾಧ್ಯತೆ.

ಸಿಂಹ: ಉದ್ಯೋಗ, ವ್ಯವಹಾರಗಳಲ್ಲಿ ಸಂತಸ. ವೃತ್ತಿಯಲ್ಲಿ ಉತ್ತಮ ಸುದ್ದಿಯನ್ನು ಕೇಳಲಿದ್ದೀರಿ. ಲೇವಾದೇವಿ ವ್ಯವಹಾರದಲ್ಲಿ ಹಣದ ಕೊರತೆ ಕಂಡು ಬರಲಿದೆ. ಮಹಿಳಾ ನೌಕರರಿಗೆ ಕಿರಿಕಿರಿ ಉಂಟಾದೀತು.

ಕನ್ಯಾ: ಉದ್ಯೋಗ ವ್ಯವಹಾರಗಳು ಸುಗಮ. ದ್ರವ್ಯಾನುಕೂಲತೆ ಕಂಡುಬರುವುದು. ಬುದ್ಧಿವಂತಿಕೆಯ ವ್ಯವಹಾರದಿಂದಾಗಿ ಪ್ರಶಂಸೆಗೆ ಪಾತ್ರರಾಗಲಿದ್ದೀರಿ. ಹಣ ಹೂಡಿಕೆಯಲ್ಲಿ ಎಚ್ಚರ ವಹಿಸುವುದು ಸೂಕ್ತ.

ತುಲಾ: ರಾಜಕೀಯ ವ್ಯಕ್ತಿಗಳಿಗೆ ಗುಪ್ತ ಧನಲಾಭ. ತಂತ್ರಜ್ಞರಿಗೆ, ರಕ್ಷಣಾಧಿಕಾರಿಗಳು, ವೈದ್ಯರುಗಳಿಗೂ ಸಾಮಾಜಿಕ ಪುರಸ್ಕಾರ ಸನ್ಮಾನಗಳು ಎದುರುಗೊಳ್ಳಲಿವೆ. ಕ್ರೀಡಾಪಟುಗಳಿಗೂ ಯೋಧರಿಗೂ ಹೋರಾಟದಲ್ಲಿ ಯಶಸ್ಸು.

ವೃಶ್ಚಿಕ: ವಿನಾಕಾರಣ ಕಾನೂನು ಕಟ್ಟಳೆಗಳನ್ನು ಎದುರಿಸಬೇಕಾದೀತು. ಹಣದ ಕೊರತೆ ಕಂಡುಬರಲಿದೆ. ಸಾಮಾಜಿಕ ಕೆಲಸ ಕಾರ್ಯಗಳಲ್ಲಿ ವಿರೋಧಗಳನ್ನು ಎದುರಿಸಬೇಕಾದೀತು. ದೇಹಾಲಾಸ್ಯ ಕಂಡುಬರಲಿದೆ.

ಧನು: ಉದ್ಯೋಗ ವ್ಯವಹಾರಗಳು ವೃದ್ಧಿ ಮತ್ತು ಧನ ಲಾಭವನ್ನು ಕಂಡುಕೊಳ್ಳುವಿರಿ. ಪುತ್ರ ಸಂತಾನ ಭಾಗ್ಯದ ಸಾಧ್ಯತೆ ಕಂಡುಬರುತ್ತಿದೆ. ಯತ್ನಿಸಿದ ಕಾರ್ಯಗಳಲ್ಲಿ ಯಶಸ್ಸನ್ನು ಕಾಣುವಿರಿ.

ಮಕರ: ವಸ್ತುಗಳ ಸಗಟು ವ್ಯವಹಾರಗಳು ವಿಫಲವಾಗುವ ಸಾಧ್ಯತೆ ಕಂಡುಬರಲಿದೆ. ಮಿತ್ರ ಹಾಗೂ ಪಾಲುದಾರ ವ್ಯವಹಾರದಲ್ಲಿ ಅಪನಂಬಿಕೆ ಅಪವಾದ ಎದುರಾದೀತು. ಪ್ರಯಾಣದಲ್ಲಿ ಕಲಹ ಕಂಡಬರಲಿದೆ.

ಕುಂಭ: ಉತ್ಸವ ಸಮಾರಂಭಗಳಲ್ಲಿ ಭಾಗಿಯಾಗಲಿದ್ದೀರಿ. ಪ್ರಿಯ ವ್ಯಕ್ತಿಗಳಿಂದ ಒಳ್ಳೆಯ ಸುದ್ದಿಯೊಂದನ್ನು ಕೇಳಲಿದ್ದೀರಿ. ಸಂಗಾತಿಯ ಸ್ವಭಾವದಿಂದ ಬೇಸರ ಉಂಟಾದೀತು. ತಾಳ್ಮೆಯಿಂದ ಎಲ್ಲವೂ ನಿರಾಳವಾಗಿ ನೆಮ್ಮದಿ ಮೂಡುವುದು.

ಮೀನ: ಕೈಗಾರಿಕಾ ಉದ್ದಿಮೆದಾರ ಹಣಕಾಸು ಸಂಸ್ಥೆಗಳು, ಗುತ್ತಿಗೆದಾರರಿಗೂ ಉದ್ಯೋಗದಲ್ಲಿ ಒಳ್ಳೆಯ ಕಾಲವಾಗಿದ್ದು, ತೈಲ, ತುಪ್ಪ ಮುಂತಾದವುಗಳ ವ್ಯಾಪಾರಸ್ಥರಿಗೆ ನಷ್ಟವುಂಟಾದೀತು.

ನಿಮ್ಮ ಜನ್ಮದಿನ 5-ಜೂನ್ ಈ ದಿನವು ಅತ್ಯಂತ ಶುಭಕರವಾಗಿದ್ದು, ವ್ಯವಹಾರದಲ್ಲಿ ಸ್ವ ನಿರ್ಧಾರದಿಂದ ಮುಂದುವರಿಯುವುದರಿಂದ ಉತ್ತಮ ರೀತಿಯಲ್ಲಿ ಕೈಗೂಡುವುದು. ಕೈಗೊಂಡ ಕಾರ್ಯಗಳಲ್ಲಿ ಏರಿಳಿತಗಳು ಕಂಡಬಂದರೂ ಅಂತಿಮ ಫಲಿತಾಂಶವು ಸಂತಸವನ್ನು ನೀಡಲಿದೆ.

ಪದಬಂಧ 4618 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಅಗಸೆ ಬಾಗಿಲು (4)
3.ತೋಳಿನ ಶಕ್ತಿಯಿದು (4)
5.ತೋರಿಕೆ ಅಥವಾ ಕಾಂತಿ (3)
7.ಉದಕ ಇಲ್ಲಿದೆ (2)
8.ಮಿತಿಗೆ ಒಳಪಟ್ಟಿದ್ದು ಮಿಡಿತದಲ್ಲಿದೆ (2)
11.ಪುಸ್ತಕದ ಅಧ್ಯಾಯವಿಲ್ಲಿ ಉಲ್ಟಾ ಆಗಿಬಿಟ್ಟಿದೆ (2)
13.ಜಾಗರಣೆ ಮಾಡಿದ ಬುದ್ಧಿವಂತೆ! (2)
14.ನಂಟರ ಸಮೂಹ (3)
16.ಕಲೆಯೊಳಗಿರುವ ಆಹ್ವಾನ ಕಾಣುತ್ತಿದೆಯೇ? (4)
17.ಬೆಲೆಬಾಳುವ ಮಣಿಗಳನ್ನೊಳಗೊಂಡಿರುವ ಸಮುದ್ರ (4)

ಮೇಲಿಂದ ಕೆಳಕ್ಕೆ

1.ಪ್ರಗತಿಶೀಲ ಸ್ವಭಾವದವನು (4)
2.ತೇರು ಇಲ್ಲಿದೆ (2)
3.ತಂಬಾಕು ಕೊಯ್ಯಲು ಬಳಸಿದ ಕಿರುಗತ್ತಿ (2)
4.ಸೈನ್ಯವಿರುವ ಜಾಗ (3)
6.ವೇತನವಿಲ್ಲಿ ತಿರುವುಮುರುವಾಗಿದೆ (3)
7.ಒಳ್ಳೆಯ ನಡುವಳಿಕೆ (4)
9.ಕೂಲಂಕಷವಾದ ವಿಚಾರಣೆ (4)
10.ಮೋಕ್ಷ ಮಾಡಿಸಿಕೊಂಡಿರುವ ಕೆನ್ನೆ (3)
12.ಸಂಭ್ರಮದ ಕೊನೆಗೆ ಗರ ಬಡಿದಿದೆ! (4)
13.ಹುಟ್ಟಿದ ತಾರೀಕು ತಿಥಿ ಇತ್ಯಾದಿಗಳನ್ನು ತಿಳಿಸುವ ಪತ್ರಿಕೆ (3)
14.ಪ್ರಾಣಿ ಪಕ್ಷಿಗಳನ್ನು ಹಿಡಿಯುವ ಸಾಧನ (2)
15.ಪಗಡೆಯಾಟದಲ್ಲಿ ದಾಳದಿಂದ ಸೂಚಿತವಾಗುವ ಸಂಖ್ಯೆ (2)



4617ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 3.ವಾಮ 5.ನಿರಾಕರಣ 6.ವಿಕೋಪ 7.ಗುರಾಣಿ 8.ರಾಷ್ಟ್ರೀಕರಣ 9.ಸುಸಂಧಿ 10.ಕಸಬೆ 13.ಉಪಜೀವನ 14.ತಜ್ಞ

ಮೇಲಿಂದ ಕೆಳಕ್ಕೆ: 1.ಪಿಳ್ಳಂಗೋವಿ 2.ಆಕರ 4.ಮಹಾರಾಣಿ 5.ನಿರಪರಾಧಿ 7.ಗುಣಕಥನ 9.ಸುಚರಿತ 11.ಬೆಳಕಿಂಡಿ 12.ವಜೀರ

ಸುಡೊಕು 5004

8	7			6			5	
2					5		6	
		1	2			4		9
		2					4	
4					6			
	1		3		2		7	
	2			1		8		
1			8					4
	8			3	7		1	2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5003 ಸುಡೊಕು

7	9	2	5	3	1	4	6	8
4	1	5	6	8	7	3	2	9
6	8	3	4	9	2	1	5	7
5	3	4	7	1	9	6	8	2
1	2	6	8	5	4	7	9	3
8	7	9	2	6	3	5	4	1
9	4	7	3	2	5	8	1	6
3	6	1	9	4	8	2	7	5
2	5	8	1	7	6	9	3	4

ಡೋಸ್ ಅಂತರ ಹೆಚ್ಚಿದಷ್ಟೂ ಪ್ರತಿಕಾಯ ಸೃಷ್ಟಿ ಕಡಿಮೆ: ಅಧ್ಯಯನ ವರದಿ

ಡೆಲ್ಟಾ ತಳಿ: ಫೈಝರ್ ಲಸಿಕೆ ಪರಿಣಾಮ ಕಡಿಮೆ

ನವದೆಹಲಿ (ಪಿಟಿಐ): ಭಾರತದಲ್ಲಿ ಕೋವಿಡ್‌ನ ಎರಡನೇ ಅಲೆಯು ತೀವ್ರಗೊಳ್ಳಲು ಕಾರಣವಾಗಿರುವ ಬಿ.1.617.2 ತಳಿಯ ಕೊರೊನಾವೈರಸ್ ಅಥವಾ ಡೆಲ್ಟಾ ಅವತರಣಿಕೆಯ ವಿರುದ್ಧ ಫೈಝರ್ ಕಂಪನಿಯ ಕೋವಿಡ್ ಲಸಿಕೆಯ ಪರಿಣಾಮ ಕಡಿಮೆ. ಎರಡು ಡೋಸ್‌ಗಳ ಮಧ್ಯೆ ಅಂತರ ಹೆಚ್ಚಿದಷ್ಟೂ ಲಸಿಕೆಯ ಪರಿಣಾಮ ಮತ್ತಷ್ಟು ಕಡಿಮೆಯಾಗುತ್ತದೆ ಎಂದು ನೂತನ ಅಧ್ಯಯನ ವರದಿಯೊಂದು ಹೇಳಿದೆ.

'ಮೂಲ ಕೊರೊನಾ ವೈರಾಣುವಿಗಿಂತಲೂ ಬ್ರಿಟನ್‌ನಲ್ಲಿ ಕಾಣಿಸಿಕೊಂಡಿದ್ದ ಬಿ.1.1.7 ತಳಿಯು ಕ್ಷಿಪ್ರವಾಗಿ ಹರಡುವ ಸಾಮರ್ಥ್ಯ ಹೊಂದಿತ್ತು. ಈ ತಳಿಯನ್ನು ಆಲ್ಫಾ ತಳಿ ಎಂದು ಕರೆಯಲಾಗಿತ್ತು. ಈಗ ಡೆಲ್ಟಾ ತಳಿಯು, ಆಲ್ಫಾ ತಳಿಗಿಂತ ಶೇ 50ರಷ್ಟು ವೇಗವಾಗಿ ಹರಡುತ್ತದೆ ಎಂಬುದು

ಫೈಜರ್ ಕೋವಿಡ್ ಲಸಿಕೆ

ಗೊತ್ತಾಗಿದೆ. ಇದಕ್ಕಿಂತಲೂ ಮುಖ್ಯವಾಗಿ ಫೈಝರ್ ಕಂಪನಿಯ ಕೋವಿಡ್ ಲಸಿಕೆಯ ಪರಿಣಾಮವು, ಡೆಲ್ಟಾ ತಳಿಯ ವಿರುದ್ಧ ಅತ್ಯಂತ ಕಡಿಮೆ' ಎಂದು ಲ್ಯಾನ್ಸೆಟ್ ನಿಯತಕಾಲಿಕದಲ್ಲಿ ಪ್ರಕಟವಾಗಿರುವ ವರದಿಯಲ್ಲಿ ವಿವರಿಸಲಾಗಿದೆ.

ಮೂಲ ಕೊರೊನಾ ವೈರಾಣುವಿನ ವಿರುದ್ಧ ಫೈಝರ್ ಲಸಿಕೆಯ ಪರಿಣಾಮ ಶೇ 79ರಷ್ಟು ಇತ್ತು. ಬ್ರಿಟನ್‌ನಲ್ಲಿ ಪತ್ತೆಯಾದ ಆಲ್ಫಾ ತಳಿಯ ವಿರುದ್ಧ ಪರಿಣಾಮ ಪ್ರಮಾಣ ಶೇ 50ಕ್ಕೆ ಕುಸಿದಿತ್ತು. ಭಾರತದಲ್ಲಿ ಪತ್ತೆಯಾಗಿರುವ ಡೆಲ್ಟಾ ತಳಿಯ ವಿರುದ್ಧ ಈ ಪ್ರಮಾಣವು ಶೇ 32ರಷ್ಟು ಮತ್ತು ಆಫ್ರಿಕಾದಲ್ಲಿ ಪತ್ತೆಯಾದ ಬೀಟಾ ತಳಿಯ ವಿರುದ್ಧ ಈ ಲಸಿಕೆಯ ಪರಿಣಾಮ ಶೇ 25ರಷ್ಟು ಮಾತ್ರ ಎಂದು ಅಧ್ಯಯನ ವರದಿಯಲ್ಲಿ ವಿವರಿಸಲಾಗಿದೆ.

ಲಸಿಕೆ ಅಂತರ: ಭಾರತಕ್ಕೆ ಬ್ರಿಟನ್ ಮಾದರಿ

ಭಾರತದಲ್ಲಿ ಕೋವಿಡ್ ವಿರುದ್ಧ ಈಗ ಪ್ರಧಾನವಾಗಿ ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್ ಲಸಿಕೆಗಳನ್ನು ನೀಡಲಾಗುತ್ತಿದೆ. ಈಚೆಗಷ್ಟೇ ಕೇಂದ್ರ ಸರ್ಕಾರವು ಕೋವಿಶೀಲ್ಡ್ ಲಸಿಕೆಯ ಎರಡು ಡೋಸ್‌ಗಳ ನಡುವಣ ಅಂತರವನ್ನು 12-16 ವಾರಕ್ಕೆ ವಿಸ್ತರಿಸಿದೆ.

'ಬ್ರಿಟನ್‌ನಲ್ಲಿ ನಡೆದ ಅಧ್ಯಯನದ ಪ್ರಕಾರ ಕೋವಿಶೀಲ್ಡ್‌ನ ಎರಡು ಡೋಸ್‌ಗಳ ನಡುವಣ ಅಂತರ 12 ವಾರಕ್ಕೂ ಹೆಚ್ಚು ಇದ್ದಾಗ ವೈರಾಣುವಿನ ವಿರುದ್ಧ ಲಸಿಕೆಯ ಪರಿಣಾಮ ಶೇ 81.3ರಷ್ಟಾಗುತ್ತದೆ. ಎರಡು ಡೋಸ್‌ಗಳ ನಡುವಣ ಅಂತರ ಆರು ವಾರಗಳಿದ್ದಾಗ ಪರಿಣಾಮ ಪ್ರಮಾಣ ಶೇ 55.1ರಷ್ಟು ಮಾತ್ರ. ಹೀಗಾಗಿ ಎರಡು ಡೋಸ್‌ಗಳ ನಡುವಣ ಅಂತರವನ್ನು ವಿಸ್ತರಿಸಲಾಗಿದೆ' ಎಂದು ಕೇಂದ್ರ ಸರ್ಕಾರ ಹೇಳಿತ್ತು.

ಬ್ರಿಟನ್‌ನಲ್ಲಿ ಡೆಲ್ಟಾ ತಳಿಯ ಮೇಲೆ ಅಧ್ಯಯನ ನಡೆಸಿಲ್ಲ. ಮೂಲ ಕೊರೊನಾ ವೈರಾಣು ಮತ್ತು ಆಲ್ಫಾ ತಳಿಯ ಮೇಲೆ ನಡೆಸಿದ ಅಧ್ಯಯನದ ಆಧಾರದ ಮೇಲೆ ಬ್ರಿಟನ್ ಸರ್ಕಾರವು ಕೋವಿಶೀಲ್ಡ್‌ನ ಎರಡು ಡೋಸ್‌ಗಳ ನಡುವಣ ಅಂತರವನ್ನು 12 ವಾರಗಳಿಗೆ ವಿಸ್ತರಿಸಿತ್ತು. ಆದರೆ, ಭಾರತದಲ್ಲಿ ಈಗ ಡೆಲ್ಟಾ ತಳಿ ತೀವ್ರವಾಗಿದೆ. ಬ್ರಿಟನ್‌ನಲ್ಲೂ ಈಗ ಡೆಲ್ಟಾ ತಳಿಯು ಕ್ಷಿಪ್ರವಾಗಿ ಹರಡುತ್ತಿರುವ ಕಾರಣ ಎರಡು ಡೋಸ್‌ಗಳ ನಡುವಣ ಅಂತರ ಕಡಿಮೆ ಮಾಡಲು ಅಲ್ಲಿನ ಸರ್ಕಾರ ಚಿಂತನೆ ನಡೆಸಿದೆ.

'ಜನರಿಗೆ ಈ ಸೋಂಕು ತಗುಲುವುದು ಮತ್ತು ಅವರು ಆಸ್ಪತ್ರೆಗೆ ದಾಖಲಾಗುವುದನ್ನು ತಡೆಯಲು ಇರುವ ಏಕೈಕ ಮಾರ್ಗ ಲಸಿಕೆ. ಹೀಗಾಗಿ ಎಲ್ಲರಿಗೂ ಲಸಿಕೆ ಹಾಕಬೇಕು. ಆದರೆ ಈಗಾಗಲೇ ಮೊದಲ ಡೋಸ್ ಲಸಿಕೆ ಪಡೆದುಕೊಂಡಿರುವವರಿಗೆ ಶೀಘ್ರದಲ್ಲೇ ಎರಡನೇ ಡೋಸ್ ನೀಡಬೇಕು. ಇಲ್ಲದಿದ್ದಲ್ಲಿ ಈ ತಳಿಯ ವಿರುದ್ಧ ಹೋರಾಡುವಷ್ಟು ಪ್ರತಿಕಾಯಗಳು ಅಭಿವೃದ್ಧಿಯಾಗುವುದಿಲ್ಲ' ಎಂದು ವರದಿಯಲ್ಲಿ ಶಿಫಾರಸು ಮಾಡಲಾಗಿದೆ.

ಪ್ರಜಾವಾಣಿ
'ಕನ್ನಡ ಧ್ವನಿ' ಪಾಡ್‌ಕಾಸ್ಟ್ ಚಾನೆಲ್‌ನ
ಪ್ರತಿ ಶನಿವಾರದ 'ಹರಟೆ ಕಟ್ಟೆ'
ಕೋವಿಡ್ 3ನೇ ಅಲೆ: ತಯಾರಿ ಹೇಗೆ?
ವಿಷಯ ಕುರಿತ ಈ ದಿನದ ಚರ್ಚೆಯಲ್ಲಿ
ಡಾ. ರಾಜನ್ ದೇಶಪಾಂಡೆ
ಮಕ್ಕಳ ತಜ್ಞ, ಧಾರವಾಡ

ಡಾ. ಮಂಜುಳಾ ಪಾಟೀಲ
ವಿಜ್ಞಾನಿ, ಧಾರವಾಡ ಕೃಷಿ ವಿವಿ ಸಮುದಾಯ ಕಾಲೇಜು

ಸಂಜೆ 4 ಗಂಟೆಗೆ
ನೀವೂ ಆಲಿಸಿರಿ, ಸ್ನೇಹಿತರಿಗೂ ಕೇಳಿಸಿರಿ
https://www.prajavani.net/podcast

₹43,000 ಕೋಟಿಯಲ್ಲಿ ಆರು ಜಲಾಂತರ್ಗಾಮಿಗಳ ನಿರ್ಮಾಣ

ನವದೆಹಲಿ (ಪಿಟಿಐ): ಭಾರತೀಯ ನೌಕಾಪಡೆಗಾಗಿ ಸುಮಾರು ₹43,000 ಕೋಟಿ ವೆಚ್ಚದಲ್ಲಿ ಆರು ಸಾಂಪ್ರದಾಯಿಕ ಜಲಾಂತರ್ಗಾಮಿಗಳನ್ನು ನಿರ್ಮಿಸುವ ಬೃಹತ್ ಯೋಜನೆಗೆ ರಕ್ಷಣಾ ಸಚಿವಾಲಯ ಶುಕ್ರವಾರ ಅನುಮೋದನೆ ನೀಡಿದೆ.

ನೌಕಾ ಕ್ಷೇತ್ರದಲ್ಲಿ ಚೀನಾದ ಪರಾಕ್ರಮ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಭಾರತ ಈ ನಿರ್ಧಾರ ತೆಗೆದುಕೊಂಡಿದೆ ಎಂದು ಸರ್ಕಾರದ ಉನ್ನತ ಮೂಲಗಳು ತಿಳಿಸಿವೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ನಡೆದ ರಕ್ಷಣಾ ಉಪಕರಣಗಳ ಖರೀದಿ ಮಂಡಳಿಯ (ಡಿಎಸಿ) ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು.

'ಮೇಕ್ ಇನ್ ಇಂಡಿಯಾ' ಭಾಗವಾಗಿ ರೂಪಿಸಲಾಗಿರುವ ಈ ಯೋಜನೆಗೆ 'ಪಿ–75 ಇಂಡಿಯಾ' ಎಂದು ಕರೆಯಲಾಗುತ್ತಿದ್ದು, ಡಿಎಸಿ ಸಭೆ ಇದಕ್ಕೆ ಅನುಮೋದನೆ ನೀಡಿದೆ.

ಜಲಾಂತರ್ಗಾಮಿ ನೌಕೆಗಳ ವೈಶಿಷ್ಟ್ಯಗಳು ಮತ್ತು ಈ ಬೃಹತ್ ಯೋಜನೆಗಾಗಿ ಪ್ರಸ್ತಾವನೆಯ ಕೋರಿಕೆಗಳನ್ನು ರಕ್ಷಣಾ ಸಚಿವಾಲಯ ಮತ್ತು ಭಾರತೀಯ ನೌಕಾಪಡೆಯ ಪ್ರತ್ಯೇಕ ತಂಡಗಳು ಈಗಾಗಲೇ ಪೂರ್ಣಗೊಳಿಸಿವೆ ಎಂದು ಮೂಲಗಳು ಹೇಳಿವೆ.

ಈ ಯೋಜನೆಯನ್ನು 12 ವರ್ಷಗಳಲ್ಲಿ ಅನುಷ್ಠಾನಗೊಳಿಸಲಾಗುತ್ತದೆ. ಹೀಗಾಗಿ ಯೋಜನೆಯ ಅಂತಿಮ ವೆಚ್ಚದಲ್ಲಿ ಇನ್ನೂ ಹೆಚ್ಚಳವಾಗುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಜಲಾಂತರ್ಗಾಮಿಗಳ ನಿರ್ಮಾಣಕ್ಕೆ ಆಸಕ್ತಿ ವ್ಯಕ್ತಪಡಿಸಿ ಸಲ್ಲಿಕೆಯಾಗಿದ್ದ ಪ್ರಸ್ತಾವನೆಗಳ ಪೈಕಿ ಎಲ್ ಆ್ಯಂಡ್ ಟಿ ಹಾಗೂ ಮಜಗಾಂಡ ಡಾಕ್ಸ್ ಲಿಮಿಟೆಡ್‌ನ ಪ್ರಸ್ತಾವನೆಗಳಿಗೆ ಡಿಎಸಿ ಅನುಮೋದನೆ ನೀಡಿದೆ ಎಂದೂ ಮೂಲಗಳು ಹೇಳಿವೆ.

ಬ್ರಿಟನ್‌ನಲ್ಲಿ ನಡೆಸಿದ ನೂತನ ಅಧ್ಯಯನ ವರದಿಯಲ್ಲಿ ಉಲ್ಲೇಖ

ಕೊರೊನಾ ಮರುಸೋಂಕು ಸಾಧ್ಯತೆ ಅಲ್ಪ

ನವದೆಹಲಿ (ಪಿಟಿಐ): ಒಂದು ಬಾರಿ ಕೋವಿಡ್ ತಗಲಿದವರು ಮತ್ತೆ ಸೋಂಕಿಗೆ ಒಳಗಾಗುವ ಸಾಧ್ಯತೆ ಕಡಿಮೆ ಎಂದು ನೂತನ ಅಧ್ಯಯನ ವರದಿಯೊಂದು ಹೇಳಿದೆ. ಈ ಸೋಂಕಿಗೆ ಒಳಗಾಗಿದ್ದವರಿಗೆ, ನಂತರದ 10 ತಿಂಗಳವರೆಗೆ ಸೋಂಕು ತಗಲುವ ಸಾಧ್ಯತೆ ಇಳಿಕೆಯಾಗಿರುತ್ತದೆ ಎಂದು ಅಧ್ಯಯನ ವರದಿಯಲ್ಲಿ ವಿವರಿಸಲಾಗಿದೆ.

ಬ್ರಿಟನ್‌ನ ವೃದ್ಧಾಶ್ರಮದಲ್ಲಿನ ನಿವಾಸಿಗಳು ಮತ್ತು ಸಿಬ್ಬಂದಿಯನ್ನು ಸತತ 4 ತಿಂಗಳ ಕಾಲ ಪರಿಶೀಲನೆಗೆ ಒಳಪಡಿಸಿ ಈ ಅಧ್ಯಯನ ವರದಿಯನ್ನು ಸಿದ್ಧಪಡಿಸಲಾಗಿದೆ. ಒಟ್ಟು 2,000 ಜನರನ್ನು ಈ ಅಧ್ಯಯನಕ್ಕೆ ಒಳಪಡಿಸಲಾಗಿತ್ತು. ಲಾನ್ಸೆಟ್ ಹೆಲ್ದಿ ಲಾಂಜೆವಿಟಿ ನಿಯತಕಾಲಿಕದಲ್ಲಿ ಈ ಅಧ್ಯಯನ ವರದಿ ಪ್ರಕಟವಾಗಿದೆ.

2,000 ಜನರಲ್ಲಿ 10 ತಿಂಗಳ ಹಿಂದೆ ಕೋವಿಡ್‌ಗೆ ತುತ್ತಾಗಿದ್ದವರು ಮತ್ತು ಕೋವಿಡ್ ತಗುಲದೇ ಇದ್ದವರನ್ನು ಹೋಲಿಕೆ ಮಾಡಿ ಅಧ್ಯಯನ ನಡೆಸಲಾಗಿದೆ. ಈ ಹಿಂದೆ ಸೋಂಕಿಗೆ ಒಳಗಾದ ವೃದ್ಧಾಶ್ರಮ ನಿವಾಸಿಗಳಲ್ಲಿ, ಮತ್ತೆ ಸೋಂಕಿಗೆ ಒಳಗಾಗುವ ಸಾಧ್ಯತೆ ಪ್ರಮಾಣ ಶೇ 85ರಷ್ಟು ಕಡಿಮೆ ಎಂಬುದು ಪತ್ತೆಯಾಗಿದೆ. ಇದೇ ರೀತಿ ಸೋಂಕಿಗೆ ಒಳಗಾದ ವೃದ್ಧಾಶ್ರಮ ಸಿಬ್ಬಂದಿಗಳಲ್ಲಿ, ಮತ್ತೆ ಸೋಂಕಿಗೆ ಒಳಗಾಗುವ ಸಾಧ್ಯತೆ ಪ್ರಮಾಣ ಶೇ 60ರಷ್ಟು ಕಡಿಮೆ ಎಂಬುದು ಪತ್ತೆಯಾಗಿದೆ. ಎರಡೂ ವರ್ಗದ ಜನರಲ್ಲಿ ಸೋಂಕಿಗೆ ಒಳಗಾಗುವ ಸಾಧ್ಯತೆಯಲ್ಲಿ ಭಾರಿ ವ್ಯತ್ಯಾಸವಿದ್ದರೂ, ಸೋಂಕಿನ ವಿರುದ್ಧ ಪ್ರಬಲ ಪ್ರತಿಕಾಯ ಅವರ ದೇಹದಲ್ಲಿ ಅಭಿವೃದ್ಧಿಯಾಗಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಈ ಅಧ್ಯಯನಕ್ಕೆ ಒಳಪಡಿಸಿದವರನ್ನು 2020ರ ಅಕ್ಟೋಬರ್‌ನಿಂದ 2021ರ ಫೆಬ್ರುವರಿ ಮಧ್ಯೆ ಪ್ರತಿ ವಾರವೂ ಪ್ರತಿಕಾಯ ಪರೀಕ್ಷೆಗೆ ಒಳಪಡಿಸಲಾಗುತ್ತಿತ್ತು. ಅವರಲ್ಲಿ ಪ್ರತಿಕಾಯ ಇರುವುದನ್ನು ದೃಢಪಡಿಸಿಕೊಳ್ಳಲಾಗಿತ್ತು. ಜತೆಗೆ ಅಗತ್ಯವಿದ್ದಾಗ ಆರ್‌ಟಿ-ಪಿಸಿಆರ್ ಪರೀಕ್ಷೆಯನ್ನೂ ಮಾಡಲಾಗುತ್ತಿತ್ತು. ಹೀಗೆ ಮಾಡಿದ್ದರಿಂದ ಅವರಲ್ಲಿ ಪ್ರತಿಕಾಯ ಇದೆಯೇ ಎಂಬುದನ್ನೂ ಪತ್ತೆಹಚ್ಚಲು ಸಾಧ್ಯವಾಗುತ್ತಿತ್ತು ಮತ್ತು ಅವರಿಗೆ ಮತ್ತೆ ಸೋಂಕು ತಗುಲಿದೆಯೇ ಎಂಬುದನ್ನೂ ಪತ್ತೆಹಚ್ಚಲು ಸಾಧ್ಯವಾಗುತ್ತಿತ್ತು ಎಂದು ಅಧ್ಯಯನ ವರದಿಯಲ್ಲಿ ವಿವರಿಸಲಾಗಿದೆ.

ಈ ಅಧ್ಯಯನಕ್ಕೆ ಒಳಪಟ್ಟವರಲ್ಲಿ 634 ಮಂದಿ, ಈ ಹಿಂದೆ ಕೋವಿಡ್‌ಗೆ ಒಳಗಾಗಿದ್ದರು ಎಂಬುದು ಅವರ ಪ್ರತಿಕಾಯ ಪರೀಕ್ಷೆಯಲ್ಲಿ ಪತ್ತೆಯಾಗಿತ್ತು. ಇವರಲ್ಲಿ ವೃದ್ಧಾಶ್ರಮದ ನಾಲ್ವರು ನಿವಾಸಿಗಳಿಗೆ ಮತ್ತು 10 ಸಿಬ್ಬಂದಿಗೆ ಮಾತ್ರವೇ ಮತ್ತೆ ಕೋವಿಡ್ ತಗುಲಿತು. 1,477 ಮಂದಿ ಈ ಹಿಂದೆ ಕೋವಿಡ್‌ಗೆ ಒಳಗಾಗಿಲ್ಲ ಎಂಬುದು ಅವರ ಪ್ರತಿಕಾಯ ಪರೀಕ್ಷೆಯಲ್ಲಿ ಪತ್ತೆಯಾಗಿತ್ತು. ಇವರಲ್ಲಿ ವೃದ್ಧಾಶ್ರಮದ 93 ನಿವಾಸಿಗಳಿಗೆ ಮತ್ತು 111 ಸಿಬ್ಬಂದಿಗೆ ಕೋವಿಡ್ ಮತ್ತೆ ತಗುಲಿತ್ತು ಎಂದು ಅಧ್ಯಯನ ವರದಿಯ ದತ್ತಾಂಶಗಳು ಹೇಳುತ್ತವೆ.

ಕೋವಿಡ್ ತಗಲಿದವರಲ್ಲಿ ಸಹಜವಾಗಿಯೇ ಪ್ರತಿಕಾಯ ವಿಕಾಸವಾಗಿರುತ್ತದೆ. ಈ ಅಂಶವನ್ನು ಆಧಾರವಾಗಿ ಇರಿಸಿಕೊಂಡು, ಕೋವಿಡ್ ಲಸಿಕೆ ಕಾರ್ಯಕ್ರಮಗಳನ್ನು ಯೋಜಿಸಬಹುದು ಎಂದು ವರದಿಯಲ್ಲಿ ಶಿಫಾರಸು ಮಾಡಲಾಗಿದೆ.

ಡೊಮಿನಿಕಾದಲ್ಲೇ ಉಳಿದ ಚೋಕ್ಸಿ

ಮೆಹುಲ್ ಚೋಕ್ಸಿ

ನವದೆಹಲಿ (ಪಿಟಿಐ): ಬಹುಕೋಟಿ ಹಗರಣದ ಆರೋಪಿ, ವಜ್ರ ಉದ್ಯಮಿ ಮೆಹುಲ್ ಚೋಕ್ಸಿಯನ್ನು ಕರೆತರಲು ಭಾರತ ಸರ್ಕಾರ ಕೆರಿಬಿಯನ್ ರಾಷ್ಟ್ರಕ್ಕೆ ಕಳುಹಿಸಿದ್ದ ಕತಾರ್ ಏರ್ ವೇಸ್‌ನ ಖಾಸಗಿ ವಿಮಾನ ಏಳು ದಿನಗಳ ನಂತರ ಭಾರತದತ್ತ ಹೊರಟಿದೆ.

ಡೊಮಿನಿಕಾ ಹೈಕೋರ್ಟ್ ಹೇಬಿಯಸ್ ಕಾರ್ಪಸ್ ಅರ್ಜಿಯ ವಿಚಾರಣೆ ಮುಂದೂಡಿದ್ದು, ಇನ್ನು 1 ತಿಂಗಳು ಚೋಕ್ಸಿ ಡೊಮಿನಿಕಾದಲ್ಲೇ ಉಳಿಯಬೇಕಾಗಿ ಬರಲಿದೆ. ಸಿಬಿಐ ಡಿಐಜಿ ಶ್ರದ್ಧಾ ರಾವುತ್ ನೇತೃತ್ವದ ತನಿಖಾ ತಂಡ ಬರಿಗೈಯಲ್ಲಿ ವಾಪಸಾಗುವಂತಾಗಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಭವಿಷ್ಯ
Astrology

★ಅಂಭಭವಾನಿ ಜ್ಯೋತಿಷ್ಯಾಲಯ★ ಕೊಳ್ಳೆಗಾಲದ ನಂ.1 ವಶೀಕರಣ ಸ್ಪೆಷಲಿಸ್ಟ್ ದೇವಿಪ್ರಸಾದ್ (ಉಚಿತ ಭವಿಷ್ಯ ಖಚಿತ ಪರಿಹಾರ)ನಿಮ್ಮ ಸಮಸ್ಯೆಗಳೇನೆಯಿರಲಿ 2ದಿನದಲ್ಲಿ ಪರಿಹಾರ. 9886755306

★ವಶೀಕರಣ ಸ್ಪೆಷಲಿಸ್ಟ್ ಗುರೂಜಿ. 9663631199★ ಓಂ ಶ್ರೀ ದುರ್ಗಾದೇವಿ ಅನುಗ್ರಹ ಜ್ಯೋತಿಷ್ಯಾಲಯ ಕಟೀಲು ದುರ್ಗಾಪರಮೇಶ್ವರಿ ಅಮ್ಮನವರ ಆರಾಧಕರು. ಪಂಡಿತ್ ಮೋಹನ್ ದಾಸ್ ಶರ್ಮ ಗುರೂಜಿ (ಉಡುಪಿ) ನಿಮ್ಮ ಕುಟುಂಬದ ಸಮಸ್ಯೆಗಳಾದ ನಿಮ್ಮ ಮಕ್ಕಳ ವಿದ್ಯಾಭ್ಯಾಸದಲ್ಲಿ ಬುದ್ಧಿ ಜ್ಞಾನಶಕ್ತಿ ಆರೋಗ್ಯ ಸಮಸ್ಯೆ ತೊಂದರೆ ಇದ್ದರೆ, ನಿಮ್ಮ ಗಂಡ ಪರಸ್ತ್ರೀಯಿಂದ ನಿಮ್ಮ ಸಂಸಾರದಲ್ಲಿತೊಂದರೆ, ನಿಮ್ಮ ಅತ್ತೆ, ಸೊಸೆ, ನಾದಿನಿಯಿಂದ ನಿಮ್ಮ ಸಂಸಾರದಲ್ಲಿ ತೊಂದರೆ ಆಗುತ್ತಿದೆಯೇ? ಪ್ರೀತಿಯಲ್ಲಿ ನಂಬಿ ಮೋಸ ಹೋಗಿದ್ದೀರಾ, ನೀವು ಇಷ್ಟಪಟ್ಟಂತಹ ಸ್ತ್ರೀ/ಪುರುಷ ನಿಮ್ಮಂತೆ ವಶೀಕರಣ ಆಗಲು ನಿಮ್ಮ ಜನ್ಮಲಗ್ನದಲ್ಲಿ ಮದುವೆ ವಿಚಾರದಲ್ಲಿ ಕಂಕಣ ತೊಂದರೆ ಆಗುತ್ತಿದ್ದರೆ,ಗಂಡಹೆಂಡತಿ ಕಿರಿಕಿರಿ ಇಂದ ಡೈವರ್ಸ್ ಪ್ರಾಬ್ಲಮ್ ಇರುವುದರಿಂದ ನಿಮ್ಮ ಸಂಸಾರ ಹಾಳಾಗುತ್ತಿದೆ, ಅಣ್ಣ- ತಮ್ಮಂದಿರ ಆಸ್ತಿಯಲ್ಲಿ ತೊಂದರೆ, ಶತ್ರುಗಳಿಂದ ನಿಮ್ಮ ಕುಟುಂಬಕ್ಕೆ ತೊಂದರೆ,ನಿಮ್ಮ ಕುಟುಂಬದಲ್ಲಿ ಮಾಟ ಮಂತ್ರ ಪ್ರಯೋಗದಿಂದ ನಿಮ್ಮ ಕುಟುಂಬ ಸರ್ವನಾಶ ಆಗುತ್ತಿದೆ, ನಿಮ್ಮ ಎಲ್ಲಾ ಕಠಿಣ ಸಮಸ್ಯೆಗಳಿಗೂ ತಾಯಿ ಕೇರಳ ಭಗವತಿ ದೇವಿ ಮತ್ತು ಕಟೀಲು ದುರ್ಗಾಪರಮೇಶ್ವರಿದೇವಿ ಅಮ್ಮನವರ ಪೂಜಾ ಶಕ್ತಿಯಿಂದ ಅಮಾವಾಸ್ಯೆ ಹುಣ್ಣಿಮೆ ಸೂರ್ಯಚಂದ್ರ ಗ್ರಹಣದಿಂದ ಜಪ ಸಿದ್ಧಿಗಳಿಂದ ಕೇವಲ ೧ದಿನದಲ್ಲಿ ೧೦೦% ಶಾಶ್ವತ ಪರಿಹಾರ ಮಾಡುತ್ತಾರೆ. ಮಲ್ಲೇಶ್ವರಂ, ಬೆಂಗಳೂರು

ಉದ್ಯೋಗಾವಕಾಶ
Part-Time Jobs

ಲಾಕ್-ಡೌನ್ ಸಮಯದಲ್ಲಿ ಸುವರ್ಣಾವಕಾಶ ಮನೆಯಿಂದಲೇ ಕುಳಿತು ಫಾರಂನಲ್ಲಿ ಅಂಕಿಗಳು ತುಂಬುವ ಮೂಲಕ,ಗಳಿಸಿ 15,000-25,000/-. ಕೊರಿಯರ್ ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ.9108059956, 9901929956

ಶಿಕ್ಷಣ
Colleges

ಪ್ರತಿಭಾವಂತಹ ಬಡ ಹೆಣ್ಣು ಮಕ್ಕಳಿಗೆ PUC, B.Com, MBA, ವಾಣಿಜ್ಯ ವಿದ್ಯಾಭ್ಯಾಸ. ಉಚಿತ ಊಟ ವಸತಿಯೊಂದಿಗೆ. ನೆಮ್ಮದಿಮನೆ ಫೌಂಡೇಶನ್. 9341494200

ವ್ಯಾಪಾರ
Business to Business
Finance

ಮುದ್ರಾ ಯೋಜನೆಯಲ್ಲಿ ಕೃಷಿ, ಸ್ಥಿರಾಸ್ತಿ, ವೈಯಕ್ತಿಕ, ಬಿಸಿನೆಸ್, ವಿದ್ಯಾ, ವಾಹನ ಸಾಲ 4% ವಾರ್ಷಿಕ ಬಡ್ಡಿಯಲ್ಲಿ ಸಾಲ ಲಭ್ಯ 9172930942, 9449896870

ರಿಯಲ್ ಎಸ್ಟೇಟ್ ಸೆಲ್ಲಿಂಗ್
General

BANGALORE NANDINI Layout, Near Mahalakshmi Layout 610 sft,1 BHK, Wardrobes centrally located Good Residential Area Contact: 7200831098. Broker Excuse

DH ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP TO BOOK YOUR CLASSIFIEDS ADS ONLINE
condition apply*
5 Easy steps to book your ads
1 LOG INTO WWW.DHCLASSIFIEDS.COM
2 CHOOSE THE CATEGORY
3 CHOOSE THE AD DATES
4 COMPOSE THE MATTER
5 CONFIRM AND PAY
REAL ESTATE JOB NOTICE NAME CHANGE ANY OTHER CATEGORY
WWW.DHCLASSIFIEDS.COM
9880856233
9886213331
E-mail: dhclassified@deccanherald.co.in

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ

10.08.1937 27.05.2021
ಶ್ರೀ ಕೆ ಮುನಿಯಪ್ಪ
Senior Scientific Officer (Retd)
Dept. of Atomic Energy (BARC)
ಇವರು ದಿನಾಂಕ 27.05.2021 ಗುರುವಾರ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ವೈಕುಂಠ ಸಮಾರಾಧನೆಯನ್ನು ದಿನಾಂಕ 06.06.2021 ಭಾನುವಾರ ಬೆಳಿಗ್ಗೆ 10:30 ರಿಂದ 11:30 ಘಂಟೆಯವರೆಗೆ ಮೃತರ ಸ್ವಗೃಹದಲ್ಲಿ ನಡೆಸಲು ನಿಶ್ಚಯಿಸಲಾಗಿದೆ.
ಇಂತಿ ದುಃಖತಪ್ತರು : ಶ್ರೀಮತಿ ವಿಜಯಲಕ್ಷ್ಮಿ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಸ್ನೇಹಿತರು ಮತ್ತು ಬಂಧು–ಮಿತ್ರರು.

ನಮ್ಮ ನಾಯಕ ಮತ್ತು ಚೈತನ್ಯದ ಚಿಲುಮೆ, ತನ್ನ ಆಳೆತ್ತರಕ್ಕೂ ಬೆಳೆದು ನಿಂತ ವ್ಯಕ್ತಿ. ಉತ್ತಮ ಕಾಯಕ ಮುಂದುವರೆಸುವಲ್ಲಿ ಅವರ ಮೌಲ್ಯಗಳೇ ನಮಗೆ ಉತ್ತೇಜನ. ಇನ್ನು ಮುಂದೆಯೂ ನೀವು ನಮ್ಮ ಹೃದಯ ಮತ್ತು ನೆನಪುಗಳಲ್ಲಿ ಶಾಶ್ವತವಾಗಿ ನೆಲೆಸಿರುವಿರಿ.

22-07-67 to 25 - 05 - 2021
ವಿ ನಾರಾಯಣ ಸ್ವಾಮಿ
ಸಂಸ್ಥಾಪಕರು, ನೈನ್‌ರಿಚ್ ಇನ್ಫೋಟೆಕ್
ಹೆಚ್‌ಆರ್‌ಬಿಆರ್ ಬಡಾವಣೆ, ಬಾಣಸವಾಡಿ, ಬೆಂಗಳೂರು–560 043.
ಸವಿ ನೆನಪಿನಲ್ಲಿರುವ
ಪುಷ್ಪಾ, ಮೋಹನ್, ಶ್ವೇತಾ, ರವೀಂದ್ರ ಮತ್ತು ಕುಟುಂಬ ಸದಸ್ಯರು, ಯಲಹಂಕ ಮತ್ತು ನೈನ್‌ರಿಚ್ ಇನ್ಫೋಟೆಕ್ ಸಿಬ್ಬಂದಿ.

ಜೀವನದಲ್ಲಿ ನೀವು ನಿರ್ವಹಿಸಿದ ಮೌಲ್ಯಗಳನ್ನು ನಾವು ಸದಾಕಾಲ ಅನುಸರಿಸುತ್ತೇವೆ.

25 - 05 - 2021
ಎಂ.ಎನ್.ರಾಜಣ್ಣ ರವರು
ಗ್ರಾಮ ಪಂಚಾಯಿತಿ ಸದಸ್ಯರು, ಕಂಗಾನಹಳ್ಳಿ, ಮುದ್ದೇನಹಳ್ಳಿ ಹತ್ತಿರ, ಚಿಕ್ಕಬಳ್ಳಾಪುರ ಜಿಲ್ಲೆ.
ಜ್ಞಾನದ ಚಿಲುಮೆ, ಉತ್ತೇಜನದ ಗಣಿ ಮತ್ತು ಪ್ರೋತ್ಸಾಹದ ಕಾರಂಜಿಯಾಗಿದ್ದ ಇವರು ತಮ್ಮ ಜೀವನದ ಗೌರವ ಮತ್ತು ಮೌಲ್ಯಗಳ ಅನುಭವಗಳನ್ನು ನಮ್ಮೆಲ್ಲರ ಉಪಜೀವನಕ್ಕೆ ಕೊಡುಗೆಯಾಗಿ ನೀಡಿ ಅಗಲಿದ್ದಾರೆ.
ಸವಿನೆನಪಿನಲ್ಲಿರುವ ದುಃಖತಪ್ತರು
ಪುಷ್ಪಾ, ನಿರ್ಮಲಾ, ಮೋಹನ್ ಮತ್ತು ಶ್ವೇತಾ ಹಾಗೂ ಕುಟುಂಬ ಸದಸ್ಯರು, ಯಲಹಂಕ.

ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ

ಶ್ರೀ ರಾಜೇಗೌಡರು
ಕುರುಬರ ಸಂಘದ ಮುಖಂಡರು ಮತ್ತು ಸಾಮಾಜಿಕ ಕಾರ್ಯಕರ್ತರು.
ಸ್ಥಳ : ಕೊತೆಗಾಲ, ಸರಗೂರ್, ಹೆಚ್.ಡಿ ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ
ಆತ್ಮೀಯರೇ,
ನನ್ನ ಪೂಜ್ಯ ಪತಿಯವರಾದ ರಾಜೇಗೌಡನವರು ದಿನಾಂಕ 27.05.2021 ಗುರುವಾರ ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ವೈಕುಂಠ ಸಮಾರಾಧನೆಯನ್ನು ದಿನಾಂಕ : 06.06.2021ರ ಭಾನುವಾರ ಮಧ್ಯಾಹ್ನ 2.00 ಗಂಟೆಗೆ ಸ್ವಗೃಹದಲ್ಲಿ ನೆರವೇರಿಸಲಾಗುವುದು ಕಾರಣ ತಾವು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು
ಶ್ರೀಮತಿ. ಸುನಂದ, ಮಕ್ಕಳು ಹಾಗೂ ಬಂಧು –ಮಿತ್ರರು.

FOR CLASSIFIED ADVERTISEMENTS
EDUCATION
Contact:
Santhosh : 9880856233
Vishal : 9845114560
Ravi : 9606912256

ಮೂರನೇ ವರ್ಷದ ಪುಣ್ಯಸ್ಮರಣೆ

ಶ್ರೀಯುತ ಮುನಿಸ್ವಾಮಿರವರು
ಜನನ: 29–03–1941 – ನಿಧನ: 05–06–2018
ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷವಾಯಿತು. ನಿಮ್ಮ ಇರುವಿಕೆಯ ನೆನಪಿನ ನಿಶ್ಯಬ್ದದ ಕಣ್ಣೀರಿನ ಹನಿಯಲ್ಲಿ ನಿಮ್ಮ ಸ್ವರ್ಗೀಯ ನೆನಪು ಸದಾ ವಸಂತ, ನಿಮ್ಮ ದಿವ್ಯ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲೆಂದು ಸ್ಮರಿಸುವ
ಶ್ರೀಮತಿ ಲಕ್ಷ್ಮೀಬಾಯಿ ಎಲ್. ಶ್ರೀಮತಿ ಸುನೀತ, ಶ್ರೀ ಬಸವರಾಜು, ಶ್ರೀಮತಿ ಲಲಿತ ಮತ್ತು ಕುಟುಂಬದವರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Tanveer : 9886213331
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ scan the QR code ಸ್ಕ್ಯಾನ್ ಮಾಡಿ ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ನಟಿ ಜೂಹಿಗೆ ₹20 ಲಕ್ಷ ದಂಡ ವಿಧಿಸಿದ ದೆಹಲಿ ಹೈಕೋರ್ಟ್ !

ನವದೆಹಲಿ (ಪಿಟಿಐ): ನಟಿ ಜೂಹಿ ಚಾವ್ಲಾ ಅವರು, ದೇಶದಲ್ಲಿ 5ಜಿ ನೆಟ್‌ವರ್ಕ್ ಅಳವಡಿಸಬಾರದು. ಈ ನಿಟ್ಟಿನಲ್ಲಿ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಸಲ್ಲಿಸಿದ್ದ ಅರ್ಜಿಯನ್ನು ದೆಹಲಿ ಹೈಕೋರ್ಟ್ ಶುಕ್ರವಾರ ವಜಾಗೊಳಿಸಿದೆ.

ಅಲ್ಲದೇ ನ್ಯಾಯಾಲಯ ಚಾವ್ಲಾ ಅವರಿಗೆ ₹20 ಲಕ್ಷ ದಂಡ ವಿಧಿಸಿ ಆದೇಶಿಸಿದೆ. 'ಈ ಅರ್ಜಿ ದೋಷಯುಕ್ತವಾಗಿದೆ. ಮಾಧ್ಯಮಗಳಲ್ಲಿ ಪ್ರಚಾರ ಪಡೆಯಬೇಕು ಎಂಬ ಉದ್ದೇಶ ಹೊಂದಿದೆ. ನ್ಯಾಯಾಲಯದ ಸಮಯ ವ್ಯರ್ಥ ಮಾಡಿದ್ದಕ್ಕೆ ದಂಡ ವಿಧಿಸಲಾಗಿದೆ' ಎಂದು ನ್ಯಾಯಮೂರ್ತಿ ಜೆ.ಆರ್. ಮಿಧಾ ಹೇಳಿದ್ದಾರೆ.

ಸಿಬಿಎಸ್‌ಇ: ಮೌಲ್ಯಮಾಪನ ಮಾನದಂಡ ನಿರ್ಧರಿಸಲು ಸಮಿತಿ ರಚನೆ

ನವದೆಹಲಿ: 12ನೇ ತರಗತಿಯ ಪರೀಕ್ಷೆಗಳು ರದ್ದಾಗಿರುವ ಕಾರಣ ವಿದ್ಯಾರ್ಥಿಗಳ ಮೌಲ್ಯಮಾಪನಕ್ಕೆ ಮಾನದಂಡಗಳನ್ನು ರೂಪಿಸಲು ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯು (ಸಿಬಿಎಸ್‌ಇ) 13 ಸದಸ್ಯರ ಸಮಿತಿಯನ್ನು ರಚಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶಿಕ್ಷಣ ಸಚಿವಾಲಯ, ವಿಶ್ವವಿದ್ಯಾನಿಲಯ ಅನುದಾನ ಆಯೋಗ ಮತ್ತು ಸಿಬಿಎಸ್‌ಇಯ ಅಧಿಕಾರಿಗಳು ಹಾಗೂ ಶಾಲೆಗಳ ಪ್ರತಿನಿಧಿಗಳನ್ನು ಸಮಿತಿ ಒಳಗೊಂಡಿದೆ. ಈ ಸಮಿತಿ ಮೌಲ್ಯಮಾಪನದ ಮಾನದಂಡವನ್ನು ನಿರ್ಧರಿಸಿ 10 ದಿನಗಳ ಒಳಗೆ ವರದಿ ನೀಡಲಿದೆ ಎನ್ನಲಾಗಿದೆ.

ಕೋವಿಡ್–19 ಸಾಂಕ್ರಾಮಿಕದ ಕಾರಣ ಜೂನ್ 1ರಂದು ಸಿಬಿಎಸ್‌ಇ 12ನೇ ತರಗತಿ ಪರೀಕ್ಷೆಗಳನ್ನು ರದ್ದುಗೊಳಿಸಿತ್ತು. ಅದರ ಬೆನ್ನಲ್ಲೇ, ಐಎಸ್‌ಸಿಇ ಕೂಡ 12ನೇ ತರಗತಿ ಪರೀಕ್ಷೆಗಳನ್ನು ರದ್ದುಗೊಳಿಸಿತು. ರಾಷ್ಟ್ರೀಯ ಮುಕ್ತ ಶಿಕ್ಷಣ ಸಂಸ್ಥೆ (ಎನ್‌ಐಒಎಸ್) ಕೂಡಾ 12ನೇ ತರಗತಿ ಪರೀಕ್ಷೆ ರದ್ದುಗೊಳಿಸಿದೆ. ವಸ್ತುನಿಷ್ಠವಾದ ಮಾನದಂಡಗಳ ಆಧಾರದ ಮೇಲೆ 12ನೇ ತರಗತಿಯ ವಿದ್ಯಾರ್ಥಿಗಳ ಮೌಲ್ಯಮಾಪನ ಮಾಡಲಾಗುತ್ತದೆ ಎಂದು ಕೇಂದ್ರ ಶಿಕ್ಷಣ ಸಚಿವ ರಮೇಶ್ ಪೋಖ್ರಿಯಾಲ್ ನಿಶಾಂಕ್ ಹೇಳಿದ್ದಾರೆ.

ಕೋವಿಡ್: ಸಿಂಹಿಣಿ ಸಾವು

ಚೆನ್ನೈ: ನಗರದ ಹೊರವಲಯದಲ್ಲಿರುವ ಅರೈಗನಾರ್ ಅಣ್ಣಾ ವನ್ಯಮೃಗಗಳ ಉದ್ಯಾನದಲ್ಲಿರುವ ಒಂಬತ್ತು ವರ್ಷ ವಯಸ್ಸಿನ ಸಿಂಹಿಣಿಯೊಂದು ಮೃತಪಟ್ಟಿದ್ದು, ಅದು ಕೋವಿಡ್–19ನಿಂದ ಸತ್ತಿರಬಹುದು ಎಂದು ಶಂಕಿಸಲಾಗಿದೆ. ಇಲ್ಲಿನ ಇನ್ನೂ ಎಂಟು ಸಿಂಹಗಳಲ್ಲಿ ಕೊರೊನಾ ಸೋಂಕು ದೃಢಪಟ್ಟಿದೆ.

ಸೋಂಕು ದೃಢಪಟ್ಟ ಎಲ್ಲಾ ಸಿಂಹಗಳಿಗೆ ಚಿಕಿತ್ಸೆ ಆರಂಭಿಸಲಾಗಿದೆ. ಮೂರು ಸಿಂಹಗಳ ಸ್ಥಿತಿ ಗಂಭೀರವಾಗಿದೆ. ಇವುಗಳಿಗೆ ಸೋಂಕು ಎಲ್ಲಿಂದ ತಗುಲಿತು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಸಫಾರಿ ವಿಭಾಗದಲ್ಲಿದ್ದ ನೀಲಾ ಎಂಬ ಹೆಸರಿನ ಸಿಂಹಿಣಿಯು ಗುರುವಾರ (ಜೂನ್ 3) ಸಂಜೆ 6.15ಕ್ಕೆ ಮೃತಪಟ್ಟಿತ್ತು. ಇದರಲ್ಲಿ ಸೋಂಕಿನ ಲಕ್ಷಣಗಳಿರಲಿಲ್ಲ. ಸಾಯುವ ಹಿಂದಿನ ದಿನ ಅದರ ಮೂಗಿನಿಂದ ದ್ರವ ಸುರಿಯುವುದು ಕಾಣಿಸಿತ್ತು. ಕೂಡಲೇ ಅದಕ್ಕೆ ಚಿಕಿತ್ಸೆ ಆರಂಭಿಸಲಾಗಿತ್ತು ಎಂದು ಉದ್ಯಾನದ ಅಧಿಕಾರಿಗಳು ತಿಳಿಸಿದ್ದಾರೆ.

ಶಂಕಿತ ಗೋ ಸಾಗಣೆದಾರರ ಮೇಲೆ ದಾಳಿ; ಓರ್ವನ ಹತ್ಯೆ

ಪ್ರಜಾವಾಣಿ ವಾರ್ತೆ

ಮಥುರಾ: ಸ್ವಘೋಷಿತ ಗೋರಕ್ಷಕರ ತಂಡವೊಂದು ಶಂಕಿತ ಗೋ ಕಳ್ಳಸಾಗಣೆದಾರರ ಮೇಲೆ ದಾಳಿ ಮಾಡಿ ಥಳಿಸಿದ್ದು ಒಬ್ಬ ವ್ಯಕ್ತಿ ಮೃತಪಟ್ಟಿದ್ದಾರೆ, ಮೂವರು ಗಾಯಗೊಂಡಿದ್ದಾರೆ. ಇದು ಉತ್ತರ ಪ್ರದೇಶದ ಮಥುರಾದಲ್ಲಿ ಶುಕ್ರವಾರ ನಡೆದಿದೆ.

ಕಳ್ಳರು ಹತ್ರಾಸ್‌ನಿಂದ ಜಾನುವಾರುಗಳನ್ನು ಕದ್ದು ಹರಿಯಾಣಕ್ಕೆ ಸಾಗಿಸುತ್ತಿದ್ದರು. ಈ ವೇಳೆ ಸುಮೊರ ಎಂಬ ಗ್ರಾಮದ ಬಳಿ ಸ್ವಘೋಷಿತ ಬಾಬಾ ಚಂದ್ರಶೇಖರ್ ನೇತೃತ್ವದಲ್ಲಿ ಗೋರಕ್ಷಕರ ತಂಡ ಮತ್ತು ಸ್ಥಳೀಯರ ಗುಂಪು ಅವರ ಮೇಲೆ ದಾಳಿ ನಡೆಸಿತು ಎಂದು ಮೂಲಗಳು ತಿಳಿಸಿವೆ.

ಜಿಲ್ಲೆಯ ಆಸ್ಪತ್ರೆಗಳಲ್ಲಿ ಬೆಟ್ಟದಷ್ಟು ಸಮಸ್ಯೆ

ಜಿಲ್ಲೆಯ ಬಹುತೇಕ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆ ಕೊರತೆ

● ಕೆ.ಜೆ. ಮರಿಯಪ್ಪ

ತುಮಕೂರು: ಗುಬ್ಬಿ ಆಸ್ಪತ್ರೆಯಲ್ಲಿ ಯುಪಿಎಸ್ ಹಾಳಾಗಿದ್ದರೂ ಒಂದು ವಾರ ದುರಸ್ತಿ ಮಾಡಿಸಲಿಲ್ಲ. ಈ ಅವಧಿಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದ ಕೊರೊನಾ ಸೋಂಕಿತರಿಗೆ ಆಮ್ಲಜನಕ ಪೂರೈಕೆಯಾಗದೆ ಸಾಕಷ್ಟು ಜನರ ಉಸಿರು ನಿಂತಿತು. ಕೊನೆಗೂ ದುರಸ್ತಿ ಮಾಡಿಸಿದರೂ, ಆಗಾಗ ಕೈಕೊಡುತ್ತಿರುವುದು ಮುಂದುವರಿದಿದೇ ಇದೆ. ಕತ್ತಲೆಯಲ್ಲಿ ಪರದಾಡುವುದು ಮಾತ್ರ ರೋಗಗಳಿಗೆ ತಪ್ಪಿಲ್ಲ.

ಜಿಲ್ಲಾ ಕೇಂದ್ರಕ್ಕೆ ಸಮೀಪದಲ್ಲಿರುವ ಈ ತಾಲ್ಲೂಕು ಕೇಂದ್ರದ ಆಸ್ಪತ್ರೆಯ ಸ್ಥಿತಿಯೇ ಈ ರೀತಿಯಾದರೆ ಉಳಿದ ಕಡೆಗಳಲ್ಲಿ ಕೇಳುವಂತಿಲ್ಲ. ಹೆಸರಿಗೆ ತಾಲ್ಲೂಕು ಆಸ್ಪತ್ರೆ. ಆದರೆ ಚಿಕಿತ್ಸೆ ಮರೀಚಿಕೆ. ಕೋವಿಡ್ ಸೆಂಟರ್‌ನಲ್ಲಿ ಚಿಕಿತ್ಸೆ ನೀಡಲು ವೈದ್ಯರ ಕೊರತೆ ಕಾಡುತ್ತಿದೆ. ಕೆಲವೊಮ್ಮೆ ನರ್ಸ್‌ಗಳು ಸಹ ಇರುವುದಿಲ್ಲ. ರಾತ್ರಿ 12 ಗಂಟೆ ನಂತರ ಆಮ್ಲಜನಕ ಪೂರೈಕೆ ಸ್ಥಗಿತಗೊಳಿಸಲಾಗುತ್ತದೆ. ಕುಡಿಯುವ ನೀರು ಸಿಗುವುದಿಲ್ಲ. ಶೌಚಾಲಯದಲ್ಲಿ ದುರ್ವಾಸನೆ. ಈ ಬಗ್ಗೆ ವೈದ್ಯರನ್ನು ಪ್ರಶ್ನಿಸಿದರೆ 'ನೋಡುತ್ತೇವೆ' ಎನ್ನುತ್ತಾರೆ. ಯಾರ ಬಳಿಯೂ ಸ್ಪಷ್ಟ ಉತ್ತರ ಇಲ್ಲ.

ಇರುವ ಆಂಬುಲೆನ್ಸ್‌ಗಳು ಸರಿಯಾಗಿ ಬಳಕೆಯಾಗುತ್ತಿಲ್ಲ. ಕೊರೊನಾ ಸೋಂಕಿತರನ್ನು ಕರೆತರಲು, ಮೃತಪಟ್ಟವರನ್ನು ಸಾಗಿಸಲು ಕೊಡುವುದಿಲ್ಲ. ಮೃತರ ಶವ ಸಾಗಿಸಲು ಖಾಸಗಿಯವರಿಗೆ ₹12 ಸಾವಿರ ಕೊಡಬೇಕಾಯಿತು ಎಂದು ರೋಗಿಯೊಬ್ಬರ ಸಂಬಂಧಿ ಮಹೇಶ್ ದೂರಿದರು.

ಸೌಲಭ್ಯ ಬಳಕೆಯಾಗುತ್ತಿಲ್ಲ: ಎಂ.ಎನ್.ಕೋಟೆ ಸಮುದಾಯ ಆರೋಗ್ಯ ಕೇಂದ್ರಕ್ಕೆ ತಾಲ್ಲೂಕು ಆಸ್ಪತ್ರೆಗೆ ಸರಿಸಮಾನವಾಗಿ ಸೌಕರ್ಯ ಕಲ್ಪಿಸಲಾಗಿದೆ. 5 ಮಂದಿ ವೈದ್ಯರು, ಇತರೆ ಸಿಬ್ಬಂದಿ ಇದ್ದಾರೆ. 30 ಹಾಸಿಗೆಗಳ ಸೌಲಭ್ಯವಿದ್ದು, ಅದರಲ್ಲಿ 24 ಹಾಸಿಗೆಗೆ ಆಮ್ಲಜನಕ ಸಂಪರ್ಕ ಕಲ್ಪಿಸಲಾಗಿದೆ. ಆಮ್ಲಜನಕ ಸರಬರಾಜು ಮಾಡಿಲ್ಲ. ಇರುವ ಸೌಲಭ್ಯ ಬಳಕೆಯಾಗುತ್ತಿಲ್ಲ. ಆಸ್ಪತ್ರೆಗೆ ಭೇಟಿ ನೀಡಿದ ಸಮಯದಲ್ಲಿ ಸಿಬ್ಬಂದಿ ಬಿಟ್ಟರೆ ಐವರಲ್ಲಿ ಒಬ್ಬ ವೈದ್ಯರೂ ಇರಲಿಲ್ಲ!

'ಶಿರಾ ಕೋವಿಡ್ ಆಸ್ಪತ್ರೆಯಲ್ಲಿ ರಾತ್ರಿ 10 ಗಂಟೆ ನಂತರ ಸಿಬ್ಬಂದಿ ಇರುವುದಿಲ್ಲ. 50 ಹಾಸಿಗೆಗೆ ಸರಬರಾಜು ಮಾಡಬೇಕಿದ್ದ ಆಮ್ಲಜನಕವನ್ನು 88 ಹಾಸಿಗೆಗಳಿಗೆ ನೀಡಲಾಗುತ್ತಿದೆ. ತೀವ್ರ ಉಸಿರಾಟದ ಸಮಸ್ಯೆಗೆ ಸಿಲುಕಿದವರು ಆಮ್ಲಜನಕ ಸಿಗದೆ ಸಾವನ್ನಪ್ಪುತ್ತಿದ್ದಾರೆ. ಸಿಬ್ಬಂದಿ ಕೊರತೆ ತೀವ್ರವಾಗಿ ಕಾಡುತ್ತಿದೆ. ಗ್ರಾಮೀಣ ಭಾಗದಲ್ಲಿ ಕೋವಿಡ್ ಆರೈಕೆ ಕೇಂದ್ರ ತೆರೆದಿಲ್ಲ' ಎನ್ನುತ್ತಾರೆ ದೊಡ್ಡಬಾಣಗೆರೆ ಗ್ರಾಮದ ದಯಾನಂದಗೌಡ.

ಒಂದು ಲೋಟ ನೀರೂ ಸಿಗಲ್ಲ: 'ಕೊರಟಗೆರೆ ಆಸ್ಪತ್ರೆಯ ಅವ್ಯವಸ್ಥೆ ಕೇಳುವಂತಿಲ್ಲ. ಹಾಸಿಗೆ ಮೇಲೆ ವಿಲವಿಲ ಒದ್ದಾಡುತ್ತಿದ್ದರೂ ಕುಡಿಯಲು ಒಂದು ಲೋಟ ಕೂಡ ನೀರು ಕೊಡುವುದಿಲ್ಲ. ಕೆಎಸ್ಆರ್‌ಟಿಸಿಯಲ್ಲಿ ಚಾಲಕರಾಗಿದ್ದ ನಮ್ಮ ತಂದೆಯನ್ನು ಕೋವಿಡ್ ಚಿಕಿತ್ಸೆಗೆ ಸೇರಿಸಲಾಗಿತ್ತು. ರೆಮ್‌ಡಿಸಿವಿರ್ ಚುಚ್ಚುಮದ್ದು ನೀಡಲು ₹5 ಸಾವಿರ ಹಣ ಕೇಳಿದರು. ತಕ್ಷಣಕ್ಕೆ ಇರಲಿಲ್ಲ. ಹಣ ಹೊಂದಿಸಿಕೊಂಡು ಸಂಜೆ ಬಂದೆ. ಬೆಳಿಗ್ಗೆ ಚುಚ್ಚುಮದ್ದು ನೀಡಲಾಗುವುದು ಎಂದರು. ರಾತ್ರಿಯೇ ತಂದೆ ಸಾವನ್ನಪ್ಪಿದರು' ಎಂದು ಹೇಳುತ್ತಲೇ ಕಿರಣ್ ಕುಮಾರ್ ಕಣ್ಣೀರಾದರು.

ಪಾವಗಡ ಕೋವಿಡ್ ಕೇಂದ್ರದಲ್ಲಿ ಮೂಲ ಸೌಕರ್ಯಗಳಿಲ್ಲ. ತಿರುಮಣಿ ಆರೋಗ್ಯ ಕೇಂದ್ರದಲ್ಲಿ ಆಮ್ಲಜನಕದ ಪೈಪ್‌ಲೈನ್ ಅಳವಡಿಸಿದ್ದರೂ ಆಮ್ಲಜನಕ ಬೆಡ್ ಆರಂಭಿಸಿಲ್ಲ. ಚಿಕಿತ್ಸೆಗೆ 30 ಕಿ.ಮೀ ದೂರದ ಪಾವಗಡಕ್ಕೆ ಹೋಗಬೇಕು. ಅಲ್ಲೂ ಹಾಸಿಗೆ ಸಿಗುವುದು ಅನುಮಾನ.

'ಕೊರೊನಾ ಸೋಂಕಿತರ ಆಮ್ಲಜನಕದ ಪ್ರಮಾಣ ಪರೀಕ್ಷಿಸುವ ಆಕ್ಸಿಮೀಟರ್‌ಗಳು ಕೆಲವು ಕಡೆಗಳಲ್ಲಿ ಕೆಲಸ ಮಾಡುತ್ತಿಲ್ಲ. ಗ್ರಾಮ ಪಂಚಾಯಿತಿಯವರು ಕೊಟ್ಟ ಎರಡೇ ದಿನಕ್ಕೆ ಹಾಳಾಗುತ್ತಿವೆ. ಏನು ಮಾಡುವುದೆಂದು ತೋಚುತಿಲ್ಲ' ಎಂದು ಹುಲಿಕುಂಟೆ ಗ್ರಾಮದ ಆಶಾ ಕಾರ್ಯಕರ್ತೆಯೊಬ್ಬರು ತಿಳಿಸಿದರು.

ಕೋವಿಡ್ ಹಾಟ್‌ಸ್ಪಾಟ್ ಎಂಬ ಕಾರಣಕ್ಕೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಜಿಲ್ಲೆಗೆ ಭೇಟಿನೀಡಿ ಪರಿಶೀಲನೆ ನಡೆಸಿದರು. ಸೋಂಕು, ಸಾವಿನ ಪ್ರಮಾಣ ತಗ್ಗಿಸುವಂತೆ ಸೂಚಿಸಿದ್ದರು. ಮುಖ್ಯಮಂತ್ರಿ ಎಚ್ಚರಿಕೆ ನಂತರವೂ ಸಾವಿನ ಸಂಖ್ಯೆ ಕಡಿಮೆಯಾಗಿಲ್ಲ.

ಲಸಿಕೆ ಇಲ್ಲ: ಜಿಲ್ಲೆಯ ಬಹುತೇಕ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆ ಕೊರತೆ ಇದೆ. ಮೊದಲೇ ನೋಂದಣಿ ಮಾಡಿಸಿದವರಿಗೆ ಲಸಿಕೆ ಬಂದ ದಿನ ದೂರವಾಣಿ ಕರೆಮಾಡಿ ತಿಳಿಸಲಾಗುತ್ತದೆ. ಹಳ್ಳಿಗಳಲ್ಲಿ ಇನ್ನೂ ಸಾಕಷ್ಟು ಜನರು ಲಸಿಕೆಗೆ ಕಾಯುತ್ತಿದ್ದಾರೆ. ಗುಬ್ಬಿ ಪಟ್ಟಣದಲ್ಲಿ ಲಸಿಕೆಗೆ ಉದ್ದನೆಯ ಸಾಲು ಕಂಡುಬಂತು. ಕೆಲವರಿಗಷ್ಟೇ ಲಸಿಕೆ ಹಾಕಿ 'ಮುಗಿಯಿತು. ನಾಳೆ ಬನ್ನಿ. ಲಸಿಕೆ ಬಂದರೆ ಹಾಕುತ್ತೇವೆ' ಎಂದು ಸಿಬ್ಬಂದಿ ಹೇಳಿಕಳುಹಿಸಿದರು.

ಕೊರಟಗೆರೆ ತಾಲ್ಲೂಕು ಅಕ್ಕಿರಾಂಪುರ ಗ್ರಾಮದಲ್ಲಿ ಲಸಿಕೆ ಇದ್ದರೂ ಜನರು ಹಾಕಿಸಿಕೊಳ್ಳಲು ಮುಂದೆ ಬರುತ್ತಿಲ್ಲ. ಗ್ರಾಮದಲ್ಲಿ ಕ್ಯಾಂಪ್ ಮಾಡಿ ಲಸಿಕೆ ಹಾಕುತ್ತೇವೆ ಎಂದು ಕಾದು ಕುಳಿತರೂ ಹಾಕಿಸಿಕೊಳ್ಳಲಿಲ್ಲ ಎಂದು ವೈದ್ಯ ಪ್ರಕಾಶ್‌ಗೌಡ ಅಸಹಾಯಕತೆ ವ್ಯಕ್ತಪಡಿಸಿದರು.

ಜಿಲ್ಲೆಯಲ್ಲಿ ಎಲ್ಲೂ ಆಂಬುಲೆನ್ಸ್, ವೈದ್ಯರು, ಸಿಬ್ಬಂದಿ, ಲಸಿಕೆ ಕೊರತೆ ಇಲ್ಲ ಎಂದು ಡಿಎಚ್ಒ ಡಾ.ನಾಗೇಂದ್ರಪ್ಪ ಹೇಳುತ್ತಾರೆ. ಆದರೆ ಆಂಬುಲೆನ್ಸ್ ಸಿಗದೆ, ವೈದ್ಯರಿಲ್ಲದೆ, ಸಿಬ್ಬಂದಿ ಕೊರತೆಯಿಂದ ಆಸ್ಪತ್ರೆಗಳು ಬಳಲಿವೆ. ಕೆಲವು ಕಡೆ ಶಾಸಕರು, ದಾನಿಗಳು ಆಂಬುಲೆನ್ಸ್ ನೀಡದಿದ್ದರೆ ರೋಗಿಗಳು ಪರದಾಡಬೇಕಿತ್ತು.

ಮಧುಗಿರಿ ತಾಲ್ಲೂಕು ಮರುವೇಕೆರೆ ಗ್ರಾಮದ ಅರಳಿಕಟ್ಟೆ ಮೇಲೆ ಜನರು ಗುಂಪಾಗಿ ಚೌಕಾಬಾರ ಆಟದಲ್ಲಿ ನಿರತರಾಗಿದ್ದರು

ಹೆಸರಿಗಷ್ಟೇ 24X7 ಆಸ್ಪತ್ರೆ

ನಿಟ್ಟೂರು ಆರೋಗ್ಯ ಕೇಂದ್ರಕ್ಕೆ ಮಧ್ಯಾಹ್ನ 12.30 ಗಂಟೆಗೆ 'ಪ್ರಜಾವಾಣಿ' ಪ್ರತಿನಿಧಿ ಭೇಟಿ ನೀಡಿದಾಗ ಸಿಬ್ಬಂದಿಯೊಬ್ಬರು ಮಾತ್ರ ಇದ್ದರು. ಆ ವೇಳೆಗಾಗಲೇ ವೈದ್ಯರು ಆಸ್ಪತ್ರೆಯಿಂದ ತೆರಳಿದ್ದರು. ಇತರ ಯಾವ ಸಿಬ್ಬಂದಿಯೂ ಇರಲಿಲ್ಲ. ಇಲ್ಲಿನ ಅವ್ಯವಸ್ಥೆ ನೋಡಿದ ಜನರು ಲಸಿಕೆ ಹಾಕಿಸಿಕೊಳ್ಳಲು, ಕೊರೊನಾ ಪರೀಕ್ಷೆ ಮಾಡಿಸಿಕೊಳ್ಳಲು ಬರುತ್ತಿಲ್ಲ. 24X7 ಆಸ್ಪತ್ರೆ ಎಂದು ಗೋಡೆ ಮೇಲೆ ಬರೆಯಲಾಗಿದೆ!

'ಸಾಮಾನ್ಯ ದಿನಗಳಲ್ಲಿ ವೈದ್ಯರು 11 ಗಂಟೆ ನಂತರ ಬರುತ್ತಾರೆ. ಮಧ್ಯಾಹ್ನದ ವೇಳೆಗೆ ವಾಪಸಾಗುತ್ತಾರೆ. ಕಾದು ಸುಸ್ತಾದವರು ಆಸ್ಪತ್ರೆ ಕಡೆಗೆ ಬರುವುದನ್ನೇ ಬಿಟ್ಟಿದ್ದಾರೆ. ಹೆಸರಿಗಷ್ಟೇ ಆರೋಗ್ಯ ಕೇಂದ್ರ ಇದೆ' ಎಂದು ರಾಜಾರಾಮ್ ಹೇಳುತ್ತಾರೆ.

ಕೊರಟಗೆರೆ ತಾಲ್ಲೂಕಿನ ಬುಕ್ಕಪಟ್ಟಣ ಆರೋಗ್ಯ ಕೇಂದ್ರದ ವ್ಯಾಪ್ತಿಗೆ ಸುಮಾರು 35 ಗ್ರಾಮಗಳು ಸೇರುತ್ತವೆ. 10 ಗಂಟೆಯಾದರೂ ವೈದ್ಯರೇ ಬಂದಿರಲಿಲ್ಲ. ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ಬಂದವರು ಯಾವಾಗ ಲಸಿಕೆ ಬರುತ್ತದೆ ಎಂದು ಕೇಳಿಕೊಂಡು ವಾಪಸ್ ಹೋಗುತ್ತಿದ್ದ ದೃಶ್ಯ ಕಂಡುಬಂತು.

ಜಟ್ಟಿಅಗ್ರಹಾರದಲ್ಲಿರುವ ಉಪ ಆರೋಗ್ಯ ಕೇಂದ್ರ, ಹೂಲಿಕುಂಟೆ ಗ್ರಾಮದ ಉಪ ಆರೋಗ್ಯ ಕೇಂದ್ರಗಳು ಬಾಗಿಲು ತೆರೆದಿರಲಿಲ್ಲ. ಸಿಬ್ಬಂದಿ ಕೊರತೆ ಎಂಬ ಉತ್ತರವನ್ನು ಅಲ್ಲಿನ ಜನರು ನೀಡುತ್ತಾರೆ. ಮಧುಗಿರಿ ತಾಲ್ಲೂಕಿನ ಮರುವೇಕೆರೆ ಆರೋಗ್ಯ ಕೇಂದ್ರದಲ್ಲಿ ಮಧ್ಯಾಹ್ನ 3 ಗಂಟೆ ವೇಳೆಗೆ ವೈದ್ಯರು ಮನೆಗೆ ತೆರಳಿದ್ದರು. 24X7 ಸೇವೆ ಎಂದಿದ್ದರೂ 'ಸೇವೆ' ಸಲ್ಲಿಸಲು ಸಿಬ್ಬಂದಿಯೇ ಇಲ್ಲ.

ತುರುವೇಕೆರೆ ತಾಲ್ಲೂಕು ಸಂಪಿಗೆ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರು ರಜೆಯಲ್ಲಿದ್ದು, ಇರುವ ಇಬ್ಬರು ಸಿಬ್ಬಂದಿ ಲಸಿಕೆ ಹಾಕುವ ಕಾರ್ಯದಲ್ಲಿ ನಿರತರಾಗಿದ್ದರು. ಸುತ್ತಮುತ್ತಲಿನ 10–15 ಕಿ.ಮೀ ವ್ಯಾಪ್ತಿಯ ಜನರಿಗೆ ಒಂದೊಂದೇ ಆರೋಗ್ಯ ಕೇಂದ್ರ ಆಸರೆಯಾಗಿದೆ. ಸಿಬ್ಬಂದಿ, ಸೌಲಭ್ಯಗಳಿಲ್ಲದೆ ಸೊರಗಿದೆ. ಮಧ್ಯಾಹ್ನದ ನಂತರ ಆಸ್ಪತ್ರೆಗೆ ಬೀಗ ಬೀಳುತ್ತದೆ.

ವರದಿಗೆ ಈಗಲೂ ಕಾಯಬೇಕು: ತುಮಕೂರು ಜಿಲ್ಲೆ ಕೋವಿಡ್ ಹಾಟ್‌ಸ್ಪಾಟ್ ಆಗಿದ್ದರೂ ಕೋವಿಡ್ ವರದಿಗಾಗಿ ಈಗಲೂ 2ರಿಂದ 3 ದಿನ ಕಾಯಬೇಕಿದೆ. ವರದಿ ತಡವಾಗುತ್ತಿದೆ ಎಂಬ ಆಕ್ಷೇಪಗಳು ವ್ಯಕ್ತವಾದ ನಂತರ ಪರೀಕ್ಷೆ ಸಂಖ್ಯೆಯನ್ನೇ ಕಡಿಮೆ ಮಾಡಲಾಗಿದೆ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ತುಮಕೂರು ಜಿಲ್ಲಾ
ಕೋವಿಡ್ ಅಂಕಿ–ಅಂಶ

1,06,852 ▲ ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
11,695 ▼	93,926 ▲	931 ▲

ದಿನದ ಏರಿಕೆ

ಹೊಸ ಪ್ರಕರಣ	857 ▼
ಗುಣಮುಖ	1,490 ▲
ಸಾವು	6 ▼

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಗ್ರಾಮೀಣ ಪ್ರದೇಶಗಳಲ್ಲಿ ಸರಿಯಾಗಿ ಚಿಕಿತ್ಸೆ ಸಿಗದೆ ಸಾವು ಹೆಚ್ಚುತ್ತಿದೆ. ನಿಟ್ಟೂರು ಆಸ್ಪತ್ರೆಗೆ ವೈದ್ಯರೇ ಸರಿಯಾಗಿ ಬರುತ್ತಿಲ್ಲ. ಬದಲಿಸುವಂತೆ ಸಾಕಷ್ಟು ಸಲ ಹೇಳಿದ್ದರೂ ಕೇಳುತ್ತಿಲ್ಲ. ಹಳ್ಳಿಗಳಲ್ಲಿ ಸೋಂಕು ಹರಡುತ್ತಲೇ ಇದೆ

ಡಾ.ನವ್ಯಾ ಬಾಬು, ಜಿ.ಪಂ ಮಾಜಿ ಸದಸ್ಯೆ, ನಿಟ್ಟೂರು

ವೈದ್ಯರ ನಡೆ ಹಳ್ಳಿ ಕಡೆಗೆ ಜಾರಿಯಾಗಿದೆ. ಮನೆಗಳಿಗೆ ಹೋಗಿ ಪರೀಕ್ಷೆ ಮಾಡಲಾಗುತ್ತಿದೆ. ಮೂರು ಮೊಬೈಲ್ ಯುನಿಟ್ ಬಳಸಲಾಗುತ್ತಿದೆ. ಸೋಂಕಿತರು ತಡವಾಗಿ ಆಸ್ಪತ್ರೆಗೆ ಬರುವುದರಿಂದ ಸಾವಿನ ಸಂಖ್ಯೆ ಹೆಚ್ಚಳವಾಗಿದೆ

ಡಾ.ಇ.ರಮೇಶ್ ಬಾಬು, ತಾಲ್ಲೂಕು ವೈದ್ಯಾಧಿಕಾರಿ, ಮಧುಗಿರಿ

ಹಣ ಇಲ್ಲದೆ ಚಿಕಿತ್ಸೆ ನೀಡುವುದಿಲ್ಲ. ಐಸಿಯುನಲ್ಲಿ ರೋಗಿಗಳನ್ನು ಮುಟ್ಟಿಯೂ ನೋಡುವುದಿಲ್ಲ. ಲಸಿಕೆಗೆ ಹಣ ಕೊಡಬೇಕು. ಸಿ.ಟಿ ಸ್ಕ್ಯಾನ್ ಮಾಡಿಸಲು ಹೊರಗೆ ರೋಗಿ ಕರೆದುಕೊಂಡು ಹೋಗಲು ಆಂಬುಲೆನ್ಸ್ ಬೇಕಾದರೆ ಹಣ ಕೇಳುತ್ತಾರೆ

ಕಿರಣ್ ಕುಮಾರ್, ಕೊರಟಗೆರೆ

ಕೋವಿಡ್‌ನಿಂದ ಮೃತಪಟ್ಟವರ ಶವ ಸಾಗಿಸಲು ಆಂಬುಲೆನ್ಸ್ ಕೊಡುವುದಿಲ್ಲ. 10 ಕಿ.ಮೀ ದೂರ ಶವ ಸಾಗಿಸಲು ಖಾಸಗಿಯವರಿಗೆ ₹12 ಸಾವಿರ ಕೊಡಬೇಕು. ಆರೈಕೆ ಕೇಂದ್ರಗಳಲ್ಲಿ ಕನಿಷ್ಠ ಮೂಲ ಸೌಕರ್ಯಗಳಿಲ್ಲ

ನರಸಿಂಹಮೂರ್ತಿ, ಗ್ರಾ.ಪಂ ಸದಸ್ಯ, ಜಿ.ಹೊಸಹಳ್ಳಿ

ಕೃಷಿ ಕೆಲಸ ಬಿಟ್ಟು ಲಸಿಕೆಗಾಗಿ ಅಲೆದಾಟ, ಮದುವೆ ಮನೆಗಳಿಂದಲೇ ವೈರಸ್ ಕಾಟ

ಗ್ರಾಮೀಣ ಆಸ್ಪತ್ರೆಗಳಲ್ಲಿ ಸ್ಮಶಾನ ಮೌನ

● ಚಂದ್ರಹಾಸ ಹಿರೇಮಳಲಿ

ಶಿವಮೊಗ್ಗ: ಸಾಮಾನ್ಯ ಜ್ವರ, ತಲೆನೋವು, ಶೀತವಾದರೆ ಗ್ರಾಮದ ಯುವಕರು ಸೈಕಲ್ ತುಳಿದುಕೊಂಡು, ಬೈಕ್ ಏರಿ ದಟ್ಟ ಕಾನನದ ಮಧ್ಯೆ 16 ಕಿ.ಮೀ. ಸಾಗಿ ಶಿವಮೊಗ್ಗದ ಆಸ್ಪತ್ರೆಗಳನ್ನು ತಲುಪಬೇಕು. ಗ್ರಾಮದ ಜನರನ್ನು ಕರೆದುಕೊಂಡು ಹೋಗುತ್ತಿದ್ದ ಯುವಕರು, ಯಜಮಾನರೇ ಕೋವಿಡ್‌ನಿಂದ ಮಲಗಿದ್ದಾರೆ. ಮಂಗನಕಾಯಿಲೆ ಹರಡಿದಾಗಲೂ ಇಷ್ಟೊಂದು ಜನರು ಒಮ್ಮೆಲೆ ಕಾಯಿಲೆ ಬಿದ್ದು ಮಲಗಿರಲಿಲ್ಲ ಎಂದು ಗ್ರಾಮದ ಶಿಕ್ಷಕ ಹೆಬ್ಬೂರು ಧರ್ಮಪ್ಪ ಅವರು ಶೆಟ್ಟಿಹಳ್ಳಿಯ ಚಿತ್ರಣ ಬಿಚ್ಚಿಟ್ಟರು.

ಅಭಯಾರಣ್ಯದ ಮಧ್ಯೆ 102 ಮನೆಗಳ ಗುಚ್ಛವಿರುವ ಗ್ರಾಮ ಶೆಟ್ಟಿಹಳ್ಳಿ. ಕಾಡಿನೊಳಗಿನ ಈ ಗ್ರಾಮ ಇತರೆ ಜನ ವಸತಿಗಳಿಂದ ಬಹುದೂರದಲ್ಲೇ ಇದೆ. ಇಂತಹ ಗ್ರಾಮದಲ್ಲಿ ನಡೆದ ಮದುವೆಯ ನಂತರ ಬಹುತೇಕ ಮನೆಗಳ ಜನರು ಕೋವಿಡ್‌ನಿಂದ ಬಳಲುತ್ತಿದ್ದಾರೆ. ಗಂಟಲು ದ್ರವದ ಮಾದರಿ ಪರೀಕ್ಷೆಗೆ ಒಳಪಟ್ಟ 100 ಜನರಲ್ಲಿ 37 ಜನರಿಗೆ ಸೋಂಕು ಇರುವುದು ದೃಢಪಟ್ಟಿದೆ.

ಶೆಟ್ಟಿಹಳ್ಳಿ, ಚಿತ್ರಶೆಟ್ಟಿಹಳ್ಳಿ ಗ್ರಾಮಗಳನ್ನೂ ಈಗಾಗಲೇ ರೆಡ್‌ಜೋನ್‌ಗಳು ಎಂದು ಜಿಲ್ಲಾಡಳಿತ ಘೋಷಿಸಿದೆ. ಸೋಂಕಿತರನ್ನು ಗಾಜನೂರು ಕೋವಿಡ್ ಕೇಂದ್ರಕ್ಕೆ ಸೇರಿಸಲಾಗಿದೆ. ಪುರದಾಳು ಪಂಚಾಯಿತಿಯಿಂದ ಸ್ಯಾನಿಟೈಸ್ ಮಾಡುವುದೂ ಸೇರಿ ಅಗತ್ಯ ಕ್ರಮಗಳನ್ನೆಲ್ಲ ಕೈಗೊಳ್ಳಲಾಗಿದೆ. ಅಧಿಕಾರಿಗಳು, ವೈದ್ಯರು ಗ್ರಾಮಕ್ಕೇ ತೆರಳಿ ನೆರವಾಗಿದ್ದಾರೆ.

ಮಲೆನಾಡಿನ ಹಲವು ಗ್ರಾಮಗಳಲ್ಲಿ ಕೊರೊನಾ ಸೋಂಕು ವ್ಯಾಪಕವಾಗಿ ಹರಡಲು ಮದುವೆ, ಬಾಡೂಟ ಸಮಾರಂಭಗಳೇ ಕಾರಣ. ಜಿಲ್ಲೆಯ 271 ಗ್ರಾಮ ಪಂಚಾಯಿತಿಗಳ 603 ಗ್ರಾಮಗಳಲ್ಲಿ (ಒಟ್ಟು 1,580 ಗ್ರಾಮಗಳು) 12 ಸಾವಿರಕ್ಕೂ ಹೆಚ್ಚು ಸೋಂಕಿತರು ಪತ್ತೆಯಾಗಿದ್ದಾರೆ. ಲಾಕ್‌ಡೌನ್ ಆರಂಭವಾದ (ಏ.24ರಿಂದ) ದಿನದಿಂದ ಇಲ್ಲಿಯವರೆಗೆ ಜಿಲ್ಲೆಯಲ್ಲಿ 1,595 ಮದುವೆಗಳು ನಡೆದಿವೆ. ಈ ಮದುವೆಗಳೇ ಜಿಲ್ಲೆಯ ಗ್ರಾಮಗಳ ಕೊರೊನಾ ಹಾಟ್‌ಸ್ಪಾಟ್‌ಗಳು.

ಭದ್ರಾವತಿ ತಾಲ್ಲೂಕಿನ ಅರಹತೊಳಲು ಗ್ರಾಮದಲ್ಲಿ ಒಮ್ಮೆಲೇ ಹಲವರಿಗೆ ಸೋಂಕು ಕಾಣಿಸಿಕೊಂಡಿದೆ. ವಾರದ ಅವಧಿಯಲ್ಲೇ 8 ಜನರು ಮೃತಪಟ್ಟಿದ್ದಾರೆ. ಪರೀಕ್ಷೆಗೆ ಒಳಪಡಿಸಿದಾಗ 39 ಜನರಲ್ಲಿ ಸೋಂಕು ದೃಢಪಟ್ಟಿದೆ. 'ಆರೋಗ್ಯ ಇಲಾಖೆ ಮಾಹಿತಿ ಪ್ರಕಾರ ಕೋವಿಡ್‌ನಿಂದ ಮೃತಪಟ್ಟವರು ಮೂವರಷ್ಟೇ. ಪ್ರಕರಣಗಳು ಬೆಳಕಿಗೆ ಬಂದ ತಕ್ಷಣ ಗ್ರಾಮವನ್ನು ಸೀಲ್‌ಡೌನ್ ಮಾಡಿದ್ದು, ಆನಂತರ ಒಂದೂ ಪ್ರಕರಣ ಬೆಳಕಿಗೆ ಬಂದಿಲ್ಲ' ಎನ್ನುತ್ತಾರೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಆರ್.ಪ್ರಭಾಕರ್.

ಶಿವಮೊಗ್ಗ ತಾಲ್ಲೂಕಿನ ತುಂಗಾ, ಭದ್ರಾ ನದಿಗಳ ಸಂಗಮ ಕೂಡಲಿಯಲ್ಲಿ 7 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ. ಗ್ರಾಮದ ಶೇ 99ರಷ್ಟು ಜನರು ಮಾಸ್ಕ್ ಧರಿಸದೆ, ಅಂತರ ಕಾಪಾಡಿಕೊಳ್ಳದೇ ತಮ್ಮ ದೈನಂದಿನ ಚಟುವಟಿಕೆಯಲ್ಲಿ ತೊಡಗಿದ್ದರು. ಬಹುತೇಕ ಗ್ರಾಮಗಳಲ್ಲೂ ಅದೇ ಸ್ಥಿತಿಯ ದರ್ಶನವಾಯಿತು. ಹೊಳಲೂರಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಏಳು ವೈದ್ಯರ ಹುದ್ದೆಗಳಲ್ಲಿ ನಾಲ್ಕು ಖಾಲಿ ಇವೆ. ದಂತ ವೈದ್ಯರನ್ನು ಹೊರತುಪಡಿಸಿದರೆ ಇಬ್ಬರೇ ಎಲ್ಲವನ್ನೂ ನಿಭಾಯಿಸುತ್ತಿದ್ದರು.

ಜಿಲ್ಲೆಯ ಪ್ರಾಥಮಿಕ, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಗಂಟಲು ದ್ರವ ಮಾದರಿ ಪರೀಕ್ಷೆ, ಲಸಿಕೆ ಹಾಕುವ ಕಾರ್ಯವನ್ನು ಮಧ್ಯಾಹ್ನ 1ರ ಒಳಗೆ ಪೂರ್ಣಗೊಳಿಸಲಾಗಿತ್ತು. ಬಹುತೇಕ ಸಿಬ್ಬಂದಿ ಮನೆಗೆ ತೆರಳಿದ್ದರು. ಸರ್ಕಾರ ಕೋವಿಡ್ ರೋಗಿಗಳ ದಾಖಲಾತಿಗೆ ಅಲ್ಲಿ ಅವಕಾಶ ನೀಡಿಲ್ಲ. ಲಾಕ್‌ಡೌನ್ ಕಾರಣ ಇತರೆ ರೋಗಿಗಳು ಬರುತ್ತಿಲ್ಲ. ಹಾಗಾಗಿ, ಆಸ್ಪತ್ರೆಗಳಲ್ಲಿ ಸ್ಮಶಾನ ಮೌನ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ತವರು ಕ್ಷೇತ್ರ ಶಿಕಾರಿಪುರದ ಕೋವಿಡ್ ಕೇಂದ್ರದಲ್ಲಿ 64 ರೋಗಿಗಳಿಗೆ ಚಿಕಿತ್ಸಾ ಸೌಲಭ್ಯ ಕಲ್ಪಿಸಲಾಗಿದೆ. 36 ಹಾಸಿಗೆಗಳಿಗೆ ಆಮ್ಲಜನಕ ಸೌಲಭ್ಯವಿದೆ. 'ಪ್ರಜಾವಾಣಿ' ತಂಡ ಕೇಂದ್ರಕ್ಕೆ ಭೇಟಿ ನೀಡಿದಾಗ ಕೋವಿಡ್ ರೋಗಿಯೊಬ್ಬರನ್ನು ನೆಲದ ಮೇಲೆ ಮಲಗಿಸಲಾಗಿತ್ತು. 'ಆತನಿಗೆ ಬುದ್ಧಿ ಸ್ವಾಧೀನದಲ್ಲಿ ಇಲ್ಲ. ಕೆಳಗೆ ಬೀಳುತ್ತಾನೆ ಎಂದು ಕೆಳಗೆ ಹಾಸಿಗೆ ಹಾಕಿದ್ದೇವೆ' ಎಂದು ಆಸ್ಪತ್ರೆಯ ವೈದ್ಯಾಧಿಕಾರಿ ಎಚ್.ಜಿ.ಶಿವಾನಂದ ಅವರು ಸಮಜಾಯಿಷಿ ನೀಡಿದರು.

ಸಾಹಿತಿ ಅಮ್ಜದ್ ಹುಸೇನ್ ಹಾಫೀಜ್ ಕರ್ನಾಟಕಿ ಅವರು ತಮ್ಮ ಶಾಲೆಯ ವಾಹನಗಳನ್ನು ಕೋವಿಡ್ ಪೀಡಿತರ ಸೇವೆಗಾಗಿ ಉಚಿತವಾಗಿ ನೀಡಿದ್ದಾರೆ ಎನ್ನುವ ಅಂಶವನ್ನು ಹಲವರು ಸ್ಮರಿಸಿದರು. ಕೋವಿಡ್ ರೋಗಿಗಳ ಮಾಹಿತಿ ಪಡೆಯಲು ಪ್ರತಿ ಕೇಂದ್ರದಲ್ಲೂ ಇಬ್ಬರು ಶಿಕ್ಷಕರನ್ನು ನೇಮಿಸಿದ್ದು, ಅವರು ಸುರಕ್ಷತಾ ಕಿಟ್‌ಗಳಿಲ್ಲದೇ ಕಾರ್ಯನಿರ್ವಹಿಸುತ್ತಿದ್ದರು. 'ತಾಲ್ಲೂಕಿನಲ್ಲಿ ಒಂದು ಸಾವಿರ ಶಿಕ್ಷಕರು ಇದ್ದಾರೆ. 56 ಶಿಕ್ಷಕರಷ್ಟೇ ಕೋವಿಡ್ ಕೆಲಸದಲ್ಲಿ ತೊಡಗಿಕೊಂಡಿದ್ದೇವೆ. 17 ದಿನಗಳಿಂದ ಪಾಳಿಯಲ್ಲಿ ಕೆಲಸ ಮಾಡುತ್ತಿದ್ದು, ಬಿಡುವೇ ಇಲ್ಲ' ಎನ್ನುವುದು ಶಿಕ್ಷಕ ಷಣ್ಮುಖಪ್ಪ ಅಳಲು.

ಶಿರಾಳಕೊಪ್ಪ ಮಾರ್ಗದ ಅಂಬಾರಕೊಪ್ಪ ಕೋವಿಡ್ ಆರೈಕೆ ಕೇಂದ್ರದಲ್ಲಿ ರೋಗಲಕ್ಷಣಗಳು ಇಲ್ಲದ 125 ಜನರು ಇದ್ದಾರೆ. ಊಟ, ಉಪಚಾರ ಚೆನ್ನಾಗಿದೆ. ಮನೆಯವರಂತೆ ನೋಡಿಕೊಳ್ಳುತ್ತಾರೆ ಎಂದು ಅಲ್ಲಿ ಆಶ್ರಯ ಪಡೆದಿರುವ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಈಸೂರು ಬಸವರಾಜು ಖುಷಿಪಟ್ಟರು.

ಸಾಗರ ತಾಲ್ಲೂಕು ಆನಂದಪುರಂ, ಹೊಸನಗರ ತಾಲ್ಲೂಕು ರಿಪ್ಪನ್‌ಪೇಟೆಯಲ್ಲಿ ಕೊರೊನಾ ಪ್ರಕರಣಗಳು ಹೆಚ್ಚಾಗಿದ್ದು, ಅಲ್ಲಿ ಸೀಲ್‌ಡೌನ್ ಮಾಡಲಾಗಿದೆ. ಅಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರಿದ್ದರೂ ಕೋವಿಡ್ ರೋಗಿಗಳನ್ನು ತುರ್ತಾಗಿ ಶಿವಮೊಗ್ಗಕ್ಕೆ ಕಳುಹಿಸಲು ವ್ಯವಸ್ಥಿತ ಆಂಬುಲೆನ್ಸ್‌ಗಳೇ ಇಲ್ಲ ಎಂದು ನಾಗರಿಕರು ದೂರಿದರು.

ಶಿಕಾರಿಪುರ ಸಾರ್ವಜನಿಕ ಆಸ್ಪತ್ರೆಯ ಕೋವಿಡ್ ಕೇಂದ್ರದಲ್ಲಿ ರೋಗಿಯನ್ನು ನೆಲದ ಮೇಲೆ ಮಲಗಿಸಿರುವುದು. ಚಿತ್ರ: ಶಿವಮೊಗ್ಗ ನಾಗರಾಜ್.

ಇರುವ ಒಬ್ಬರೇ ವೈದ್ಯರಿಗೂ ಕೋವಿಡ್

ಭದ್ರಾವತಿ ತಾಲ್ಲೂಕಿನ ಮೈದೊಳಲು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪ್ರತಿ ದಿನ ಸುಮಾರು 200 ಹೊರ ರೋಗಿಗಳು ತಪಾಸಣೆಗೆ ಬರುತ್ತಾರೆ. ಇರುವ ಒಬ್ಬರೇ ವೈದ್ಯರು ಕೋವಿಡ್‌ನಿಂದ ಶಿವಮೊಗ್ಗ ಆಸ್ಪತ್ರೆಗೆ ದಾಖಲಾಗಿದ್ದಾರೆ. ಅಲ್ಲಿರುವ ಸಿಬ್ಬಂದಿಯೇ ಹೊಣೆ ನಿಭಾಯಿಸುವ ಒತ್ತಡದಲ್ಲಿದ್ದಾರೆ.

ಕೋವಿಡ್ ಲಸಿಕೆಗೆ ಅಲೆದಾಟ: ಎರಡು ದಿನಕ್ಕೆ ಒಮ್ಮೆ ದೊರೆಯುವ ಸ್ವಲ್ಪ ಲಸಿಕೆಯನ್ನೇ ಸುತ್ತಲ ಪಂಚಾಯಿತಿಗಳಿಗೂ ಕಳುಹಿಸಲಾಗುತ್ತದೆ. ಹಾಗಾಗಿ, ಅಲ್ಲಿನ ಜನರಿಗೆ ಕೃಷಿ ಚಟುವಟಿಕೆ ಬಿಟ್ಟು ನಿತ್ಯವೂ ಲಸಿಕೆ ಕೇಳಿಕೊಂಡು ಅಲೆಯುವುದೇ ಕೆಲಸವಾಗಿದೆ.

'ಒಂದು ವಾರದಿಂದ ನಿತ್ಯವೂ ಬಂದು ಹೋಗುತ್ತೇನೆ. ಲಸಿಕೆ ಇಲ್ಲ ಎನ್ನುತ್ತಾರೆ. ಕೆಲಸ ಬಿಟ್ಟು ಅಲೆಯುವುದಕ್ಕೆ ಮನೆಯಲ್ಲೂ ಕಿರಿಕಿರಿ ಮಾಡುತ್ತಾರೆ. ಈ ವಯಸ್ಸಿನಲ್ಲಿ ಎಂಥ ಶಿಕ್ಷೆ ನಮಗೆ?' ಎಂದು ಅಳಲು ತೋಡಿಕೊಂಡರು 69 ವರ್ಷ ವಯಸ್ಸಿನ ಹನುಮಂತಪ್ಪ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಆಮ್ಲಜನಕ ಘಟಕ ಆರಂಭವಾದ ಮೇಲೆ ಹಲವು ಜನರ ಜೀವ ಉಳಿದಿವೆ. 36 ಹಾಸಿಗೆಗಳಿಗೆ ಸಂಪರ್ಕ ಕಲ್ಪಿಸಲಾಗಿದೆ.

ಡಾ.ಎಚ್.ಜಿ.ಶಿವಾನಂದ್, ಆಡಳಿತ ವೈದ್ಯಾಧಿಕಾರಿ, ಸಾರ್ವಜನಿಕ ಆಸ್ಪತ್ರೆ, ಶಿಕಾರಿಪುರ

ಲಸಿಕೆ ಪಡೆಯಲು ವಾರದಿಂದ ಆಸ್ಪತ್ರೆಗೆ ಅಲೆಯುತ್ತಿರುವೆ. ಹೊಲದ ಕೆಲಸ ಮಾಡಲೂ ಆಗಿಲ್ಲ.

ಹನುಮಂತಪ್ಪ, ರೈತ, ಮೈದೊಳಲು

ಶಿವಮೊಗ್ಗ ಜಿಲ್ಲೆ
ಕೋವಿಡ್ ಅಂಕಿ–ಅಂಶ

55,259 ▲ ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
6,900 ▲	48,093 ▲	846 ▼

ದಿನದ ಏರಿಕೆ

ಹೊಸ ಪ್ರಕರಣ	694 ▼
ಗುಣಮುಖ	740 ▲
ಸಾವು	7 ▼

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಬಹುತೇಕ ಹಳ್ಳಿಗಳಿಗೆ ಆರೋಗ್ಯ ಸೇವೆ 'ದೂರ'

ಒಂದನೇ ಪುಟದಿಂದ...

ಗುಡ್ಡದ ಮೇಲೆ ಆಸ್ಪತ್ರೆ: ಬಸ್ಸಾಪುರದ ಆಸ್ಪತ್ರೆಯನ್ನು ಹೊರವಲಯದಲ್ಲಿ ಗುಡ್ಡದ ಮೇಲೆ ಕಟ್ಟಲಾಗಿದೆ. ಅಲ್ಲಿಗೆ ತಲುಪಲು ಕಲ್ಲು–ಮಣ್ಣಿನ ಹಾದಿಯಲ್ಲಿ ಒಂದು ಕಿಲೊಮೀಟರ್ ಗುಡ್ಡವೇರಬೇಕು. ದ್ವಿಚಕ್ರವಾಹನದಲ್ಲಿ ಹೋಗುವಾಗ ಆಯತಪ್ಪಿ ಬಿದ್ದರೆ ಪಕ್ಕದ ಚಿಕ್ಕ ಕಾಲುವೆ ಪಾಲಾಗಬೇಕಾಗುತ್ತದೆ. ವಿವಿಧ ಗ್ರಾಮಗಳ ವ್ಯಾಪ್ತಿ ಹೊಂದಿರುವ ಈ ಆಸ್ಪತ್ರೆ ತಲುಪಲು ಸರಿಯಾದ ರಸ್ತೆಯೂ ಇಲ್ಲ.

'ಇಲ್ಲಿಗೆ ತಲುಪುವುದೇ ದೊಡ್ಡ ಸವಾಲು. ಹೆಣ್ಣು ಮಕ್ಕಳು ಒಬ್ಬೊಬ್ಬರೇ ಬರುವುದಕ್ಕೆ ಭಯವಾಗುತ್ತದೆ. ಜೊತೆಯಲ್ಲಿ ಮನೆಯವರನ್ನು ಕರೆದುಕೊಂಡು ಬರಬೇಕು. ರೋಗಿಗಳು ಬರಲು ತ್ರಾಸದ ಕೆಲಸವೇ' ಎಂದು ಸಿಬ್ಬಂದಿ ತಿಳಿಸಿದರು. ಅಲ್ಲಿ ರೋಗಿಗಳ ಸಂಖ್ಯೆಯೂ ಕಡಿಮೆ ಇತ್ತು. ಫಾರ್ಮಾಸಿಸ್ಟ್ 11 ಗಂಟೆ ನಂತರ ಬಂದರು.

ಪರೀಕ್ಷೆಗೆ ಹಿಂದೇಟು: ಚಿಕ್ಕೋಡಿ ತಾಲ್ಲೂಕಿನ ನಾಗರಮುನ್ನೋಳಿಯಲ್ಲಿ ಎದುರಾದ ಲಾಲ್‌ಸಾಬ್ ತಟಗಾರ, 'ನಮ್ಮ ಗ್ರಾಮದಲ್ಲಿ ಕೋವಿಡ್ 2ನೇ ಅಲೆಯಲ್ಲಿ 500ಕ್ಕೂ ಹೆಚ್ಚು ಮಂದಿ ಅನಾರೋಗ್ಯಕ್ಕೆ ಒಳಗಾಗಿದ್ದಾರೆ. 25 ಮಂದಿ ಸಾವಿಗೀಡಾಗಿದ್ದಾರೆ. ಬಹುತೇಕರಿಗೆ ಕೋವಿಡ್ ಲಕ್ಷಣವಿತ್ತು. ಆದರೆ, ಪರೀಕ್ಷೆ ಮಾಡಿಸಿರಲಿಲ್ಲ. ಹೆಚ್ಚಿನವರು ಖಾಸಗಿಯವರ ಬಳಿಯೇ ತೋರಿಸುತ್ತಾರೆ. ಕೋವಿಡ್ ಭೀತಿ ಕಾರಣದಿಂದ ಸರ್ಕಾರಿ ಆಸ್ಪತ್ರೆಗೆ ಹೋಗುತ್ತಿಲ್ಲ' ಎಂದು ಅಲ್ಲಿನ ಸ್ಥಿತಿಯನ್ನು ಕಟ್ಟಿಕೊಟ್ಟರು.

ಜಿಲ್ಲೆಗೆ ಲಸಿಕೆ ಪೂರೈಕೆ ಸಾಲುತ್ತಿಲ್ಲ. ಜಿಲ್ಲೆಯ 450ಕ್ಕೂ ಹೆಚ್ಚು ಹಳ್ಳಿಗಳಲ್ಲಿ ಸರಾಸರಿ 30ರಿಂದ 40 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. ಬಹುತೇಕ ದೊಡ್ಡ ಹಳ್ಳಿಗಳಲ್ಲಿ ಮೇ ತಿಂಗಳಲ್ಲಿ ಸರಾಸರಿ 20 ಮಂದಿ ಸಾವಿಗೀಡಾಗಿದ್ದಾರೆ. ಇವುಗಳಲ್ಲಿ ಕೋವಿಡ್ ಸಾವೆಷ್ಟು ಎನ್ನುವುದು ಖಚಿತವಾಗಿಲ್ಲ. ಬಹುತೇಕರು ಕೋವಿಡ್ ತಪಾಸಣೆ ಮಾಡಿಸಿರಲಿಲ್ಲ.

ಪ್ರವಾಸದಲ್ಲಿ ಎದುರಾದ ಹಲವರು 'ಲಸಿಕೆ ಸಿಕ್ಕಿಲ್ಲ' ಎಂದೇ ಉತ್ತರಿಸಿದರು. 'ಆಸ್ಪತ್ರೆಗೆ ಹೋಗಿದ್ದೆವು, ಲಸಿಕೆ ಬಂದಾಗ ತಿಳಿಸುತ್ತೇವೆ; ಆಗ ಬನ್ನಿ ಎಂದಿದ್ದಾರೆ' ಎಂದರು.

ನಮಗೆ ಸಮರ್ಪಕವಾಗಿ ಮಾಸ್ಕ್, ಸ್ಯಾನಿಟೈಸರ್ ಕೂಡ ಕೊಟ್ಟಿಲ್ಲ. 3 ತಿಂಗಳಿಂದ ಸಂಬಳವೂ ಬಂದಿಲ್ಲ. ಜ್ವರಕ್ಕೆ ಗುಳಿಗೆಯನ್ನೂ ಪೂರೈಸಿಲ್ಲ

ನಿರ್ಮಲಾ ಮತ್ತಿಕೊಪ್ಪ, ಆಶಾ ಕಾರ್ಯಕರ್ತೆ, ಬಸ್ಸಾಪೂರ, ಹುಕ್ಕೇರಿ ತಾಲ್ಲೂಕು

ಕೋವಿಡ್ ಲಸಿಕೆಗಾಗಿ ಹಲವು ದಿನಗಳ ಹಿಂದೆ ಹುಕ್ಕೇರಿಗೆ ಹೋಗಿದ್ದೆ. ಆದರೆ, ಲಸಿಕೆ ಬಂದಿಲ್ಲ ಎಂದಿದ್ದರು. ಯಾವಾಗ ಬರುತ್ತದೆಯೋ ಗೊತ್ತಿಲ್ಲ. ಇನ್ನೂ ಪಡೆಯಲು ಆಗಿಲ್ಲ

ಹೊಳೆಪ್ಪ ಅಪ್ಪಣ್ಣ ಕಾಗಿ
ಇಸ್ಲಾಂಪುರ, ಹುಕ್ಕೇರಿ ತಾಲ್ಲೂಕು

ಖಾನಾಪುರ ಸರ್ಕಾರಿ ಆಸ್ಪತ್ರೆಯಲ್ಲಿ ಹಾಸಿಗೆ ಸಿಗಲಿಲ್ಲ. ಹೊರಗಡೆಯೇ ಆಮ್ಲಜನಕ ನೀಡಿ ಚಿಕಿತ್ಸೆ ನೀಡಿದರು. ಮನೆಯಲ್ಲೇ ಚಿಕಿತ್ಸೆ ಪಡೆದು ಗುಣಮುಖನಾದೆ

ನಾಗೇಂದ್ರ ಚೌಗಲಾ
ಕಾಮಸಿನಕೊಪ್ಪ, ಖಾನಾಪುರ ತಾಲ್ಲೂಕು

ಬೆಳಗಾವಿ ಜಿಲ್ಲಾ
ಕೋವಿಡ್ ಅಂಕಿ–ಅಂಶ

69,413 ▲ ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
12,114 ▲	56,696 ▲	603 ▲

ದಿನದ ಏರಿಕೆ

ಹೊಸ ಪ್ರಕರಣ	792 ▼
ಗುಣಮುಖ	959 ▲
ಸಾವು	06 ▼

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಇಲ್ಲಿ ಶುಶ್ರೂಷಕಿಯೇ ದಿಕ್ಕು!

ಚಿಕ್ಕೋಡಿ ತಾಲ್ಲೂಕು ಕರಗಾಂವ ಆರೋಗ್ಯ ಕೇಂದ್ರದಲ್ಲಿ 3 ತಿಂಗಳುಗಳಿಂದ ವೈದ್ಯರಿಲ್ಲ. ಶುಶ್ರೂಷಕಿಯೇ ಇಲ್ಲಿ ವೈದ್ಯೆಯಾಗಿ ಕೆಲಸ ಮಾಡುತ್ತಿದ್ದಾರೆ.

'ಇಬ್ಬರು ನರ್ಸ್‌ಗಳಿದ್ದು ಎರಡು ಪಾಳಿಯಲ್ಲಿ ಕೆಲಸ ಮಾಡುತ್ತಿದ್ದೇವೆ. ಕೋವಿಡ್ ಭೀತಿಯಿಂದಾಗಿ ರೋಗಿಗಳ ಸಂಖ್ಯೆಯೂ ಕಡಿಮೆ. ಹೆರಿಗೆ ಮಾಡಿಸುತ್ತಿದ್ದೇವೆ. ಆಂಬುಲೆನ್ಸ್ ಬೇಕೆಂದರೆ 18 ಕಿ.ಮೀ. ದೂರದ ಚಿಕ್ಕೋಡಿಯಿಂದ ಬರಬೇಕು. 15 ಕಿ.ಮೀ. ದೂರದಲ್ಲಿರುವ ಉಮರಾಣಿ ವ್ಯಾಪ್ತಿಯನ್ನೂ ಆಸ್ಪತ್ರೆ ಹೊಂದಿದೆ' ಎಂದು ನರ್ಸ್ ಪಾರ್ವತಿ ಚಂದರಗಿ ತಿಳಿಸಿದರು.

ಕೋವಿಡ್ ಲಸಿಕೆಗಾಗಿ ಕೆಲವರು ಬಂದಿದ್ದರು. 'ಒಟ್ಟು 10 ಮಂದಿಯಾಗಲಿ' ಎಂದು ಆಸ್ಪತ್ರೆಯವರು ಹೇಳಿದ್ದರಿಂದ ಕಾಯುತ್ತಿದ್ದರು.

ಆಗ ಮಾತಿಗೆ ಸಿಕ್ಕ ಅಂಗನವಾಡಿ ಕಾರ್ಯಕರ್ತೆ ಸಕ್ಕೂಬಾಯಿ ಪರಪ್ಪ ಕಮತೆ, 'ಗ್ರಾಮದಲ್ಲಿ ವಾರದೊಳಗೆ 25 ಮಂದಿಗೆ ಕೋವಿಡ್ ದೃಢಪಟ್ಟಿದೆ. ಜನರನ್ನು ಪರೀಕ್ಷೆಗೆ ಒಳಪಡಿಸಲು ಮನವರಿಕೆ ಮಾಡುವುದೇ ಸವಾಲಾಗಿದೆ' ಎಂದು ಹೇಳಿದರು.

'ನಮ್ಮ ಗ್ರಾಮದಲ್ಲಿ ಮೇ ತಿಂಗಳಲ್ಲಿ 32 ಮಂದಿ ಸಾವಿಗೀಡಾಗಿದ್ದಾರೆ. ಅವರಲ್ಲಿ ಬಹುತೇಕರು ಕೋವಿಡ್ ಪರೀಕ್ಷೆ ಮಾಡಿಸಿರಲಿಲ್ಲ' ಎಂದು ಸಾವಿನ ಅಂಕಿ–ಅಂಶ ನೀಡಿದರು.

ಕಬ್ಬೂರ ಸಮುದಾಯ ಆರೋಗ್ಯ ಕೇಂದ್ರದ ನಿರ್ವಹಣೆ ಗಮನಸೆಳೆಯಿತು. ಪಕ್ಕವೇ ಕೋವಿಡ್ ಕೇರ್ ಸೆಂಟರ್ ಸಹ ಇತ್ತು.

ಪ್ರವಾಸದಲ್ಲಿ ಕಂಡಿದ್ದು

- ಜಾಗೃತಿ ಕೊರತೆ. ಅಧಿಕಾರಿಗಳು, ಜನಪ್ರತಿನಿಧಿಗಳು ಭೇಟಿ ಕೊಟ್ಟಿಲ್ಲ.
- ಪ್ರತ್ಯೇಕ ಶೌಚಾಲಯ, ಕೊಠಡಿ ಕೊರತೆಯಿಂದ ಹೋಂ ಐಸೋಲೇಷನ್ ಫಲ ನೀಡುತ್ತಿಲ್ಲ.
- ವೈದ್ಯರ ಕೊರತೆ ಕಾರಣ, 'ಹಳ್ಳಿಗಳ ಕಡೆ ವೈದ್ಯರ ನಡೆ' ಅನುಷ್ಠಾನವಾಗಿಲ್ಲ. ವೈದ್ಯರು ಒಂದೂರಲ್ಲೂ ಕಂಡುಬರಲಿಲ್ಲ. ಕೆಲವೆಡೆ ಆಸ್ಪತ್ರೆಯಲ್ಲೂ ಇರಲಿಲ್ಲ!
- ಪರೀಕ್ಷಾ ವರದಿ ಬೇಗ ಸಿಗದೆ ಸೋಂಕು ವ್ಯಾಪಿಸುತ್ತಿದೆ.
- ಖಾನಾಪುರದ ಕಾಡಂಚಿನ ಹಳ್ಳಿಗಳದ್ದು ಬೇರೊಂದು ವ್ಯಥೆ. ಹಲವು ಕಡೆಗಳಿಗೆ ಆಂಬುಲೆನ್ಸ್ ಹೋಗುವುದಿಲ್ಲ. ಮೊಬೈಲ್ ಫೋನ್ ನೆಟ್‌ವರ್ಕ್ ಸಿಗುವುದಿಲ್ಲ. ಬಸ್ ಸೌಲಭ್ಯವಿಲ್ಲ. ಬೆಳಗಾವಿಯ ಕೆಲವು ಹಳ್ಳಿಗಳಲ್ಲೂ ಇದೇ ಸ್ಥಿತಿ.

ಸಿಬ್ಬಂದಿ ಕೊರತೆ

3,822 ಜಿಲ್ಲೆಗೆ ಮಂಜೂರಾದ ವಿವಿಧ ಹುದ್ದೆಗಳ ಸಂಖ್ಯೆ

1,500 ಖಾಲಿ ಇರುವ ಹುದ್ದೆಗಳು

139 ಪ್ರಾಥಮಿಕ ಆರೋಗ್ಯ ಕೇಂದ್ರಗಳು

16 ಸಮುದಾಯ ಆರೋಗ್ಯ ಕೇಂದ್ರಗಳು

9 ಸಾರ್ವಜನಿಕ ಆಸ್ಪತ್ರೆಗಳು

26 ಎಂಬಿಬಿಎಸ್ ವೈದ್ಯರ ಹುದ್ದೆ ಖಾಲಿ

42 ತಜ್ಞ ವೈದ್ಯರ ಹುದ್ದೆಗಳು ಭರ್ತಿಯಾಗಿಲ್ಲ

ಕೆಎಸ್‌ಆರ್‌ಟಿಸಿ ಬಳಕೆಗೆ ನಿಷೇಧ ಇಲ್ಲ: ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: "ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು 'ಕೆಎಸ್‌ಆರ್‌ಟಿಸಿ' ಟ್ರೇಡ್‌ಮಾರ್ಕ್ ಬಳಕೆಗೆ ನಿಷೇಧಿಸುವ ಯಾವುದೇ ಆದೇಶ ಟ್ರೇಡ್‌ಮಾರ್ಕ್ ರಿಜಿಸ್ಟ್ರಾರ್‌ನಿಂದ ಬಂದಿಲ್ಲ' ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಸಿ.ಕಳಸದ ಸ್ಪಷ್ಟಪಡಿಸಿದ್ದಾರೆ.

'ಎರಡು ರಾಜ್ಯಗಳ ನಡುವಿನ ಕಾನೂನಾತ್ಮಕ ಹೋರಾಟ ಅಂತ್ಯಗೊಂಡಿದೆ ಎಂಬ ಮಾಧ್ಯಮ ವರದಿಗಳು ಸತ್ಯಕ್ಕೆ ದೂರವಾಗಿವೆ. ಟ್ರೇಡ್‌ಮಾರ್ಕ್ ರಿಜಿಸ್ಟ್ರಾರ್‌ನಿಂದ ಈವರೆಗೆ ಯಾವುದೇ ಆದೇಶವೂ ನಮಗೆ ಬಂದಿಲ್ಲ' ಎಂದು ತಿಳಿಸಿದ್ದಾರೆ.

ಇಂಟಲೆಕ್ಚುವಲ್ ಪ್ರಾಪರ್ಟಿ ಅಪಿಲೇಟ್ ಬೋರ್ಡ್ (ಐಪಿಎಬಿ) ಮುಂದೆ ಕೇರಳ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಸಲ್ಲಿಸಿರುವ ಮೇಲ್ಮನವಿ ಸಂಬಂಧವೂ ಯಾವುದೇ ಅಂತಿಮ ಆದೇಶ ಹೊರಬಿದ್ದಿಲ್ಲ. ಏತನ್ಮಧ್ಯೆ, ಈ ಮಂಡಳಿಯನ್ನೇ ರದ್ದುಪಡಿಸಿ ಕೇಂದ್ರ ಸರ್ಕಾರ ಏಪ್ರಿಲ್ 4ರಂದು ಸುಗ್ರೀವಾಜ್ಞೆ ಹೊರಡಿಸಿದೆ. ಅಲ್ಲಿ ಬಾಕಿ ಇರುವ ಅರ್ಜಿಗಳನ್ನು ಹೈಕೋರ್ಟ್‌ಗೆ ವರ್ಗಾಯಿಸಲಾಗಿದೆ. ಆದ್ದರಿಂದ ಕೆಎಸ್‌ಆರ್‌ಟಿಸಿ ಟ್ರೇಡ್‌ಮಾರ್ಕ್ ನೋಂದಣಿ ಪ್ರಸ್ತುತ ಜಾರಿಯಲ್ಲಿದೆ' ಎಂದು ಸ್ಪಷ್ಟಪಡಿಸಿದ್ದಾರೆ.

'ಕೇರಳ ಸಾರಿಗೆ ಸಂಸ್ಥೆಯು ರಾಜ್ಯ ಸರ್ಕಾರ ಮತ್ತು ಕೆಎಸ್‌ಆರ್‌ಟಿಸಿಗೆ ನೋಟಿಸ್ ನೀಡಲು ಉದ್ದೇಶಿಸಿದೆ ಎಂಬ ಸುದ್ದಿಗಳು ಪ್ರಕಟವಾಗಿದೆ. ಅದು ಕೂಡ ಸುಳ್ಳು ವರದಿ. ಒಂದು ವೇಳೆ ಕೇರಳ ಸಾರಿಗೆ ಸಂಸ್ಥೆ ಆ ರೀತಿಯ ನೋಟಿಸ್ ನೀಡಿದರೆ ಸೂಕ್ತ ಉತ್ತರ ನೀಡಲಾಗುವುದು. ಈ ಹೆಸರು ಉಳಿಸಿಕೊಳ್ಳಲು ಕಾನೂನು ಹೋರಾಟ ಮುಂದುವರಿಸಿದ್ದೇವೆ. ವಕೀಲರ ಜತೆ ಚರ್ಚೆ ನಡೆಸಿದ್ದೇವೆ' ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗ್ರಾಮಾರೋಗ್ಯ
ಆಗಲಿ ಇನ್ನಷ್ಟು ಯೋಗ್ಯ

ಉಡುಪಿ ಮತ್ತು ಕೊಡಗು ಜಿಲ್ಲೆಯ **'ಗ್ರಾಮಾರೋಗ್ಯ'**ದ ಸ್ಥಿತಿಗತಿ ತಿಳಿಯಲು ಕೋಡ್ ಸ್ಕ್ಯಾನ್ ಮಾಡಿ

ಸಂಕ್ಷಿಪ್ತ ಸುದ್ದಿ

ಸಿಂಗಪುರ ರೆಡ್‌ಕ್ರಾಸ್‌ನಿಂದ ಭಾರತಕ್ಕೆ ₹38 ಕೋಟಿ ನೆರವು

ಸಿಂಗಪುರ (ಪಿಟಿಐ): ಕೋವಿಡ್ ಪಿಡುಗಿನ ವಿರುದ್ಧ ಹೋರಾಡುವ ಆಸ್ಪತ್ರೆಗಳು ಮತ್ತು ವೈದ್ಯಕೀಯ ಸಂಸ್ಥೆಗಳಿಗೆ ಸಹಾಯ ಮಾಡಲೆಂದು ಸಿಂಗಪುರ ರೆಡ್‌ಕ್ರಾಸ್ (ಎಸ್‌ಆರ್‌ಸಿ) ಸುಮಾರು ₹38 ಕೋಟಿ ನೆರವು ನೀಡುತ್ತಿರುವುದಾಗಿ ಎಸ್‌ಆರ್‌ಸಿ ಪ್ರಧಾನ ಕಾರ್ಯದರ್ಶಿ ಮತ್ತು ಸಿಇಒ ಬೆಂಜಮಿನ್ ವಿಲಿಯನ್ಸ್ ತಿಳಿಸಿದ್ದಾರೆ.

ಸಿಂಗಪುರ ಇಂಡಿಯನ್ ಚೇಂಬರ್ಸ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ (ಸಿಐಸಿಸಿಐ) ಮತ್ತು ಲಿಟಲ್ ಇಂಡಿಯನ್ ಶಾಪ್‌ಕೀಪರ್ಸ್ ಅಂಡ್ ಹೆರಿಟೇಜ್ ಅಸೋಸಿಯೇಷನ್ (ಲಿಶಾ) ಸಂಗ್ರಹಿಸಿದ ದೇಣಿಗೆಯ ₹ 5.50 ಕೋಟಿಯ ಚೆಕ್ ಅನ್ನೂ ಸ್ವೀಕರಿಸಿ ವಿಲಿಯಮ್ಸ್ ಮಾತನಾಡಿದರು.

'ದಾನ ಮಾಡುವ ಹೃದಯ ಸಿಂಗಪುರದವರಿಗಿದೆ' ಎಂದು 'ಲಿಶಾ' ಅಧ್ಯಕ್ಷ ಸಿ.ಶಂಕರನಾಥನ್ ತಿಳಿಸಿದರು.

ಎಸ್‌ಆರ್‌ಸಿ ಸಂಗ್ರಹಿಸಿರುವ ಮೊತ್ತವನ್ನು ಭಾರತದಲ್ಲಿರುವ ರೆಡ್‌ಕ್ರಾಸ್ ಮುಖ್ಯಸ್ಥರಿಗೆ ಕಳುಹಿಸುವುದಾಗಿ ವಿಲಿಯಮ್ಸ್ ಹೇಳಿದರು.

ಚೀನಾ: ರೈಲು ಅಪಘಾತದಲ್ಲಿ 9 ಸಾವು

ಬೀಜಿಂಗ್ (ಪಿಟಿಐ): ವಾಯವ್ಯ ಚೀನಾದ ಗನ್ಸು ಪ್ರಾಂತ್ಯದಲ್ಲಿ ಶುಕ್ರವಾರ ಸಂಭವಿಸಿದ ರೈಲು ಅಪಘಾತದಲ್ಲಿ ಒಂಬತ್ತು ಮಂದಿ ರೈಲ್ವೆ ಕಾರ್ಮಿಕರು ಮೃತಪಟ್ಟಿದ್ದಾರೆ.

'ಬೆಳಿಗ್ಗೆ 5.19ರ ಸುಮಾರಿಗೆ ಜಿಚಾಂಗ್ ನಗರದಲ್ಲಿ ಪ್ಯಾಸೆಂಜರ್ ರೈಲೊಂದು ಡಿಕ್ಕಿ ಹೊಡೆದುದರಿಂದ ಈ ಘಟನೆ ನಡೆದಿದೆ' ಎಂದು ಚೀನಾ ಡೈಲಿ ವರದಿ ಮಾಡಿದೆ.

'ಗುರುತಿನ ಚೀಟಿ ಇಲ್ಲದವರಿಗೂ ಲಸಿಕೆ'

ಬೆಂಗಳೂರು: ನಿಗದಿತ ಗುರುತಿನ ಚೀಟಿಗಳು ಇಲ್ಲದವರಿಗೂ ಕೋವಿಡ್ ಲಸಿಕೆ ಒದಗಿಸಲಾಗುತ್ತದೆ ಎಂದು ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕಿ ಅರುಂಧತಿ ಚಂದ್ರಶೇಖರ್ ತಿಳಿಸಿದ್ದಾರೆ.ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಬಿಬಿಎಂಪಿ ಮುಖ್ಯ ಆಯುಕ್ತರು ಹಾಗೂ ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದಾರೆ.

'ಕೇಂದ್ರ ಸರ್ಕಾರದ ಮಾರ್ಗಸೂಚಿ ಪ್ರಕಾರ ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ, ಪಾಸ್‌ಪೋರ್ಟ್, ಪ್ಯಾನ್ ಕಾರ್ಡ್, ವಾಹನ ಚಾಲನಾ ಪರವಾನಗಿ, ಎನ್.ಪಿ.ಆರ್. ಸ್ಮಾರ್ಟ್ ಕಾರ್ಡ್ ಅಥವಾ ಪಿಂಚಣಿ ದಾಖಲಾತಿಯನ್ನು ಲಸಿಕೆ ಪಡೆಯಲು ಒದಗಿಸಬೇಕಿದೆ. ಈ ದಾಖಲಾತಿ ಇಲ್ಲದವರಿಗೆ ಲಸಿಕೆ ಒದಗಿಸಲು ಅವಕಾಶ ನೀಡಲಾಗಿದ್ದು, ನಿಯಮಿತ ಕಾರ್ಯಾಚರಣಾ ವಿಧಾನವನ್ನು ರೂಪಿಸಲಾಗಿದೆ' ಎಂದು ಹೇಳಿದ್ದಾರೆ.

'ಗುರುತಿನ ಚೀಟಿ ಇಲ್ಲದ ಫಲಾನುಭವಿಗಳನ್ನು ಗುರುತಿಸಿ, ಲಸಿಕೆ ಒದಗಿಸಬೇಕು. ಅದೇ ರೀತಿ, ಹಿಮೋಫಿಲಿಯಾ ಸಮಸ್ಯೆ ಎದುರಿಸುತ್ತಿರುವವರನ್ನು ದುರ್ಬಲ ಗುಂಪಿಗೆ ಸೇರ್ಪಡೆ ಮಾಡಿ, ಲಸಿಕೆ ನೀಡಲು ಕ್ರಮಕೈಗೊಳ್ಳಬೇಕು' ಎಂದು ಸೂಚಿಸಿದ್ದಾರೆ.

ಶನಿವಾರ ● ಜೂನ್ 5, 2021 ಪ್ರಜಾವಾಣಿ

ಫ್ರೆಂಚ್ ಓಪನ್: ಜ್ವೆರೆವ್‌ಗೆ ಜಯ; ಲಾಕ್ಸೊನೆನ್ ನಿವೃತ್ತಿ–ನಿಶಿಕೋರಿ ಪ್ರಿ ಕ್ವಾರ್ಟರ್ ಫೈನಲ್‌ಗೆ

ಅಜರೆಂಕಾ ಜಯಭೇರಿ; ಸಬಲೆಂಕಾಗೆ ನಿರಾಸೆ

ಪ್ಯಾರಿಸ್ (ರಾಯಿಟರ್ಸ್/ಎಎಫ್‌ಪಿ): ಎಂಟು ವರ್ಷಗಳ ನಂತರ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ನಾಲ್ಕನೇ ಸುತ್ತು ಪ್ರವೇಶಿಸಿದ ಬೆಲಾರಸ್‌ನ ವಿಕ್ಟೋರಿಯಾ ಅಜರೆಂಕಾ ಶುಕ್ರವಾರ ಗೆಲುವಿನ ಸಂಭ್ರಮದಲ್ಲಿ ಮಿಂದೆದ್ದರು. ವಿಶ್ವದ ಮಾಜಿ ಒಂದನೇ ಕ್ರಮಾಂಕದ ಆಟಗಾರ್ತಿ ಅಜರೆಂಕಾ 6–2, 6–2ರಲ್ಲಿ ಅಮೆರಿಕಾದ ಮ್ಯಾಡಿಸನ್ ಕೀಸ್ ವಿರುದ್ಧ ಜಯ ಗಳಿಸಿದರು.

ಮೂರನೇ ಶ್ರೇಯಾಂಕಿತೆ, ಬೆಲಾರಸ್‌ನ ಅರಿನಾ ಸಬಲೆಂಕಾ ರಷ್ಯಾದ ಅನಸ್ತೇಸಿಯಾ ಪೌಲಿಚೆಂಕೋವ ವಿರುದ್ಧ ಸೋತು ಹೊರಬಿದ್ದರು. ಗುರುವಾರ ತಡರಾತ್ರಿ ನಡೆದ ಪಂದ್ಯದಲ್ಲಿ ರಿಚರ್ಡ್ ಗಾಸ್ಕೆಟ್ ಅವರನ್ನು ಸ್ಪೇನ್‌ನ ರಫೆಲ್ ನಡಾಲ್ ಸುಲಭವಾಗಿ ಮಣಿಸಿದರು.

2013ರಲ್ಲಿ ರೊಲ್ಯಾಂಡ್ ಗ್ಯಾರೋಸ್‌ನಲ್ಲಿ ಅಜರೆಂಕಾ ಸೆಮಿಫೈನಲ್ ಪ್ರವೇಶಿಸುವುದರೊಂದಿಗೆ ಜೀವನಶ್ರೇಷ್ಠ ಸಾಧನೆ ಮಾಡಿದ್ದರು. ಬೆನ್ನುನೋವಿನಿಂದಾಗಿ ಕಳೆದ ತಿಂಗಳು ಮ್ಯಾಡ್ರಿಡ್ ಓಪನ್ ಟೂರ್ನಿಯಿಂದ ಅವರು ಹಿಂದೆ ಸರಿದಿದ್ದರು. ಹೀಗಾಗಿ ಫ್ರೆಂಚ್ ಓಪನ್‌ನಲ್ಲಿ ಆಡುವುದು ಸಂದೇಹವಾಗಿತ್ತು. ಆದರೆ ಚೇತರಿಸಿಕೊಂಡು ಬಂದು ಆರಂಭದಿಂದಲೇ ಉತ್ತಮ ಸಾಮರ್ಥ್ಯ ತೋರಿದ್ದರು.

ಬ್ಯಾಕ್‌ಹ್ಯಾಂಡ್ ಹೊಡೆತಗಳ ಮೂಲಕ ಎದುರಾಳಿಯನ್ನು ಕಂಗೆಡಿಸಿದ ಅಜರೆಂಕಾ ಮೊದಲ ಸೆಟ್‌ನಲ್ಲಿ ಸುಲಭ ಜಯ ಸಾಧಿಸಿದರು. ಎರಡನೇ ಸೆಟ್‌ನಲ್ಲೂ ಅವರು ಪಾರಮ್ಯ ಮೆರೆದರು. ಎರಡು ಬಾರಿ ಮ್ಯಾಡಿಸನ್ ಅವರ ಸರ್ವ್ ಮುರಿದು ಸುಲಭ ಗೆಲುವಿನತ್ತ ಸಾಗಿದರು.

ಬೆಲಾರಸ್‌ನ ವಿಕ್ಟೋರಿಯಾ ಅಜರೆಂಕಾ ಗೆಲುವಿನ ಸಂಭ್ರಮ

31ನೇ ಶ್ರೇಯಾಂಕಿತೆ ಪೌಲಿಚೆಂಕೋವ ಎದುರು 4-6, 6-2, 0-6ರಲ್ಲಿ ಸಬಲೆಂಕಾ ಸೋತರು. ನವೊಮಿ ಒಸಾಕ ಮತ್ತು ಆ್ಯಶ್ ಬಾರ್ಟಿ ಹೊರಹೋದ ನಂತರ ಟೂರ್ನಿಯಿಂದ ಹೊರಬಿದ್ದಿರುವ ಗರಿಷ್ಠ ಶ್ರೇಯಾಂಕದ ಆಟಗಾರ್ತಿಯಾಗಿದ್ದಾರೆ ಸಬಲೆಂಕಾ.

ಆರಂಭದಲ್ಲಿ 3-0ಯಿಂದ ಮುನ್ನಡೆದಿದ್ದ ಸಬಲೆಂಕಾ ನಂತರ ಸ್ವಯಂಕೃತ ಪ್ರಮಾದಗಳಿಂದಾಗಿ ಪಾಯಿಂಟ್‌ಗಳನ್ನು ಕಳೆದುಕೊಂಡರು. ಮೊದಲ ಸೆಟ್‌ನಲ್ಲಿ ಹಿನ್ನಡೆ ಅನುಭವಿಸಿದರೂ ಎರಡನೇ ಸೆಟ್‌ನಲ್ಲಿ ಸತತ ನಾಲ್ಕು ಗೇಮ್‌ಗಳನ್ನು ಗೆದ್ದು ಎದುರಾಳಿಯನ್ನು ಕಂಗೆಡಿಸಿದರು. ಮೂರನೇ ಸೆಟ್‌ನಲ್ಲಿ ಪೌಲಿಚೆಂಕೊ ಮತ್ತೆ ಮೇಲುಗೈ ಸಾಧಿಸಿದರು.

ಹೆನ್ರಿ ಲಾಕ್ಸೊನೆನ್ ನಿವೃತ್ತಿ:- ಸ್ವಿಟ್ಜರ್ಲೆಂಡ್‌ನ ಹೆನ್ರಿ ಲಾಕ್ಸೊನೆನ್ ನಿವೃತ್ತಿಯಾದ ಕಾರಣ ಜಪಾನ್‌ನ ಕೀ ನಿಶಿಕೋರಿ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಮೊದಲ ಸೆಟ್‌ನಲ್ಲಿ ನಿಶಿಕೋರಿ 7–5ರಲ್ಲಿ ಮುನ್ನಡೆದಿದ್ದರು. ಅಷ್ಟರಲ್ಲಿ ಎದುರಾಳಿ ಹೊರನಡೆಯಲು ನಿರ್ಧರಿಸಿದರು. ಲಾಕ್ಸೊನೆನ್ ಅರ್ಹತಾ ಸುತ್ತಿನ ಮೂಲಕ ಮುಖ್ಯ ಸುತ್ತು ಪ್ರವೇಶಿಸಿದ್ದರು.

ನಡಾಲ್‌ಗೆ ಗೆಲುವು: ಆವೆಮಣ್ಣಿನಂಕಣದ ರಾಜ ರಫೆಲ್ ನಡಾಲ್ ಗುರುವಾರ 35ನೇ ಜನ್ಮದಿನ ಆಚರಿಸಿದ್ದರು. ರಾತ್ರಿ ನಡೆದ ಪಂದ್ಯದಲ್ಲಿ ಸ್ಥಳೀಯ ಆಟಗಾರ ರಿಚರ್ಡ್ ಗಾಸ್ಕೆಟ್ ಅವರನ್ನು 6-0, 7-5, 6-2ರಲ್ಲಿ ಮಣಿಸಿದರು.

1999ರಲ್ಲಿ ನಡೆದಿದ್ದ 14 ವರ್ಷದೊಳಗಿನವರ ಟೂರ್ನಿಯೊಂದರ ಸೆಮಿಫೈನಲ್‌ನಲ್ಲಿ ನಡಾಲ್ ಅವರನ್ನು ಗಾಸ್ಕೆಟ್ ಮಣಿಸಿದ್ದರು. ಆದರೆ ನಂತರ ನಡೆದ ಎಲ್ಲ ಪಂದ್ಯಗಳಲ್ಲೂ ನಡಾಲ್ ಗೆಲುವು ತಮ್ಮದಾಗಿಸಿಕೊಂಡಿದ್ದರು.

ಮೂರನೇ ಸುತ್ತಿನ ಇತರ ಫಲಿತಾಂಶಗಳು: ಪುರುಷರ ವಿಭಾಗ: ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್‌ಗೆ ಸರ್ಬಿಯಾದ ಲಾಸ್ಲೊ ಜೆರೆ ವಿರುದ್ಧ 6-2, 7-5, 6-2ರಲ್ಲಿ ಗೆಲುವು. ಅರ್ಜೆಂಟೀನಾದ ಫೆಡರಿಕೊ ಡೆಲ್ಬೊನಿಸ್‌ಗೆ ಇಟಲಿಯ ಫ್ಯಾಬಿಯೊ ಫಾಗ್ನಿನಿ ಎದುರು 6-4, 6-1, 6-3ರಲ್ಲಿ ಜಯ.

ಮಹಿಳೆಯರ ವಿಭಾಗ: ಕಜಕಸ್ತಾನದ ಎಲಿನಾ ರಿಬಕಿನಾಗೆ ರಷ್ಯಾದ ಎಲಿನಾ ವೆಸ್ನಿನಾ ಎದುರು 6-1, 6-4ರಲ್ಲಿ ಜಯ; ಸ್ಲೊವಾಕಿಯಾದ ತಮಾರ ಜಿದಾನ್ಸೆಕ್‌ಗೆ ಜೆಕ್ ಗಣರಾಜ್ಯದ ಕ್ಯಾಥರಿನಾ ಸಿನಿಕೋವ ಎದುರು 0-6, 7-6 (7/5), 6-2ರಲ್ಲಿ ಗೆಲುವು.

ಅಲೆಕ್ಸಾಂಡರ್ ಜ್ವೆರೆವ್ ಆಟದ ಶೈಲಿ –ಎಎಫ್‌ಪಿ ಚಿತ್ರಗಳು

ಮ್ಯಾಚ್ ಫಿಕ್ಸಿಂಗ್ ಆರೋಪ; ರಷ್ಯಾ ಆಟಗಾರ್ತಿ ಬಂಧನ

ಪ್ಯಾರಿಸ್ (ಎಎಫ್‌ಪಿ): ಹೋದ ವರ್ಷ ಫ್ರೆಂಚ್ ಓಪನ್‌ನಲ್ಲಿ ನಡೆದ ಡಬಲ್ಸ್ ಪಂದ್ಯದಲ್ಲಿ ಮ್ಯಾಚ್ ಫಿಕ್ಸಿಂಗ್ ಆರೋಪಕ್ಕೆ ಸಂಬಂಧಿಸಿ ರಷ್ಯಾದ ಟೆನಿಸ್ ಆಟಗಾರ್ತಿ ಯಾನಾ ಸಿಜಿಕೊವಾ ಅವರನ್ನು ಪ್ಯಾರಿಸ್ ಪೊಲೀಸರು ಶುಕ್ರವಾರ ವಶಕ್ಕೆ ತೆಗೆದುಕೊಂಡಿದ್ದಾರೆ ಎಂದು ವರದಿಯಾಗಿದೆ.

ಸದ್ಯ ನಡೆಯುತ್ತಿರುವ ಫ್ರೆಂಚ್ ಓಪನ್ ಟೂರ್ನಿಯಲ್ಲಿ ಗುರುವಾರ ರಾತ್ರಿ ನಡೆದ ಪಂದ್ಯದ ಬಳಿಕ 26 ವರ್ಷದ ಸಿಝಿಕೊವಾ ಅವರನ್ನು ಬಂಧಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಲಿ ಪ್ಯಾರಿಸಿಯನ್ ಪತ್ರಿಕೆಯು ರಷ್ಯಾ ಆಟಗಾರ್ತಿಯ ಬಂಧನವನ್ನು ಮೊದಲು ವರದಿ ಮಾಡಿದೆ. ಪಂದ್ಯದ ಬಳಿಕ ಬಂಧಿಸಲಾಗಿದ್ದು, ಆಕೆಯ ಹೋಟೆಲ್ ಕೊಠಡಿಯನ್ನು ಪರಿಶೀಲಿಸಲಾಗಿದೆ ಎಂದು ತಿಳಿಸಿದೆ.

2020ರ ಅಕ್ಟೋಬರ್‌ನಲ್ಲಿ ನಡೆದ ಪಂದ್ಯದಲ್ಲಿ ಸಿಜಿಕೊವಾ ಹಾಗೂ ಅಮೆರಿಕದ ಮ್ಯಾಡಿಸನ್ ಬ್ರೆಂಗಲ್ ಜೋಡಿ ರುಮೇನಿಯಾದ ಆಂಡ್ರಿಯಾ ಮಿಟು ಹಾಗೂ ಪೆಟ್ರಿಷಿಯಾ ಮಾರಿಯಾ ಟಿಗ್ ವಿರುದ್ಧ ನಡೆದ ಪಂದ್ಯದಲ್ಲಿ ಪರಾಭವಗೊಂಡಿದ್ದರು. ಈ ಪಂದ್ಯದಲ್ಲಿ ನಡೆದ ಮೋಸದಾಟಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲಾಗುತ್ತಿದೆ.

ಗುರುವಾರ ನಡೆದ ಫ್ರೆಂಚ್ ಓಪನ್ ಮಹಿಳಾ ಡಬಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ ಸಿಜಿಕೊವಾ ಹಾಗೂ ಏಕ್ತರಿನಾ ಅಲೆಕ್ಸಾಂಡ್ರೊವಾ ಜೋಡಿಯು ಆಸ್ಟ್ರೇಲಿಯಾದ ಸ್ಟಾರ್ಮ್ ಸ್ಯಾಂಡರ್ಸ್ ಹಾಗೂ ಅಜ್ಲಾ ಟೊಮ್ಲ್‌ಜಾನೋವಿಕ್ ಜೋಡಿ ವಿರುದ್ಧ 1-6, 1-6ರ ಅಂತರದಲ್ಲಿ ಸೋಲನುಭವಿಸಿತ್ತು.

ಸುದ್ದಿ 2 ನಿಮಿಷ

ಕೋಚಿಂಗ್ ಮೂಲಕ ಕ್ರಿಕೆಟ್ ಚಟುವಟಿಕೆಗೆ ಜಯಸೂರ್ಯ

ಮೆಲ್ಬರ್ನ್ (ಪಿಟಿಐ): ಅಂತರ ರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ವಿಧಿಸಿದ್ದ ನಿಷೇಧ ಶಿಕ್ಷೆ ಮುಗಿಸಿರುವ ಶ್ರೀಲಂಕಾದ ದಿಗ್ಗಜ ಆಟಗಾರ ಸನತ್ ಜಯಸೂರ್ಯ ಅವರು ಮೆಲ್ಬರ್ನ್‌ನ ಮಲ್‌ಗ್ರೇವ್ ತಂಡಕ್ಕೆ ತರಬೇತುದಾರರಾಗುವ ಮೂಲಕ ಕ್ರಿಕೆಟ್ ಚಟುವಟಿಕೆಗಳಿಗೆ ಮರಳಲು ಸಜ್ಜಾಗಿದ್ದಾರೆ.

2019ರ ಫೆಬ್ರುವರಿಯಲ್ಲಿ ಐಸಿಸಿಯ ಭ್ರಷ್ಟಾಚಾರ ಸಂಹಿತೆ ಉಲ್ಲಂಘಿಸಿದ ಹಿನ್ನೆಲೆಯಲ್ಲಿ ಜಯಸೂರ್ಯ ಮೇಲೆ ಎರಡು ವರ್ಷಗಳ ಕಾಲ ನಿಷೇಧ ಹೇರಲಾಗಿತ್ತು.

‘51 ವರ್ಷದ ಜಯಸೂರ್ಯ ಅವರನ್ನು ಕೋಚ್ ಹುದ್ದೆ ವಹಿಸಿಕೊಳ್ಳುವಂತೆ ಶ್ರೀಲಂಕಾ ತಂಡದ ಮಾಜಿ ಆಟಗಾರ ತಿಲಕರತ್ನೆ ದಿಲ್‌ಶಾನ್ ಮನವೊಲಿಸಿದ್ದಾರೆ’ ಎಂದು ‘ಹೆರಾಲ್ಡ್ ಸನ್’ ವರದಿ ಮಾಡಿದೆ.

‘ದಿಲ್‌ಶಾನ್ ಅವರು ಜಯಸೂರ್ಯ ಅವರನ್ನು ಒಪ್ಪಿಸಿದ್ದಾರೆ. ಇದು ನಮಗೆ ಒದಗಿದ ಅದ್ಭುತ ಅವಕಾಶ’ ಎಂದು ಮಲ್‌ಗ್ರೇವ್ ಕ್ಲಬ್ ಅಧ್ಯಕ್ಷ ಮಾಲಿನ್ ಪುಲ್ಲೆನಯೆಗಾಮ್ ಹೇಳಿದ್ದಾರೆ.

ದಿಲ್‌ಶಾನ್ ಹಾಗೂ ಶ್ರೀಲಂಕಾದ ಮತ್ತೊಬ್ಬ ಮಾಜಿ ಆಟಗಾರ ಉಪುಲ್ ತರಂಗ ಅವರು ಮಲ್‌ಗ್ರೇವ್ ತಂಡದ ಪರ ಆಡಲಿದ್ದಾರೆ.

ಜಯಸೂರ್ಯ ಅವರು ಶ್ರೀಲಂಕಾ ತಂಡದ ಪರ 445 ಏಕದಿನ ಮತ್ತು 110 ಟೆಸ್ಟ್ ಪಂದ್ಯಗಳನ್ನು ಆಡಿದ್ದಾರೆ.

ಮಿಲ್ಖಾಸಿಂಗ್ ಆರೋಗ್ಯ ವಿಚಾರಿಸಿದ ಪ್ರಧಾನಿ ಮೋದಿ

ಚಂಡೀಗಡ (ಪಿಟಿಐ): ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಾಜಿ ಅಥ್ಲೀಟ್ ಮಿಲ್ಖಾ ಸಿಂಗ್ ಅವರಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಶುಕ್ರವಾರ ಫೋನ್ ಕರೆ ಮಾಡಿ ಆರೋಗ್ಯ ವಿಚಾರಿಸಿದರು.

ಈಚೆಗೆ ಕೋವಿಡ್ ಸೋಂಕಿಗೆ ಒಳಗಾಗಿದ್ದ ಮಿಲ್ಖಾ ಸಿಂಗ್ ಅವರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಹೋದ ಭಾನುವಾರ ಮನೆಗೆ ಮರಳಿದ್ದರು. ಆದರೆ, ಗುರುವಾರ ಅವರ ಆಮ್ಲಜನಕ ಮಟ್ಟವು ಕಡಿಮೆಯಾಗಿದ್ದರಿಂದ ಪಿಜಿಐಎಂಇಆರ್ (ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನೆ, ಸ್ನಾತಕೋತ್ತರ ಸಂಸ್ಥೆ) ಗೆ ದಾಖಲಾಗಿದ್ದಾರೆ.

‘ಬೇಗನೆ ಗುಣಮುಖರಾಗಿ. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಲು ಹೋಗುತ್ತಿರುವ ಅಥ್ಲೀಟ್‌ಗಳನ್ನು ಹಾರೈಸಿ ಮತ್ತು ಪ್ರೇರಣೆ ನೀಡಿ’ ಎಂದು ಪ್ರಧಾನಿ ಮೋದಿ ಅವರು ಸಿಂಗ್ ಅವರಿಗೆ ಶುಭಹಾರೈಸಿದರು.

‘ಸಿಂಗ್ ಅವರು ಇಂದು ಚೇತರಿಸಿಕೊಂಡಿದ್ದಾರೆ. ಅವರ ಆರೋಗ್ಯವು ಸ್ಥಿರವಾಗಿದೆ’ ಎಂದು ಆಸ್ಪತ್ರೆಯ ವಕ್ತಾರ ಪ್ರೊ. ಅಶೋಕ ಕುಮಾರ್ ತಿಳಿಸಿದ್ದಾರೆ. ಮೂವರು ವೈದ್ಯರ ತಂಡವು ಸಿಂಗ್ ಅವರ ಚಿಕಿತ್ಸೆಯ ಹೊಣೆ ನಿಭಾಯಿಸುತ್ತಿದೆ. ‘ನನ್ನ ತಂದೆಯ ಆರೋಗ್ಯ ಸ್ಥಿರವಾಗಿದೆ. ಅವರಿಗೆ ಕರೆ ಮಾಡಿ ಮಾತನಾಡಿಸಿ ಧೈರ್ಯ ತುಂಬಿದ ಪ್ರಧಾನಿ ಮೋದಿಯವರಿಗೆ ಧನ್ಯವಾದಗಳು’ ಎಂದು ಮಿಲ್ಖಾ ಪುತ್ರ, ಗಾಲ್ಫ್ ಆಟಗಾರ ಜೀವ್ ಮಿಲ್ಖಾಸಿಂಗ್ ಟ್ವೀಟ್ ಮಾಡಿದ್ದಾರೆ.

ಗೋಲ್ ಕೀಪರ್ ಗುರುಪ್ರೀತ್ ಸಿಂಗ್ ಅಭಿಮತ

ರಾಹುಲ್ ಭೆಕೆ ರೆಡ್ ಕಾರ್ಡ್ ಪಡೆದು ಹೊರನಡೆದಿದ್ದರಿಂದ ಭಾರತ ತಂಡ 10 ಆಟಗಾರರೊಂದಿಗೆ ಆಡಿತ್ತು. ಭಾರಿ ಹೋರಾಟ ನಡೆಸಿದ್ದರೂ ಚೆಟ್ರಿ ಪಡೆ ಸೋತಿತ್ತು.

ಕತಾರ್ ಎದುರಿನ ಸೋಲು ಬೇಸರ ತಂದಿದೆ: ಗುರುಪ್ರೀತ್

ದೋಹಾ (ಪಿಟಿಐ): ಬಲಿಷ್ಠ ಎದುರಾಳಿಗಳ ವಿರುದ್ಧ ಸೆಣಸುವಾಗ ನಮ್ಮ ಆಟಗಾರರು ಅವಕಾಶಗಳನ್ನು ಸೂಕ್ತವಾಗಿ ಬಳಸಿಕೊಳ್ಳಬೇಕು ಎಂದು ಭಾರತ ಫುಟ್‌ಬಾಲ್ ತಂಡದ ಗೋಲ್‌ಕೀಪರ್ ಗುರುಪ್ರೀತ್ ಸಿಂಗ್ ಹೇಳಿದ್ದಾರೆ.

ಫಿಫಾ ವಿಶ್ವಕಪ್ ಅರ್ಹತಾ ಟೂರ್ನಿಯಲ್ಲಿ ಗುರುವಾರ ರಾತ್ರಿ ನಡೆದ ಪಂದ್ಯದಲ್ಲಿ ಭಾರತ ತಂಡವು ಕತಾರ್ ಎದುರು 0–1ರಿಂದ ಸೋತಿತ್ತು. ಗುರುಪ್ರೀತ್ ಉತ್ತಮ ಸಾಮರ್ಥ್ಯ ತೋರಿದ್ದರೂ ತಂಡಕ್ಕೆ ನಿರಾಸೆ ಕಾಡಿತ್ತು.



ಗುರುಪ್ರೀತ್ ಸಿಂಗ್ – ರಾಯಿಟರ್ಸ್ ಚಿತ್ರ

2022ರ ವಿಶ್ವಕಪ್ ಹಾಗೂ 2023ರ ಏಷ್ಯಾಕಪ್ ಟೂರ್ನಿಗಳ ಜಂಟಿ ಅರ್ಹತೆಗಾಗಿ ಈ ಟೂರ್ನಿಯನ್ನು ಆಯೋಜಿಸಲಾಗಿದೆ. ವಿಶ್ವಕಪ್ ಅರ್ಹತೆಯಿಂದ ಭಾರತ ಈಗಾಗಲೇ ಹೊರಬಿದ್ದಿದೆ. ಆದರೆ ಏಷ್ಯಾಕಪ್ ಟೂರ್ನಿಗೆ ಸ್ಥಾನ ಪಡೆಯಲು ಹೋರಾಟ ನಡೆಸುತ್ತಿದೆ.

ಅಬ್ದೆಲ್ ಅಜೀಜ್ 33ನೇ ನಿಮಿಷದಲ್ಲಿ ಗಳಿಸಿದ ಗೋಲಿನಿಂದ ಕತಾರ್ ಗೆಲುವು ಸಾಧಿಸಿತ್ತು.

‘ಈ ಫಲಿತಾಂಶ ದುರದೃಷ್ಟಕರ. ಪ್ರತಿಯೊಬ್ಬರು ಉತ್ತಮ ಆಟವಾಡಿದರು. ಆದರೆ ಅದೃಷ್ಟ ನಮ್ಮ ಪರವಾಗಿರಲಿಲ್ಲ; ನಿರಾಸೆಯಾಗಿದೆ’ ಎಂದು ಅಖಿಲ ಭಾರತ ಫುಟ್‌ಭಾಲ್ ಫೆಡರೇಷನ್ (ಎಐಎಫ್‌ಎಫ್) ಟ್ವೀಟ್ ಮಾಡಿರುವ ವಿಡಿಯೊದಲ್ಲಿ ಗುರುಪ್ರೀತ್ ಹೇಳಿದ್ದಾರೆ. ಗುರುಪ್ರೀತ್ ಈ ಪಂದ್ಯದಲ್ಲಿ ಎದುರಾಳಿಗಳು ನಡೆಸಿದ ಒಂಬತ್ತು ಪ್ರಯತ್ನಗಳನ್ನು ವಿಫಲಗೊಳಿಸಿದ್ದರು. ಭಾರತ ತಂಡವು ಸೋಮವಾರ ಬಾಂಗ್ಲಾ ಎದುರು ಸೆಣಸಲಿದೆ.

ಮಹಿಳಾ ತಂಡಕ್ಕೆ ತಿಲಕರತ್ನೆ ಕೋಚ್

ಕೊಲಂಬೊ (ಪಿಟಿಐ): ಮಾಜಿ ಕ್ರಿಕೆಟಿಗ ಹಷನ್ ತಿಲಕರತ್ನೆ ಅವರನ್ನು ಶ್ರೀಲಂಕಾ ಮಹಿಳಾ ಕ್ರಿಕೆಟ್ ತಂಡದ ಮುಖ್ಯ ಕೋಚ್ ಆಗಿ ನೇಮಕ ಮಾಡಲಾಗಿದೆ.

1996ರ ವಿಶ್ವಕಪ್ ವಿಜೇತ ಶ್ರೀಲಂಕಾ ತಂಡದಲ್ಲಿ ತಿಲಕರತ್ನೆ ಆಡಿದ್ದರು. ಮಧ್ಯಮಕ್ರಮಾಂಕದ ಎಡಗೈ ಬ್ಯಾಟ್ಸ್‌ಮನ್ ಆಗಿದ್ದರು. ಅವರು ನಿವೃತ್ತಿಯ ನಂತರ ಬೇರೆ ಬೇರೆ ತಂಡಗಳಿಗೆ ಕೋಚ್ ಆಗಿ ಕಾರ್ಯನಿರ್ವಹಿಸಿದ್ದಾರೆ. ಅವರ ಗುತ್ತಿಗೆ ಆರು ತಿಂಗಳ ಅವಧಿಯದ್ದಾಗಿದೆ ಎಂದು ತಿಳಿಸಲಾಗಿದೆ.

ಟೆಸ್ಟ್‌ಗಳಿಗೆ ಸಜ್ಜಾಗುತ್ತಿರುವ ತಂಡ: ಪರಸ್ಪರ ಭೇಟಿ ಇಲ್ಲ

ಆಟಗಾರರಿಗೆ ಕಠಿಣ ಕ್ವಾರಂಟೈನ್

ಸೌತಾಂಪ್ಟನ್ (ಪಿಟಿಐ): ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಪಂದ್ಯಕ್ಕಾಗಿ ತಾಲೀಮು ನಡೆಸುವುದಕ್ಕೂ ಮೊದಲು ಭಾರತ ಕ್ರಿಕೆಟ್ ತಂಡದ ಆಟಗಾರರು ಮೂರು ದಿನಗಳ ಕಠಿಣ ಕ್ವಾರಂಟೈನ್ ಪೂರ್ಣಗೊಳಿಸಲಿದ್ದಾರೆ. ತಂಡದ ಸ್ಪಿನ್ನರ್ ಅಕ್ಷರ್ ಪಟೇಲ್ ಈ ವಿಷಯ ಬಹಿರಂಗಪಡಿಸಿದ್ದಾರೆ.

ನ್ಯೂಜಿಲೆಂಡ್ ವಿರುದ್ಧದ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಫೈನಲ್ ಪಂದ್ಯವು ಇದೇ 18ರಿಂದ 22ರವರೆಗೆ ನಡೆಯಲಿದೆ. ಬುಧವಾರ ಇಲ್ಲಿಗೆ ಆಗಮಿಸಿರುವ ವಿರಾಟ್ ಕೊಹ್ಲಿ ನೇತೃತ್ವದ ಭಾರತ ತಂಡದ ಅಭ್ಯಾಸಕ್ಕೆ ಹೆಚ್ಚಿನ ಸಮಯವಿಲ್ಲ.

ಆದರೆ ನ್ಯೂಜಿಲೆಂಡ್ ತಂಡವು ಆತಿಥೇಯ ಇಂಗ್ಲೆಂಡ್ ವಿರುದ್ಧದ ಎರಡು ಟೆಸ್ಟ್ ಪಂದ್ಯಗಳ ಸರಣಿಯ ಮೊದಲ ಪಂದ್ಯದಲ್ಲಿ ಈಗಾಗಲೇ ಕಣಕ್ಕಿಳಿದಿದೆ. ಭಾರತ ತಂಡವು ಮುಂಬೈನಲ್ಲಿ ಈಗಾಗಲೇ 14 ದಿನಗಳ ಕ್ವಾರಂಟೈನ್ ಅವಧಿ ಪೂರ್ಣಗೊಳಿಸಿದೆ.

‘ನಾನು ಕಣ್ತುಂಬ ನಿದ್ರಿಸಿದೆ. ಮುಂದಿನ ಯೋಜನೆ ಕ್ವಾರಂಟೈನ್. ಮೂರು ದಿನಗಳ ಕಾಲ ಪರಸ್ಪರ ಭೇಟಿಯಾಗಕೂಡದೆಂದು ನಮಗೆ ಸೂಚಿಸಲಾಗಿದೆ. ಹೀಗಾಗಿ ಅಷ್ಟು ದಿನಗಳಿಗೆ ನಮ್ಮ ಕ್ವಾರಂಟೈನ್ ಇರಲಿದೆ’ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು (ಬಿಸಿಸಿಐ) ಹಂಚಿಕೊಂಡಿರುವ ವಿಡಿಯೊದಲ್ಲಿ ಅಕ್ಷರ್ ಪಟೇಲ್ ಹೇಳಿದ್ದಾರೆ.

ಡಬ್ಲ್ಯುಟಿಸಿ ಫೈನಲ್ ಬಳಿಕ ಕೊಹ್ಲಿ ಪಡೆಯು ಇಂಗ್ಲೆಂಡ್ ವಿರುದ್ಧದ ಐದು ಟೆಸ್ಟ್ ಪಂದ್ಯಗಳ ಸರಣಿಯಲ್ಲಿ ಆಡಲಿದೆ. ಭಾರತ ಮಹಿಳಾ ತಂಡವು ಆತಿಥೇಯ ಮಹಿಳಾ ತಂಡದ ಎದುರು ಒಂದು ಟೆಸ್ಟ್, ತಲಾ ಮೂರು ಏಕದಿನ ಮತ್ತು ಟ್ವೆಂಟಿ–20 ಪಂದ್ಯಗಳನ್ನು ಆಡಲಿದೆ. ಮಹಿಳೆಯರ ಟೆಸ್ಟ್ ಪಂದ್ಯವು ಜೂನ್ 16ರಂದು ಆರಂಭವಾಗಲಿದೆ.

ಚಿನ್ನ, ಬೆಳ್ಳಿ ದರ ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ಬೆಲೆಯು 10 ಗ್ರಾಂಗೆ ₹ 388ರಷ್ಟು ಕಡಿಮೆ ಆಗಿದೆ. 10 ಗ್ರಾಂ ಚಿನ್ನವು ₹ 47,917ರಂತೆ ಮಾರಾಟ ಆಗಿದೆ. ಬೆಳ್ಳಿಯ ಬೆಲೆಯು ಕಿಲೋ ಗ್ರಾಂಗೆ ₹ 920ರಷ್ಟು ಕಡಿಮೆ ಆಗಿ, ₹ 69,369ರಂತೆ ಮಾರಾಟವಾಗಿದೆ.

ಅಮೆರಿಕದ ಆರ್ಥಿಕತೆಗೆ ಸಂಬಂಧಿಸಿದ ಅಂಕಿ–ಅಂಶಗಳು ಧನಾತ್ಮಕವಾಗಿ ಇರುವ ಕಾರಣ ಡಾಲರ್ ಮೌಲ್ಯ ಹೆಚ್ಚಾಯಿತು. ಹೀಗಾಗಿ ಚಿನ್ನದ ಬೆಲೆಯಲ್ಲಿ ಇಳಿಕೆ ಆಗಿದೆ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್‌ನ ನವನೀತ್ ದಮಾನಿ ಹೇಳಿದ್ದಾರೆ.

ಕುಸ್ತಿ: ಸುಮಿತ್ ತಾತ್ಕಾಲಿಕ ಅಮಾನತು

ನವದೆಹಲಿ (ಪಿಟಿಐ): ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿರುವ ಕುಸ್ತಿಪಟು ಸುಮಿತ್ ಮಲಿಕ್ ಅವರನ್ನು ಉದ್ದೀಪನ ಮದ್ದು ಸೇವನೆ ಆರೋಪದ ಮೇಲೆ ತಾತ್ಕಾಲಿಕವಾಗಿ ಅಮಾನತು ಮಾಡಲಾಗಿದೆ. ಇತ್ತೀಚೆಗೆ ಬಲ್ಗೇರಿಯಾದಲ್ಲಿ ನಡೆದ ಅರ್ಹತಾ ಟೂರ್ನಿಯ ಸಂದರ್ಭದಲ್ಲಿ ಸುಮಿತ್ ಅವರಿಂದ ಪರೀಕ್ಷಾ ಮಾದರಿ ಸಂಗ್ರಹಿಸಲಾಗಿತ್ತು.

ಬಲ್ಗೇರಿಯಾದಲ್ಲಿ 125 ಕೆಜಿ ವಿಭಾಗದಲ್ಲಿ ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿದ್ದರು. ಕುಸ್ತಿಪಟುಗಳಿಗೆ ಟೋಕಿಯೊ ಟಿಕೆಟ್ ಗಳಿಸುವ ಕೊನೆಯ ಅವಕಾಶ ಇದಾಗಿತ್ತು.

‘ಸುಮಿತ್ ಉದ್ದೀಪನ ಮದ್ದು ಸೇವಿಸಿದ್ದು ಸಾಬೀತಾಗಿದೆ ಎಂದು ವಿಶ್ವ ಕುಸ್ತಿ ಒಕ್ಕೂಟವು (ಯುಡಬ್ಲ್ಯುಡಬ್ಲ್ಯು) ನಮ್ಮ ಫೆಡರೇಷನ್‌ಗೆ ಸಂದೇಶ ಕಳುಹಿಸಿದೆ’ ಎಂದು ಭಾರತ ಕುಸ್ತಿ ಫೆಡರೇಷನ್‌ನ (ಡಬ್ಲ್ಯುಎಫ್‌ಐ) ಕಾರ್ಯದರ್ಶಿ ವಿನೋದ್ ತೋಮರ್ ಹೇಳಿದ್ದಾರೆ. ಒಲಿಂಪಿಕ್ಸ್ ಅರ್ಹತಾ ಟೂರ್ನಿಗಳಲ್ಲಿ ಪಾಲ್ಗೊಳ್ಳುವುದಕ್ಕೂ ಮೊದಲು ನಡೆದ ರಾಷ್ಟ್ರೀಯ ಶಿಬಿರಗಳಲ್ಲಿ ಅವರು ಮೊಣಕಾಲು ನೋವಿನಿಂದ ಬಳಲಿದ್ದರು.

‘ಸುಮಿತ್ ಅರಿವಿಗೆ ಬಾರದೆ ಏನನ್ನಾದರೂ ತೆಗೆದುಕೊಂಡಿರಬೇಕು. ಬಿ ಸ್ಯಾಂಪಲ್ ಬರುವವರೆಗೆ ಕಾಯೋಣ’ ಎಂದು ತೋಮರ್ ಹೇಳಿದ್ದಾರೆ. ಸುಮಿತ್ ಅವರ ‘ಬಿ’ ಸ್ಯಾಂಪಲ್‌ನಲ್ಲೂ ಮದ್ದು ಸೇವನೆ ಸಾಬೀತಾದರೆ, ಕುಸ್ತಿಯಿಂದ ಅಮಾನತಾಗುವ ಸಾಧ್ಯತೆಯಿದೆ.

ಅಮಾನತು ನಿರ್ಧಾರವನ್ನು ಪ್ರಶ್ನಿಸುವ ಹಕ್ಕು ಅವರಿಗಿದೆ. ಆದರೆ ವಿಚಾರಣೆ ನಡೆದು ತೀರ್ಪು ಹೊರ ಬರುವ ಹೊತ್ತಿಗೆ ಸ್ಪರ್ಧಿಸುವುದು ಅಸಾಧ್ಯ.

ಭಾರತದ ಎಂಟು ಕುಸ್ತಿಪಟುಗಳು ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿದ್ದಾರೆ.

ರೋರಿ–ರೂಟ್ ಆಟಕ್ಕೆ ಮಳೆ ಅಡ್ಡಿ

ಲಂಡನ್ (ಎಪಿ): ನ್ಯೂಜಿಲೆಂಡ್ ಸವಾಲಿಗೆ ಪ್ರತ್ಯುತ್ತರ ಕೊಡುವ ಹಾದಿಯಲ್ಲಿ ಸಾಗುತ್ತಿದ್ದ ಇಂಗ್ಲೆಂಡ್ ತಂಡದ ರೋರಿ ಬರ್ನ್ಸ್ ಮತ್ತು ಜೋ ರೂಟ್ ಅವರ ಆಟಕ್ಕೆ ಶುಕ್ರವಾರ ಮಳೆ ಅಡ್ಡಿಯಾಯಿತು.

ಲಾರ್ಡ್ಸ್‌ನಲ್ಲಿ ನಡೆಯುತ್ತಿರುವ ಮೊದಲ ಟೆಸ್ಟ್ ಪಂದ್ಯದಲ್ಲಿ ನ್ಯೂಜಿಲೆಂಡ್‌ನ ಮೊದಲ ಇನಿಂಗ್ಸ್ ಮೊತ್ತವಾದ 378 ರನ್‌ಗಳಿಗೆ ಉತ್ತರವಾಗಿ ಇಂಗ್ಲೆಂಡ್ ತಂಡವು ರೋರಿ (ಬ್ಯಾಟಿಂಗ್ 59) ಮತ್ತು ರೂಟ್ (ಬ್ಯಾಟಿಂಗ್ 42) ಜೊತೆಯಾಟದ ನೆರವಿನಿಂದ 43 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 111 ರನ್ ಗಳಿಸಿತು. ಮೂರನೇ ದಿನದಾಟಕ್ಕೆ ಮಳೆ ಅಡ್ಡಿಯಾಯಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ನ್ಯೂಜಿಲೆಂಡ್: 122.4 ಓವರ್‌ಗಳಲ್ಲಿ 378. **ಇಂಗ್ಲೆಂಡ್:** 43 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 111 (ರೋರಿ ಬರ್ನ್ಸ್ ಬ್ಯಾಟಿಂಗ್ 59).

ಹಾಕಿ ಪಟು ಉಸ್ಮಾನ್ ಖಾನ್ ನಿಧನ

ನವದೆಹಲಿ (ಪಿಟಿಐ): ಭಾರತ ಹಾಕಿ ತಂಡದ ಮಾಜಿ ಆಟಗಾರ ಉಸ್ಮಾನ್ ಖಾನ್ (76) ಆಂಧ್ರ ಪ್ರದೇಶದ ಮದನಪಲ್ಲಿಯಲ್ಲಿ ನಿಧನರಾದರು. ಹಾಕಿ ಇಂಡಿಯಾ ಶುಕ್ರವಾರ ಈ ವಿಷಯ ತಿಳಿಸಿದೆ. ಅವರಿಗೆ ಮೂವರು ಪುತ್ರರು ಮತ್ತು ಒಬ್ಬ ಪುತ್ರಿ ಇದ್ದಾರೆ.

ಚೆನ್ನೈನಲ್ಲಿ ಕಸ್ಟಮ್ಸ್ ಆಯುಕ್ತರಾಗಿದ್ದ ಖಾನ್, ಅಲ್ಲಿಂದ ಕೋಲ್ಕತ್ತಕ್ಕೆ ತೆರಳಿ ಅದೇ (ಕಸ್ಟಮ್ಸ್) ತಂಡವನ್ನು ಪ್ರತಿನಿಧಿಸಿದ್ದರು.

ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗಳಲ್ಲಿ ಬಂಗಾಳ ತಂಡದ ಪರ ಹಲವು ವರ್ಷಗಳ ಕಾಲ ಆಡಿದ್ದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,690
ಇಂದಿನ ಅಂತ್ಯ	15,670
▼	20
ದಿನದ ಗರಿಷ್ಠ	15,733

ವಿನಿಮಯ ದರ

$ ಡಾಲರ್	72.99
£ ಪೌಂಡ್	102.92
€ ಯುರೊ	88.45
¥ ಯೆನ್ (100ಕ್ಕೆ)	66.58

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹550
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹550

ಮುಂಬೈ ಧಾರಣೆ

ಶೇಂಗಾ

4-06-2021

ಜಾವಾ 70/80(ಹೊಸ)	10050-10100
ಜಾವಾ 80/90(ಹೊಸ)	9250-9300
ದಪ್ಪ ಮಧ್ಯಪ್ರದೇಶ(ಹೊಸ)	10400-10500
ದಪ್ಪ ಗುಜರಾತ್(ಹೊಸ)	9600-9700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1490 (1460)
ಒಂದು ವಾರದ ಡೆಲಿವರಿ	1485 (1455)
ಸೋಯಾ ಕಚ್ಚಾ	1390 (1405)
ಪಾಮ್ ವಾರದ ಡೆಲಿವರಿ	1238 (1248)
ಸೂರ್ಯಕಾಂತಿ ಎಣ್ಣೆ ಕಚ್ಚಾ	1500 (1520)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
48,600 (48,500)
ಬೆಳ್ಳಿ ಕೆ.ಜಿ
70,800 (71,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ

ಬಂಟ್ವಾಳ
ಹೊಸತು 23500-40000
ಹಳತು 42500-50000

ಕಾರ್ಕಳ
ಹೊಸತು 36000-40000

ಕುಂದಾಪುರ
ಹಳೆಚಾಲಿ 33000-40000

ಮಂಗಳೂರು
ಕೋಕ 22500-23500
ಹೊಸತು 35000-39500

ಪುತ್ತೂರು
ಹೊಸತು 28000-39500

ಯಲ್ಲಾಪುರ
ಬಿಳಿಗೋಟು 28640-31010
ಚಾಲಿ 32613-36760
ರಾಶಿ 38240-42430
ತಟ್ಟಬೆಟ್ಟೆ 34820-36580

ಏಲಕ್ಕಿ ಧಾರಣೆ

ಸಕಲೇಶಪುರ
ಕೂಳೆ 700- 800
ನಡುಗೋಲು 850-900
ರಾಶಿ 950-1000
ರಾಶಿ ಉತ್ತಮ 1000-1050
ಜರಡಿ 1150 -1200
ಹೆರಕಿದ್ದು 1500-1600
ಹಸಿರು ಸಾಧಾರಣ 900-1000
ಹಸಿರು ಉತ್ತಮ 1100-1200
ಹಸಿರು ಅತಿ ಉತ್ತಮ 1400-1500

ಕಾಳು ಮೆಣಸು 350-400

ರೇಷ್ಮೆಗೂಡು

ರಾಮನಗರ
ಮಿಶ್ರ ತಳಿ (ಸಿ.ಬಿ) 270-396
ದ್ವಿತಳಿ (ಬಿ.ವಿ) 275-480

ಕೊಬ್ಬರಿ
ಅರಸೀಕೆರೆ 15500-16200

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10,900	10,600	10,650	157.60
ಎಸಿ	4,675	4,200	4,100	
ಆರ್‌ಪಿ	5,200	5,100	5,200	ಲಂಡನ್
ಆರ್‌ಸಿ	3,125	3,100	3,065	1589

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1480 (1450)
ಸೋಯಾ (ರಿಫೈನ್ಡ್)	₹1405 (1415)
ಸೂರ್ಯಕಾಂತಿ (ರಿಫೈನ್ಡ್)	₹1540 (1550)
ಪಾಮೋಲಿನ್	₹1240 (1250)

ಆಗಸ್ಟ್‌ನಿಂದ ವಾರವಿಡೀ ಎನ್‌ಎಸಿಎಚ್ ಸೌಲಭ್ಯ

ಮುಂಬೈ (ಪಿಟಿಐ): ಎನ್‌ಎಸಿಎಚ್ (ನ್ಯಾಷನಲ್ ಆಟೊಮೇಟೆಡ್ ಕ್ಲಿಯರಿಂಗ್ ಹೌಸ್) ವ್ಯವಸ್ಥೆಯು ಆಗಸ್ಟ್ 1ರಿಂದ ಅನ್ವಯವಾಗುವಂತೆ ವಾರದ ಎಲ್ಲ ದಿನವೂ ಕೆಲಸ ನಿರ್ವಹಿಸಲಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಹೇಳಿದೆ.

ಈ ವ್ಯವಸ್ಥೆಯ ಉಸ್ತುವಾರಿಯನ್ನು ರಾಷ್ಟ್ರೀಯ ಪಾವತಿ ನಿಗಮ (ಎನ್‌ಪಿಸಿಐ) ನೋಡಿಕೊಳ್ಳುತ್ತದೆ. ಒಂದು ಖಾತೆಯಿಂದ ಹಲವು ಖಾತೆಗಳಿಗೆ ಹಣ ವರ್ಗಾವಣೆ ಮಾಡಲು ಈ ವ್ಯವಸ್ಥೆ ಬಳಸಿಕೊಳ್ಳಲಾಗುತ್ತದೆ. ಕಂಪನಿಗಳ ಲಾಭಾಂಶ, ಠೇವಣಿಗಳ ಮೇಲಿನ ಬಡ್ಡಿ, ನೌಕರರಿಗೆ ಸಂಬಳ, ನಿವೃತ್ತರಿಗೆ ಪಿಂಚಣಿ ಹಣ ವರ್ಗಾವಣೆ ಮಾಡಲು ಇದನ್ನು ಬಳಕೆ ಮಾಡಿಕೊಳ್ಳಲಾಗುತ್ತದೆ. ಈಗಿರುವ ನಿಯಮಗಳ ಪ್ರಕಾರ ಎನ್‌ಎಸಿಎಚ್ ವ್ಯವಸ್ಥೆಯು ಕೆಲಸದ ದಿನಗಳಲ್ಲಿ ಮಾತ್ರ ಲಭ್ಯವಿರುತ್ತದೆ.

ಆಗಸ್ಟ್ 1ರ ನಂತರ, ವಾರಾಂತ್ಯದಲ್ಲಿ ಕೂಡ ವೇತನದ ವರ್ಗಾವಣೆ ಮಾಡಲು ಸಾಧ್ಯವಾಗುತ್ತದೆ ಎನ್ನಲಾಗಿದೆ.

ಆರ್ಥಿಕ ಬೆಳವಣಿಗೆ ಅಂದಾಜು ತಗ್ಗಿಸಿದ ಆರ್‌ಬಿಐ

ಮುಂಬೈ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಒಟ್ಟು ಆಂತರಿಕ ಉತ್ಪಾದನೆ (ಜಿಡಿಪಿ) ಎಷ್ಟು ಹೆಚ್ಚಬಹುದು ಎಂಬುದರ ಅಂದಾಜನ್ನು ಆರ್‌ಬಿಐ ತಗ್ಗಿಸಿದೆ.

ಜಿಡಿಪಿ ಬೆಳವಣಿಗೆ ದರ ಶೇಕಡ 10.5ರಷ್ಟು ಇರಲಿದೆ ಎಂದು ಈ ಮೊದಲು ಅಂದಾಜಿಸಿದ್ದ ಆರ್‌ಬಿಐ, ಈಗ ಬೆಳವಣಿಗೆ ದರ ಶೇ 9.5ರಷ್ಟು ಇರಲಿದೆ ಎಂದು ಹೇಳಿದೆ.

ಕೊರೊನಾ ಪ್ರಕರಣಗಳ ಎರಡನೆಯ ಅಲೆಯು ಸೃಷ್ಟಿಸಿರುವ ಅನಿಶ್ಚಿತ ಸ್ಥಿತಿಯ ಕಾರಣದಿಂದಾಗಿ ಜಿಡಿಪಿ ಬೆಳವಣಿಗೆ ಅಂದಾಜು ತಗ್ಗಿಸಲಾಗಿದೆ. ಆರ್‌ಬಿಐನ ಹಣಕಾಸು ನೀತಿ ಸಮಿತಿಯ ಸಭೆಯ ನಂತರ ಸುದ್ದಿಗೋಷ್ಠಿ ನಡೆಸಿದ ಗವರ್ನರ್ ಶಕ್ತಿಕಾಂತ ದಾಸ್ ಈ ವಿಷಯ ತಿಳಿಸಿದರು. ಕೋವಿಡ್ ಸಾಂಕ್ರಾಮಿಕವು ದೇಶದ ಸಣ್ಣ ಪಟ್ಟಣಗಳಿಗೆ, ಹಳ್ಳಿಗಳಿಗೆ ನುಗ್ಗಿದೆ. ದುರಂತಗಳಿಗೆ ಕಾರಣವಾಗಿದೆ. ಕೋವಿಡ್ ಪ್ರಕರಣಗಳ ಸಂಖ್ಯೆ ಇದ್ದಕ್ಕಿದ್ದಂತೆ ಜಾಸ್ತಿ ಆದುದರಿಂದಾಗಿ, ಆರ್ಥಿಕ ಚೇತರಿಕೆಗೆ ಏಟು ಬಿದ್ದಿದೆ ಎಂದು ದಾಸ್ ಹೇಳಿದರು.

ಯಾವ ತ್ರೈಮಾಸಿಕದಲ್ಲಿ ಎಷ್ಟು ಬೆಳವಣಿಗೆ?

1	18.5%
2	7.9%
3	7.2%
4	6.6%

‘ಒಳ್ಳೆಯದಾಗುತ್ತದೆ ಎಂದು ಆಶಿಸುತ್ತಲೇ, ಅತ್ಯಂತ ಕಠಿಣ ಪರಿಸ್ಥಿತಿಯನ್ನೂ ಎದುರಿಸಲು ಆರ್‌ಬಿಐ ಸಿದ್ಧತೆ ಮಾಡಿಕೊಳ್ಳುತ್ತದೆ’ ಎಂದರು.

ಹಣಕಾಸು ನೀತಿ ಸಮಿತಿಯು ರೆಪೊ ದರದಲ್ಲಿ ಯಾವುದೇ ಬದಲಾವಣೆ ತರದಿರಲು ತೀರ್ಮಾನಿಸಿದೆ. ಅಗತ್ಯ ಇರುವಷ್ಟು ಕಾಲ ಹೊಂದಾಣಿಕೆಯ ಆರ್ಥಿಕ ನೀತಿಯನ್ನು ಮುಂದುವರಿಸಲು ಕೂಡ ನಿರ್ಧರಿಸಿದೆ. ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲು ನಿರ್ಧರಿಸಿರುವ ಕಾರಣ, ಸಾಲದ ಬಡ್ಡಿ ದರದಲ್ಲಿ ಹಾಗೂ ಬ್ಯಾಂಕ್ ಠೇವಣಿಗಳ ಮೇಲಿನ ಬಡ್ಡಿ ದರದಲ್ಲಿ ಬದಲಾವಣೆ ಆಗುವ ಸಾಧ್ಯತೆ ಕಡಿಮೆ ಎನ್ನಲಾಗಿದೆ.

ಹಾಲಿ ಆರ್ಥಿಕ ವರ್ಷದಲ್ಲಿ ಚಿಲ್ಲರೆ ಹಣದುಬ್ಬರ ದರವು ಶೇ 5.1ರಷ್ಟು ಇರಲಿದೆ ಎಂದು ಆರ್‌ಬಿಐ ಅಂದಾಜಿಸಿದೆ. ಆದರೆ, ಕೋವಿಡ್‌ನ ಎರಡನೆಯ ಅಲೆ ಹಾಗೂ ಅದನ್ನು ತಡೆಯಲು ದೇಶದ ಎಲ್ಲ ಕಡೆಗಳಲ್ಲಿ ಜಾರಿಗೆ ಬಂದಿರುವ ನಿರ್ಬಂಧಗಳಿಂದಾಗಿ ಹಣದುಬ್ಬರ ಜಾಸ್ತಿ ಆಗುವ ಅಪಾಯವೂ ಇದೆ ಎಂದು ಹೇಳಿದೆ. ಅತಿಸಣ್ಣ, ಸಣ್ಣ ಹಾಗೂ ಮಧ್ಯಮ ಪ್ರಮಾಣದ (ಎಂಎಸ್‌ಎಂಇ) ಉದ್ಯಮಗಳ ಸಾಲದ ಅಗತ್ಯಗಳಿಗೆ ಸ್ಪಂದಿಸಲು ವಿಶೇಷವಾಗಿ ₹ 16 ಸಾವಿರ ಕೋಟಿ ಭಾರತೀಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್‌ಗೆ (ಎಸ್‌ಐಡಿಬಿಐ) ಒದಗಿಸಲು ಆರ್‌ಬಿಐ ತೀರ್ಮಾನಿಸಿದೆ.